ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

ಶ್ರೀ ವಿಕಾರಿ ಸಂವತ್ಸರ
ಮಾರ್ಗಶಿರ–ಪುಷ್ಯ
ಡಿಸೆಂಬರ್ 2019
₹ 12.00



ವಿಶೇಷ ಲೇಖನ

ಗಾಯನ ಗೀತಾ

**RAMAIAH**
ADVANCED TESTING LABORATORY



International Standards

# Food & Water Test

- Sophisticated Testing Instruments
- Global Standards
- Highly qualified(PG/PhD) Technical Staff
- 15,000 Sft dedicated world-class facility
- Reasonable pricing

## Nutrition Tests

- Proteins, Fats, Carbohydrates/ Fatty acid profiles
- Vitamins & Minerals
- Dietary fiber, ash, energy/calorific content and proximate analysis across matrices, covers general physico-chemical tests for raw materials & actives
- Shelf-life stability
- Purity/Impurity profiles
- Preservatives, flavors, antioxidants
- Packaging, safety & toxicity tests.

## Toxic Residues Tests

- Analysis of heavy metals
- Pesticide residues
- Residual solvents, Eto, ECH, EG
- Plastic monomer residues, leachates, other hazardous chemicals
- Antibiotics and aflatoxin or other mycotoxins

## Adulteration Tests

- Additives
- Taste Makers
- Animal fat
- Artificial sugars, added colors, vegetable fat
- Synthetic/natural substitutes and chemicals

## Water Tests

- Drinking water
- Process water
- Swimming pool
- Effluent water
- Lake/river

## Microbiology Tests

- Enumeration of total bacterial/fungal (yeast & mold) counts
- Probiotics
- Testing for presence of pathogens - coli, S.aureus, Salmonella, Shigella, Pseudomonas, Clostridium species etc

**Special Quality Assurance Packes for BBHA Members from Rs. 4500/- Per Month.**

Jubin George
CONTACT +91 98441 63329

50, 80 feet Road, New BEL Road,
Opp. Ramaiah Hospital, Bengaluru 560 094
T: +91 80 4091 8017
E: info@ramaiahlab.com w: www.ramaialab.com

## ಒಳ ಪುಟಗಳಲ್ಲಿ...


**ಗಾಯನ ಗೀತಾ**
● ಕೆ. ಭೀಮರಾವ್



6

**ಬಿಟ್ಟಿದೇವ ವಿಷ್ಣುವರ್ಧನನಾದ...**
● ಡಾ. ಬಾಬು ಕೃಷ್ಣಮೂರ್ತಿ




10

**ವಿಪಶ್ಚಿತ ರಾಜನ ಕಥೆ**
● ನಂ. ನಾಗಲಕ್ಷ್ಮೀ




18

**ಧೀಮಂತೆ ಸಂತ ಕಾನ್ಹೋಪಾತ್ರಾ**
● ಡಾ. ಅನಸೂಯಾದೇವಿ



28



ಡಿಸೆಂಬರ್–೨೦೧೯
ಶ್ರೀ ವಿಕಾರಿ ಸಂವತ್ಸರ
ಮಾರ್ಗಶಿರ–ಪುಷ್ಯ

ಸಂಪುಟ ೧೯ ● ಸಂಚಿಕೆ ೧೨



**ಋಷಭ**
● ಡಾ. ಎಸ್. ಹೇಮಲತಾ




22

**ಏಕಾಗ್ರತೆ ಸಾಧಿಸುವುದು ಹೇಗೆ?**
● ಸಿದ್ದವನಹಳ್ಳಿ ಕೃಷ್ಣಶರ್ಮಾ



32

**ಮಹಾಭಕ್ತೆ ಸ್ವಯಂಪ್ರಭಾವತೀ**
● ಡಾ. ಎಸ್.ಆರ್. ಲೀಲಾ



60



ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
**ಡಾ. ಎಂ.ಆರ್. ಜಯರಾಮ್**

ನಿರ್ವಾಹಕ ಸಂಪಾದಕರು
**ಡಾ. ಬಾಬು ಕೃಷ್ಣಮೂರ್ತಿ**

ಸಂಪಾದಕೀಯ ವಿಳಾಸ:
**ಶ್ರೀ ಯೋಗಿ ನಾರೇಯಣ ಅಧ್ಯಯನ ಕೇಂದ್ರ**
ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ,
ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು–560 054. ☎: 080–40502965 /7204095848
E-mail: mallaramagazine@hotmail.com

ಮುದ್ರಕರು:
**ಲಾವಣ್ಯ ಮುದ್ರಣ,**
ವಿದ್ಯಾಪೀಠ,
ಬೆಂಗಳೂರು–560 050.

ವಿನ್ಯಾಸ: **ಕಿಶೋರ್ ಕೆ.ಟಿ.,** ಮಂಡ್ಯ


# ನಿಮ್ಮೊಡನೆ...

**ಆತ್ಮೀಯ ಮಲ್ಲಾರ ಓದುಗರೇ ನಮಸ್ಕಾರ.**

**ವಿ**ಶಿಷ್ಟಾದ್ವೈತಾಚಾರ್ಯ 'ಶ್ರೀಮದ್ರಾಮಾನುಜರ ಜನ್ಮ ಸಹಸ್ರಮಾನವನ್ನು ನಮ್ಮ ಧರ್ಮಾಧಿಕಾರಿಗಳೂ 'ಮಲ್ಲಾರ'ದ ಪ್ರಧಾನ ಸಂಪಾದಕರೂ ಆದ ಡಾ. ಎಂ.ಆರ್. ಜಯರಾಮ್‌ರವರ ಸಮರ್ಥ ನೇತೃತ್ವದಲ್ಲಿ **ನ ಭೂತೋ ನ ಭವಿಷ್ಯತಿ** ಎಂಬಂತೆ ಅದ್ದೂರಿ ಯಾಗಿ ಆಚರಿಸಿದ್ದು ಮಲ್ಲಾರ ಓದುಗರಿಗೆ ತಿಳಿಯದ ಸಂಗತಿಯೇನಲ್ಲ. ಜನ್ಮ ಸಹಸ್ರಮಾನ ಕಾರ್ಯ ಕ್ರಮದ ಮುಕ್ತಾಯದ ಹಂತವಾಗಿ ಶ್ರೀರಂಗಂನ ಶ್ರೀರಂಗನಾಥನ ಸನ್ನಿಧಿ ಯಲ್ಲಿ ಸೇವೆ ಸಲ್ಲಿಸಬೇಕೆಂಬುದು ಧರ್ಮಾಧಿಕಾರಿಗಳ ಸಂಕಲ್ಪವಾಗಿತ್ತು. ಧರ್ಮಾಧಿಕಾರಿಗಳು ಸಪತ್ನೀಕರಾಗಿ



ಶ್ರೀರಂಗಂಗೆ ತೆರಳಿ ಅಲ್ಲಿ ರಂಗನಾಥ ಸ್ವಾಮಿಯ ಪಾದಪದ್ಮಗಳಲ್ಲಿ ನಿವೇದನೆ ಮಾಡಿಕೊಂಡದ್ದು ಒಂದು ವಿಶೇಷ ಕಾರ್ಯಕ್ರಮ. ಅದರ ವರದಿಯನ್ನು ಈ ಸಂಚಿಕೆಯಲ್ಲಿ ಕಾಣಬಹುದು (ಪುಟ–51).

2020ರ ಮಲ್ಲಾರ ಕ್ಯಾಲೆಂಡರ್ ಮಾರಾಟಕ್ಕೆ ಸಿದ್ಧವಾಗಿದೆ. ವಿವರಗಳನ್ನು ಪುಟ 59ರಲ್ಲಿ ನೋಡಿ.

ಇದು 2019 ಡಿಸೆಂಬರ್ ತಿಂಗಳು. ಈ ತಿಂಗಳು 25ರಂದು ಗೋಕುಲ ಶಿಕ್ಷಣ ಪ್ರತಿಷ್ಠಾನದ ಸಂಸ್ಥಾಪಕರಾದ ಡಾ. ಎಂ.ಎಸ್. ರಾಮಯ್ಯನವರ ಸಂಸ್ಮರಣಾರ್ಥವಾಗಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಸ್ಕಾಲರ್‌ಷಿಪ್ ಮೊತ್ತ ನೀಡುವ ಪರಿಪಾಠ ಅನೇಕ ವರ್ಷಗಳಿಂದ ಅನೂಚಾನವಾಗಿ ನಡೆದುಕೊಂಡು ಬಂದಿದೆ.

**ಸ್ಕಾಲರ್‌ಷಿಪ್ ವಿತರಣ ಸಮಾರಂಭದಲ್ಲಿ ವಿದ್ಯಾರ್ಥಿ ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಮಲ್ಲಾರ ಪತ್ರಿಕೆಯ ಚಂದಾದಾರರಾಗಲು ಕೌಂಟರ್‌ಗಳನ್ನು ತೆರೆಯಲಾಗಿರುತ್ತದೆ. ಅಂದು ಡಾ. ಎಂ.ಎಸ್. ರಾಮಯ್ಯ ಸ್ಮರಣಾರ್ಥ ವಾರ್ಷಿಕ ರೂ. 140. ಮಲ್ಲಾರ ವಾರ್ಷಿಕ ಚಂದಾವನ್ನು 120. ರೂಗಳಿಗೆ ನಿಗದಿ ಪಡಿಸಿ ನೊಂದಾಯಿಸಿಕೊಳ್ಳಲಾಗುತ್ತದೆ. ಅಂತೆಯೇ 500. ರೂಗಳ ಐದು ವರ್ಷಗಳ ಚಂದಾವನ್ನು 450. ರೂಗಳಿಗೆ ನಿಗದಿ ಪಡಿಸಲಾಗಿರುತ್ತದೆ. ಎಲ್ಲ ವಿದ್ಯಾರ್ಥಿವಿದ್ಯಾರ್ಥಿನಿಯರು ಹಾಗೂ ಪೋಷಕರು ತಪ್ಪದೆ ಈ ಸದವಕಾಶ ಉಪಯೋಗಿಸಿಕೊಂಡು ಮಲ್ಲಾರ ಚಂದಾದಾರರಾಗಬೇಕೆಂದು ವಿನಂತಿ. ಎಲ್ಲ ದೃಷ್ಟಿಯಿಂದಲೂ 5 ವರ್ಷಗಳ ಚಂದಾದಾರರಾಗುವುದು ಸೂಕ್ತ. ಹೀಗೆ ಕೈವಾರ ತಾತಯ್ಯನವರ ವಿಚಾರಗಳನ್ನು ಪ್ರಚುರಪಡಿಸಲು ಧರ್ಮಾಧಿಕಾರಿಗಳು ಪ್ರಕಟಿಸುತ್ತಿರುವ ಈ ಪತ್ರಿಕೆಗೆ ಪ್ರತಿಯೊಬ್ಬರೂ ಚಂದಾದಾರರಾಗಿ ಕೈವಾರ ತಾತಯ್ಯನವರ ಅನುಗ್ರಹಕ್ಕೆ ಪಾತ್ರರಾಗುವಿರಲ್ಲವೇ.**

ನಿಮ್ಮ ವಿಶ್ವಾಸಿ
**ನಿರ್ವಾಹಕ ಸಂಪಾದಕ**


# ಪ್ರತಿಸ್ಪಂದನ

● **ನ**ವೆಂಬರ್ 2019ರ "ಮಲ್ಲಾರ" ಕೈ ಸೇರಿದೆ. ಎಂದಿನಂತೆ ಸುಂದರವಾಗಿ, ಸಾರಭರಿತವಾಗಿ ಮೂಡಿಬಂದಿರುವ ಸಂಚಿಕೆಯಲ್ಲಿ ಪುಟಗಳ ವಿನ್ಯಾಸ-ಚಿತ್ರಗಳೂ ಅತ್ಯಂತ ಸೂಕ್ತ ಹಾಗೂ ಸಮಂಜಸವಾಗಿವೆ. ಧನ್ಯವಾದಗಳು.

■ **ಶ್ರೀಮತಿ ರಾಜೇಶ್ವರಿ ಕೃಷ್ಣ,**
ಲೇಖಕಿ, ಬೆಂಗಳೂರು–560 004.

● **ನ**ನಗೆ ಪಾರಮಾರ್ಥಿಕತೆಯಲ್ಲಿ ಅಭಿರುಚಿ ಇದೆ. ತಮ್ಮ ಮಾಸಪತ್ರಿಕೆ ತುಂಬ ಹಿಡಿಸಿತು. ಅದೇ ಚಿಂತನೆಯಲ್ಲಿ ಮುಂದುವರಿಯುತ್ತಲಿದ್ದೇನೆ. ರಮಣ ಮಹರ್ಷಿಗಳ ಗ್ರಂಥ, ಹಿಮಾಲಯದ ಮಹಾತ್ಮರ ಸನ್ನಿಧಿಯಲ್ಲಿ ಪುಸ್ತಕಗಳನ್ನು ಅಭ್ಯಾಸ ಮಾಡಿರುತ್ತೇನೆ. ನಿಮ್ಮ ಮಾಸಪತ್ರಿಕೆಯು ನನ್ನ ಸಾಧನೆಗೆ ತುಂಬ ನೆರವಾಗಲಿದೆ.

■ **ಶ್ರೀ ತಿಪ್ಪಣ್ಣ ಸಂಗಣ್ಣ ಗೊಂಗಡಿ,**
ರಾಯಚೂರು–584 101.




● **ಸಿ**ಖ್ ಧರ್ಮ ಹಾಗೂ ಜನಾಂಗ ಸೃಷ್ಟಿಗೊಳ್ಳದಿದ್ದರೆ ಉತ್ತರ ಭಾರತದಲ್ಲಿ ಹಿಂದೂಗಳ ರಕ್ಷಣೆಗೆ ಧಾವಿಸುವವರೇ ಇಲ್ಲವಾಗುತ್ತಿತ್ತು. ಇಂದಿಗೂ ಭಾರತೀಯ ಸೇನೆಯಲ್ಲಿ ಶೂರ, ಧೀರ ಜನಾಂಗವಾಗಿ ಗುರುತಿಸಿಕೊಳ್ಳುತ್ತಿದ್ದಾರೆ. ಡಾ. ಅನಸೂಯಾದೇವಿಯವರು ಸಿಖ್ ಪಂಥದ ಕುರಿತು ಉತ್ತಮವಾಗಿ ಅನಾವರಣ ಮಾಡಿ ಮಹೋಪಕಾರ ಮಾಡಿದ್ದಾರೆ.

■ **ಕೋಟೇಶ್ವರ ಸೂರ್ಯನಾರಾಯಣರಾವ್,**
ಸಾಹಿತಿಗಳು, ಬೆಂಗಳೂರು–560 054.

● **ನ**ವೆಂಬರ್ ತಿಂಗಳ ಮಲ್ಲಾರದಲ್ಲಿ ವಿಶೇಷ ಲೇಖನವಾಗಿ ಮೂಡಿಬಂದಿರುವ "ಮಹಾನಾರಾಯಣೋಪನಿತ್ತು" ವರ್ಣರಂಜಿತವಾದ ಚಿತ್ರಗಳನ್ನು ನೋಡುತ್ತಿದ್ದರೆ ಮನಸ್ಸಿಗೆ ಮಹದಾನಂದವಾಗುತ್ತದೆ. ಗರುಡ ಮತ್ತು ಮಹಾವಿಷ್ಣುವಿನ ಚಿತ್ರ, ಸಾಗರ ಪುತ್ರಿ ಲಕ್ಷೀ ಮತ್ತು ವಿಷ್ಣುವಿನ ಚಿತ್ರ ಅತ್ಯುತ್ತಮವಾಗಿವೆ.

■ **ಕೆ.ಎಸ್. ನಾಗೇಂದ್ರಮೂರ್ತಿ,** ಕೋಟಂಬಳ್ಳಿ–571 117.

● **'ಶ್ರೀ** ರಾಮಾನುಜ ವೈಭವ' ಧಾರವಾಹಿಯು ತಿಂಗಳುಗಳು ಕಳೆದಷ್ಟು ಇನ್ನೂ ಹೆಚ್ಚು ಕುತೂಹಲ ಭರಿತವಾದ ವಿಷಯಗಳೊಂದಿಗೆ ನಮ್ಮ ಮನಸ್ಸನ್ನು ಸೆಳೆಯುತ್ತಿದೆ. ಶ್ರೀ ರಾಮಾನುಜರ ಆಜ್ಞೆಯಂತೆ ಹೊಯ್ಸಳ ದೊರೆ ವಿಷ್ಣುವರ್ಧನ ರಾಜ್ಯದ ಜನರ ನೀರಿನ ಬವಣೆಯನ್ನು ನೀಗಿಸುವುದಕ್ಕಾಗಿ ಕೆರೆಯನ್ನು ನಿರ್ಮಿಸುತ್ತಿರುವುದನ್ನು ಓದಿ, ಓದುಗರಿಗೆ ಮತ್ತಷ್ಟು ಆಸಕ್ತಿ ಹುಟ್ಟಿಸುತ್ತಿದೆ.

■ **ಶ್ರೀ ಪುರುಷೋತ್ತಮರಾವ್,** ಮೈಸೂರು–570 021.

● **ಮೇ**ಪ್ಪತ್ತೂರು ನಾರಾಯಣ ಭಟ್ಟತ್ತಿರಿಯವರ 'ನಾರಾಯಣೀಯಮ್'ನ್ನು ಓದುತ್ತಿದ್ದರೆ, ಓದುವಷ್ಟು ಸಮಯವೂ ನಾವು ನಮ್ಮನ್ನು ಮರೆಯುವಷ್ಟು ಭಕ್ತಿ ಶ್ಲೋಕಗಳನ್ನೊಳಗೊಂಡಿದೆ. ಭಾಗವತವನ್ನು ಓದುತ್ತಿದ್ದರೆ ಹೇಗೆ ನಮಗೆ ಆ ವಿಷಯಗಳಲ್ಲಿ ಲೀನವಾಗುತ್ತೇವೆಯೋ ಅಷ್ಟೇ ಭಕ್ತಿಕಾವ್ಯ ಈ 'ನಾರಾಯಣೀಯಮ್.'

■ **ಶ್ರೀ ಶಂಕರರಾವ್,** ಶಿವಮೊಗ್ಗ–571 401.

● **ಜ**ಗತ್ತು ಪರಿವರ್ತನಶೀಲವಾದುದಲ್ಲವೆ? ನಾವೆಲ್ಲರೂ ನಿತ್ಯವೂ ಬದಲಾಗುತ್ತಿಲ್ಲವೆ? ಪ್ರತಿ ಕ್ಷಣವೂ ಮನಸ್ಸು, ಚಿಂತನೆ ಬದಲಾಗುತ್ತಲೇ ಇವೆಯಲ್ಲವೇ? ಎಂಬ ಪ್ರಶ್ನೆಗಳನ್ನು ಹಾಕುತ್ತಾ, 'ಜಗತ್ತು ಮಾಯೆ ಎಂಬುದು ಹೇಗೆ?' ಎಂಬುದರ ಅದ್ವೈತವನ್ನು ವಾದ ವಿಚಾರಗಳನ್ನು ಸಮರ್ಥವಾದ ವಿಷಯಗಳೊಂದಿಗೆ ಸರಳವಾಗಿ ಓದುಗರ ಮನಮುಟ್ಟುವಂತೆ ತಿಳಿಸಿರುವ ಕಂಚಿ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳಿಗೆ ನಮಸ್ಕಾರಗಳು.

■ **ಶ್ರೀಮತಿ ಮುನಿರತ್ನಮ್ಮ,**
ಚಿಕ್ಕಬಳ್ಳಾಪುರ–562 101.

● **ಅ**ಕ್ಟೋಬರ್ ತಿಂಗಳಿನಲ್ಲಿ ನಡೆದ 'ಧರ್ಮ ಚಿಂತನೆ' ಕಾರ್ಯಕ್ರಮದಲ್ಲಿ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರು ನುಡಿದ 'ಆತ್ಮಬೋಧನೆ ಜೀವಾತ್ಮದ ಚಿಂತನೆ'ಯನ್ನು ಕೇಳಿ ನಾನು ಎಷ್ಟೋ ವಿಷಯಗಳ ಸತ್ಯವನ್ನು ತಿಳಿದುಕೊಂಡಿದೆ.

■ **ಶ್ರೀ ಆಂಜನೇಯಪ್ಪ,** ಹೊಸಕೋಟೆ–562 114.

● **ನ**ವೆಂಬರ್ 2019ರ ಮಲ್ಲಾರವನ್ನು ಕೈಗೆತ್ತಿಕೊಳ್ಳುತ್ತಲೇ ಅದರ ಮುಖಪುಟದಲ್ಲಿ ಶ್ರೀ ಲಕ್ಷ್ಮೀನಾರಾಯಣರ ಮಹೋನ್ನತ ಬಣ್ಣದ ಚಿತ್ರದೊಂದಿಗೆ ಹಾಗೂ ಹಿಂಬದಿಯ ಪುಟ ಉತ್ತರ ಖಾಂಡ್‌ನ ಬದ್ರಿನಾಥ್ ದೇವಸ್ಥಾನದ ಚಿತ್ರ ಕಂಡು ಪರಮಾನ್ನಂದವಾಯಿತು. ಇದು ದೀಪಾವಳಿ ಹಬ್ಬ ಆಚರಿಸಿದ್ದಕ್ಕಿಂತ ಹೆಚ್ಚು ಸಂತೋಷವನ್ನುಂಟುಮಾಡಿತು.

■ **ಶ್ರೀ ಎ.ಕೆ. ಅನಂತಮೂರ್ತಿ,** ಬೆಂಗಳೂರು–560 050.

● **ಭ**ಗವಂತನೆಂದಿಗೂ ಪ್ರತಿಕೂಲ ಮಾಡುವವನಲ್ಲ. ಅನುಕೂಲನೆಂದು ತಿಳಿಸಿಕೊಡುತ್ತಾ ಓದುಗರಲ್ಲಿ ಭಕ್ತಿಯನ್ನು ಹೆಚ್ಚಿಸುತ್ತಿರುವ 'ವಿಷ್ಣು ಸಹಸ್ರನಾಮದ ಪದ'ಗಳು ಅತ್ಯಂತ ಸೂಕ್ತವಾಗಿವೆ.

■ **ಶ್ರೀ ಗೋಪಾಲಯ್ಯ,** ಆನೇಕಲ್–562 106.



# ಹೀಗೊಂದು ಅನಿಸಿಕೆ...

● ಡಾ। ಬಾಬು ಕೃಷ್ಣಮೂರ್ತಿ

"ಗಣೂ, ನಿನ್ನ ಕೈಗೆ ಒಂದು ಚಿನ್ನ ತುಂಬಿದ ಪಾತ್ರೆಯನ್ನು ಕೊಟ್ಟರೆ ಏನು ಮಾಡುವೆ?" ತಾತ ಕೇಳಿದರು. ಮೊಮ್ಮಗ ಹೇಳಿದ.

"ನಾನು ಅದನ್ನು ಭಿಕ್ಷುಕರಿಗೆ, ಕುರುಡರಿಗೆ ಮತ್ತು ಬಡವರಿಗೆ ಹಂಚುತ್ತೇನೆ."

"ನೀನು ರಾಜನಾದರೆ ಏನು ಮಾಡುವೆ?" ಅದೇ ತಾತ ಐದು ವರ್ಷದ ಮೊಮ್ಮಗನನ್ನು ಪ್ರಶ್ನಿಸಿದರು.

"ನನ್ನ ರಾಜ್ಯದಲ್ಲಿ ಭಿಕ್ಷುಕರೇ ಇರುವುದಿಲ್ಲ. ಎಲ್ಲ ಪ್ರಜೆಗಳಿಗೋಸ್ಕರವಾಗಿಯೇ ಒಂದು ದೊಡ್ಡ ಪಾಕಶಾಲೆಯನ್ನು ಶುರು ಮಾಡುವೆ."

ಆ ಮಗು ಸದಾ ಕಾಲ ರಾಮ ನಾಮ ಜಪವನ್ನು ಮಾಡುತ್ತಿತ್ತು. ರಾಮನ ಪುಟ್ಟ ವಿಗ್ರಹಕ್ಕೆ ಪೂಜೆ ಸಲ್ಲಿಸುತ್ತಿತ್ತು. ರಾಮ ನಾಮ ಹೇಳಿಕೊಂಡೇ ಅವರ ಊರಿನ ರಾಮನ ದೇವಸ್ಥಾನಕ್ಕೆ ಹೋಗಿ ರಾಮ ಭಜನೆ ಮಾಡುತ್ತಿತ್ತು.

ಆ ಮಗುವಿಗೆ ಅದ್ಭುತವಾದ ಜ್ಞಾಪಕ ಶಕ್ತಿ ಇತ್ತು. ಅವನು ಏಕಪಾಠಿ. ಒಂದು ಸಲ ಕೇಳಿದ್ದನ್ನು ಯಾವಾಗ ಬೇಕಾದರೂ ಹೇಳುತ್ತಿದ್ದ. ಒಂದು ರಾತ್ರಿ ಅವನಿಗೆ ನಿದ್ದೆಯೇ ಬಾರದಿದ್ದಾಗ ಅವನ ತಾತನನ್ನು, "ಏನಾದರೂ ಶ್ಲೋಕ ಹೇಳು ತಾತಾ" ಎಂದ. ತಾತ ಭಗವದ್ಗೀತೆಯ ಕೆಲವು ಶ್ಲೋಕಗಳನ್ನು ಹೇಳಿದರು. ಅದನ್ನು ಕೇಳುತ್ತಾ ಕೇಳುತ್ತಾ ನಿದ್ರೆಗೆ ಜಾರಿಕೊಂಡ ಗಣೂ ಬೆಳಗ್ಗೆ ತಾತನ ಮುಂದೆ ಹಿಂದಿನ ರಾತ್ರಿ ತಾತ ಹೇಳಿದ ಗೀತೆಯ ಶ್ಲೋಕಗಳನ್ನೆಲ್ಲ ಪುನರುಚ್ಚರಿಸಿ "ಸರಿಯಾಗಿದೆಯೇ ತಾತಾ?" ಎಂದು ಪ್ರಶ್ನಿಸಿದಾಗ ತಾತ ಅವನ ಅದ್ಭುತ ಮೇಧಾ ಶಕ್ತಿಯನ್ನು ಕಂಡು ಆಶ್ಚರ್ಯಚಕಿತರಾದರು.

ತಾತ ಮಹಾನ್ ದೈವಭಕ್ತರು. ರಾಮ ನಾಮ ಜಪ, ರಾಮ ಭಜನೆ ಎಂದರೆ ಮೈಮರೆಯುತ್ತಿದ್ದರು. ಅವರು ಭಗವದ್ಗೀತೆಯ ಎಲ್ಲ ಶ್ಲೋಕಗಳನ್ನೂ ಚೆನ್ನಾಗಿ ಬಾಯಿಪಾಠ ಮಾಡಿಕೊಂಡಿದ್ದರು. ಏಕಪಾಠಿಯಾಗಿದ್ದ ಗಣೂ ತಾತನ ಬಾಯಿಂದ ಭಗವದ್ಗೀತೆಯನ್ನು ಕೇಳುತ್ತಿದ್ದಂತೆ ಮನಸ್ಸಿನಲ್ಲಿ ಗಟ್ಟಿಮಾಡಿಕೊಂಡು ಯಾವಾಗ ಬೇಕಾದರೂ ಪುನರುಚ್ಚರಿಸುತ್ತಿದ್ದ. ಗಣುವಿನ ಈ ಅಪೂರ್ವ ನೆನಪಿನ ಶಕ್ತಿ ಕಂಡು ಊರಿನ ಜನ, ಅದರಲ್ಲೂ ವಿದ್ವಾಂಸರು ನಂಬಲಾರದವರಾಗಿದ್ದರು. ತಾತ ತಾಳಗಳೊಂದಿಗೆ ರಾಮ ಭಜನೆ ಮಾಡುತ್ತಾ ಮೈಮರೆತು ನೃತ್ಯ ಮಾಡಲಾರಂಭಿಸಿದರೆ ಅವನೂ ತಾಳಗಳನ್ನು ಬಾಜಿಸುತ್ತ ಅವರಿಗೆ ಸರಿಸಮನಾಗಿ ಹೆಜ್ಜೆ ಹಾಕುತ್ತಾ ನೃತ್ಯ ಮಾಡುತ್ತಾ ರಾಮ ಭಜನೆ ಮಾಡುತ್ತಾ ಆನಂದಿಸುತ್ತಿದ್ದ.

ಅವನಿಗೆ ತಾತ ಪ್ರಹ್ಲಾದ, ಧ್ರುವ ಮುಂತಾದ ಭಕ್ತ ಬಾಲಕರ ಕಥೆ ಹೇಳಿದ್ದರು. ಅವರ ಭಕ್ತಿಯನ್ನು ಕುರಿತು ವಿವರಿಸಿದ್ದರು. ಅವರಿಗೆ ದೇವರ ಸಾಕ್ಷಾತ್ಕಾರವಾಗಿದ್ದನ್ನು ವರ್ಣಿಸಿದ್ದರು. ಹೀಗಾಗಿ ಐದು ವರ್ಷದ ಗಣುವಿಗೆ ತಾನೂ ಅವರಂತೆ ಭಕ್ತನಾಗಬೇಕೆಂಬ ಬಲವಾದ ಆಸೆ ಹುಟ್ಟಿತು. ಅವನು ಒಂದು ನಡುರಾತ್ರಿ ಮಲಗಿದ್ದಲ್ಲಿಂದ ಎದ್ದು ಹೊರಕ್ಕೆ ಹೊರಟು ಹೋದ. ಇದ್ದಕ್ಕಿದ್ದಂತೆ ಗಣು ಕಾಣದಿರುವುದನ್ನು ಕಂಡುಕೊಂಡ ಮನೆ ಮಂದಿ ಗಾಬರಿಯಿಂದ ಹುಡುಕಾಟ ಆರಂಭಿಸಿದರು. ಕೊನೆಗೆ ಊರಾಚೆಯ ನದಿಯ ಸನಿಹದ ಸ್ಮಶಾನದಲ್ಲಿ ಕಲ್ಲು ಬಂಡೆಗಳ ನಡುವೆ ಗಣು ಧ್ಯಾನಾವಸ್ಥೆಯಲ್ಲಿ ಕುಳಿತಿರುವುದನ್ನು ಕಂಡು ಸಮಾಧಾನಗೊಂಡರೂ ಅವರ ಮನಸ್ಸುಗಳು ಆತಂಕಗೊಳ್ಳದಿರಲಿಲ್ಲ. ತಾತ ಕೇಳಿದರು, "ಅಲ್ಲವೋ, ನಡುರಾತ್ರಿಯಲ್ಲಿ ಹೀಗೆ ಒಬ್ಬನೇ ಸ್ಮಶಾನಕ್ಕೆ ಬಂದು ಕುಳಿತೆಯಲ್ಲ ಯಾವುದಾದರೂ ಕಾಡುಪ್ರಾಣಿಯೋ, ಹಾವೋ ಚೇಳೋ ಬಂದು ಕಚ್ಚಿದ್ದರೆ ಏನು ಮಾಡುತ್ತಿದ್ದೇ?" "ತಾತಾ ಧ್ರುವ ತಪಸ್ಸು ಮಾಡಿದಾಗ ಅವನಿಗೆ ಮಹಾವಿಷ್ಣು ರಕ್ಷಣೆ ಕೊಡಲಿಲ್ಲವೇ? ಹಾಗೆಯೇ ನನಗೂ ಅವನ ರಕ್ಷಣೆ ಸಿಗುತ್ತದೆ ಎಂಬ ನಂಬಿಕೆ ಇದೆ." ಇದು ಗಣುವಿನ ಉತ್ತರ. ಸಂಪೂರ್ಣ ಶರಣಾಗತಿಯೇ ಭಕ್ತಿಯ ಸೂತ್ರ. ಶ್ರೀರಾಮಚಂದ್ರನಲ್ಲಿ ಗಣುವಿನ ಸಮರ್ಪಣಾ ಭಾವನೆ ಹಾಗಿತ್ತು.

## ಸಂತ ಶ್ರೇಷ್ಠ ಬ್ರಹ್ಮಚೈತನ್ಯರು



'ಗಣೂ' ಎಂದು ಸಂಬೋಧಿಸುಲ್ಪಟ್ಟ ಮಗುವೇ ಮುಂದೆ ಪ್ರಸಿದ್ಧ ಗುರುವಾಗಿ ಬೆಳೆದ ಬ್ರಹ್ಮಚೈತನ್ಯ ಗೋಂದಾವಲಿ ಮಹಾರಾಜರು. ಮಹಾರಾಷ್ಟ್ರ ಪ್ರಾಂತ್ಯದ ಸತಾರಾ ಜಿಲ್ಲೆಯ ಗೋಂದಾವಲಿ ಎಂಬ ಹಳ್ಳಿಯಲ್ಲಿ ಜನಿಸಿದ್ದರು.

ಅವರ ಹೆಸರು ಗಣಪತಿ ರಾವ್‌ಜೀ ಟುಗರ್ದರೆ. 1845ರ ಫೆಬ್ರವರಿ 17ರಂದು ಅವರು ಹುಟ್ಟಿದ್ದು.

ತಮ್ಮ ಒಂಬತ್ತನೆಯ ವಯಸ್ಸಿನಲ್ಲೇ ಗುರುವಿನ ಅನ್ವೇಷಣೆಯಲ್ಲಿ ಮನೆ ತೊರೆದು ಹೊರಟ ಗಣಪತಿ ರಾವ್‌ಜೀ ಅವರ ಕಾಲದ ಆಧ್ಯಾತ್ಮಿಕ ಗುರುಗಳಾದ ಮಾಣಿಕನಗರದ ಮಣಿಕಪ್ರಭು, ಅಕ್ಕಲಕೋಟೆಯ ಸ್ವಾಮಿ ಸಮರ್ಥ ಮಹಾರಾಜ್ ಮತ್ತು ದಕ್ಷಿಣೇಶ್ವರದ ರಾಮಕೃಷ್ಣ ಪರಮಹಂಸರನ್ನು ಕಂಡು ಅಧ್ಯಾತ್ಮಪರ ಸಂಗತಿಗಳ ಬಗ್ಗೆ ಮಾತನಾಡಿ ತಮ್ಮ ಹಾದಿ ಸರಿಯಾಗಿದೆ ಎಂದು ದೃಢಪಡಿಸಿಕೊಂಡರು.

ಗಣಪತಿ ಎಲ್ಲಿ ಹೋದನೆಂದು ಮನೆಯವರು ಹುಡುಕಾಟ ನಡೆಸಿ ಕೊನೆಗೆ ಅವರು ಇದ್ದ ಸ್ಥಳವನ್ನು ಕಂಡು ಹಿಡಿದು ಅವರ ತಂದೆ ಅವರನ್ನು ಮನೆಗೆ ಕರೆತಂದು ಮದುವೆ ಮಾಡಿದರು. ಆದರೆ ಸದಾ ಶ್ರೀರಾಮ ಧ್ಯಾನದಲ್ಲಿ ನಿರತರಾಗಿದ್ದ ಅವರನ್ನು ಸಂಸಾರ ಬಂಧನ ಹಿಡಿದಿಟ್ಟುಕೊಳ್ಳಲಿಲ್ಲ. ಅವರು ಮತ್ತೆ ಮನೆ ಬಿಟ್ಟು ಮಹಾರಾಷ್ಟ್ರದ ನಾಂದೇಡ್ ಜಿಲ್ಲೆಯ ಯೆಹಲ್‌ಗಾಂವ್ ಎಂಬಲ್ಲಿದ್ದ ಸಂತ ತುಕಾಮಾಯಿ ಚೈತನ್ಯ ಎಂಬ ಗುರುವನ್ನು ಅರಸಿಕೊಂಡರು. ಅವರು ಗಣಪತಿ ರಾವ್‌ಜೀಗೆ ಬ್ರಹ್ಮಚೈತನ್ಯ ಎಂಬ ಸುಂದರವಾದ ಹೆಸರನ್ನಿಟ್ಟರು.

ಮಹಾರಾಷ್ಟ್ರದ ಶ್ರೇಷ್ಠ ಸಂತರೂ ಛತ್ರಪತಿ ಶಿವಾಜಿಯ ಗುರುಗಳೂ ಆಗಿದ್ದ ಶ್ರೀ ಸಮರ್ಥ ರಾಮದಾಸರ ರಾಮದಾಸೀ ಪಂಥದ ಅನುಯಾಯಿ ಆಗಿದ್ದ ಬ್ರಹ್ಮಚೈತನ್ಯರು ದಿನನಿತ್ಯ ಜೀವನದ ಪ್ರತಿ ಕ್ಷಣ ಶ್ರೀರಾಮ ನಾಮವನ್ನು ಜಪಿಸಬೇಕೆಂದು ತಮ್ಮ ಶಿಷ್ಯರಿಗೆ ಬೋಧಿಸಿದರು. ಬ್ರಹ್ಮಚೈತನ್ಯರು ಸಮರ್ಥ ರಾಮದಾಸರ ಪುನರವತಾರವೆಂದೇ ಅವರ ಭಕ್ತರು ನಂಬುತ್ತಾರೆ. ಪಾರಮಾರ್ಥಿಕ

▶▶ 27ನೇ ಪುಟಕ್ಕೆ





ಕನ್ನಡಿಗರು ಮರೆಯಲಾರದ ಕಾದಂಬರಿ ಸಾರ್ವಭೌಮ ಅ.ನ.ಕೃ ಅವರು. ಆಧುನಿಕ ಕಾಲದ ಯೋಗಿಗಳೆಂದೆನಿಸಿಕೊಂಡಿದ್ದ ಇವರ ತಂದೆಯವರಿಂದ ಶ್ರೀ ಸಾಮಾನ್ಯರಿಗಾಗಿ ಕನ್ನಡದಲ್ಲಿ ಪದ್ಯರೂಪದಲ್ಲಿ ಬರೆದ 'ಭಗವದ್ಗೀತಾರ್ಥ ಸಾರ'ದ ಕುರಿತು ಸ್ವಾರಸ್ಯಕರ ವಿಷಯಗಳನ್ನು ತಿಳಿಸಿದ್ದಾರೆ

ಕೆ. ಭೀಮರಾವ್.

# ಗಾಯನ ಗೀತಾ

ಭಾರತೀಯ ದರ್ಶನದ ಮೂರು ಆಕರ ಗ್ರಂಥಗಳು ಉಪನಿಷತ್ತು, ಬ್ರಹ್ಮಸೂತ್ರ ಮತ್ತು ಭಗವದ್ಗೀತೆ. ಉಪನಿಷತ್ತುಗಳು ವೇದಗಳ ಒಂದು ಭಾಗವಾಗಿ ಒಂದು ಸಂಪೂರ್ಣ ವೇದಾಂತ ತತ್ತ್ವ ಪ್ರತಿಪಾದಿಸಿದರೆ ಬ್ರಹ್ಮಸೂತ್ರಗಳು ಬಿಡಿ ಹೂಗಳನ್ನು ಕಟ್ಟಿದ ಮಾಲೆಯ ಹಾಗೆ ಸಂಕ್ಷಿಪ್ತ ರೂಪದಲ್ಲಿ ಗಹನ ತತ್ತ್ವಗಳನ್ನು ನಿರೂಪಿಸುತ್ತವೆ. ಇನ್ನು ಭಗವದ್ಗೀತೆಯಾದರೋ ಮಹಾಭಾರತದ ಒಂದು ಅಂಗವಾಗಿ ಬಂದು ಉಪನಿಷತ್ತಿನ ತತ್ತ್ವಗಳನ್ನು ಸರಳ ರೀತಿಯಲ್ಲಿ ನಿರೂಪಿಸುತ್ತವೆ. ಹೀಗಾಗಿ ಪ್ರಸ್ಥಾನ ತ್ರಯಗಳ ಮೂಲ ಬೇರು ಉಪನಿಷತ್ತು ಎಂದು ನಿಸ್ಸಂಶಯವಾಗಿ ಹೇಳಬಹುದು. ಈ ಮಾತಿಗೆ ನಿಸ್ಸಂಶಯವಾಗಿ ಗೀತೆಯ ಧ್ಯಾನ ಶ್ಲೋಕವನ್ನು ನೋಡಬಹುದು.

**ಸರ್ವೋಪನಿಷದೋಗಾವೋ ದೋಗ್ಧಾ ಗೋಪಾಲ ನಂದನಃ ।**
**ಪಾರ್ಥೋ ವತ್ಸಃ ಸುಧೀರ್ಭೋಕ್ತಾ ದುಗ್ಧಂ ಗೀತಾಮೃತಂ ಮಹತ್॥**

ಉಪನಿಷತ್ತುಗಳು ಹಸುಗಳು ಹಾಲು ಕರೆಯುವವನು ಗೋಪಾಲ ನಂದನ ಅರ್ಥಾತ್ ಶ್ರೀಕೃಷ್ಣ. ಪಾರ್ಥನು ಅದನ್ನು ಕುಡಿದ ಕರು. ಮಹತ್ತನ್ನುಳ್ಳ ಗೀತೆ ಅಮೃತ. ಅದನ್ನು ಕುಡಿಯುವವರು ಜ್ಞಾನಿಗಳು. ಅಮೃತವಾದ ಗೀತೆಯನ್ನು ಸಕಲರೂ ಕುಡಿದು ಪಾವನರಾಗಬೇಕೆಂದು ವೇದಾಂತಿಗಳು ಹೇಳಿದರೂ ಅದರ ಸ್ವಾದನೆ ಮಾಡುವವರು ಅದೆಷ್ಟು ಮಂದಿ?

ನಿಜ. ಗೀತೆಯನ್ನು ಕುರಿತು ಅನೇಕ ವಿದ್ವತ್‌ಪೂರ್ಣವಾದ ಗ್ರಂಥಗಳಿವೆ. ಶ್ರೀಶಂಕರ, ಶ್ರೀ ರಾಮಾನುಜ ಮತ್ತು ಶ್ರೀ ಮಧ್ವಾಚಾರ್ಯರು ತಮ್ಮ ಗೀತಾಚಾರ್ಯನ ಪ್ರತಿಪಾದನೆಗಾಗಿ ಭಗವದ್ಗೀತೆಯನ್ನೇ ಆಶ್ರಯಿಸಿದ್ದಾರೆ. ಗೀತಾಚಾರ್ಯನ ಪ್ರತಿಪಾದನೆ ಅದ್ವೈತವೆಂದು ಶ್ರೀ ಶಂಕರರು ವಾದಿಸಿದರೆ ಅದು ದ್ವೈತದ ಆಕರವೆಂದು ಆಚಾರ್ಯ ಶ್ರೀ ಮಧ್ವರು ನಿರೂಪಿಸುತ್ತಾರೆ. ಆಚಾರ್ಯತ್ರಯರಲ್ಲದೆ ಆಧುನಿಕ ಕಾಲಕ್ಕೆ ಸೇರಿದ ಮಹರ್ಷಿ ಅರವಿಂದರು, ವಿನೋಬಾ ಭಾವೆ, ಸಾನೆ ಗುರೂಜಿಯವರು ಗೀತೆಯ ಬೆಳಕನ್ನು ತಮ್ಮದೇ ರೀತಿಯಲ್ಲಿ ಪಸರಿಸಿದ್ದಾರೆ. ಆದರೆ ಆ ವೇದಾಂತ ಜ್ಞಾನಿಗಳು ಗೀತೆಯನ್ನು ಒಂದು ತತ್ತ್ವಗ್ರಂಥವಾಗಿ ನೋಡಿರುವುದರಿಂದ ಅವು ಪಂಡಿತ ಮಾನ್ಯವಾದರೂ ಪಾಮರರ ಗ್ರಹ ತಲಪಿಲ್ಲ. ಹೀಗಾಗಿ ಗೀತೆಯನ್ನು ಸಾಮಾನ್ಯರ ಬಳಿಗೆ ತರುವವರು, ಸಂಸ್ಕೃತವನ್ನು ಸೇರಿ ದೇಶಿಯ ಭಾಷೆಗಳಲ್ಲಿ ವಿರಳರೆಂದೇ ಹೇಳಬೇಕು.

ಪಾಮರರಿಗಾಗಿ ಭಗವದ್ಗೀತೆಯನ್ನು ಸರಳವಾಗಿ ಕಾವ್ಯ ರೂಪದಲ್ಲಿ ದೇಶಿಯ ಭಾಷೆಗಳಲ್ಲಿ ಬರೆಯುವ ಪ್ರಯತ್ನ ವಿರಳವಾಗಿರಲು ಪ್ರಮುಖವಾದ ಕಾರಣಗಳು ಹಲವಾರು. ಒಂದು ವೇದಾಂತದ ಭಾಷೆ ದೇವಭಾಷೆ ಸಂಸ್ಕೃತ ಎಂಬ ವಿದ್ವಾಂಸರ ನಿಲುವು. ಎರಡು ದೇಶಭಾಷೆಗಳ ಶಬ್ದ ಭಂಡಾರ ಸೀಮಿತ. ಅದರಲ್ಲಿ ವಿದ್ವತ್‌ಅನ್ನು, ಗಾಂಭೀರ್ಯವನ್ನು ತರುವುದು ಅಸಾಧ್ಯ ಎಂಬ ಅಭಿಮತ. ಮೂರನೆಯದು ಉಪನಿಷತ್ತು, ಗೀತೆ, ಬ್ರಹ್ಮಸೂತ್ರ–ಇವೆಲ್ಲ ಜ್ಞಾನಯೋಗಿಗಳಿಗೆ–ಅಂದರೆ ಆಚಾರ್ಯರಿಗೆ ಅಥವಾ ಆಚಾರ್ಯ ಸದೃಶರಿಗೆ,

ಕರ್ಮಯೋಗಿಗಳಿಗೆ ಮತ್ತು ಭಕ್ತಿಮಾರ್ಗಿಗಳಿಗೆ ಇದು ಸಲ್ಲ ಎಂಬ ಭಾವನೆ. ಹೀಗಾಗಿ ಅನೇಕ ಭಕ್ತಕವಿಗಳು–ಕರ್ನಾಟಕದ ಹರಿದಾಸರೂ ಸೇರಿದಂತೆ ಅಂತಹ ಪ್ರಯತ್ನ ಮಾಡಿಲ್ಲ. ಇನ್ನು ವ್ಯಾಸ ಸಾಹಿತ್ಯದವರು ಟೀಕೆ–ಟಿಪ್ಪಣೆಗಳನ್ನು ಗದ್ಯ ರೂಪದಲ್ಲಿ ಬರೆದರೆ ಹೊರತು ಪದ್ಯ ರೂಪದಲ್ಲಿ ಬರೆಯಲು ಪ್ರಯತ್ನಿಸಲಿಲ್ಲ. ಪುರಂದರಸಾಸರಾದಿಯಾಗಿ, ಕನಕದಾಸರು, ಜಗನ್ನಾಥದಾಸರು ಇತ್ಯಾದಿಯವರು ಅದರ ಕಡೆ ತಿರುಗಿ ನೋಡಿಲ್ಲ. ಹಾಗೆಂದ ಮಾತ್ರಕ್ಕೆ ಅವರ್‍ಯಾರಿಗೂ ಗೀತೆಯ ಪರಿಚಯವಿರಲಿಲ್ಲವೆಂದಲ್ಲ. ಅವರೆಲ್ಲ ಉದ್ದಾಮ ಪಂಡಿತರೆ. ಹೀಗಾಗಿ ಅಂತಹ ಪ್ರಯತ್ನಗಳು ಬೆರಳೆಣಿಕೆಯಷ್ಟು. ಅದರಲ್ಲಿ ಮೇರು ಸದೃಶವಾದದ್ದು ಮರಾಠಿ ಭಾಷೆಯಲ್ಲಿ ಸಂತ ಜ್ಞಾನೇಶ್ವರರು ಬರೆದ ಜ್ಞಾನೇಶ್ವರಿ.

ಅವರಲ್ಲಿ ಸಂತ ಜ್ಞಾನೇಶ್ವರ ಹದಿಮೂರನೆಯ ಶತಮಾನಕ್ಕೆ ಸೇರಿದವರು ಆತನ ಗೀತೆ ಸಂಸ್ಕೃತ ಮೂಲವನ್ನು ವಿಸ್ತರಿಸಿದ ಕೃತಿ. ಮೂಲ ಸಂಸ್ಕೃತದ ಹದಿನೆಂಟು ಅಧ್ಯಾಯಗಳಲ್ಲಿರುವ ಗೀತೆಯ ಶ್ಲೋಕಗಳ ಒಟ್ಟು ಸಂಖ್ಯೆ ಏಳನೂರಾದರೆ ಜ್ಞಾನೇಶ್ವರನ ಗೀತೆಯ ಶ್ಲೋಕಗಳ ಸಂಖ್ಯೆ ಒಂಬತ್ತು ಸಾವಿರ. ಮೂಲದ ಒಂದು ಶ್ಲೋಕವನ್ನು ಅದರ ಅರ್ಥದ ವಿವಿಧ ಆಯಾಮಗಳನ್ನು ನಾಲ್ಕಾರು ಶ್ಲೋಕಗಳಲ್ಲಿ ಹೇಳಿರುವುದು ಆ ಸಂತನ ಹೆಗ್ಗಳಿಕೆ. ಆದರೆ ಕುಮಾರವ್ಯಾಸನ ಗೀತೆ ಹಾಗಲ್ಲ. ಅದೊಂದು ಗೀತೆಯ ಭಾವಾನುವಾದ. ಮೂಲವನ್ನು ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನ ಅವನದು.

ಕನ್ನಡದಲ್ಲಿ ಗೀತೆಯನ್ನು ಕಾವ್ಯ ರೂಪದಲ್ಲಿ ಬರೆದವರು ಪಂಕ್ತಿಯಲ್ಲಿ ಹೆಸರಿಸಬಹುದಾದವು–ಕುಮಾರವ್ಯಾಸನನ್ನು ಬಿಟ್ಟು–ನಾಗರಸ, ನಿರಕ್ಷರ ಕುಕ್ಷಿ ಎಂಬ ಕವಿಗಳು. ಇವರ ಪದ್ಯಗಳೂ ಹೆಚ್ಚು ಜನಪ್ರಿಯತೆಯನ್ನು ಪಡೆದಿಲ್ಲ. ಇತ್ತೀಚಿನ ಶತಮಾನಗಳಲ್ಲಿ ಗೀತೆಯ ಪದ್ಯಾನುವಾದವನ್ನು ಮಾಡಿರುವವರು ಶ್ರೀಕೃಷ್ಣ ಯೋಗಿಗಳು ಹಾಗೂ ಪು.ತಿ.ನ. ಅವರು. ಪು.ತಿ. ನರಸಿಂಹಾಚಾರ್ಯರ ಕಾವ್ಯವನ್ನು ಓದಿ ತಿಳಿದ ಕನ್ನಡಿಗರು ಇರಬಹುದಾದರೂ ಶ್ರೀಕೃಷ್ಣ ಯೋಗಿಗಳ ಪರಿಚಯ ಬಹುಶಃ ಇಂದಿನ ತಲೆಮಾರಿನವರಿಗೆ ಇಲ್ಲವೇ ಇಲ್ಲವೆಂದು ಹೇಳಬೇಕು. ಹಾಗಾಗಿ ಅವರ ಬದುಕಿನ ಒಂದು ಪಕ್ಷಿನೋಟ ಹಾಗೂ ಅವರ 'ಭಗವದ್ಗೀತಾರ್ಥಸಾರ'ದ ಕಿರುಪರಿಚಯ ಈ ಲೇಖನ. ಅ.ನ.ಕೃ. ಅವರ ಹೆಸರನ್ನು ಕೇಳದ ಕನ್ನಡಿಗರು ಯಾರಾದರೂ ಈ ನಾಡಿನಲ್ಲಿ ಇದ್ದರೆ ಅದು ಕನ್ನಡಿಗರಿಗೆ ಬಹಳ ದುಃಮಾನ ತರುವ ಸಂಗತಿಯೆನ್ನಬೇಕು. ಅಂತಹ ಕನ್ನಡಪ್ರೇಮಿ, ಕಾದಂಬರಿ ಸಾರ್ವಭೌಮ, ಭಾಷಣ ದಿಗ್ಗಜ ಅ.ನ.ಕೃ. ಅವರ ತಂದೆಯವರೇ ಶ್ರೀಕೃಷ್ಣ ಯೋಗಿಗಳು–ಅರಕಲಗೂಡು ಕೃಷ್ಣಪ್ಪನವರು. ಕೃಷ್ಣಪ್ಪನವರು ಶ್ರೀಕೃಷ್ಣ ಯೋಗಿಗಳಾದುದು ನಿಜಕ್ಕೂ ಅವರು ಬದುಕಿನ ವಿಧಾನದಿಂದ.

ಕೃಷ್ಣಪ್ಪನವರು ಕ್ರಿ.ಶ. 1826ರಲ್ಲಿ ಹಾಸನ ಜಿಲ್ಲೆಯ ಅರಕಲಗೂಡಿನಲ್ಲಿ ಜನ್ಮ ತಾಳಿದರು. ಹೊಯ್ಸಳ ಕರ್ನಾಟಕ ಬ್ರಾಹ್ಮಣ ಸಂಪ್ರದಾಯಕ್ಕೆ ಸೇರಿದವರು. ಸರ್ವಜಿತು ನಾಮ ಸಂವತ್ಸರ ಮಾಘ ಶುದ್ಧ ಚತುರ್ದಶಿ ದಿನ ಹುಟ್ಟಿದರೆಂದು ನಿಖರವಾಗಿ ತಿಳಿದುಬಂದಿದೆ. ಇವರ ತಂದೆ ನಾರಣಪ್ಪ, ತಾಯಿ ವೆಂಕಟಮ್ಮ. ಚಿಕ್ಕ ವಯಸ್ಸಿನಲ್ಲಿಯೇ ಮಾತಾಪಿತೃಗಳನ್ನು ಕಳೆದುಕೊಂಡು ಚಿಕ್ಕಮ್ಮನ ಜೊತೆಗೆ ಬೆಂಗಳೂರಿಗೆ ಬಂದು ಸಂಸ್ಕೃತ, ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ಪಾಂಡಿತ್ಯಗಳಿಸುತ್ತಾರೆ. ಅಂದಿನ ಮೈಸೂರು ಸಂಸ್ಥಾನದ ಪಾಳೆಯಗಾರರಲ್ಲಿ ವಕೀಲಿ ವೃತ್ತಿ ಮಾಡಿ, ಆಂಗ್ಲರ ದೆಸೆಯಿಂದ ಅವರಿಗಾಗುತ್ತಿದ್ದ ಅನೇಕ ತೊಂದರೆಗಳನ್ನು ಪರಿಹರಿಸುತ್ತಾರೆ. ಅಂದಿನ ಅಧಿಕಾರಿಗಳು ಅವರನ್ನು ಗೌರವದಿಂದ ಕಾಣುತ್ತಿದ್ದರು.

ಆಧ್ಯಾತ್ಮಿಕ ಪ್ರವೃತ್ತಿಯವರಾದ ಕೃಷ್ಣಪ್ಪನವರು ಅಂದಿನ ಅವಧೂತ ಗುರುವರ್ಯ ಎಂದೆನಿಸಿದ್ದ ಶಿವರಾಮ ಶಾಸ್ತ್ರಿಗಳ ಶಿಷ್ಯರಾಗಿ ಶಾಸ್ತ್ರಾಧ್ಯಯನ ಮಾಡುತ್ತಾರೆ. ಸ್ಥಿತಿವಂತರಾಗಿದ್ದ ಅವರದು ರಾಜಯೋಗ. ಮನೆ ಸದಾಕಾಲ ಅತಿಥಿ ಅಭ್ಯಾಗತರಿಂದ ಸಂಭ್ರಮಿಸುತ್ತಿತ್ತು. ಆಚಾರ್ಯರು ಪಂಡಿತರೆಂದರೆ ಅವರಿಗೆ ವಿಶೇಷ ಗೌರವ. ಆದಿಶಂಕರಾಚಾರ್ಯರು, ವಿದ್ಯಾರಣ್ಯರು, ನಿಜಗುಣ ಶಿವಯೋಗಿಗಳು ಅವರ ಆರಾಧ್ಯ ಮೂರ್ತಿಗಳು. ಅವರ ಪತ್ನಿ ಅನ್ನಪೂರ್ಣಮ್ಮನವರು ನಿಜಕ್ಕೂ ಅನ್ನಪೂರ್ಣೇಯೆ. ಶಿವರಾಮ ಶಾಸ್ತ್ರಿಗಳ ಪ್ರಭಾವದಿಂದ ಅವರು ಯೋಗಿಗಳಂತೆ ಬಾಳಿ ಕಾಲಕ್ರಮೇಣ ಕೃಷ್ಣಯೋಗಿ ಎಂದು ಜನಪ್ರಿಯರಾಗುತ್ತಾರೆ. ಕನ್ನಡದಲ್ಲಿ ಅನೇಕ ಅಧ್ಯಾತ್ಮ ಗೀತೆಗಳನ್ನು ರಚಿಸಿರುವ ಅವರು ತೆಲುಗಿನಲ್ಲಿಯೂ ಎರಡು ವೇದಾಂತ ಗ್ರಂಥಗಳನ್ನು ಬರೆದಿದ್ದಾರೆ. ಅವರ ಮೇರುಕೃತಿಯೆಂದರೆ ಭಗವದ್ಗೀತೆಯ ಕನ್ನಡಾವತರಣಿಕೆ. ಅದೇ 'ಭಗವದ್ಗೀತಾರ್ಥ ಸಾರ'.

'ಭಗವದ್ಗೀತಾರ್ಥ ಸಾರ'. 325 ಕವಿತೆಗಳ ಗೀತೆ. ಮೂಲ ಗೀತೆಯಲ್ಲಿರುವ ಅರ್ಥಸಾರವನ್ನು ಈ ಯೋಗಿ ದಾಸರ ಪದಗಳ ಶೈಲಿಯಲ್ಲಿ, ಜನಪದ ಹಾಡಿನ ಭಾವದಲ್ಲಿ ಕನ್ನಡಿಗರಿಗೆ ನೀಡಿದ್ದಾರೆ. ಪ್ರತಿಯೊಂದು ಪದ್ಯವೂ ಗೇಯತೆಯಾಗಿ ಹೆಸರಾಗಿ ಅವುಗಳನ್ನು ಸಂಗೀತದ ವಿವಿಧ ರಾಗಗಳಲ್ಲಿ ಹಾಡಬಹುದಾಗಿದೆ. ಕೇಳಲು ಇಂಪಾಗಿರುವ ಪದ್ಯಗಳು ನಾರಿಯರ ಬಾಯಲ್ಲಿ ನಲಿದಾಡುವ ಆಣಿಮುತ್ತುಗಳಾಗಿವೆ. ಕರ್ನಾಟಕ ಅಥವಾ ಅಂದಿನ ಮೈಸೂರು ಸಂಗೀತ ಶೈಲಿಯ ಈ ಹಾಡುಗಳು ವೇದಾಂತದ ಸಾರವನ್ನು ತಿಳಿಗನ್ನಡದಲ್ಲಿ ಸೊಗಸಾಗಿ ಹೇಳುತ್ತವೆ.



ಕೃಷ್ಣ ಯೋಗಿಗಳ ಕೃತಿಗೆ ಶ್ರೀ ವೇದವ್ಯಾಸರ ಮೂಲ ಕೃತಿಯೇ ಪ್ರೇರಣೆಯಾದರೂ ಈ ಪದ್ಯ ಸಂಕಲನ ತನ್ನದೇ ಸೊಬಗಿನಿಂದ ಎದ್ದು ನಿಲ್ಲುತ್ತದೆ. ಪದಶಃ ಅನುವಾದ ಯೋಗಿಗಳ ಗುರಿಯಲ್ಲ. ಗೀತೆಯ ಭಾವವನ್ನು ತಾನರಿತಂತೆ ತನ್ನ ಭಾಷೆಯಲ್ಲಿ ತನ್ನವರಿಗೆ ಹೇಳುವುದು. ಪದ್ಯಗಳ ಧಾಟಿಯನ್ನು ನೋಡಿದರೆ ಇಡೀ ಕೃತಿಯನ್ನು ಅವರು ಕೂತು ಒಮ್ಮೆಲೆ ಬರೆದವರಲ್ಲ. ತಮಗೆ ಪ್ರಿಯವಾದ ಶ್ಲೋಕವನ್ನು ಅರ್ಥೈಸಿಕೊಂಡು ಆಮೇಲೆ ಅದಕ್ಕೆ ಒಂದು ರೂಪಗೊಟ್ಟಹಾಗಿದೆ. ಮೂಲದ

ಶ್ಲೋಕವನ್ನು, ಕನ್ನಡದಲ್ಲಿ ಅದು ತಳೆದಿರುವ ರೂಪವನ್ನು ನೋಡಿದಾಗ ಅವರ ಭಾಷಾ ಸರಳತೆಯನ್ನು ಕಾಣಬಹುದು.

ಅರ್ಜುನ ವಿಷಾದಯೋಗ ಆರಂಭವಾಗುವ ರೀತಿ ನೋಡಿ:

**ಧರ್ಮಕ್ಷೇತ್ರೇ ಕುರುಕ್ಷೇತ್ರೇ ಸಮವೇತಾ ಯುಯುತ್ಸವಃ ।**
**ಮಾಮಕಾಃ ಪಾಂಡವಶ್ಚೈವ ಕಿಮಕುರ್ವತ ಸಂಜಯ ॥**

ಧೃತರಾಷ್ಟ್ರ ಮಹಾರಾಜನು ಸಂಜಯನನ್ನು ಕುರಿತು ಕೇಳುವುದು ಹೀಗೆ–"ಹೇ ಸಂಜಯ, ಯುದ್ಧದ ಅಪೇಕ್ಷೆಯಿಂದ ನನ್ನ ಮಕ್ಕಳು ಮತ್ತು ಪಾಂಡವರು ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಸೇರಿದ ಮೇಲೆ ಏನು ಮಾಡಿದರು?"

ಶ್ರೀಕೃಷ್ಣ ಯೋಗಿಗಳು ಈ ಶ್ಲೋಕದ ಭಾವವನ್ನು ಆಡುವ ಭಾಷೆಯಲ್ಲಿ ಹೇಳುತ್ತಾರೆ–

**ಧರ್ಮವಾದ ಕುರುಕ್ಷೇತ್ರದಲಿ**
**ಕೂಡಿರುವಂಥ ಧರ್ಮರಾಯ ಕೌರವಾದಿಗಳು**
**ಧರ್ಮಯುದ್ಧವ ಹೇಗೆ ಮಾಡುತಲಿರುವರು**
**ಮರ್ಮವ ಪೇಳುವುದೆಂದು ಧೃತರಾಷ್ಟ್ರ ಸಂಜಯನ ಕೇಳಿದ.**

ಈ ಹಾಡಿಗೆ ರಾಗ 'ಆನಂದ ಭೈರವಿ'ಯನ್ನೂ ಅವರು ಸೂಚಿಸಿದ್ದಾರೆ.

ಧರ್ಮಕ್ಷೇತ್ರವೆಂದರೆ ಧಾರ್ಮಿಕ ವಿಧಿಗಳು ನಡೆಯುವ ಸ್ಥಳ. ಅಲ್ಲಿ ನಡೆಯುವುದು ಧರ್ಮಕ್ಕಾಗಿ ಯುದ್ಧ. ಆ ಯುದ್ಧದ ಮುಖ್ಯ ನಾಯಕ ಪಾರ್ಥನ ಸಾರಥಿಯಾದ ಶ್ರೀಕೃಷ್ಣನೆ. ಅವನಿರುವ ಎಲ್ಲ ಕ್ಷೇತ್ರವೂ–ರಣರಂಗವಾಗಿರುವ ಕುರುಕ್ಷೇತ್ರವೂ ಸೇರಿ–ಧಾರ್ಮಿಕ ಅಥವಾ ತೀರ್ಥಕ್ಷೇತ್ರವೆ. ಕುರುಕ್ಷೇತ್ರ ಪ್ರಾಚೀನ ಸ್ಥಳ. ವೇದಗಳಲ್ಲಿಯೂ ಅದರ ಪ್ರಸ್ತಾವವಿದ್ದು ಅದು ದೇವತೆಗಳಿಗೂ ಪೂಜಾರ್ಹ ಸ್ಥಳ ಎಂದು ಹೆಸರಾಗಿದೆ. ಧರ್ಮರಾಯ ಧರ್ಮದ ಪ್ರತಿನಿಧಿಯಾದರೆ ಕೌರವರು ಅಧರ್ಮದ ಪ್ರತೀಕ. ಅವರೀರ್ವರೂ ಮಾಡುತ್ತಿರುವ ಕದನ ನಿಜಕ್ಕೂ ಸ್ವಾರಸ್ಯಕರ. 'ದುಷ್ಟ ಶಿಕ್ಷಣ ಶಿಷ್ಟ ರಕ್ಷಣ'ಕ್ಕಾಗಿ ಅವತಾರವೆತ್ತಿರುವ ನಂದ ಗೋಪಾಲ ನಡೆಸುತ್ತಿರುವ ನಾಟಕವೇ ಈ ಸಮರ. ಈ ಎಲ್ಲ ಅಂಶಗಳನ್ನೂ ಹೆಚ್ಚು ವಿದ್ಯಾವಂತರಲ್ಲದ ಗ್ರಾಮೀಣ ಜನರಿಗೆ ಅದೆಷ್ಟು ಚೆನ್ನಾಗಿ ಪರಿಚಯಿಸಿದ್ದಾರೆ ಶ್ರೀಕೃಷ್ಣ ಯೋಗಿಗಳು. ಮೂಲದ ಮೊದಲ ಅಧ್ಯಾಯದ 46 ಶ್ಲೋಕಗಳ ಭಾವವನ್ನು ಕೇವಲ 12 ಶ್ಲೋಕಗಳಲ್ಲಿ ನಿರೂಪಿಸಿರುವ ಅವರ ಸೇವೆ ನಿಜಕ್ಕೂ ಗಮನಾರ್ಹ.

ಭಗವದ್ಗೀತೆಯ ಎರಡನೆಯ ಅಧ್ಯಾಯವಾದ 'ಸಾಂಖ್ಯಯೋಗ' ಶಂಕರಾಭರಣದಲ್ಲಿ ಮೂಡಿಬಂದಿದ್ದುದರ ಜೊತೆಗೆ ಕೊನೆಯ ಕೆಲವು ಪದ್ಯಗಳಿಗೆ 'ಕಲ್ಯಾಣಿ' ರಾಗವನ್ನು ಸೂಚಿಸಿದ್ದಾರೆ. ಮೂಲದ 38ನೇ ಶ್ಲೋಕ ಹೀಗಿದೆ:

**ಸುಖದುಃಖೇ ಸಮೇ ಕೃತ್ವಾ ಲಾಭಾಲಾಭೌ ಜಯಾ ಜಯೌ ।**
**ತತೋ ಯುದ್ಧಾಯ ಯುಜ್ಯಸ್ವ**
**ನೈವಂ ಪಾಪಮವಾಪ್ಸ್ಯಸಿ ॥**

ಸುಖ ದುಃಖಗಳನ್ನು, ಲಾಭ ನಷ್ಟಗಳನ್ನು, ಜಯ ಅಪಜಯಗಳನ್ನು ಪರಿಗಣಿಸದೆ, ಯುದ್ಧಕ್ಕಾಗಿಯೇ ಯುದ್ಧ ಮಾಡಿದರೆ ಅನ್ಯಾಯವೆಂಬ ಪಾಪ ದೋಷವು ಬಾರದು.

ಅದರ ಕನ್ನಡ ಅವತರಣಿಕೆ ಹೀಗಿದೆ:

**ಸುಖ ದುಃಖ ಲಾಭಾಲಾಭವ ಜಯಾಪಜಯವ**
**ಅಖಿಲ ಸಮನಾಗಿ ತಿಳಿದು**
**ಮುಖದ ದುಗುಡವ ಬಿಟ್ಟು ಯುದ್ಧಕ್ಕೆ ಸಿದ್ಧನಾಗು**
**ಸಖನು ಭಕ್ತನು ನಿನ್ನ ಕ್ಷೇಮವೆನ್ನದು ಪಾರ್ಥ**

ಈ ಪದ್ಯ ಭಗವದ್ಗೀತೆ ಒಂದು ದೀರ್ಘ ಕಥೆಯೆಂದು ತಿಳಿದು ರಣರಂಗದ ಆಗು ಹೋಗುಗಳನ್ನು ಹೇಳುತ್ತಾ ಶ್ರೀಕೃಷ್ಣನು ಅರ್ಜುನನಿಗೆ ಹೇಳುವ ಮಾತನ್ನು ಸಾರ್ವಜನಿಕರಿಗೂ ಸರ್ವಕಾಲಕ್ಕೂ ಅನ್ವಯವಾಗುವ ಶೈಲಿಯಲ್ಲಿ ಕೃಷ್ಣ ಯೋಗಿಗಳು ಹಾಡಿರುವುದು ಗಮನಾರ್ಹ. ಹಳ್ಳಿಯ ಹೆಣ್ಣುಮಕ್ಕಳು ನೀರಿಗಾಗಿ ಕೊಡವನ್ನು ಹೊತ್ತು ನದಿಯತ್ತ ಈ ಹಾಡು ಹೇಳುತ್ತಾ ಹೋಗುವ ಚಿತ್ರವನ್ನು ಕಲ್ಪಿಸಿಕೊಂಡರೆ ಈ ಪದ್ಯದ ಅರ್ಥ ಇನ್ನೂ ಸೊಗಸಾಗಿ ಮನದಲ್ಲಿ ನಿಶ್ಚಲವಾಗಿ ನಿಲ್ಲುತ್ತದೆ. ನಮ್ಮ ಕವಿಗೆ ಗ್ರಾಮೀಣ ಹೆಂಗಳೆಯರ ಬಗ್ಗೆ ಹೆಚ್ಚು ಒಲವಿದ್ದಿರಬೇಕು. ಅವರಿಗೆ ಅರ್ಥಮಾಡಿಸಬೇಕೆಂಬ ಆಶಯ ಅವರದು.

ಗೀತೆಯ ಮೂರನೆಯ ಅಧ್ಯಾಯಕ್ಕೆ 'ಬಿಲಹರಿ' ರಾಗವನ್ನು ಸೂಚಿಸುತ್ತಾ ಅವರು ಸ್ವಧರ್ಮದ ಹಿರಿಮೆಯನ್ನು ಹೇಳುವುದು ಹೀಗೆ:



**ತನ್ನ ಕುಲ ಧರ್ಮಕ್ಕಿಂತ ಪರಧರ್ಮವು**
**ಚೆನ್ನಾಗಿದ್ದರು ಬಿಡಬೇಕು.**
**ತನ್ನ ಕುಲಧರ್ಮ ತನಗೆ ಶ್ರೇಯಸ್ಸನ್ನೇ ಕೊಡತಲಿಹುದು**
**ಅನ್ಯ ಕುಲದ ಧರ್ಮ ನರಕ ಭಯವ ಕೊಡುವುದೆಂದು ಪಾರ್ಥಗೆ.**

ಸರಳ ಪದಗಳು, ಸರಳ ವಾಕ್ಯಗಳು–ಅನೇಕ ಸಲ ಇದು ಪದ್ಯವಲ್ಲ ಗದ್ಯ ಎಂಬ ಅಭಿಪ್ರಾಯ ಮೂಡಿಸುವ ರಚನೆಗಳಾಗಿದ್ದರೂ ಈ ಭಕ್ತಿಯೋಗಿಯ ಮನದಿಂಗಿತವನ್ನು ಗಮನಿಸಿದರೆ, ಆ ಇಚ್ಛೆಗೆ ತಕ್ಕ ಹಾಗೆ ಅವು ಸಾರ್ಥಕತೆಯನ್ನು ಪಡೆದಿವೆ ಎಂದೇ ಹೇಳಬೇಕು. ಕವಿಗೆ ತನ್ನ ಕವಿತಾಶಕ್ತಿಯನ್ನು ಪ್ರದರ್ಶಿಸುವ ಆಶಯ ಎಂದಿಗೂ ಇಲ್ಲ. ಅದಕ್ಕೆ ಮಿಗಿಲಾಗಿ ನಿರಕ್ಷರ ಕುಕ್ಷಿಗಳಿಗೂ ಶ್ರೀಕೃಷ್ಣನ ಭಗವದ್ಗೀತೆ ಸಂದೇಶ ಮುಟ್ಟಬೇಕು ಎಂಬುದೇ ಆಗಿದೆ. ಅನೇಕ ಸಲ ಅವರ ರಚನೆಗಳು ಹರಿದಾಸರ ಕೀರ್ತನೆಗಳಿಗಿಂತ ಸುಲಭವಾಗಿವೆ.

ಕರ್ನಾಟಕದ ಕವಿ ಚರಿತೆಕಾರರ ದೃಷ್ಟಿಯಲ್ಲಿ, ನಮ್ಮ ಕಾವ್ಯ ವಿಮರ್ಶಕರ ಮೀಮಾಂಸೆಯಲ್ಲಿ ಇವರ ಕವನಗಳು ಯಾವ

ಸ್ಥಾನ ಪಡೆಯುತ್ತವೆಯೋ ಹೇಳುವುದು ಕಷ್ಟ. ಆದರೆ ಗೀತೆಯನ್ನು ಗ್ರಾಮೀಣ ನಿರಕ್ಷರ ಕುಕ್ಷಿ ಜನಗಳಿಗೆ ಅರ್ಥ ಮಾಡಿಸುವಲ್ಲಿ ಅವು ವಿಶಿಷ್ಟ ಸ್ಥಾನ ಪಡೆಯುತ್ತವೆ ಎಂಬುದರಲ್ಲಿ ಯಾವ ಉತ್ಪ್ರೇಕ್ಷೆಯೂ ಇಲ್ಲ. ಇಂತಹ ಕವಿಗಳನ್ನು ಕನ್ನಡಿಗರು ಅದು ಹೇಗೆ ಮರೆತಿರುವರೋ ತಿಳಿಯದಾಗಿದೆ. ಅಥವಾ ಸಾಮಾನ್ಯರಿಗೆ ಅರ್ಥವಾಗದ ಹಾಗೆ ಬರೆಯುವುದೇ ಪದ್ಯದ ಪ್ರಮುಖ ಲಕ್ಷಣ ಎನ್ನುವ ಭಾವ ಅವರದೋ ತಿಳಿಯದಾಗಿದೆ. ಶ್ರೀಕೃಷ್ಣ ಯೋಗಿಗಳು ಕನ್ನಡಿಗರಿಗೆ ಹೆಚ್ಚು ಪರಿಚಿತರಿಲ್ಲವಿರುವುದರ ಕಾರಣ ಅವರ ಈ ಕೃತಿ ಅವರ ನಿಧನಾನಂತರ ಪ್ರಕಟವಾದದ್ದು. ಅದನ್ನು ಶೋಧಿಸಿ ಪರಿಷ್ಕರಿಸಿದವರು ಮತ್ಯಾರೂ ಅಲ್ಲ. ಅವರ ಸ್ವಯಂ ಪುತ್ರ ಅ.ನ.ಕೃ. ಅವರು. ತಮ್ಮ ತಂದೆಯ ಬಗ್ಗೆ ಅವರು ಕೊಡುವ ಮಾಹಿತಿಗಳು ಗಮನಾರ್ಹ. ಒಂದು ರೀತಿಯಲ್ಲಿ ಓದುಗರಿಗೆ ವಿಸ್ಮಯಕರ ಕೂಡ. ಏಕೆಂದರೆ ಅ.ನ. ಕೃ. ಅವರು ಅಂದಿನ ಪ್ರಗತಿಶೀಲ ಲೇಖಕರಲ್ಲಿ ಒಬ್ಬರು. ನವ್ಯ ಸಾಹಿತ್ಯದ ಪ್ರವರ್ತಕರು, ಕಂದಾಚಾರಕ್ಕೆ ಮೂಢನಂಬಿಕೆಗಳಿಗೆ ಕಟ್ಟುಬಿದ್ದವರಲ್ಲ. ಅಂತಹವರು ತಮ್ಮ 'ಭಗವದ್ಗೀತಾರ್ಥ ಸಾರ'ದಲ್ಲಿ ತಂದೆಯ ಜಾತಕ ಕುಂಡಲಿಯನ್ನು ಕೊಡುತ್ತಾ, ಅದರ ವಿಶ್ಲೇಷಣೆಯನ್ನು ಜ್ಯೋತಿಷಿಗಳಾದ ಶ್ರೀ ಜೆ.ಪಿ. ರಾಜು ಎಂಬುವವರು ಬರೆದಿರುವುದನ್ನು ಉಲ್ಲೇಖಿಸುತ್ತಾರೆ– 'ಕಾವ್ಯಕಾರಕನಾದ ಪಂಚಮಾಧಿಪತಿ ಇನ್ನೊಬ್ಬ ಕಾವ್ಯಕಾರನ ವಿದ್ಯಾಭಾವಾಧಿಪತಿ ಬಂಧನ ದೃಷ್ಟಿಯನ್ನು ಪಡೆದಿರುತ್ತಾನೆ. ಜಾತಕನಿಗೆ ಹರಿಹರ ಬ್ರಹ್ಮಯೋಗವಿರುವುದರಿಂದ ಅಧ್ಯಾತ್ಮ ವಿದ್ಯೆಯಲ್ಲಿ ಪರಿಪೂರ್ಣ ಜ್ಞಾನವಿರುತ್ತದೆ. ಅಲ್ಲದೆ ಜಾತಕನಿಗೆ ಅಮಲಯೋಗವಿರುವುದರಿಂದ ದಯಾಪೂರ್ಣ, ಶುಭಕಾರ್ಯಸಕ್ತನೂ ಜಯಶೀಲನೂ ಆಗಿರುತ್ತಾನೆ. ಜಾತಕದಲ್ಲಿ ರಾಜಯೋಗದ ಜೊತೆಗೆ ಈ ಯೋಗಗಳೂ ಇರುವುದರಿಂದ ವೃದ್ಧಾಪ್ಯದಲ್ಲಿ ಆಧ್ಯಾತ್ಮಿಕತೆಗೆ ಮೊರೆಹೋಗುತ್ತಾನೆ.' ಜ್ಯೋತಿಷಿಗಳು ಮುಂದುವರಿದು ಮತ್ತೊಂದು ಮಾತು ಬರೆಯುತ್ತಾರೆ–'ಉತ್ತಮ ಆಧ್ಯಾತ್ಮಿಕ ಕೃತಿಗಳನ್ನು ರಚಿಸಬಲ್ಲ ವಿಶಿಷ್ಟಶಕ್ತಿಯೂ ಈ ಜಾತಕನಿಗಿದ್ದು ಆತನ ಜೀವಿತ ಕಾಲದಲ್ಲಿ ಅವು ಬೆಳಕು ಕಾಣದೆ ಆತನ ಸೇವೆ ಯಾರಿಂದಲೂ ಗಮನಿಸಲ್ಪಡದಂತಾಗಲು, ಕೀರ್ತಿಕಾರಕನಾದ, ದಶಮಾಧಿಪತಿ ಗುರು ಅಷ್ಟಮದಲ್ಲಿದ್ದುದೂ ಒಂದು ಮುಖ್ಯ ಕಾರಣವಾಗಿದೆ.'

ಹೀಗಾಗಿ ಕೃಷ್ಣ ಯೋಗಿಗಳು ಬರೆದ 'ಭಗವದ್ಗೀತಾರ್ಥ ಸಾರ'. ಅವರ ಜೀವಿತ ಕಾಲದಲ್ಲಿ ಬೆಳಕು ಕಾಣದೆ ಹಸ್ತಪ್ರತಿಯ ರೂಪದಲ್ಲಿಯೆ ಇದ್ದು, ಅವರ ಮರಣಾನಂತರ ಪ್ರಕಟಗೊಳ್ಳುತ್ತದೆ. ಅಷ್ಟೇ ಅಲ್ಲದೆ, ಮುದ್ರಣ ಕಲೆ ಅಂದು ಕರ್ನಾಟಕಕ್ಕೆ ಸೀಮಿತವಾದುದರಿಂದ ಸ್ವತಃ ಕವಿಗಳೇ ಅದರ ಅನೇಕ ಹಸ್ತಪ್ರತಿಗಳನ್ನು ತಯಾರಿಸಿರುವುದೂ ಗಮನಕ್ಕೆ ಬರುತ್ತವೆ. ಒಂದು ಹಸ್ತಪ್ರತಿ ತಯಾರಾದ ಕೂಡಲೆ ಅದನ್ನು ಯೋಗ್ಯ ವಿದ್ವಾಂಸರಿಗೆ ಕೊಟ್ಟಿರುವುದು ಗಮನಕ್ಕೆ ಬರುತ್ತದೆ. ಈ ಕೃತಿ ರಚನೆಯ ಕಾಲ ಸುಮಾರು ಕ್ರಿ.ಶ. 1880 ಎಂದು ಅಭಿಪ್ರಾಯಪಡಲಾಗಿದೆ. ಶ್ರೀಕೃಷ್ಣರಾಯರ ಮನೆಯಲ್ಲಿ ಅವರ ತಾಯಿ ಮತ್ತು ಹಿರಿಯ ಸೋದರಿಯಾದ ಶ್ರೀಮತಿ ಪುಟ್ಟಣ್ಣಮ್ಮ ಎಂಬುವವರೂ ಹಾಗೂ ಅವರ ಧರ್ಮಪತ್ನಿಯವರು ಈ ಗೀತೆಯನ್ನು ಹಾಡುತ್ತಿದ್ದುದರ ಬಗೆಗೂ ಉಲ್ಲೇಖವಿದೆ. ಕೃತಿಯ ಮೊದಲ ಮುದ್ರಣ ಕ್ರಿ.ಶ. 1956 ಮೇ ತಿಂಗಳಿನಲ್ಲಿ ಅ.ನ.ಕೃ. ಅವರಿಂದಾಗಿದೆ. ಅಂದರೆ ಇದರ ಪ್ರಕಟಣೆ ಸುಮಾರು ಅರವತ್ತು ವರ್ಷಗಳ ಹಿಂದೆ ಎಂದು ಹೇಳಬಹುದು. ಅ.ನ.ಕೃ. ಅವರ ನಿಧನ 1971ರಲ್ಲಿ.

ಶ್ರೀಕೃಷ್ಣ ಯೋಗಿಗಳ ಔದಾರ್ಯತೆ, ರಾಜ ಗಾಂಭೀರ್ಯ, ವಿದ್ವತ್ತು, ಭಾಷಾ ಚಿಂತನೆಗಳನ್ನು ಅವರ ಮಗನಲ್ಲಿಯೂ ಕಾಣಬಹುದು. ಅ.ನ.ಕೃ. ತಮ್ಮ ಮನೆಗೆ ತಾಯಿಯ ಹೆಸರನ್ನೆ "ಅನ್ನಪೂರ್ಣ" ಎಂದಿಟ್ಟಿದ್ದಾರೆ. ಅವರ ಮಾತಾ–ಪಿತೃ ಭಕ್ತಿಗೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ.

ವಿಭೂತಿಯೋಗದ ಮೂಲ ಪದ್ಯ ಹಾಗೂ ಅದರ ಕನ್ನಡಾವತರಣಿಕೆ ಮನೋಹರವಾಗಿ ಮೂಡಿಬಂದಿರುವುದನ್ನು ನೋಡೋಣ:

**ಮೂಲ: ಆದಿತ್ಯಾನಾಮಹಂ ವಿಷ್ಣುಃ**
**ಜ್ಯೋತಿಷಾಂ ರವಿರಂಶುಮಾನ್ ।**
**ಮರೀಚಿರ್ಮರುತಾಮಸ್ಮಿ**
**ನಕ್ಷತ್ರಾಣಾಮಹಂ ಶಶೀ ॥**
**ಕನ್ನಡ: ವಿಷ್ಣು ನಾನಾಗಿರುವೆ ದ್ವಾದಶಾದಿತ್ಯರೊಳು**
**ಶ್ರೇಷ್ಠ ಪ್ರಭೆಗಳಲಿ ಸೂರ್ಯನಾಗಿರುವೆ**
**ದೃಷ್ಟಿಗೆ ಪೊಳೆಯುವ ನಕ್ಷತ್ರದಲಿ ಚಂದ್ರ**
**ಶ್ರೇಷ್ಠವಾದ ವೇದಂಗಳಲಿ ಸಾಮವೇದವು ನಾನು**
**(ರಾಗ: ಆನಂದ ಭೈರವಿ)**

ಶ್ರೀಕೃಷ್ಣ ಯೋಗಿಗಳು ಕನ್ನಡ ಮಾತ್ರವಲ್ಲದೆ ತೆಲುಗು ಭಾಷೆಯಲ್ಲಿಯೂ ವೇದಾಂತ ಸಂಬಂಧದ ಗ್ರಂಥಗಳನ್ನು, ಅನೇಕ ಕಟ್ಟಡ ಹಾಡುಗಳನ್ನು ಬರೆದಿರುವ ಉಲ್ಲೇಖವಿದ್ದು ವಿದ್ವಾಂಸರು ಅದರ ಬಗೆಗೆ ಗಮನಹರಿಸಬೇಕಾಗಿದೆ. ಅಷ್ಟೇ ಅಲ್ಲ ಶ್ರೀಕೃಷ್ಣ ಯೋಗಿಗಳಂತೆ ಅನೇಕ ಹಿರಿಯರು ಕನ್ನಡದಲ್ಲಿ ಭಗವದ್ಗೀತೆಯನ್ನು ಕಥನ ರೂಪದಲ್ಲಿಯೋ, ಜನಪದಗೀತೆಗಳ ರೂಪದಲ್ಲಿಯೋ ಬರೆದಿರುವ ಸಾಧ್ಯತೆಗಳಿದ್ದು ಅವುಗಳ ಸಂಶೋಧನೆ ಆಗಬೇಕಾಗಿದೆ. ಅಂತಹ ಕೃತಿಗಳೂ– 'ಭಗವದ್ಗೀತಾರ್ಥ ಸಾರ'–ದಲ್ಲಿ ಸೇರಿದಂತೆ ಬೆಳಕು ಕಾಣದಿರಲು ಜನಪ್ರಿಯವಾಗದಿರಲು ಪ್ರಮುಖ ಕಾರಣ ಲೇಖಕರ ನಿರ್ಲಿಪ್ತತೆ. ಆ ಲೇಖಕರು ಕೃತಿಗಳನ್ನು ಸ್ವಸಂತೋಷಕ್ಕೆ, ಸಮುದಾಯದ ಉನ್ನತಿಗೆ ಬರೆದರೆ ಹೊರತು ಲೌಕಿಕ ಲಾಭಕ್ಕಾಗಿ ಅಲ್ಲ. ಭಗವದ್ಗೀತೆ ಅವರ ಗುರಿ ಹೊರತು ಪ್ರಚಾರ ಪ್ರಿಯತೆ ಅವರಿಗೆ ಬೇಕಿಲ್ಲ.

ಶ್ರೀಕೃಷ್ಣನ ವಿಶ್ವರೂಪ ದರ್ಶನದ ವರ್ಣನೆಯನ್ನು ಕನ್ನಡದ ಸಿರಿ ಶ್ರೀಕೃಷ್ಣರಾಯರ ಪಿತಾಮಹ ಶ್ರೀಕೃಷ್ಣ ಯೋಗಿಗಳ ಭಗವದ್ಗೀತಾರ್ಥ ಸಾರದಲ್ಲಿ ಹೀಗೆ ನೋಡೋಣ:

**ಅಪರಿಮಿತ ಪ್ರಭೆ ಅನೇಕ ಮುಖಂಗಳು**
**ತಪಿಸುವ ಸೂರ್ಯನು ಚಂದ್ರನು ನೇತ್ರ**
**ವಿಪರೀತವಾಗಿ ದಹಿಪ ಅಗ್ನಿಯೆ ವಕ್ತ್ರವು**
**ಸಫಲವೆನ್ನಯ ಜನ್ಮ ನಿನ್ನ ಪೊಗಳಶಕ್ಯ.**

ಭಗವದ್ಗೀತೆಯ ಸಂಪೂರ್ಣ ಅರ್ಥ ತಿಳಿದವರ್‍ಯಾರಿದ್ದಾರೆ ಗೀತಾಚಾರ್ಯನ ಹೊರತು. ಹಾಗೆಯೆ ವಿಶ್ವರೂಪ ದರ್ಶನ ಕೂಡ, ಅವರವರ ಭಾವಕ್ಕೆ ಅವರವರ ಭಕುತಿಗೆ ತಕ್ಕಂತೆ ಕಾಣುವುದಲ್ಲವೇ ಶ್ರೀಕೃಷ್ಣನ ವಿಶ್ವರೂಪ.

**ಧರೆಯೊಳು ಅರ್ಕಾಪುರ ಕೃಷ್ಣ ಯೋಗಿಯು**
**ಪರಮ ಪಾವನ ಗೀತಾ ಕೀರ್ತನೆಯ**
**ವಿರಚಿಸಿರುವ ಅತಿಹಿತವಾಗಿರುವಂತೆ**
**ಅರಿತ ಧೀರಗಮೃತ ಕೃಪೆಮಾಳ್ಪಗೆ**

೪೨೨, 'ಚಂದ್ರಿಕ' ೫ನೇ ರಸ್ತೆ, ಹೆಚ್.ಬಿ.ಆರ್. ಲೇಔಟ್,
ಬೆಂಗಳೂರು–೫೬೦ ೦೪೩.

ಶ್ರೀ ರಾಮಾನುಜ ವೈಭವ-44

● ಡಾ. ಬಾಬು ಕೃಷ್ಣಮೂರ್ತಿ

# ಬಿಟ್ಟಿದೇವ ವಿಷ್ಣುವರ್ಧನನಾದ...

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ರಾಮಾನುಜರು ಸಹ ಯಾವಾಗಲೂ ವಿಷ್ಣು ಧ್ಯಾನ ಮಾಡುತ್ತಾ ಕೆರೆಯ ಯೋಜನೆ ಪರಿಪೂರ್ಣವಾಗುವಂತೆ ಅನುಗ್ರಹಿಸುವಂತೆ ಬೇಡುತ್ತಿದ್ದರು.

ಈ ಎಲ್ಲ ಪ್ರಾರ್ಥನೆಗಳ ಒಟ್ಟು ಫಲವೋ ಎಂಬಂತೆ ಒಂದು ದಿನ ಇದ್ದಕ್ಕಿದ್ದಂತೆ ಮೋಡಗಳು ದಟ್ಟವಾಗಿ ಮುಸುಕಿ ಆಕಾಶವೇ ಒಡೆಯುತ್ತೇನೋ ಎಂಬಂತೆ ಮಳೆ ಶುರುವಾಯಿತು. ಹಲವಾರು ದಿನಗಳ ಪರ್ಯಂತ ಕುಂಭದ್ರೋಣ ಮಳೆಯಾಗಿ ತೊಣ್ಣೂರು ಹೊಸ ಕೆರೆ ತುಂಬಿತು. ಮನುಷ್ಯನ ಪ್ರಯತ್ನ ಪರಿಪೂರ್ಣವಿದ್ದರೆ ಕೊನೆಯ ಹಂತದಲ್ಲಿ ದೈವ ಅದನ್ನು ಮುಕ್ತಾಯಗೊಳಿಸಲು ಸಹಾಯಕ್ಕೆ ಬರುವುದಂತೆ. ಹಾಗೆ ಮಳೆರಾಯನ ಕೃಪಾಕಟಾಕ್ಷವು ದೊರೆತು ಹೊಯ್ಸಳ ರಾಜ್ಯದ ಜನ ಆರಂಭಿಸಿದ ಕೆಲಸಕ್ಕೆ ಅವನೆ ಮುಕ್ತಾಯವನ್ನು ಹಾಡಿದ. ಕೆರೆ ತುಂಬಿದಂತೆ ವಿಷ್ಣುವರ್ಧನ ಮತ್ತು ಪಟ್ಟಮಹಿಷಿ ಶಾಂತಲಾದೇವಿ ಗಂಗಾಪೂಜೆ ಮಾಡಿ ಕೆರೆಗೆ ಮೊರದ ಬಾಗಿನವನ್ನು ಅರ್ಪಿಸಿದರು.

ಒಂದು ಸಂಜೆ ರಾಮಾನುಜರ ಮಸ್ತಿಷ್ಕಕ್ಕೆ ಹೊಳೆದ ಒಂದು ಹೊಳಪು ಈಗ ಸಾಕಾರಗೊಂಡ ತೊಣ್ಣೂರು ಕೆರೆಯಾಯಿತು.



ರಾಮಾನುಜರು ಆ ದಿವಸ ವಿಷ್ಣುವರ್ಧನನಿಗೆ ನಗುತ್ತಾ ಹೀಗೆಂದರು, "ಮಹಾರಾಜ, ಈ ನಿಮ್ಮ ಕೆಲಸ ಇಲ್ಲಿನ ಪ್ರಜಾ ಸಮೂಹಕ್ಕೆ ವರವಾಗಿ ಪರಿಣಮಿಸುತ್ತದೆ. ಭೂಮಿ ಫಲಭರಿತವಾಗುತ್ತದೆ. ನಿಮ್ಮ ಹೆಸರು ಆಚಂದ್ರಾರ್ಕವಾಗಿ ಉಳಿಯುತ್ತದೆ."

ವಿಷ್ಣುವರ್ಧನನೂ ವಿನಯದಿಂದ, "ಮಹಾಸ್ವಾಮಿ ಇದರಲ್ಲಿ ನನ್ನದೇನಿದೆ? ನೀವು ಬಯಸಿದಿರಿ. ಅದು ನಡೆದು ಹೋಯಿತು. ನನ್ನ ಹೆಸರಲ್ಲ. ಆಚಂದ್ರಾರ್ಕವಾಗಿ ಉಳಿಯುವುದು ಶ್ರೀಮದ್ರಾಮಾನುಜರ ಹೆಸರು."

ಗಟ್ಟಿಯಾಗಿ ನಗುತ್ತಾ ರಾಮಾನುಜರು, "ನಮ್ಮಿಬ್ಬರ ನಡುವೆ ಜಗಳವೇಕೆ? ಇಬ್ಬರ ಹೆಸರೂ ಬೇಡ. ಯಾರ ಕೃಪೆಯಿಂದ ಈ ಕೆರೆ ನಿರ್ಮಾಣವಾಯಿತೋ ಆ ಶ್ರೀನಿವಾಸನ ಹೆಸರಿನಿಂದಲೇ ಕೆರೆಯನ್ನು ಕರೆಯೋಣ. ತಿರುಮಲೇಶನ ಹೆಸರಿನಿಂದ ಕರೆಯೋಣ. ಇಂದಿನಿಂದ ಇದು ತಿರುಮಲ ಸಾಗರ ಎಂಬ ಹೆಸರಿನಿಂದ ಕರೆಯಲ್ಪಡಲಿ" ಎಂದರು.

"ಆಹಾ! ಅತ್ಯಂತ ಸೂಕ್ತ ನಾಮಕರಣ" ಎಂದು ವಿಷ್ಣುವರ್ಧನ 'ತಿರುಮಲ ಸಾಗರ, ತಿರುಮಲ ಸಾಗರ' ಎಂದು ಎರಡು ಬಾರಿ ಹೇಳಿಕೊಂಡ.

ತಮ್ಮದು ಕೇವಲ ಧರ್ಮೋಪದೇಶವಲ್ಲ ಕಾರ್ಯಯೋಗ, ಪ್ರಜಾ ಸೌಖ್ಯವೂ ಅದರಲ್ಲಿ ಸೇರಿದೆ ಎಂಬುದನ್ನು ತೊಣ್ಣೂರು ಕೆರೆಯ ನಿರ್ಮಾಣದ ಹಿಂದಿನ ಸ್ಫೂರ್ತಿಯ ಸೆಲೆಯಾಗಿ ರಾಮಾನುಜರು ಸಾಧಿಸಿ ತೋರಿಸಿದ್ದರು.

ರಾಮಾನುಜರಿಗೆ ಕೇವಲ ಉಪದೇಶದಲ್ಲಿ ನಂಬಿಕೆ ಇರಲಿಲ್ಲ. ಪ್ರಜಾಕ್ಷೇಮಕ್ಕೂ ಅವರು ಅಷ್ಟೇ ಮಹತ್ವ ನೀಡಿದ್ದರು. ಭಕ್ತಿ ಮತ್ತು ಕಾರ್ಯಗಳು ಒಟ್ಟಿಗೇ ಹೋಗುತ್ತಿದ್ದವು. ಅವರಿದ್ದ ಸ್ಥಳಕ್ಕೆ ಬಂದ ಭಕ್ತರಿಗೆಲ್ಲ-ಅವರು ವೈಷ್ಣವರಾಗುವುದಕ್ಕೆ ಮೊದಲು ಯಾವುದೇ ಜಾತಿ, ಮತದವರಾಗಿದ್ದರೂ ಭೇದವೆಣಿಸದೆ-ಮುಷ್ಕಳ ಪ್ರಸಾದ ಸೇವೆ ಸಲ್ಲಿಸಲಾಗುತ್ತಿತ್ತು.

ವಿಷ್ಣುವರ್ಧನ ದಿನೇ ದಿನೇ ಎಲ್ಲ ವಿಷಯಗಳಿಗೂ ವೈಷ್ಣವಾಚಾರ್ಯ ರಾಮಾನುಜರನ್ನು ಸಂಪರ್ಕಿಸಿ ಅವರ ಮಾರ್ಗದರ್ಶನ ಪಡೆಯುತ್ತಿದ್ದುದು ವೈಷ್ಣವ ಮತ ದ್ವೇಷಿಗಳಾಗಿದ್ದ ಕೆಲವರು ಕೆಳ ಹಂತದ ಜೈನರು, ಅಲ್ಪಸಂಖ್ಯಾತರಾಗಿದ್ದ ಭೈರವ್ಯೋಪಾಸಕರು, ಕಾಪಾಲಿಕರು ಪಾಶುಪಾತರು ಮುಂತಾದ ಶೈವ ಮತಾನುಯಾಯಿಗಳೂ ವಿಷ್ಣುವರ್ಧನನ ಬಗ್ಗೆ ತೀವ್ರ ಅಸಮಾಧಾನಗೊಂಡರು. ಅವನ ವಿರುದ್ಧ ಮಾತುಗಳೂ ಕೇಳಿಬಂದವು. ಅವನು ಜೈನ ಬಸದಿಗಳನ್ನು ಕೆಡವಿ ಅಲ್ಲಿ ವಿಷ್ಣು ದೇವಾಲಯಗಳನ್ನು

ಮಾಡಲು ಸೂಚಿಸಿದ್ದಾನೆಂದು ಗುಸು ಗುಸು ಶುರುವಾಯಿತು. ಆದರೆ ರಾಜ್ಯಾಡಳಿತದಲ್ಲಿ ದಕ್ಷತೆ ಹಾಗೂ ದರ್ಪದಿಂದ ನಡೆದುಕೊಳ್ಳುತ್ತಿದ್ದ ವಿಷ್ಣುವರ್ಧನ ಇವಾವುದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಗಂಭೀರ ನಡಿಗೆಯ ಗಜರಾಜನಂತೆ ತನ್ನ ಹಾದಿಯಲ್ಲಿ ತಾನು ನಡೆಯುತ್ತಿದ್ದ.

ಹೀಗೊಮ್ಮೆ ವಿಷ್ಣುವರ್ಧನ ರಾಮಾನುಜರ ಬಳಿಗೆ ಬಂದಾಗ ಈ ಪ್ರಶ್ನೆ ಎದ್ದಿತು.

"ಗುರುವರ್ಯ, ನಾನು ತಮ್ಮಿಂದ ದೀಕ್ಷೆ ಸ್ವೀಕರಿಸಿದಾಗಿನಿಂದ ರಾಜ್ಯದಲ್ಲಿ ಪರಿಸ್ಥಿತಿ ಬದಲಾಗಿದೆ. ನಾನು ವೈಷ್ಣವನಾದೆನೆಂದು ಪ್ರಜೆಗಳೂ ಅದನ್ನೇ ಅನುಸರಿಸಿ ವೈಷ್ಣವ ದೀಕ್ಷೆ ಪಡೆಯುತ್ತಿದ್ದಾರೆ. ಅಂತೆಯೇ ನಾನು ಇತರ ಮತಗಳ ದ್ವೇಷಿಯಂತೆ ಬಿಂಬಿಸಲಾಗುತ್ತಿದೆ. ನಾನು ಬಸದಿಗಳನ್ನು ನಾಶಗೊಳಿಸಿ ಆ ಸ್ಥಾನದಲ್ಲಿ ವಿಷ್ಣು ದೇವಾಲಯಗಳನ್ನು ನಿರ್ಮಿಸಲು ಆದೇಶಿಸಿದ್ದೇನೆಂದು ಹರಡಲಾಗುತ್ತಿದೆ."

"ಹಾಗೇನು ನೀವು ಮಾಡಿಲ್ಲವಷ್ಟೆ ಮಹಾರಾಜ?" ರಾಮಾನುಜರು ಕೇಳಿದರು.

"ನಮ್ಮದು ಸರ್ವಮತ, ಸರ್ವ ಧರ್ಮ ಸಮಭಾವ. ನಾವು ಸ್ವಂತವಾಗಿ ಯಾವ ದೇವರನ್ನೇ ಆರಾಧಿಸಿದರೂ ಯಾವ ಮತದ ಆಚಾರ ವಿಚಾರಗಳನ್ನು ಅವಲಂಬಿಸಿದರೂ ಹೀಗೆಯೇ ಮಾಡಿ ಎಂದು ಪ್ರಜೆಗಳಿಗೆ ಎಂದೂ ಒತ್ತಾಯಿಸಿದವರಲ್ಲ. ಇದು ನಮ್ಮ ತಾತ ಮುತ್ತಾತನವರ ಕಾಲದಿಂದಲೂ ನಡೆದುಬಂದಿರುವ ಸಂಪ್ರದಾಯ."

"ಹಾಗಿದ್ದರೆ ಚಿಂತೆ ಏಕೆ? ನೀವು ಸರಿಯಾದ ದಾರಿಯಲ್ಲೇ ಸಾಗುತ್ತಿದ್ದೀರಿ. ನಮ್ಮದು 'ಸರ್ವ ದೇವ ನಮಸ್ಕಾರಃ ಕೇಶವಂ ಪ್ರತಿ ಗಚ್ಛತಿ' ಎಂಬ ನಂಬಿಕೆ. ಎಲ್ಲ ನದಿಗಳೂ ಸಾಗರವನ್ನು ಸೇರುವಂತೆ ಎಲ್ಲ ದೇವತೆಗಳಿಗೆ ಮಾಡುವ ಪೂಜೆಗಳೂ ಕೊನೆಗೆ ಹೋಗಿ ಸೇರುವುದು ಕೇಶವನನ್ನೇ! ಅಂದರೆ ಶ್ರೀಮನ್ನಾರಾಯಣನನ್ನೇ!"

ವಿಷ್ಣುವರ್ಧನ ಹೌದೆಂಬಂತೆ ತಲೆ ಅಲ್ಲಾಡಿಸಿದ.

"ನಿಮ್ಮ ಬಳಿ ಇನ್ನೊಂದು ವಿಷಯವನ್ನು ಪ್ರಸ್ತಾವಿಸಬೇಕೆಂಬ ಆಶಯ ನನ್ನದು."

"ಅದೇನು ಹೇಳಿ ಮಹಾಸ್ವಾಮಿ."

"ಕಲಿಯುಗದಲ್ಲಿ ಪರದೈವ ಶ್ರೀಮನ್ನಾರಾಯಣನೇ ಎಂಬುದು ಪ್ರಶ್ನಾತೀತ. ಅವನನ್ನು ಬಿಟ್ಟರೆ ಬೇರೊಂದು ದೈವವಿಲ್ಲ ಎಂಬ ನಂಬಿಕೆ ನಮ್ಮದು. ಅವನ ಆರಾಧನೆ ಪೂಜೆಗಳಿಂದ ಸುಭಿಕ್ಷ ಉಂಟಾಗುವುದು. ರಾಜ್ಯದಲ್ಲಿ ಸಂಪತ್ಸಮೃದ್ಧಿಗಳೂ ಪ್ರಜಾಕ್ಷೇಮವೂ ನೆಲೆಸುತ್ತದೆ. ಈಗಾಗಲೇ ಅವನ ಅನುಗ್ರಹದಿಂದ ಚೆನ್ನಾಗಿ ಮಳೆ ಸುರಿದಿರುವುದೂ ತೊಣ್ಣೂರು ಕೆರೆಯ ನಿರ್ಮಾಣವಾಗಿರುವುದೂ ನಮ್ಮೆಲ್ಲರ ಅನುಭವಕ್ಕೆ ಬಂದು ಶ್ರೀಹರಿಯನ್ನು ನಂಬಿ ಪ್ರಾರ್ಥಿಸಿದರೆ ಅವನ ಶ್ರೀರಕ್ಷೆ ದೊರೆಯುವುದೆಂಬುದು ಪ್ರತ್ಯಕ್ಷ ಕಂಡಿದ್ದೇವೆ."

"ಹೌದು ಮಹಾಸ್ವಾಮೀ. ತಾವು ತೊಣ್ಣೂರಿನ ನೆಲದ ಮೇಲೆ ಕಾಲಿಟ್ಟ ಮೇಲೆ ಹಿಂದೆಂದೂ ಕಂಡು ಕೇಳರಿಯದಷ್ಟು ಅದ್ಭುತಗಳು ಸಂಭವಿಸಿವೆ ಎಂಬುದು ನನ್ನ ಅವಿಚಲ ನಂಬಿಕೆ. ವಿಷ್ಣು ಭಕ್ತಿಯನ್ನು ಪಸರಿಸಲು ನಾವು ಎಲ್ಲವನ್ನು ಮಾಡಲಿಕ್ಕೂ ಸಿದ್ಧ. ತಾವು ಅಪ್ಪಣೆ ಕೊಡಿಸಿದ್ದನ್ನು ಖಂಡಿತ ನೆರವೇರಿಸುವೆವು."

"ರಾಜ್ಯದಲ್ಲಿ ಸಾಧ್ಯವಾಗುವ ಸೂಕ್ತ ಸ್ಥಳಗಳಲ್ಲಿ ಶ್ರೀಮನ್ನಾರಾಯಣನ ದೇವಸ್ಥಾನಗಳನ್ನು ನಿರ್ಮಿಸಿ. ಆ ಭಗವಂತನ ಎಷ್ಟು ದೇವಾಲಯಗಳು ನಿರ್ಮಾಣಗೊಳ್ಳುವವೋ ಅಷ್ಟೇ ಶಾಂತಿ, ಸಮಾಧಾನಗಳು ರಾಜ್ಯದಲ್ಲಿ ನೆಲೆಸುತ್ತವೆ. ಪ್ರಜೆಗಳು ಸುಖೀ ಜೀವನ ನಡೆಸುತ್ತಾರೆ."

"ಹಾಗೆಯೇ ಆಗಲಿ ಮಹಾಸ್ವಾಮಿ. ಈಗಲೇ ತೊಣ್ಣೂರಿನಲ್ಲಿ ಒಂದು ವಿಷ್ಣು ದೇವಾಲಯದ ನಿರ್ಮಾಣ ಆರಂಭಿಸುವೆವು. ಅನಂತರ ಒಂದರ ಹಿಂದೆ ಇನ್ನೊಂದರಂತೆ ಸಾಧ್ಯವಾದಷ್ಟು ವಿಷ್ಣು ದೇವಾಲಯಗಳನ್ನು ನಿರ್ಮಿಸುವೆವು."

"ಇದರಿಂದ ನಿಮ್ಮ ಪುರೋಭಿವೃದ್ಧಿಯೂ ಆಗುತ್ತದೆ. ಈಗ ಚಿಕ್ಕದಾಗಿರುವ ಈ ಹೊಯ್ಸಳ ರಾಜ್ಯವನ್ನು ಮುಂದೆ ಮಹಾವಿಷ್ಣುವಿನ ಅನುಗ್ರಹದಿಂದ ದೇಶೋವಿಶಾಲವಾಗಿ ಹಬ್ಬಿಸುತ್ತೀರಿ. ನಿಮ್ಮ ಪೂರ್ವಜರೆಲ್ಲರ ಸಾಧನೆಗಳನ್ನು ಅನೇಕ ಪಟ್ಟು ಮೀರಿಸಿ ವಿಶಾಲ ಚಕ್ರಾಧಿಪತ್ಯವನ್ನು ಸ್ಥಾಪಿಸಿ ಚಕ್ರವರ್ತಿಗಳೆನಿಸಿಕೊಳ್ಳುತ್ತೀರಿ. ಈಗ ನಿಮಗೆ ಶತ್ರುಗಳಾಗಿ ಕಾಟ ಕೊಡುತ್ತಿರುವ ಚೋಳರನ್ನು, ಚಾಲುಕ್ಯರನ್ನು ಸದೆ ಬಡಿದು ವಿಜಯ ಸಾಧಿಸುತ್ತೀರಿ. ಚತುರ ಆಡಳಿತಗಾರ, ಕಲೆ ಸಾಹಿತ್ಯಗಳ ಪೋಷಕ, ಶೂರ ಕೀರ್ತಿಶಾಲಿ ಪ್ರಭುಗಳಾಗುತ್ತೀರಿ. ಇದೆಲ್ಲವೂ ಶ್ರೀಮನ್ನಾರಾಯಣನ ದೈವೀ ಅನುಗ್ರಹದಿಂದಲೇ ಸಾಧ್ಯ. ಅವನ ಅನುಗ್ರಹ ಗಳಿಸಲು ಅವನ ದೇವಾಲಯಗಳನ್ನು ನಿರ್ಮಿಸಿ."

"ತಮ್ಮ ಆಶೀರ್ವಾದ ಗುರುವರ್ಯ. ಈಗಿನಿಂದಲೇ ಆ ಕೆಲಸವನ್ನು ಆರಂಭಿಸುವೆವು."

"ದೇವಾಲಯದ ಕಲ್ಪನೆ ಬೃಹತ್ತಾಗಿರಬೇಕು. ದೇವರಮೂರ್ತಿ ಸುಂದರವಾಗಿರಬೇಕು. ವಿಶಾಲವಾದ ಪ್ರದೇಶವನ್ನು ದೇವಾಲಯಕ್ಕೆ ಮೀಸಲಿರಿಸಿ ಅಲ್ಲಿ ಕೆಲಸ ಆರಂಭಿಸತಕ್ಕದ್ದು."

ಗುರುಗಳಿಂದ ಆದೇಶ ಪಡೆದ ವಿಷ್ಣುವರ್ಧನ ಬೃಹತ್ತಾದ ಕಲ್ಪನೆಗಳನ್ನು ಮಾಡುತ್ತಾ ಅರಮನೆ ಸೇರಿದ. ಕೂಡಲೇ ಚತುರನೂ ಕಾರ್ಯಸಮರ್ಥನೂ ಆದ ತನ್ನ ನಂಬಿಕೆಯ ದಂಡನಾಯಕ ಸುರಿಗೆಯ ನಾಗಯ್ಯನಿಗೆ ಕರೆ ಕಳುಹಿಸಿದ. ಅವನೊಂದಿಗೆ ಬೃಹತ್ತಾದ ನಾರಾಯಣನ ದೇವಸ್ಥಾನವನ್ನು ಕುರಿತು ಚರ್ಚಿಸಿದ. ಉತ್ತಮ ವಾಸ್ತು ಶಾಸ್ತ್ರಜ್ಞರನ್ನೂ ಶಿಲ್ಪಿಗಳನ್ನೂ ಕರೆಸಿ ಆಗಮ ಶಾಸ್ತ್ರಗಳನುಸಾರವಾಗಿ ಭವ್ಯವಾದ ದೇವಾಲಯದ ರೂಪರೇಷೆಗಳನ್ನು ನಿರ್ಮಿಸಲು ಆದೇಶಿಸಿದ. ಇಡೀ ನಿರ್ಮಾಣ ಕಾರ್ಯದ ಸಂಪೂರ್ಣ ಮೇಲ್ವಿಚಾರಣೆಯನ್ನು ತಾನೇ ವಹಿಸಿಕೊಂಡ.

ಶುಭ ಮುಹೂರ್ತವನ್ನು ರಾಮಾನುಜರೇ ನಿಶ್ಚಯಿಸಿದರು. ಆ ಕ್ಷಣದಲ್ಲಿ ರಾಮಾನುಜರೂ ಅಲ್ಲಿ ಉಪಸ್ಥಿತರಿದ್ದರು. ನೂರಾರು ಕುಶಲ ಕೆಲಸಗಾರರೂ ಶಿಲ್ಪಿಗಳೂ ದೇವಾಲಯ ನಿರ್ಮಾಣ ಕಾರ್ಯದಲ್ಲಿ ತೊಡಗಿಸಿಕೊಂಡರು.

ಕಾರ್ಯ ಪ್ರಗತಿಯನ್ನು ಕುರಿತು ಪ್ರತಿ ದಿವಸ ವರದಿಯನ್ನು ತರಿಸಿಕೊಳ್ಳುತ್ತಿದ್ದು ಕೆಲಸದಲ್ಲಿ ವಿಳಂಬವಿದ್ದರೆ ತ್ವರಿತಗೊಳಿಸುವಂತೆಯೂ ಲೋಪಗಳಿದ್ದರೆ

ತಿದ್ದಿಕೊಳ್ಳುವಂತೆಯೂ ಎಚ್ಚರಿಸಿ ಕೆಲಸದ ಸರಿಯಾದ ಗತಿಯಲ್ಲಿ ಸಾಗುವಂತೆ ಮಾಡಿದ. ಅವನ ಪರ್ಯವೇಕ್ಷಣೆಯಲ್ಲಿ ಸುರಗಿಯ ನಾಗಯ್ಯನ ಕಾರ್ಯಕ್ಷಮತ್ವದ ಕಾರಣ ಬೃಹತ್ತೂ ಭವ್ಯವೂ ಆದ ಸುಂದರ ನಾರಾಯಣ ಮೂರ್ತಿಯನ್ನು ಹೊಂದಿದ್ದ ದೇವಾಲಯ ಎದ್ದು ನಿಂತಿತ್ತು.

ಆ ದೇವಾಲಯದ ಪ್ರತಿಷ್ಠಾಪನೆಯ ದಿವಸ ರಾಮಾನುಜರ ಆನಂದಕ್ಕೆ ಪಾರವೇ ಇರಲಿಲ್ಲ. "ಶ್ರೀಹರಿ! ನಿನ್ನದೇ ದೇವಾಲಯವನ್ನು ನಿನ್ನ ಪಾದಗಳಿಗೆ ಅರ್ಪಿಸುವ ಸೌಭಾಗ್ಯವನ್ನು ನನಗೆ ಒದಗಿಸಿದ್ದೀಯ ತಂದೆ. ನಿನ್ನ ಮಹಿಮೆ ಅಪಾರ ಶ್ರೀಮನ್ನಾರಾಯಣ! ಮಹಿಮೆ ಅಪಾರ."

ಅರ್ಚಾಮೂರ್ತಿಗೆ ನಂಬಿ ನಾರಾಯಣ ಎಂದು ರಾಮಾನುಜರು ಹೆಸರಿಸಿದರು. ಹೀಗೆ ತೊಣ್ಣೂರಿನಲ್ಲಿ ಭವ್ಯ ದಿವ್ಯ ವಿಶಾಲವಾದ ನಂಬಿ ನಾರಾಯಣ ದೇವಸ್ಥಾನ ನೆಲೆಗೊಂಡಿತು. ವಿಷ್ಣುವರ್ಧನ ನಿರ್ಮಿಸಿದ ನಾರಾಯಣನ ದೇವಾಲಯಗಳ ಸರಣಿಯಲ್ಲಿ ಮೊದಲನೆಯದೆನ್ನಿಸಿಕೊಂಡಿತು.

ಹೀಗೆ ಕರುನಾಡಿನಲ್ಲಿ ರಾಮಾನುಜರ ದಿಗ್ವಿಜಯ ಮುಂದುವರಿಯುತ್ತಿರಲು ಇದ್ದಕ್ಕಿದ್ದಂತೆ ಒಂದು ಸಮಸ್ಯೆ ಉದ್ಭವವಾಯಿತು. ಶ್ರೀ ವೈಷ್ಣವರಿಗೆ ಪುಂಡ್ರಧಾರಣೆ ಮಾಡುವಾಗ ತಿರುಮಣ್ ಅಥವಾ ಬಿಳಿಯ ಮಣ್ಣು ಅತ್ಯಂತ ಆವಶ್ಯಕ. ಕೆಂಪು ಗೆರೆ ಮಧ್ಯದಲ್ಲಿದ್ದು ಬಿಳಿಯ ಗೆರೆಗಳು ಅದರ ಅಕ್ಕಪಕ್ಕದಲ್ಲಿ ಮತ್ತು ಬುಡದಲ್ಲಿರುತ್ತವೆ. ಬಿಳಿಯ ಮಣ್ಣು ಇಲ್ಲವಾದಲ್ಲಿ ಪುಂಡ್ರ ಅಸಂಪೂರ್ಣ.

ಒಂದು ಸಲ ನಾಮಧಾರಣೆ ಮಾಡುವಾಗ ರಾಮಾನುಜರಿಗೆ ಬಿಳಿಯ ಮಣ್ಣು ಕಡಮೆಯಾಗಿರುವುದು ಗಮನಕ್ಕೆ ಬಂತು. ಅವರು ದಾಶರಥಿ, ಗೋವಿಂದ ಮುಂತಾದ ಶಿಷ್ಯರಿಗೆ ಕರೆ ಕಳುಹಿಸಿ ಅವರುಗಳ ಬಳಿ ತಿರುಮಣಿ ಶೇಖರಣೆ ಎಷ್ಟಿದೆ ಎಂದು ವಿಚಾರಿಸಿದರು. ಅವರಿಂದಲೂ ಬಂದ ಉತ್ತರ ತಿರುಮಣ್ ಮುಗಿದು ಹೋಗುವುದರಲ್ಲಿದೆ ಎಂಬುದೇ ಆಗಿತ್ತು.

ಶ್ರೀವೈಷ್ಣವರ ಪಾಲಿಗೆ ಇದೊಂದು ಭಯಂಕರ ಸಮಸ್ಯೆ! ತಿರುಮಣ್ ಇಲ್ಲದಿದ್ದರೆ ನಾಮಧಾರಣೆ ಪರಿಪೂರ್ಣವಾಗುವುದಿಲ್ಲವಲ್ಲ!

ರಾಮಾನುಜರು ಶ್ರೀಮನ್ನಾರಾಯಣನಲ್ಲಿನ ಭಕ್ತಿ, ಪ್ರಪತ್ತಿಗಳಿಂದ ಅನೇಕ ದಿವ್ಯ ಶಕ್ತಿಗಳನ್ನು ಗಳಿಸಿಕೊಂಡಿದ್ದರು. ಯೋಗಿಗಳೂ ಸಾಧಕರೂ ಗಳಿಸುವ ವಿಶೇಷ ಶಕ್ತಿಗಳನ್ನು ಅವರು ದಿನನಿತ್ಯದ ಪೂಜಾ ಕೈಂಕರ್ಯದಿಂದ, ಸರ್ವ ಸಮರ್ಪಣಾಭಾವದಿಂದ ಶ್ರೀಮನ್ನಾರಾಯಣನ ಕೃಪಾ ಕಟಾಕ್ಷದಿಂದ ಪಡೆದುಕೊಂಡಿದ್ದರು.


ಅವರು ಆ ದಿವಸ ಶ್ರೀಮನ್ನಾರಾಯಣನಲ್ಲಿ ಸಂಪೂರ್ಣ ಮನಸ್ಸನ್ನು ಕೇಂದ್ರೀಕರಿಸಿ, ತಿರುಮಣ್ ಕೊರತೆಯನ್ನು ಕುರಿತೇ ಸುಪ್ತ ಮನಸ್ಸಿನಲ್ಲಿ ಧರಿಸಿ, ಧ್ಯಾನದಲ್ಲಿ ಮುಳುಗಿಹೋಗಿದ್ದರು. ಆಗ ಅವರ ಧ್ಯಾನದಲ್ಲಿ ಜಾಗಟೆ, ಗಂಟೆಗಳ ನಾದವು ಕೇಳಿದಂತೆ ಭಾಸವಾಯಿತು. ಅವರು ವೈಕುಂಠಕ್ಕೆ ತೆರಳಿದಂತೆಯೂ ಅವರಿಗೆ ಶ್ರೀಮನ್ನಾರಾಯಣನ ದಿವ್ಯಮೂರ್ತಿಯ ದರ್ಶನವಾದಂತೆಯೂ ಅನ್ನಿಸಿತು. ಅವರು ಪರಮಾನಂದಭರಿತರಾದರು.

ಶ್ರೀಮನ್ನಾರಾಯಣನು ತನ್ನ ಮನಮೋಹಕ ಮುಗುಳುನಗೆಯನ್ನು ಬೀರುತ್ತಾ,

"ಚಿಂತೆ ಬೇಡ ರಾಮಾನುಜ. ನಿನಗೆ ತಿರುಮಣ್ ದೊರೆಯುವುದು. ಅಷ್ಟೇ ಅಲ್ಲ. ನೀನು ಈಗಿರುವ ಸ್ಥಳಕ್ಕೆ ಸಮೀಪದಲ್ಲಿಯೇ ಯಾದವಾದ್ರಿ ಎಂಬ ಸ್ಥಳದಲ್ಲಿ ನಾನೂ ಇರುವೆನು. ಚೆಲುವನಾರಾಯಣಮೂರ್ತಿಯ ರೂಪದಲ್ಲಿರುವ ನನ್ನ ವಿಗ್ರಹವನ್ನು ದುಷ್ಟರಿಂದ ಕಾಪಾಡಲು ನನ್ನ ಭಕ್ತರು ಒಂದು ಸ್ಥಳದಲ್ಲಿ ನನ್ನನ್ನು ನೆಲದಾಳದಲ್ಲಿ ಹೂತಿಟ್ಟಿರುವರು. ನೀನು ಬಂದು ಬಿಡಿಸುವುದಕ್ಕಾಗಿ ನಾನು ಕಾಯುತ್ತಿರುವೆನು..." ಎಂದಂತಾಯಿತು.

ರಾಮಾನುಜರು ದಾಶರಥಿ, ಗೋವಿಂದ, ತೊಂಡನೂರು ನಂಬಿ, ಆಂಧ್ರಪೂರ್ಣರನ್ನು ಬಳಿಗೆ ಕರೆಸಿಕೊಂಡರು. ಅವರಿಗೆ ಧ್ಯಾನದಲ್ಲಿ ಶ್ರೀಮನ್ನಾರಾಯಣನು ಕರೆ ನೀಡಿದರ ಬಗ್ಗೆ ಪ್ರಸ್ತಾವಿಸಿದರು. ಎಲ್ಲರೂ ಈ ಸಂಗತಿಯನ್ನು ಅರಿತು ಆಶ್ಚರ್ಯಚಕಿತರಾದರು. ಆದರೆ ತಿರುಮಣ್ ಸಮಸ್ಯೆ ಇತ್ಯರ್ಥವಾಗುವುದು ಅವರಿಗೆ ಸಂತೋಷವನ್ನುಂಟುಮಾಡಿತ್ತಾದರೂ ಅದಕ್ಕಿಂತಲೂ ಹೆಚ್ಚಾಗಿ ನಾರಾಯಣ ಭಗವಾನರ ಮೂರ್ತಿ ಒಂದು ಯಾದವಾದ್ರಿಯಲ್ಲಿ ಎಲ್ಲಿಯೋ ನೆಲದಲ್ಲಿ ಹೂತು ಹೋಗಿದೆ ಎಂಬುದನ್ನು ತಿಳಿದು ಗೊಂದಲದಲ್ಲಿ ಮುಳುಗಿದರು. ಆ ಬೆಟ್ಟದ ಪ್ರದೇಶ ಹಾಗೂ ಸುತ್ತಮುತ್ತಲ ದಟ್ಟ ಕಾಡಿನಲ್ಲಿ ಅದನ್ನು ಹುಡುಕಾಡುವುದಾದರೂ ಹೇಗೆ? ಅದನ್ನು ಹೊರ ತೆಗೆದು ಪ್ರತಿಷ್ಠಾಪಿಸುವುದಾದರೂ ಹೇಗೆ ಎಂಬ ಪ್ರಶ್ನೆಗಳು ಅವರನ್ನು ಕಾಡಲಾರಂಭಿಸಿದವು. ಅದನ್ನು ಅವರು ಗುರುಗಳ ಮುಂದೆ ಪ್ರಸ್ತಾವ ಮಾಡಿದರು ಕೂಡ.

"ತಾನು ಯಾದವಾದ್ರಿಯಲ್ಲಿರುವೆನೆಂದು ಹೇಳಿದ ನಾರಾಯಣನೇ ತಾನಿರುವ



ತಾಣವನ್ನು ತೋರಿಸದಿರುವುದಿಲ್ಲ. ಅವನ ಮೇಲೆ ನಂಬಿಕೆ ಇಡಿ. ಅಷ್ಟು ಸಾಕು" ಎಂದು ಅವರ ಅನುಮಾನಕ್ಕೆ ಪೂರ್ಣವಿರಾಮ ಹಾಕಿದರು.

ಅನಂತರ ತಾವು ಮಹಾರಾಜರನ್ನು ನೋಡಬಯಸಿರುವುದಾಗಿ ವಿಷ್ಣುವರ್ಧನನಿಗೆ ವರ್ತಮಾನವನ್ನು ಕಳುಹಿಸಿದರು. ವಿಷ್ಣುವರ್ಧನ ಮಹಾರಾಜನು ಅವರನ್ನು ಕಾಣಲು ಬಂದ. ತಮಗೆ ಶ್ರೀಮನ್ನಾರಾಯಣನು ಧ್ಯಾನದಲ್ಲಿ ಪ್ರತ್ಯಕ್ಷನಾಗಿ ಯಾದವಾದ್ರಿಯಲ್ಲಿ ತಾನು ಒಂದೆಡೆ ನೆಲದಲ್ಲಿ ಹೂತುಹೋಗಿರುವುದಾಗಿಯೂ ತನ್ನನ್ನು ಬಿಡುಗಡೆಗೊಳಿಸುವಂತೆಯೂ ಹೇಳಿದನೆಂದು ಅರುಹಿದರು.

ಈ ಮಾತು ಕೇಳಿ ಬೆಚ್ಚಿ ಬೀಳುವ ಸರದಿ ವಿಷ್ಣುವರ್ಧನನದಾಯಿತು. ಅವನಿಗೆ ತನ್ನ ಮಗಳು ವಾಸಿಯಾದಾಗಿನಿಂದ ರಾಮಾನುಜರ ಮೇಲೂ ಮಹಾಮಹಿಮ ಪರಮಾತ್ಮ ಶ್ರೀಮನ್ನಾರಾಯಣನ ಮೇಲೂ ಮಿತಿಮೀರಿದ ಭಕ್ತಿ, ಶ್ರದ್ಧೆ. ತನ್ನ ರಾಜ್ಯದ ಯಾದವಾದ್ರಿಯಲ್ಲಿ ಶ್ರೀಮನ್ನಾರಾಯಣನ ಮೂರ್ತಿ ನೆಲದಲ್ಲಿ ಅಡಗಿದೆ ಎಂದು ತಿಳಿದು ಅದು ತನ್ನ ಪರಮಭಾಗ್ಯವೆಂದೂ ಅದನ್ನು ಹುಡುಕಿಸುವುದು ತನ್ನ ಆದ್ಯ ಕರ್ತವ್ಯವೆಂದೂ ಭಾವಿಸಿ ತನ್ನ ದಂಡನಾಯಕರನ್ನು ಕರೆದು ಅವರು ರಾಮಾನುಜರ ಜೊತೆಯಲ್ಲಿ ಯಾದವಾದ್ರಿಗೆ ಹೋಗಬೇಕೆಂದು ಆಜ್ಞಾಪಿಸಿದ. ರಾಮಾನುಜರನ್ನು ಹೊತ್ತಯ್ಯಬೇಕಾದ ಪಲ್ಲಕ್ಕಿಗೆ ದಾರಿ ಮಾಡಲು ತೊಣ್ಣೂರಿನಿಂದ ಯಾದವಾದ್ರಿಗೆ ಮರಗಳು, ಪೊದೆಗಳು, ಗಿಡಗಂಟೆಗಳನ್ನು ಕಡಿದು ದಾರಿ ಮಾಡಲು ಹೇಳಿದ. ದಾರಿ ತಯಾರಾಯಿತು. ವಯೋವೃದ್ಧರಾಗಿದ್ದ ರಾಮಾನುಜರನ್ನು ಹೊತ್ತ ಪಲ್ಲಕ್ಕಿ ಯಾದವಾದ್ರಿಯತ್ತ ಹೊರಟಿತು. ಬೆಟ್ಟವನ್ನು ಹತ್ತಿ ಸಮತಟ್ಟಿನಲ್ಲಿದ್ದ ಭೂಪ್ರದೇಶವನ್ನು ಸೇರಿದರು.

ಬೆಟ್ಟದ ಮೇಲೊಂದು ಚಿಕ್ಕ ಗ್ರಾಮವಿತ್ತು. ಅದರಲ್ಲಿ ಶ್ರೀವೈಷ್ಣವ ಕುಟುಂಬಗಳು ಹೆಚ್ಚಾಗಿದ್ದರೂ ಎಲ್ಲ ಜಾತಿ, ವರ್ಗಗಳ ಜನಸಮೂಹ ಅಲ್ಲಿತ್ತು.

ಪಲ್ಲಕ್ಕಿಯಲ್ಲಿ ಬಂದ ಸಂನ್ಯಾಸಿಯನ್ನು ನೋಡಿ ದಿಗ್ಭ್ರಮಿತರಾದ ಗ್ರಾಮಸ್ಥರು ಅವರ ಸುತ್ತ ನೆರೆದರು. ಅವರನ್ನು ಸನಿಹದಲ್ಲಿದ್ದ ದೇವಾಲಯದಲ್ಲಿ ಕೂರಿಸಿ ಸತ್ಕರಿಸಿದರು. ಗ್ರಾಮಸ್ಥರ ಮಾತಿನಂತೆ ಆ ಸ್ಥಳಕ್ಕೆ ಸನಿಹದಲ್ಲೇ ವೇದ ಪುಷ್ಕರಿಣಿ ಎಂಬ ಸರೋವರವಿದೆ ಎಂದೂ ಅಲ್ಲಿ ಭಗವಾನ್ ದತ್ತಾತ್ರೇಯರು ಸಂನ್ಯಾಸ ಸ್ವೀಕಾರ ಮಾಡಿದಾಗ ತಮ್ಮ ಕಾಷಾಯ ವಸ್ತ್ರಗಳನ್ನು ಸರಸ್ಸಿನಲ್ಲಿ ಸ್ನಾನ ಮಾಡುವುದಕ್ಕೆ ಮುನ್ನ ಸ್ವಲ್ಪ ಸಮಯ ಅಲ್ಲಿದ್ದ ಪರಿಧಾನಶಿಲೆಯ ಮೇಲೆ ಇರಿಸಿದ್ದರೆಂದೂ ತಿಳಿಸಿದಾಗ ರಾಮಾನುಜರಿಗೆ ರೋಮಾಂಚನ ಉಂಟಾಯಿತು. ತಮ್ಮ ಶಿಷ್ಯರು ತಂದಿದ್ದ ಕಾಷಾಯ ವಸ್ತ್ರಗಳನ್ನು ಮತ್ತು ತ್ರಿದಂಡವನ್ನು ಪರಿಧಾನ ಶಿಲೆಯ ಮೇಲೆ ಇಡಿರೆಂದು ತಿಳಿಸಿ ತಾವು ಕೌಪೀನ ತೊಟ್ಟು ಸರಸ್ಸಿಗೆ ಇಳಿದರು. ಸ್ನಾನವನ್ನು ಮುಗಿಸಿ ಮೇಲಕ್ಕೆ ಬಂದು ದತ್ತಾತ್ರೇಯರ ನೆನಪು ತಂದಿದ್ದ ಪರಿಧಾನಶಿಲೆಗೆ ನಮಿಸಿ, ಅದರ ಮೇಲೆ ಇರಿಸಲ್ಪಟ್ಟು ಪವಿತ್ರಗೊಂಡಿದ್ದ ನೂತನ ಕಾಷಾಯ ವಸ್ತ್ರಗಳನ್ನು ಧರಿಸಿದರು. ಕಂಗೊಳಿಸುತ್ತಿದ್ದ ರಾಮಾನುಜರ ದಿವ್ಯಮೂರ್ತಿಯನ್ನು ಕಂಡು ಅವರ ಶಿಷ್ಯರು 'ಭಜ ಯತಿರಾಜಂ ಭಜ ಯತಿರಾಜಂ ಭಜ ಯತಿರಾಜಂ ಭವಭೀರೋ' ಎಂದು ಜಪಿಸಿದರು.

ಅಲ್ಲಿಂದ ತಾವು ಸ್ವಲ್ಪ ಕಾಲ ಇಳಿದುಕೊಂಡಿದ್ದ ದೇವಸ್ಥಾನಕ್ಕೆ ಹೋಗಿ ಗ್ರಾಮಸ್ಥರು ತಂದುಕೊಟ್ಟ ಫಲಾಹಾರವನ್ನು ಸ್ವೀಕರಿಸಿ ಅಂದು ರಾತ್ರಿ ಅಲ್ಲಿಯೇ ಬೀಡುಬಿಟ್ಟರು. ಆದರೆ ರಾಮಾನುಜರನ್ನು ಕೊರೆಯುತ್ತಿದ್ದ ಪ್ರಶ್ನೆ ಶ್ರೀಮನ್ನಾರಾಯಣನ ಮೂರ್ತಿಯನ್ನು ಕಂಡುಹಿಡಿಯುವುದು ಹೇಗೆಂಬುದು. ಎಲ್ಲಿ ಅಡಗಿರುವನೋ ತನ್ನ ಆರಾಧ್ಯದೈವ. ಹೇಗೆ ಹುಡುಕುವುದು ಅವನನ್ನು ಎಂಬ ಚಿಂತೆ ಗಾಢವಾಗಿ ಮನಸ್ಸಿನ ತುಂಬ ತುಂಬಿದ್ದು ರಾತ್ರಿ ನಿದ್ದೆಯೇ ಹತ್ತಲಿಲ್ಲ.

ಬೆಳಗಿನ ಝಾವದಲ್ಲಿ ಸ್ವಲ್ಪ ನಿದ್ರೆ ಬಂದಂತಾಗಿ ಅವರಿಗೆ ಸ್ವಪ್ನ ಒಂದು ಉಂಟಾಯಿತು. ಅದರಲ್ಲಿ ಭಗವಾನನು 'ರಾಮಾನುಜಾ, ನಿನ್ನ ತ್ರಿದಂಡವನ್ನು ಕೇಳು. ನಾನಿರುವ ಸ್ಥಳವನ್ನು ಅದು ತೋರಿಸುತ್ತದೆ' ಎಂದು ಅಪ್ಪಣೆ ಕೊಡಿಸಿದಂತಾಯಿತು. ಮರುದಿನವೇ ಅವರ ಜೊತೆಯಲ್ಲಿ ಬಂದಿದ್ದ ಅಶ್ವಾರೋಹಿ ಸೈನಿಕನೊಬ್ಬನ ಮೂಲಕ ತೊಣ್ಣೂರಿನ ಅರಮನೆಯಲ್ಲಿದ್ದ ಮಹಾರಾಜ ವಿಷ್ಣುವರ್ಧನನಿಗೆ ಸುದ್ದಿ ತಲಪಿಸಿದರು. ಮರುಕ್ಷಣವೇ ಅಲ್ಲಿಂದ ಅಶ್ವಾರೋಹಿಯಾಗಿ ತನ್ನ ಸಿಬ್ಬಂದಿಯೊಂದಿಗೆ ಮಹಾರಾಜ ಯಾದವಾದ್ರಿಗೆ ಧಾವಿಸಿಬಂದ.


ಸ್ವತಃ ಮಹಾರಾಜರು ಆಗಮಿಸಿದ್ದು ನೋಡಿ ಯಾದವಾದ್ರಿಯ ಹಳ್ಳಿಯ ಜನರಿಗೆ ಸಾಕ್ಷಾತ್ ವಿಷ್ಣುವನ್ನೇ ಕಂಡಷ್ಟು ಸಂಭ್ರಮ. ಎಷ್ಟಿದ್ದರೂ 'ನಾವಿಷ್ಣುಃ ಪೃಥ್ವೀಪತಿಃ' ಎಂಬ ನಂಬಿಕೆಯ ಪ್ರಜೆಗಳಲ್ಲವೇ ಅವರು. ಅವರನ್ನು ಸಕಲ ಮರ್ಯಾದೆಗಳೊಡನೆ ಸ್ವಾಗತಿಸಿದರು. ಬಂದವನೇ ವಿಷ್ಣುವರ್ಧನ ಮಹಾರಾಜ ರಾಮಾನುಜರ ಸನ್ನಿಧಾನಕ್ಕೆ ತೆರಳಿದ. ರಾಮಾನುಜರು ತಮ್ಮ ಸ್ವಪ್ನದ ವಿಷಯವನ್ನು ತಿಳಿಸಿ ಇನ್ನು ಆ ಸ್ಥಳವನ್ನು ಹುಡುಕಲು ಹೊರಡಬೇಕೆಂದರು. ಅವರ ಅಪ್ಪಣೆಯಂತೆ ರಾಮಾನುಜರೂ ಅವರ ಮುಖ್ಯ ಶಿಷ್ಯರೂ ಹಾಗೂ ಮಹಾರಾಜ ಮತ್ತು ಅವರ ಇಬ್ಬರು ದಂಡನಾಯಕರು, ಸೈನಿಕರು ಕೆಲವರ ಒಂದು ತಂಡ ನಾರಾಯಣ ಮೂರ್ತಿಯನ್ನು ಹುಡುಕಲು ಹೊರಟಲು ಸಿದ್ಧವಾಯಿತು.

ರಾಮಾನುಜರು ನಿಶ್ಚಿತ ದಿವಸ ಪೂಜಾ ಕೈಂಕರ್ಯದ ಮುಗಿಸಿ ತಮ್ಮ ತ್ರಿದಂಡವನ್ನು ನಾರಾಯಣನಿರುವ ಸ್ಥಳಕ್ಕೆ ದಾರಿ ತೋರಿಸುವಂತೆ ಪ್ರಾರ್ಥಿಸಿ ಬಲಗೈಯಲ್ಲಿ ಅದನ್ನು ಹಿಡಿದುಕೊಂಡರು. ಸ್ವಲ್ಪ ಸಮಯದ ಅನಂತರ ತ್ರಿದಂಡದಲ್ಲಿ ಯಾವುದೋ ಅಗೋಚರ ಶಕ್ತಿ ಪ್ರವಹಿಸಿದಂತಾಗಿ ರಾಮಾನುಜರನ್ನು ಎಳೆದಂತಾಯಿತು. ತ್ರಿದಂಡ ಎಳೆದ ದಿಕ್ಕಿನಲ್ಲಿ ಅವರು ಹೆಜ್ಜೆ ಹಾಕಲಾರಂಭಿಸಿದ್ದರು. ಮಹಾರಾಜನ ಸಹಿತ ತಂಡದ ಎಲ್ಲರೂ ರಾಮಾನುಜರನ್ನು ಹಿಂಬಾಲಿಸಲಾರಂಭಿಸಿದರು.

ರಾಮಾನುಜರ ತ್ರಿದಂಡ ಅವರನ್ನು ಅವರಿದ್ದ ದೇವಸ್ಥಾನದಿಂದ ಕಲ್ಯಾಣಿಯ ಬಳಿಗೆ ಕರೆದೊಯ್ಯಿತು. ಎಲ್ಲರೂ ಸದ್ದುಗದ್ದಲವಿಲ್ಲದೆ ಅದನ್ನು ಅನುಸರಿಸಿದರು.




27ನೇ ಪುಟಕ್ಕೆ



ಶ್ರೀ ವಿಷ್ಣು ಸಹಸ್ರನಾಮ ಮಹಾತ್ಮೆ

ಈವರೆಗೆ 'ದಾಸವಾಣಿ' ಎಂಬ ಅಂಕಣದಲ್ಲಿ ಪುರಂದರದಾಸರ ಕೀರ್ತನೆಗಳಿಗೆ ವ್ಯಾಖ್ಯಾನ ನೀಡಿರುವ ಯತಿರಾಜ್ ವೀರಾಂಬುಧಿಯವರು ಈ ಸಂಚಿಕೆಯಿಂದ ಶ್ರೀ ವಿಷ್ಣು ಸಹಸ್ರನಾಮದ ಕೆಲವು ಪದಗಳನ್ನು ಆಯ್ದುಕೊಂಡು ಅವನ್ನು ಅರ್ಥೈಸುತ್ತಾ ವಿಷ್ಣು ಸಹಸ್ರನಾಮವನ್ನು ಕುರಿತು ವ್ಯಾಖ್ಯಾನ ಮಾಡುತ್ತಾರೆ. ಸ್ವತಃ ಕಾದಂಬರಿಕಾರರಾಗಿರುವ ಯತಿರಾಜ ವೀರಾಂಬುಧಿಯವರು ಅಧ್ಯಾತ್ಮಜೀವಿಗಳೂ ಆಗಿದ್ದಾರೆ.



# ಸಹಃ

ಭಗವಂತ ಎಂದೂ ತಾಳ್ಮೆಗೆಡುವುದಿಲ್ಲ. ಆತ ಸಹನೆಯ ಮೂರ್ತಿ. ಅವನು ಎಲ್ಲರನ್ನೂ ಮಣಿಸುವವನು; ಅವನು ಎಲ್ಲರಿಗಿಂತಲೂ ಮುಂದೆ. ದೇವದೇವನು ಎಲ್ಲದರ ಬಗ್ಗೆ ತಾಳ್ಮೆ ಇರುವವನು. ಅವನ ನಿಯತ್ತಿನ ಭಕ್ತರ ಎಲ್ಲ ತಪ್ಪುಗಳನ್ನೂ ಕ್ಷಮಿಸುವವನು.

ಜನರು ಅದೆಷ್ಟೋ ಮಾಡುತ್ತಾರೆ, ಹೇಳುತ್ತಾರೆ, ಅಭಿವ್ಯಕ್ತಿಸುತ್ತಾರೆ. ಅವರು ಒಳ್ಳೆಯದನ್ನೂ ಮಾಡುತ್ತಾರೆ, ದುಷ್ಟತನವನ್ನೂ ಮಾಡುತ್ತಾರೆ. ಅತಿ ಹೆಚ್ಚಿನ ನಷ್ಟವನ್ನು ಉಂಟುಮಾಡುತ್ತಾರೆ. ಹಾಗೆಯೇ ಅವರ ಕೆಲವು ತಪ್ಪುಗಳು ಅವರಿಗೇ ತಿಳಿಯದೇ ಆಗಿರುತ್ತದೆ. ಸನ್ನಿವೇಶಗಳನ್ನು ತಪ್ಪಾಗಿ ಅರ್ಥಮಾಡಿಕೊಂಡು, ತಮ್ಮದೇ ಆದ ಕಲ್ಪನೆಗಳನ್ನು ಮಾಡಿಕೊಂಡು, ಇನ್ನಷ್ಟು ವಿನಾಶಗಳನ್ನು ಉಂಟುಮಾಡುತ್ತಾರೆ. ಕಾನೂನನ್ನು ಅವರ ಕೈಗೆತ್ತಿಕೊಂಡು ತಪ್ಪು ಮಾಡಿದವರಿಗೆ ತಾವೇ ಶಿಕ್ಷೆ ನೀಡಲು ಮುನ್ನುಗ್ಗುತ್ತಾರೆ. ಅವರನ್ನವರು ದೇವರೆಂದು ಭಾವಿಸುತ್ತಾರೆ. ಅದನ್ನು ವೇದಿಕೆಯ ಮೇಲೆ ಹತ್ತಿ ಸಮರ್ಥಿಸಿಕೊಳ್ಳುತ್ತಾರೆ. ಮನೆಗಳನ್ನು ಕಟ್ಟಿಕೊಳ್ಳಲು ಕಾಡನ್ನು ಕಡಿದು ಕಾಂಕ್ರೀಟ್ ಕಾಡುಗಳನ್ನು ನಿರ್ಮಿಸುತ್ತಾರೆ. ವಿಷಾನಿಲಗಳನ್ನು ಒಂದಿಷ್ಟೂ ಕರುಣೆ ಇಲ್ಲದೇ ಗಾಳಿಗೆ ತೇಲಿ ಬಿಡುವ ಜನ ಇವರು.

ಭೋಪಾಲ್ ವಿಷವಾಯು ದುರಂತವು 33 ವರ್ಷಗಳಾದರೂ ಇನ್ನೂ ಮಾಗದ ಗಾಯವಾಗಿದೆ. ಅಲ್ಲಿನ ಮಕ್ಕಳು ಇಂದಿಗೂ ಆ ವಿಷವಾಯುವಿನ ದುಷ್ಪರಿಣಾಮವನ್ನು ಅನುಭವಿಸುತ್ತಿದ್ದಾರೆ. ಹರಿಹರದಲ್ಲಿ ತುಂಗಭದ್ರಾ ನದಿಯ ಕಾಲುಷ್ಯವು ಎಲ್ಲರಿಗೂ ತಿಳಿದಿರುವುದೇ. ಎರಡನೆಯ ಮಹಾಯುದ್ಧದಲ್ಲಿ ಹಿರೋಷಿಮಾ ಮತ್ತು ನಾಗಸಾಕಿಗಳಲ್ಲಿ ಬಿಸಾಡಲ್ಪಟ್ಟ ಪರಮಾಣು ಬಾಂಬಿನ ಪರಿಣಾಮವು ಇಂದು ಹುಟ್ಟುವ ಮಕ್ಕಳ ಮೇಲೂ ಪ್ರಭಾವ ಬೀರುತ್ತಿದೆ.

ಎರಡು ದೇಶಗಳ ನಡುವಣ ಯುದ್ಧವಂತೂ ಅನೇಕರನ್ನು ಪ್ರಾಣ ಕಳೆದುಕೊಳ್ಳುವಂತೆ ಮಾಡಿದೆ. ಅಮೆರಿಕ–ವಿಯೆತ್ನಾಂ, ಅಮೆರಿಕ–ಇರಾಕ್, ಇರಾನ್–ಇರಾಕ್, ಭಾರತ–ಚೀನಾ, ಭಾರತ–ಪಾಕಿಸ್ಥಾನ... ಇದಕ್ಕೆ ಕೊನೆಯೆಲ್ಲಿ?

ಇನ್ನು ಆಂತರಿಕ ಯುದ್ಧಗಳಂತೂ ಅಫ್ಘಾನಿಸ್ಥಾನದಲ್ಲಿ ನಡೆಯುತ್ತಲೇ ಇವೆ. ಒಂದು ಕಾಲದಲ್ಲಿ ಎರಡು ಖಂಡಗಳಲ್ಲಿ ಹರಡಿಕೊಂಡಿದ್ದ ಅತ್ಯಂತ ದೊಡ್ಡ ದೇಶ ರಷ್ಯಾ ಈಗ ಛಿದ್ರಛಿದ್ರವಾಗಿದೆ. ಎಲ್ಲವೂ ಮಾನವಕೃತ.

ಕುಡಿಯುವ ನೀರಿನಲ್ಲಿ ವಿಷಮಯ ಪದಾರ್ಥಗಳನ್ನು ಮುಲಾಜಿಲ್ಲದೇ ಹಾಕಿ ಕಲಷಿತಗೊಳಿಸುವವರು. ಸಮುದ್ರದಲ್ಲಿ ಎಣ್ಣೆ ಸುರಿಸಿ ಅಲ್ಲಿರುವ ಮೀನುಗಳನ್ನು ನಾಶಪಡಿಸುವವರು. ಬೇರೆ ದೇಶಗಳ ಮೇಲೆ ಯುದ್ಧ ಮಾಡುವವರು. ಒಳಗೇ ಇದ್ದುಕೊಂಡೇ ಇತರರನ್ನು ಕೊಲ್ಲುವವರು. ಅವರು ಇವರಿಗೆ ಇಷ್ಟವಿಲ್ಲದಿದ್ದರೆ ಸಾಕು, ಅವರನ್ನು ಸಾಯಿಸುವವರು. ದೇವರು ಇವೆಲ್ಲವನ್ನೂ ನುಂಗಿಕೊಳ್ಳುತ್ತಾನೆ; ತಡೆದುಕೊಳ್ಳುತ್ತಾನೆ ಎನ್ನಿಸುತ್ತದೆಯೇ?

ದೇವದೇವನು ಇವೆಲ್ಲವನ್ನೂ ನೋಡಿಯೂ ಸುಮ್ಮನಿರುತ್ತಾನೆಂದು ನಾವಂದುಕೊಳ್ಳಬೇಕಿಲ್ಲ. **ಗ್ಲಾನಿರ್ಭವತಿ, ಧರ್ಮಸಂಸ್ಥಾಪನಾರ್ಥಾಯ ಸಂಭವಾಮಿ** ಎಂದು ಯುಗಯುಗಗಳಲ್ಲಿಯೂ ಅವತಾರವೆತ್ತಿ ಶತ್ರುಗಳ ನಾಶ ಕೈಗೊಂಡಿದ್ದಾನೆ. ಶಿಷ್ಟರ ರಕ್ಷಣೆಯನ್ನೂ ಮಾಡಿದ್ದಾನೆ. ರಾಮನಾಗಿ ಬಂದು ರಾವಣನನ್ನು ಮುಗಿಸಿದ; ವಿಭೀಷಣನನ್ನು ರಕ್ಷಿಸಿದ. ಕೃಷ್ಣನಾಗಿ ಬಂದು ಕಂಸನನ್ನು ಕೊಂದ; ಉಗ್ರಸೇನನನ್ನು ಕಾಪಾಡಿದ. ಕೌರವರನ್ನು ಶಿಕ್ಷಿಸಿದ; ಪಾಂಡವರನ್ನು ರಕ್ಷಿಸಿದ. ನರಸಿಂಹನಾಗಿ ಅವತರಿಸಿ ಹಿರಣ್ಯಕಶಿಪುವನ್ನು ಕೊಂದ; ಪ್ರಹ್ಲಾದನನ್ನು ಉದ್ಧರಿಸಿದ.

ನಾವೆಲ್ಲರೂ ಅವನ ಭಾಗವೇ. ಏಕೆಂದರೆ ಇಡೀ ಬ್ರಹ್ಮಾಂಡವೇ ಅವನ ಸೃಷ್ಟಿ. ಅವನೇ ಕಾರಣ, ಅವನೇ ಕರ್ತ. ಅವನಿಗೆ ಬೇಸರವಾದಾಗ ನಮ್ಮನ್ನು ಮುಗಿಸಿಬಿಡುತ್ತಾನೆ. ಅವನಿಗೆ ಬೇಕೆಂದೆನಿಸಿದಾಗ ಮತ್ತೆ ನಮ್ಮನ್ನು ಅವನ ಹೊಟ್ಟೆಯಿಂದ ತೆಗೆದು ಜೀವ ನೀಡುತ್ತಾನೆ.

**ಸುಮ್ಮನೊಬ್ಬಂಟಿಯೆಂತಿಹುದು? ಬೇಸರವಹುದು ।**
**ಹೊಮ್ಮುವೆನು ಕೋಟಿರೂಪದಲಿ ನಾನೆಂದು ॥**
**ಬೊಮ್ಮನೆಳಸಿದನಂತೆ, ಆ ಯೆಳಸಿಕೆಯೆ ಮಾಯೆ ।**
**ನಮ್ಮಿರವು ಮಾಯೆಯಲಿ – ಮಂಕುತಿಮ್ಮ ॥**

ಒಬ್ಬನೇ ಇರುವುದು ಬೇಸರವಾಗಿ ಕೋಟ್ಯಂತರ ರೂಪಗಳಲ್ಲಿ ಹೊರಹೊಮ್ಮುವೆನೆಂದು ಪರಬ್ರಹ್ಮ ಬಯಸಿತಂತೆ. ಆ ಬ್ರಹ್ಮವಸ್ತುವಿನ ಬಯಕೆಯೇ ಮಾಯೆ. ಹಾಗೆ ಹೊರಹೊಮ್ಮಿದ್ದು ಈ ವಿಶ್ವ, ಈ ಪ್ರಪಂಚ. ನಾವು ಅದರ ಮಾಯಾಜಾಲದಲ್ಲಿದ್ದೇವೆ ಎನ್ನುತ್ತಾರೆ ಮಹಾ ದಾರ್ಶನಿಕ ಡಾ. ಡಿವಿಜಿ ಅವರ ಮಂಕುತಿಮ್ಮನ ಕಗ್ಗದಲ್ಲಿ.

ಭಗವದ್ಗೀತೆಯ ಉಪದೇಶ ಮಾಡುವಾಗ ಅರ್ಜುನನು 'ಕೃಷ್ಣಾ! ನಾನು ನನ್ನ ಬಂಧುಗಳನ್ನು ಕೊಲ್ಲಲಾರೆ' ಎಂದು ಹಲುಬಿದಾಗ ತನ್ನ ವಿಶ್ವರೂಪವನ್ನು ತೋರಿಸಿದ ಶ್ರೀಕೃಷ್ಣ. ಅದನ್ನು ನೋಡಿ ಅರ್ಜುನ ಬೆಚ್ಚಿದ, ಬೆದರಿದ, ಬಸವಳಿದ. ಏಕೆಂದರೆ ಅಲ್ಲಿ ಕಂಡ ದೃಶ್ಯ ಹಾಗಿತ್ತು. ಅವನ ಕಡೆಯವರು, ಅವನ ಶತ್ರುಗಳು ಎಲ್ಲರೂ ಶ್ರೀಕೃಷ್ಣನ ಬಾಯಿಯೊಳಗೆ ಹೋಗುತ್ತಿದ್ದರು!

ಕೃಷ್ಣ 'ಅರ್ಜುನಾ! ನೀನು ಕೇವಲ ನಿಮಿತ್ತ. ನಾನಾಗಲೇ

ಎಲ್ಲರನ್ನೂ ಮುಗಿಸಿ ಆಗಿದೆ' ಎಂದಾಗ ಅರ್ಜುನ ಸನ್ನಿವೇಶವನ್ನು ಅರ್ಥಮಾಡಿಕೊಂಡ.

ಸಾವಿನ ಒಡೆಯನಾದ ಯಮನೇ ಭಗವಂತನ ಕೈಗೆ ಸಿಕ್ಕಿರುವ ಉಪ್ಪಿನಕಾಯಿ. ಕರಕರನೆ ಅವನನ್ನೇ ತಿಂದುಬಿಡುತ್ತಾನೆ ಭಗವಂತ.

ದಾಸರು ಕೂಡ ಹೇಳಿದ್ದಾರೆ; ಯಮನೆಲ್ಲಿ ಕಾಣೆನೆಂದು ಹೇಳಬೇಡ. ಯಮನೇ ಶ್ರೀರಾಮ ಸಂದೇಹ ಬೇಡ ಎಂದು.

ನಾವು ಅವನ ಕರುಣೆಗೆ ಪಾತ್ರರಾಗಿ ಸಜ್ಜನರಾಗಿರದೇ ದುಷ್ಟರಾಗಿದ್ದರೆ ಅವನೇನೂ ಸುಮ್ಮನೆ ಇರುವವನಲ್ಲ. ತಾಳುತ್ತಾನೆ; ಬುದ್ಧಿ ಹೇಳಲು ನೋಡುತ್ತಾನೆ. ಮೊದಲು ಕಮಲದಿಂದ ಮೆಲ್ಲನೆ ತಟ್ಟಿ ಪ್ರೀತಿಯಿಂದ ಒಳ್ಳೆಯವರಾಗಿ ಎಂದು ಹೇಳುತ್ತಾನೆ. ಅನಂತರ ಶಂಖವನ್ನು ಊದಿ ಎಚ್ಚರಿಸುತ್ತಾನೆ. ಗದೆಯಿಂದ ಬಡಿದು ಹೇಳುತ್ತಾನೆ. ಇಲ್ಲದಿದ್ದರೆ ಚಕ್ರದಿಂದ ಕತ್ತರಿಸಿಬಿಡುತ್ತಾನೆ. ಮೊದಮೊದಲು ಅವನು ನಮ್ಮ ದುಷ್ಟಬುದ್ಧಿಗಳನ್ನು ಕತ್ತರಿಸಲು ನೋಡುತ್ತಾನೆ. ನಾವು ಬಗ್ಗದಿದ್ದರೆ, 'ಅದು ನಿಮ್ಮ ಕರ್ಮ' ಎಂದು ಹೇಳಿ ನಮ್ಮನ್ನೇ ಕತ್ತರಿಸಿಬಿಡುತ್ತಾನೆ. ಅವನಿಗೂ ಸಹಿಷ್ಣುತೆ ಇದೆ. ಮೊದಲು ದಮವನ್ನು ಅಭ್ಯಾಸ ಮಾಡುವ ಅವಕಾಶ ನೀಡುತ್ತಾನೆ.



ಸಹಃ ಎಂದರೆ ಇನ್ನೊಂದು ಅರ್ಥವಿದೆ. ಭಗವಂತನು ನಮಗೆ ವೇದವನ್ನು ದಯಪಾಲಿಸಿದ್ದಾನೆ. ಅವುಗಳಲ್ಲಿ ಅನೇಕ ಋಷಿ ಮುನಿಗಳ ವಾಣಿಗಳಿವೆ. ಆದರೂ ನಾವು ಅಜ್ಞಾನಿಗಳು. ಅದನ್ನು ಓದುವುದಿಲ್ಲ. ಪ್ರಪಂಚವೆಂಬ ಮಾಯೆಯಲ್ಲಿ ಸಿಲುಕುತ್ತೇವೆ. ಮೋಹದಲ್ಲಿ ಮುಳುಗುತ್ತೇವೆ. ನಮಗೆ ವೇದವೆಂಬ ಉಪಾಧ್ಯಾಯ ಇದ್ದರೂ ನಮ್ಮ ಮನಸ್ಸು ಚಂಚಲವಾದದ್ದಾಗಿರುತ್ತದೆ. ನಮ್ಮ ಮನಸ್ಸು ನಮ್ಮನ್ನು ನಿಯಂತ್ರಿಸುತ್ತದೆ. ಕೆಲವು ವಿಷಯಗಳಿಂದ ನಾವು ದೂರವಿರಬೇಕೆಂದು ತಿಳಿದಿದ್ದರೂ ನಾವು ಮೋಹಜಾಲದಲ್ಲಿ ಸಿಕ್ಕಿಕೊಳ್ಳುತ್ತೇವೆ.

ನಾವು ಯಾರು? ಈ ಪ್ರಪಂಚಕ್ಕೆ ಏಕೆ ಬಂದಿದ್ದೇವೆ? ಎನ್ನುವ ಪ್ರಶ್ನೆಗಳನ್ನು ನಮಗೆ ನಾವು ಕೇಳಿಕೊಂಡು ಅದಕ್ಕೆ ಉತ್ತರ ಕಂಡುಹಿಡಿಯಲು ಯತ್ನಿಸಬೇಕು. ಆದರೆ ನಾವು ಯಾರದೋ ಮೋಹದಲ್ಲಿ, ಯಾವುದೋ ವಸ್ತುವಿನ ಲೋಭದಲ್ಲಿ, ಯಾರ ಮೇಲೆಯೋ ಮತ್ಸರದಲ್ಲಿ, ಯಾರನ್ನೋ ಕಾಮಿಸಿ, ಯಾರ ಮುಂದೆಯೋ ಮದದಿಂದ ಮೆರೆದು ಬದುಕುತ್ತೇವೆ. ನಿರ್ಮೋಹತ್ವವು ಬಹಳ ಮುಖ್ಯ. ಆದರೆ ಅದು ನಮಗೆ ಬರದು.

ಇವೆಲ್ಲವನ್ನೂ ನೋಡಿ ಕೂಡ ಭಗವಂತ ನಗುತ್ತಾ ಇರುತ್ತಾನೆ. ನಮ್ಮಂತಹ ಕುರಿಗಳಿಗೆ ಕುರುಬನಾಗಿ ತಾಳ್ಮೆಯಿಂದ ಕಾಯುತ್ತಾನೆ. ನಾವು ಅವನನ್ನು ಯಾವಾಗ ಗಮನಿಸುವೆವೋ, ಯಾವಾಗ ಅವನತ್ತ ನಮ್ಮ ಮನವನ್ನು ತಿರುಗಿಸುವೆವೋ ಎಂದು ನಿರೀಕ್ಷಿಸುತ್ತಾನೆ.

ಬೆಳೆದು ನಿಂತ ಮಗ ಮಾದಕ ವಸ್ತುಗಳ ವ್ಯಸನಿಯಾಗಿದ್ದರೆ, ಕುಡುಕನಾಗಿದ್ದರೆ, ವ್ಯಭಿಚಾರಿಯಾಗಿದ್ದರೆ ಅವನ ತಾಯ್ತಂದೆಯರು ಏನು ಮಾಡುತ್ತಾರೆ? ಅವರೇನು ಮಾಡಲು ಸಾಧ್ಯ? ಕಾಯುತ್ತಾರೆ, ತಮ್ಮ ಮಗ ಇಂದಲ್ಲ, ನಾಳೆ ಒಳ್ಳೆಯನಾಗುವನೆಂದು.

ಈ ಎಲ್ಲ ದುಷ್ಟ ಅಭ್ಯಾಸಗಳು ದೇವನನ್ನು ನೋಯಿಸುತ್ತವೆಯೇನು? ಅವನು ಆಗಲೂ ಹಸನ್ಮುಖಿಯಾಗಿಯೇ ಇರುತ್ತಾನೆ. ಏಕೆಂದರೆ ಅವನ ಎಲ್ಲ ಮಕ್ಕಳೂ ಹೀಗಿರುವುದಿಲ್ಲ. ಕೆಲವರಾದರೂ ಸಜ್ಜನರಾಗಿ ಮೋಕ್ಷಮಾರ್ಗದಲ್ಲಿ ನಡೆಯುತ್ತಿರುತ್ತಾರೆ. ಅದರಿಂದಲೇ ಅವನು ಆನಂದದಿಂದಿರುತ್ತಾನೆ. ಅವನ ತಾಳ್ಮೆಯನ್ನು ನಾವು ತಪ್ಪು ಬಳಕೆ ಮಾಡಿಕೊಳ್ಳಬಾರದು. ಅವನು ತಾಳ್ಮೆಯ ಸಾಕಾರಮೂರ್ತಿ. ನಾವೂ ಅವನನ್ನು ತಾಳ್ಮೆ ಬೇಕೆಂದು ಕೇಳಿಕೊಳ್ಳಬೇಕು. ಆಗ ನಮ್ಮ ಬುದ್ಧಿಯು ನಮ್ಮ ನಿಯಂತ್ರಣದಲ್ಲಿದ್ದು ನಾವು ಈ ಪ್ರಪಂಚವನ್ನು ಒಳ್ಳೆಯ ಸ್ಥಳವನ್ನಾಗಿ ಮಾಡಬಹುದು.

ಭಗವಂತನು ತಾಳ್ಮೆಯ ಪ್ರತೀಕ. ಅವನು ಸರಸ ಸಾಮ ದಾನ ಭೇದ ದಂಡ ಚತುರ ಎನ್ನುತ್ತಾರೆ ತ್ಯಾಗರಾಜರು. ಯಾರನ್ನೂ ಅವನು ಮೊದಲೇ ಶಿಕ್ಷಿಸುವುದಿಲ್ಲ. ಪ್ರೀತಿಯ ಮಾತುಗಳನ್ನು ಮೊದಲು ಹೇಳಿ, ಅದು ಮನುಷ್ಯರಿಗೆ ರುಚಿಸದಿದ್ದರೆ ಆಗ ಚಿಕ್ಕ ಬಹುಮಾನದ ಆಸೆ ತೋರಿಸುತ್ತಾನೆ. ಅದಕ್ಕೂ ಬಗ್ಗದಿದ್ದರೆ ಆಗ ಭೇದೋಪಾಯ ಬಳಸುತ್ತಾನೆ. ಹೆದರಿಸುತ್ತಾನೆ, ಬೆದರಿಸುತ್ತಾನೆ, ಅವರನ್ನು ಹಾಗಾದರೂ ತಗ್ಗಿ ಬಗ್ಗಿ ನಡೆಯುವಂತೆ ಮಾಡುತ್ತಾನೆ. ಅದೂ ಫಲಿಸದಿದ್ದರೆ ಆಗ ಅವನು ಬಳಸುವ ಆಯುಧವೇ ದಂಡೋಪಾಯ.

ದುಷ್ಟಶಕ್ತಿಯನ್ನು ಕತ್ತರಿಸುವ, ಭಕ್ತರ ಅಪರಾಧವನ್ನು ಮನ್ನಿಸುವ ಕರುಣಾಳು ಭಗವಂತ ಸಹಃ.

ನಂ. ೮೯, 'ಚಿರಸ್ಮಿತ' ಬಸಪ್ಪ ಬಡಾವಣೆ, ಪಟ್ಟಣಗೆರೆ, ವೇರ್‌ಹೌಸ್ ಹಿಂದೆ, ರಾಜರಾಜೇಶ್ವರಿನಗರ, ಬೆಂಗಳೂರು–೫೬೦ ೦೯೮.




# ಅಮರನಾರೇಯಣ ಶತಕ

■ ನಿರೂಪಣೆ: ನಾರೇಯಣ ದಾಸ

## ತಾತಯ್ಯನವರ ದಾರಿದೀಪ

ಸ್ವತಃ ಪರಮಾತ್ಮನೇ ತಾತಯ್ಯನವರಿಗೆ ಶತಕವನ್ನು ಬರೆ ಎಂದು ಆದೇಶಿಸುತ್ತಾನಂತೆ. ಅದೇ ಈ ಅಮರನಾರೇಯಣ ಶತಕ. ಪರಮಾತ್ಮನ ಆಜ್ಞೆಯನ್ನು ಒಪ್ಪಿದ ತಾತಯ್ಯನವರು ಇದಕ್ಕೆ ನಿಮ್ಮ ನಾಮಾಂಕಿತವನ್ನು ನೀಡಿ ಎಂದು ಪ್ರಾರ್ಥಿಸುತ್ತಾರೆ. ಆಗ ಆ ದೇವರು 'ನಾರೇಯಣ' ಎಂದು ನಾಲ್ಕು ಅಕ್ಷರಗಳನ್ನು ಬರೆ ಎಂದು ಉಪದೇಶಿಸುತ್ತಾನೆ. ಆದ್ದರಿಂದಲೇ ಅಮರನಾರೇಯಣ ಶತಕದ ಎಲ್ಲ ಪದ್ಯಗಳ ಕೊನೆಯಲ್ಲಿ 'ಅಮರನಾರೇಯಣಾಚ್ಯುತ – ಹರಿ ಮುಕುಂದ' ಎಂಬ ಅಂಕಿತವನ್ನು ಅವರು ಬಳಸಿರುವುದು. ತಾತಯ್ಯನವರ 120 ವರ್ಷಗಳ ಜೀವಿತದಲ್ಲಿ ಮಹತ್ತ್ವದ ತಿರುವು ಕೊಟ್ಟಿದ್ದು ಅವರ ಸಾಂಸಾರಿಕ ಜೀವನವನ್ನು ತ್ಯಜಿಸಿ ವೈರಾಗ್ಯಭಾವದಿಂದ ಮನೆಯನ್ನು ಬಿಟ್ಟು ಹೊರ ನಡೆದ ಮೇಲೆ.



### ಪದ್ಯ–೯೯

**ಶ**ತಕಂಬು ಶಾಯಮನಿ – ಶೆಲವಿಚ್ಚಿತಿರಿ ಮೀರು
ಮೀ ನಾಮಮುದ್ರ ದಯಶಾಯಮಂಟಿ ।
ನಾರೇಯಣಾಯನುಚು – ನಾಗ್ಲು ಅಕ್ಷರಮುಲು
ವ್ರಾಯಮನಿ ಉಪದೇಶಮಿಚ್ಚಿನಾರು ।
ಮೀ ವುಪದೇಶಮುನ – ವೂಹಿಂಚಿ ಮನಸುಲೋ
ಗುರಿ ಚೂಚಿ ಗುಟ್ಟೆಲ್ಲ – ತೆಲಿಸೆನಯ್ಯ ।
ರಾಕೇತ್ವಮಿತ್ತುರಾ – ರಸಿಕುಲು ಮೆಚ್ಚರು
ಅನುಚು – ಕೊಂದರು ಪ್ರಜಲು – ಅಂದುರಿಟ್ಲು ॥
ಮೀ ಮಹಾಮಹಿಮ ತೆಲಿಯ ಜನುಲೆಂತವಾರು ।
ಶಬರಿ ರಕ್ಷಕ ಶಾಂತಾತ್ಮ – ರಾಮಚಂದ್ರ ।
ಅಮರನಾರೇಯಣಾಚ್ಯುತ – ಹರಿ ಮುಕುಂದ ।
ಕಲುಷಸಂಹಾರ ಕೈವರಪುರವಿಹಾರಾ ॥99॥

ಕೈವಾರ ಶ್ರೀ ಯೋಗಿನಾರೇಯಣ ತಾತಯ್ಯನವರು ರಚಿಸಿರುವ ಸಾಹಿತ್ಯದಲ್ಲಿ ಅಮರನಾರೇಯಣ ಶತಕದ ಈ 99ನೆಯ ಪದ್ಯ ಅತ್ಯಂತ ಮುಖ್ಯವಾದದ್ದು. ತಾತಯ್ಯನವರಿಗೆ ಭಗವಂತನು ಬೀಜಾಕ್ಷರದ ಸೂಚನೆ ನೀಡಿದ ಒಂದು ಪದ್ಯ ನಾದ ಬ್ರಹ್ಮಾನಂದ ನಾರೇಯಣ ಕವಿ ಶತಕದಲ್ಲಿನ ಪದ್ಯ ಹೀಗಿದೆ.

ನಾರೇಯಣಂಟೇನು – ಬೀಜಾಕ್ಷರಂಬಾಯ ।
ನಾರಾಯಣಂಟೇ – ಬಿಗಿ ತಪ್ಪಿಪೋಯ ।
ಪರಮಾತ್ಮುಡೀರೀತಿ – ಪಲಿಕಿಂಚಿನಾಡಯಾ ।
ನಾದ ಬ್ರಹ್ಮಾನಂದ – ನಾರೇಯಣ ಕವಿ ॥ 193 ॥

"ನಾರೇಯಣ ಎಂದರೆ ಅದು ಬೀಜಾಕ್ಷರವಾಯಿತು. ಕೇವಲ ನಾರಾಯಣ ಎಂದರೆ ಅದರಲ್ಲಿನ ಬಿಗಿ ಅಥವಾ ಶಕ್ತಿ ತಪ್ಪಿ ಹೋಗುತ್ತದೆ. ಸಾಕ್ಷಾತ್ ಭಗವಂತನೇ ಈ ರೀತಿ ಹೇಳಿಸಿದ್ದಾನೆ" ಎನ್ನುತ್ತಾರೆ ತಾತಯ್ಯನವರು.

ಸಾಮಾನ್ಯವಾಗಿ ಕೈವಾರ ಶ್ರೀಕ್ಷೇತ್ರದಲ್ಲಿ 'ಓಂ ನಮೋ ನಾರೇಯಣಾಯ' ಎಂಬ ಅಷ್ಟಾಕ್ಷರಿ ಮಂತ್ರ ಅಂದಿನಿಂದ ಪ್ರಚಲಿತವಾಗಿದೆ. ಏಕೆಂದರೆ ತಾತಯ್ಯನವರಿಗೆ ಸಾಕ್ಷಾತ್ ಭಗವಂತನೇ, "ಈಗ 'ನಾರಾಯಣ' ಎಂಬ ಪದದಲ್ಲಿ ಶಕ್ತಿ ಅಥವಾ ಬಿಗಿ ಇಲ್ಲವಾಗಿದೆ. ಇನ್ನು ಮುಂದೆ 'ನಾರೇಯಣ' ಎಂಬುದೇ ಬೀಜಾಕ್ಷರವಾಗಿರುತ್ತದೆ" ಎಂದು ಆದೇಶಿಸಿರುವ ಸಂಗತಿಯನ್ನು ಈ ಮೇಲಿನ ಪದ್ಯ ತಿಳಿಸುತ್ತದೆ.

ಅದನ್ನೇ ಮುಂದುವರಿಸಿ ಈ 99ನೆಯ ಪದ್ಯದಲ್ಲಿ ತಾತಯ್ಯನವರು ಇನ್ನಷ್ಟು ಮಾಹಿತಿಯನ್ನು ನೀಡುತ್ತಾರೆ. ಅವರು ಭಗವಂತನನ್ನು ಕುರಿತೇ ಈ ಪದ್ಯದಲ್ಲಿ ಸಂಬೋಧಿಸಿದ್ದಾರೆ.

**ಶತಕಂಬು ಶಾಯಮನಿ – ಶೆಲವಿಚ್ಚಿತಿರಿ ಮೀರು**
**ಮೀ ನಾಮಮುದ್ರ ದಯಶಾಯಮಂಟಿ ।**
**ನಾರೇಯಣಾಯನುಚು – ನಾಗ್ಲು ಅಕ್ಷರಮುಲು**
**ವ್ರಾಯಮನಿ ಉಪದೇಶಮಿಚ್ಚಿನಾರು ।**

ಸ್ವತಃ ಪರಮಾತ್ಮನೇ ತಾತಯ್ಯನವರಿಗೆ ಶತಕವನ್ನು ಬರೆ ಎಂದು ಆದೇಶಿಸುತ್ತಾನಂತೆ. ಅದೇ ಈ ಅಮರನಾರೇಯಣ ಶತಕ. ಪರಮಾತ್ಮನ ಆಜ್ಞೆಯನ್ನು ಒಪ್ಪಿದ ತಾತಯ್ಯನವರು ಇದಕ್ಕೆ ನಿಮ್ಮ ನಾಮಾಂಕಿತವನ್ನು ನೀಡಿ ಎಂದು ಪ್ರಾರ್ಥಿಸುತ್ತಾರೆ. ಆಗ ಆ ದೇವರು 'ನಾರೇಯಣ' ಎಂದು ನಾಲ್ಕು ಅಕ್ಷರಗಳನ್ನು ಬರೆ ಎಂದು ಉಪದೇಶಿಸುತ್ತಾನೆ. ಆದ್ದರಿಂದಲೇ ಅಮರನಾರೇಯಣ ಶತಕದ ಎಲ್ಲ ಪದ್ಯಗಳ ಕೊನೆಯಲ್ಲಿ 'ಅಮರನಾರೇಯಣಾಚ್ಯುತ – ಹರಿ ಮುಕುಂದ' ಎಂಬ ಅಂಕಿತವನ್ನು ಅವರು ಬಳಸಿರುವುದು.

ತಾತಯ್ಯನವರ 120 ವರ್ಷಗಳ ಜೀವಿತದಲ್ಲಿ ಮಹತ್ತ್ವದ ತಿರುವು ಕೊಟ್ಟಿದ್ದು ಅವರ ಸಾಂಸಾರಿಕ ಜೀವನವನ್ನು ತ್ಯಜಿಸಿ ವೈರಾಗ್ಯಭಾವದಿಂದ ಮನೆಯನ್ನು ಬಿಟ್ಟು ಹೊರ ನಡೆದ ಮೇಲೆ. ಅಮರನಾರೇಯಣ ಸ್ವಾಮಿಯು ಅವರಿಗೆ, 'ಓಂ ನಮೋ ನಾರೇಯಣಾಯ' ಎಂಬ ಬೀಜಾಕ್ಷರೀ ಮಂತ್ರವನ್ನು ಉಪದೇಶಿಸಿದ ಸಂದರ್ಭದಲ್ಲಿ ಈ ಘಟನೆಯೇ ಅವರಿಗೆ ಸಂನ್ಯಾಸ ದೀಕ್ಷೆಗೆ ಕಾರಣವಾದದ್ದು. ಅಂದಿನಿಂದ ಅವರು 'ಯೋಗಿನಾರೇಯಣ' ಆದರು. ಅದು ಅವರ ಎಲ್ಲ ಕೀರ್ತನೆಗಳ, ಶತಕಗಳ ನಾಮ ಮುದ್ರೆ ಆಯಿತು.

**ಮೀ ವುಪದೇಶಮುನ – ವೂಹಿಂಚಿ ಮನಸುಲೋ**
**ಗುರಿ ಚೂಚಿ ಗುಟ್ಟೆಲ್ಲ – ತೆಲಿಸೆನಯ್ಯ ।**
**ರಾಕೇತ್ವಮಿತ್ತುರಾ – ರಸಿಕುಲು ಮೆಚ್ಚರು**
**ಅನುಚು – ಕೊಂದರು ಪ್ರಜಲು – ಅಂದುರಿಟ್ಲು ॥**

ಈ ನಾಲ್ಕು ಸಾಲುಗಳಲ್ಲಿ ನಾರಾಯಣ ಎಂಬುದನ್ನು 'ನಾರೇಯಣ' ಎಂದು ಹೇಳುವ ಮೂಲಕ ಅದು ಬೀಜಾಕ್ಷರ ಸ್ವರೂಪ ಪಡೆಯಿತೆಂಬುದಕ್ಕೆ ಆಮೇಲೆ ಬರಬಹುದಾದಂತಹ ಆಕ್ಷೇಪಗಳನ್ನು ಕುರಿತೂ ಪ್ರಸ್ತಾವಿಸಿದ್ದಾರೆ.

'ನಾರೇಯಣ' ಎಂಬ ಹೊಸ ಬಗೆಯ ಪ್ರಯೋಗವನ್ನು ಜನ ಹೇಗೆ ಸ್ವೀಕರಿಸಬಹುದು ಎಂಬುದನ್ನು ಅವರು ಇಲ್ಲಿ ಪ್ರಸ್ತಾವಿಸುತ್ತಾರೆ. ಇದು ತಾತಯ್ಯನವರ ಚಿಂತನಾ ಕ್ರಮವನ್ನು, ಮುಂದಾಲೋಚನೆಯ ವಿಧಾನವನ್ನು ಸೂಚಿಸುತ್ತದೆ.

ತಾತಯ್ಯನವರು ಹೇಳುತ್ತಾರೆ "ನಿಮ್ಮ ಉಪದೇಶವನ್ನು ನೋಡಿದೆ. ಆಗ ಮನಸ್ಸಿನಲ್ಲಿ ಚಿಂತಿಸಿ ಊಹಿಸಿದೆ. ಏಕಾಗ್ರತೆಯಿಂದ ಗಮನವಿರಿಸಿ ನೋಡಿದೆ. ಆಗ ರಹಸ್ಯಗಳೆಲ್ಲ ನನಗೆ ತಿಳಿದು ಬಂದವು." ಇಲ್ಲಿ ಅವರಿಗೆ ಆ ಬೀಜಾಕ್ಷರದ ಅರ್ಥ ಸ್ಫುರಿಸಿತು.

ಮುಂದುವರಿದು "ರಾ ಎಂಬ ಅಕ್ಷರಕ್ಕೆ ಏತ್ವ ನೀಡಿ ನಾರೇಯಣ ಎಂದು ಹೇಳಿದರೆ ರಸಿಕರು, ಅಂದರೆ ವಿದ್ವಜ್ಜನರು, ಮೆಚ್ಚುವುದಿಲ್ಲ ಎನ್ನುತ್ತಾರೆ ಕೆಲವರು ಪ್ರಜೆಗಳು.."

**ಮೀ ಮಹಾಮಹಿಮ ತೆಲಿಯ ಜನುಲೆಂತವಾರು ।**
**ಶಬರಿ ರಕ್ಷಕ ಶಾಂತಾತ್ಮ – ರಾಮಚಂದ್ರ ।**

....ಆದರೆ "ಹೇ ಶಬರಿಯನ್ನು ಕಾಪಾಡಿದ ಶಾಂತಾತ್ಮನಾದ ರಾಮಚಂದ್ರನೇ ನಿಮ್ಮ ಮಹಿಮೆಯನ್ನು ಅರಿಯುವುದಕ್ಕೆ ಈ ಜನ ಎಷ್ಟು ಮಾತ್ರ ಅರ್ಹರು."

ಅವರ ಕಾಲದಲ್ಲೂ ಕೆಲವರು ವಿದ್ಯಾವಂತರು, ವ್ಯಾಕರಣ ಶಾಸ್ತ್ರದ ಅರಿವಿದ್ದವರೂ 'ನಾರಾಯಣ' ಎಂಬುದನ್ನು 'ನಾರೇಯಣ' ಎಂದು ಮಾಡಿದ್ದಕ್ಕೆ ಆಕ್ಷೇಪ ಎತ್ತಿರಬಹುದು.

ಆದರೆ ತಾತಯ್ಯನವರು ಅಂಥವರನ್ನು ಗಂಭೀರವಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಏಕೆಂದರೆ ತಾತಯ್ಯನವರು ಇಲ್ಲಿ ಯಾವುದೇ ತಪ್ಪನ್ನು ಮಾಡಿಲ್ಲ. ಸಾಕ್ಷಾತ್ ಪರಮಾತ್ಮನೇ ಈ ಜೀಜಮಂತ್ರವನ್ನು ದಯಪಾಲಿಸಿದ ಮೇಲೆ ಕ್ಷುಲ್ಲಕ ಒಣ ಪಂಡಿತರ ಆಕ್ಷೇಪಗಳಿಗೆಂಥ ಬೆಲೆ? ಕೇವಲ ಋಷಿಗಳು ಮಾತ್ರ ಬೀಜ ಮಂತ್ರಾಕ್ಷರವನ್ನು ನೀಡಬಲ್ಲರು. ತಾತಯ್ಯನವರು ಋಷಿಗಳ ಪಂಕ್ತಿಗೆ ಸೇರಿದವರು. ಮಂತ್ರ ದ್ರಷ್ಟಾರರು. ಋಷಿಗಳಿಗೆ ಭಗವಂತನಿಂದಲೇ ಈ ಜ್ಞಾನ ನೀಡಲಾಗಿದ್ದು ಶ್ರುತಿಗಳು ನಿರ್ಮಾಣಗೊಂಡಿವೆ. ಋಷಿಗಳು ಮಾತ್ರ ಮಂತ್ರ ದ್ರಷ್ಟಾರರಾಗಬಲ್ಲರು. ಹೀಗಾಗಿ ಈ ಮಂತ್ರ ತಾತಯ್ಯನವರ ಮೂಲಕ ನೀಡಲಾಗಿದ್ದರೂ ಅದು ಅಪೌರುಷೇಯ.

ಇಲ್ಲಿ ತಾತಯ್ಯನವರು ಭಗವಂತನನ್ನು ಶಬರಿ ರಕ್ಷಕ, ಶಾಂತಾತ್ಮ ಎಂದು ನೆನೆದಿದ್ದಾರೆ. ಶಬರಿ ರಕ್ಷಕನೆಂದರೆ ಭಗವಂತನು ರಾಮಾವತಾರದಲ್ಲಿ ಭಕ್ತೆಯಾದ ಶಬರಿಯನ್ನು ಕರುಣಿಸಿದ್ದನ್ನು ಉಲ್ಲೇಖಿಸಿದ್ದಾರೆ. ಅವರು ಅವನು ಶಾಂತಾತ್ಮನೆಂದು ವಿಶೇಷಣವನ್ನೂ ಬಳಸಿದ್ದಾರೆ. ಅವರಿಗೆ ಇಲ್ಲಿ ಭಗವಂತ ಗೋಚರಿಸುವುದು ರಾಮಚಂದ್ರನ ರೂಪದಲ್ಲಿ. "ಹೇ ರಾಮಚಂದ್ರ. ಕೆಲವರು ವಿದ್ವದ್ ರಸಿಕರು ಆಕ್ಷೇಪಿಸಿದರೇನಾಯಿತು. ನಿನ್ನ ಮಹಿಮೆಯನ್ನು ಅವರೆಂತು ತಿಳಿಯಬಲ್ಲವರು" ಎನ್ನುವ ತಾತಯ್ಯನವರು ಅವರಿಗೆ ಭಗವಂತನು ಬೀಜಾಕ್ಷರವನ್ನು ಕರುಣಿಸಿದ ಸಂದರ್ಭವನ್ನು ಉಲ್ಲೇಖಿಸುತ್ತಾರೆ.

**(ಮುಂದುವರಿಯುವುದು)**

**ಬ್ಯಾಂಕ್ ಮೂಲಕ ಚಂದಾ ಹಣ ಸಲ್ಲಿಸಲು ಇಚ್ಛಿಸುವವರು ಈ ಎಸ್‌ಬಿ ಅಕೌಂಟ್‌ಗೆ ಕಳುಹಿಸಬಹುದು**

For Subscription - Bank Transfer / RTGS
**Sri Yogi Nareyana Study Centre**
**SB A/c No. 141201011016824**
MSRIT Branch,
**VIJAYA BANK,** Bangalore 560 054
**IFSC Code: VIJB0001412**
**MICR Code: 560029070**
After Transfer please inform to below mentioned Mobile No. 94480 85975



**ಯೋಗ ವಾಸಿಷ್ಠ ಕಥೆಗಳು**



**ಯೋಗ ವಾಸಿಷ್ಠ ಒಂದು ಮಹಾನ್ ಅಧ್ಯಾತ್ಮ ಗ್ರಂಥ. ಬೃಹತ್ತಾದುದು ಕೂಡ. ವಸಿಷ್ಠರು ಹಾಗೂ ಶ್ರೀರಾಮನ ನಡುವಿನ ಸಂಭಾಷಣೆಯ ರೂಪದಲ್ಲಿರುವ ಈ ಗ್ರಂಥ ಅಧ್ಯಾತ್ಮ ವಿದ್ಯೆಯ ಪಠ್ಯಪುಸ್ತಕದಂತಿದೆ. ಬಹು ಪ್ರಾಚೀನವಾದ ಈ ಗ್ರಂಥದ ವೈಶಿಷ್ಟ್ಯವಿರುವುದೇ ಗಹನವಾದ ವಿಚಾರವನ್ನು ತಿಳಿಸಲು ಉಪಕಥೆಗಳನ್ನು ಬಳಸಿಕೊಂಡಿರುವುದು. ವಿದುಷಿ ನಂ. ನಾಗಲಕ್ಷ್ಮಿಯವರು ಸರಳ ಭಾಷೆಯಲ್ಲಿ ಅದರಲ್ಲಿನ ಕಥೆಗಳನ್ನು 'ಮಲ್ಲಾರ' ಓದುಗರಿಗಾಗಿ ಪ್ರತಿ ಸಂಚಿಕೆಯಲ್ಲೂ ಪ್ರಸ್ತುತಪಡಿಸುತ್ತಾರೆ.**

# ವಿಪಶ್ಚಿತ ರಾಜನ ಕಥೆ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ನಾಲ್ಕೂ ಜನ ವಿಪಶ್ಚಿತರು ಒಂದೇ ಚೈತನ್ಯ ಸ್ವರೂಪದವರಾಗಿದ್ದರು. ಅಂದರೆ, ಎಲ್ಲರ ಶರೀರವೂ ಮೂಲದಲ್ಲಿ ಒಂದೇ ಶರೀರವಾಗಿತ್ತು. ಆದರೂ ಅವರ ಇಚ್ಛೆಗಳು ಮಾತ್ರ ವಿಭಿನ್ನವಾಗಿಯೇ ಇದ್ದುವು. ಇದು ಯಾವ ರೀತಿಯೆಂದರೆ, ಒಂದು ಚೈತನ್ಯವು ಸರ್ವವ್ಯಾಪಿಯೂ ಅಖಂಡವೂ ಆಗಿದ್ದರೂ ಮಾಯಾ ಪ್ರಭಾವದಿಂದ ಭಿನ್ನವಾಗಿ ತೋರುವಂತೆ. ಹಾಗೆಯೇ ನಾಲ್ಕೂ ದಿಕ್ಕುಗಳಲ್ಲಿ ಚೆದುರಿದ ವಿಪಶ್ಚಿತರು ವಾಸ್ತವವಾಗಿ ಒಂದೇ ಚೈತನ್ಯದಿಂದ ಉದ್ಭವವಾಗಿದ್ದರೂ ಅವರಲ್ಲಿದ್ದ ಜ್ಞಾನದ ಅಭಾವದ ಕಾರಣದಿಂದಾಗಿ ಅವರು ಹಲವು ವ್ಯವಹಾರಗಳಲ್ಲಿ ತೊಡಗಿಕೊಂಡು ಆ ಫಲವಾಗಿ ಸುಖ-ದುಃಖಗಳು ಪ್ರಾಪ್ತವಾದುವು. ಹಾಗಾಗಿಯೇ ಅವರು ದ್ವೀಪ-ದ್ವೀಪಾಂತರಗಳಲ್ಲಿಯೂ ಸಾಗರ-ಪರ್ವತಗಳಲ್ಲಿಯೂ ಸಂಚರಿಸುವಂತಾಯಿತು.

ಆ ವಿಪಶ್ಚಿತರು ಸಂಪೂರ್ಣವಾಗಿ ಪ್ರಬುದ್ಧರಾಗಿರಲಿಲ್ಲ. ಜ್ಞಾನ-ಅಜ್ಞಾನಗಳ ನಡುವೆ ಡೋಲಾಯಮಾನ ಸ್ಥಿತಿಯಲ್ಲಿದ್ದರು. ಆ ಅಪೂರ್ಣ ಜ್ಞಾನದಿಂದ ಅವರಿಗೆ ಬಂಧನ-ಮೋಕ್ಷಗಳೆರಡರ ಲಕ್ಷಣಗಳು ಗೋಚರವಾಗುತ್ತಿದ್ದುವು. ಅವು ಕೂಡ ಸಂಶಯಪೂರಿತವಾಗಿದ್ದುದರಿಂದ ಅವರನ್ನು ಪರಬ್ರಹ್ಮ ಪ್ರಾಪ್ತಿಯಾದ ಯೋಗಿಗಳೆನ್ನುವಂತೆಯೂ ಇರಲಿಲ್ಲ. ಆದರೆ ಅವರು ಅಗ್ನಿದೇವನ ವರದಾನವನ್ನು ಪಡೆದುಕೊಂಡು ಸಿದ್ಧಿ ಪ್ರಾಪ್ತಿ ಮಾಡಿಕೊಂಡ ಧಾರಣಾಯೋಗಿಗಳಾಗಿದ್ದರು. ಆದರೂ ಮೂಲತಃ ಅವರಲ್ಲಿ ಅವಿದ್ಯೆಯು ಸ್ಥಿರವಾಗಿಯೇ ಇತ್ತು. ಅವರು ಆತ್ಮವಿಚಾರಹೀನರಾಗಿದ್ದರು. ಜೀವನ್ಮುಕ್ತರ ಶರೀರವಾದರೋ ದೇಹಧರ್ಮದಿಂದ, ಭೌತಿಕ ವಿಚಾರಗಳಿಂದ ಮುಕ್ತವಾಗಿರುತ್ತದೆ. ಶರೀರದೊಳಗಿನ ಅವರ ಚಿತ್ತವು ಅಚಲವಾಗಿಯೇ ಇರುತ್ತದೆ. ಅಂತಹವರನ್ನು ರಾಜ ಸಿಂಹಾಸನದ ಮೇಲೆ ಕುಳ್ಳಿರಿಸಿದರೂ ಅದರಿಂದ ಅವರಿಗೆ ಸುಖ-ದುಃಖಗಳ ಅನುಭವವಾಗುವುದಿಲ್ಲ. ಹೀಗಿದ್ದರೂ ವ್ಯವಹಾರದಲ್ಲಿ ಜ್ಞಾನಿ-ಅಜ್ಞಾನಿಗಳ ಆಚರಣೆಯು ಒಂದೇ ವಿಧವಾಗಿ ಕಂಡುಬರುತ್ತದೆ. ಪ್ರಹ್ಲಾದ, ಬಲಿ, ವೃತ್ರ ಮೊದಲಾದವರು ರಾಗಿಗಳಂತೆಯೇ ತೋರುತ್ತವೆ. ಅಂದರೆ ರಾಗ, ದ್ವೇಷಗಳಿಗೆ ಒಳಗಾದವರಂತೆಯೇ ಇರುತ್ತವೆ.

ನಾಲ್ಕು ಜನ ವಿಪಶ್ಚಿತರಲ್ಲಿ ಪಶ್ಚಿಮ ದಿಕ್ಕಿಗೆ ಹೋದವನು ಪಕ್ಷಿರಾಜನಾದ ಗರುಡನ ಸಹಾಯದಿಂದ ಸಮುದ್ರವನ್ನು ದಾಟಲು ಪ್ರಾರಂಭಿಸಿದನು. ಏಳು ಮಹಾ ಸಾಗರಗಳನ್ನೂ ಏಳು ದ್ವೀಪಗಳನ್ನೂ ದಾಟಿ ದಿವ್ಯ ಭೂಮಿಯನ್ನು ತಲಪಿ ಆತ್ಮಜ್ಞಾನವನ್ನು ಹೊಂದಿದನು. ಐದು ವರ್ಷಗಳವರೆಗೆ ಸಮಾಧಿಸ್ಥನಾಗಿ ಅನಂತರ ನಿರ್ವಾಣ ಪ್ರಾಪ್ತಿಯನ್ನು ಮಾಡಿಕೊಂಡನು.

ಪೂರ್ವದಿಕ್ಕಿಗೆ ಹೋದ ವಿಪಶ್ಚಿತನು ಕಾನ್ಯಕುಬ್ಜದಿಂದ, ಕ್ರೌಂಚ ದ್ವೀಪದ ಪರ್ವತ ಪ್ರದೇಶದ ಬಳಿಗೆ ಹೋದಾಗ, ರಾಕ್ಷಸನೊಬ್ಬನ ಬಾಯಿಗೆ ಆಹಾರವಾಗಿಬಿಡುತ್ತಾನೆ. ಆದರೆ ತನ್ನ ಪರಾಕ್ರಮದಿಂದ ಅವನ ಕರುಳನ್ನೇ ಕತ್ತರಿಸಿ ಹೊರಕ್ಕೆ ಬಂದು ಚಂದ್ರ ಮಂಡಲದ ಸಮೀಪದಲ್ಲಿಯೇ ಪ್ರಯಾಣ ಮಾಡುತ್ತಿರುತ್ತಾನೆ. ತನ್ನಲ್ಲಿ ಚಂದ್ರತ್ವದ (ಕಾನ್ಯಕುಬ್ಜ-ಉತ್ತರ ಪ್ರದೇಶದ ಕನೂಜ್ ಜಿಲ್ಲೆ. ಗಂಗಾ ಮತ್ತು ಕಾಳೀ ನದಿಯ ಸಂಗಮ ಪ್ರದೇಶದಲ್ಲಿದೆ. ಕ್ರೌಂಚ ದ್ವೀಪವೆಂದರೆ ಇಂದಿನ ಆಫ್ರಿಕಾ ಖಂಡವಾಗಿದೆ. ಇದು ಸಪ್ತ ದ್ವೀಪಗಳಲ್ಲೊಂದಾಗಿದೆ.) ಅಂದರೆ ಸೌಮ್ಯ ಭಾವವನ್ನು ನೆಲೆಗೊಳಿಸಿಕೊಳ್ಳುತ್ತಲೇ ಕೊನೆಗೆ ಚಂದ್ರಲೋಕವನ್ನೇ ಸೇರಿ ಅಲ್ಲಿಯೇ ನೆಲೆಸಿಬಿಡುತ್ತಾನೆ.

(-ದೇ. ಭಾ., ವಿ. ಪುರಾಣ, ಶಿ. ಪುರಾಣ).

ದಕ್ಷಿಣ ದಿಕ್ಕಿಗೆ ಹೊರಟ ವಿಪಶ್ಚಿತನು ಶಾಲ್ಮಲೀ ದ್ವೀಪಕ್ಕೆ ಹೋಗಿ ಅಲ್ಲ ತನಗೆದುರಾದವರನ್ನೆಲ್ಲ ತನ್ನ ಪರಾಕ್ರಮದಿಂದ ಪರಾಜಿತಗೊಳಿಸಿ ರಾಜನಾಗಿಬಿಡುತ್ತಾನೆ. ಅವನ ರಾಜ್ಯಭಾರವು ಅಲ್ಲಿ ಸುಸೂತ್ರವಾಗಿ ನಡೆಯತೊಡಗುತ್ತದೆ.

(ಶಾಲ್ಮಲೀ ದ್ವೀಪವನ್ನು ಸಪ್ತ ದ್ವೀಪಗಳಲ್ಲಿ ಒಂದಾದ ಆಸ್ಟ್ರೇಲಿಯಾ ಖಂಡವೆಂದು ಹೇಳುತ್ತಾರೆ.)

ಉತ್ತರ ದಿಕ್ಕಿಗೆ ಹೊರಟ ವಿಪಶ್ಚಿತನು ಸಪ್ತ ಸಾಗರಗಳನ್ನು ದಾಟುತ್ತಿರುವ ಕಾಲದಲ್ಲಿ ಒಂದು ಮೊಸಳೆಯ ಹೊಟ್ಟೆಯಲ್ಲಿ ಪ್ರವೇಶಿಸಿ ಬಿಡುವಂತಾಗುತ್ತದೆ. ಬಹು ದೀರ್ಘಕಾಲದವರೆಗೆ ಅಲ್ಲಿಯೇ ನೆಲೆಸಿದ್ದು ಅದು ಮೃತಿ ಹೊಂದಿದ ಬಳಿಕ ಅವನು ಹೊರ ಬಂದು ದೇವ ಭೂಮಿಯನ್ನು ತಲಪುತ್ತಾನೆ. ಅನೇಕ ವರ್ಷಗಳ ಅನಂತರ ಮರಣವು ಪ್ರಾಪ್ತಿಯಾಗಿ ಅವನಿಗೆ ದೇವತ್ವವು ಲಭಿಸಿ ಒಂದು ಪ್ರಧಾನ ದೇವತೆಯಾಗಿ ಸ್ಥಿರವಾಗಿ ನೆಲೆಸುವಂತಾಗುತ್ತದೆ. ಆದರೆ ಕೆಲವು ಸಮಯದ ಅನಂತರ ದಿಗಂತ ದರ್ಶನವನ್ನು ಮಾಡುವ ಅಭಿಲಾಷೆಯು ಅವನಲ್ಲಿ ಪೂರ್ವ ಸಂಸ್ಕಾರದ ಫಲವಾಗಿ ಉಂಟಾಗುತ್ತದೆ. ಆ ಅಪೇಕ್ಷೆಯಿಂದ ಪ್ರಯಾಣವನ್ನು ಆರಂಭಿಸಿದವನು 'ಲೋಕಾಲೋಕ'ವೆಂಬ ಅತಿ ದಕ್ಷಿಣ ಭಾಗದಲ್ಲಿನ ಪರ್ವತವನ್ನು ಸಮೀಪಿಸುತ್ತಾನೆ. ಅದರ ಒಂದು ಭಾಗ ಬೆಳಗುತ್ತಲೂ ಇನ್ನೊಂದು ಭಾಗ ಕತ್ತಲಾಗಿಯೂ ಇರುತ್ತದೆನ್ನಲಾಗಿದೆ. ಇದನ್ನು 'ದಕ್ಷಿಣಮೇರು' ಎಂದೂ ಹೇಳುತ್ತಾರೆ. ಆ ಪರ್ವತದ ಶಿಖರದಿಂದ ಕೊಳ್ಳದಲ್ಲಿ ಬಿದ್ದುಬಿಡುತ್ತಾನೆ.


ಆಗ ಕೂಡಲೆ ದೊಡ್ಡದಾದ ಮಾಂಸ ಭಕ್ಷಕ ಪಕ್ಷಿಯೊಂದು ಅವನ ದೇವತಾ ಶರೀರವನ್ನು ಹರಿದು ಭಕ್ಷಿಸಿಬಿಡುತ್ತದೆ. ಆಗ ಅವನು ಅಶರೀರಿಯಾಗಿಯೇ ಮುಂದೆ ಸಾಗುತ್ತಾ ತತ್ತ್ವಜ್ಞಾನವೂ ಸಂಪೂರ್ಣವಾಗಿ ಇರದುದರಿಂದ ಆಕಾಶ ಸಂಚಾರಿಯೇ ಆಗಿರುತ್ತಾನೆ. ಚಂದ್ರಲೋಕದಲ್ಲಿದ್ದ ವಿಪಶ್ಚಿತನು ಕಾಲಾಂತರದಲ್ಲಿ ಅಲ್ಲಿಂದ ಹೊರಟು ಮೃಗರೂಪವನ್ನು ಹೊಂದಿ ಅಲ್ಲಿಯೇ ತನ್ನ ನೆಲೆಯನ್ನು ಪಡೆದುಕೊಳ್ಳುತ್ತಾನೆ.

ಹೀಗೆ, ನಾಲ್ಕೂ ವಿಪಶ್ಚಿತರು ಒಂದೇ ಮೂಲದವರಾಗಿದ್ದರೂ

ಭಿನ್ನ ಭಿನ್ನ ಫಲಗಳನ್ನು ಪಡೆದುಕೊಳ್ಳುವಂತಾಗಿತ್ತು. ದೇಶ–ಕಾಲ–ಕ್ರಿಯೆಗಳಿಂದಾಗಿ ಅವರ ಸ್ವಭಾವದಲ್ಲಿ ಭಿನ್ನತೆಯೂ ಇತ್ತು. ಅವರಲ್ಲಿ ಮೊದಲಿನವರಿಬ್ಬರು ಅವಿದ್ಯೆಯಿಂದ ಆಕರ್ಷಿತರಾದರು. ಒಬ್ಬನು ವಾಸನೆಗೆ ವಶೀಭೂತನಾಗಿ ಮೃಗವಾಗುತ್ತಾನೆ. ಮತ್ತೊಬ್ಬನು ಪರಿಸರದಲ್ಲಿಯೇ ಭ್ರಮಣ ಮಾಡುವಂತಾಗುತ್ತದೆ. ಅಂದರೆ, ಯಾರ ಬುದ್ಧಿಯು ಅಂತರ್ಮುಖಿಯಾಗಿರುವುದೋ, ಯಾರಿಗೆ ಸುಖ ಸಾಧನಗಳು ಸುಖವನ್ನೂ ದುಃಖದ ಸಾಧನಗಳು ದುಃಖವನ್ನೂ ಕೊಡುವುದಿಲ್ಲವೋ ಅವರು ಜೀವನ್ಮುಕ್ತರಾಗಿರುತ್ತಾರೆ. ಅವಿದ್ಯೆಯಾದರೋ ನಾನಾ ಪ್ರಕಾರದ ಶಾಖೆಗಳನ್ನೂ, ಪ್ರಶಾಖೆಗಳನ್ನೂ ಹೊಂದಿ ವಿಸ್ತಾರವಾಗಿರುತ್ತದೆ. ಆತ್ಮಜ್ಞಾನವಿಲ್ಲದೆ ಅದು ಶಾಂತವಾಗುವುದಿಲ್ಲ. ಪೂರ್ಣ ದೃಷ್ಟಿ ಹೊಂದಿದ ಬಳಿಕ ಜ್ಞಾನ–ಅಜ್ಞಾನಗಳ ಹಾಗೂ ಸತ್ಯ–ಅಸತ್ಯಗಳ ಸ್ಥಿತಿಯಲ್ಲಿ ಭೇದವು ಉಳಿಯುವುದಿಲ್ಲ. ಇಂದ್ರಿಯಗಳ ಮೇಲೆ ವಿಜಯ ಹೊಂದುವವರೆಗೆ ಅಜ್ಞಾನದ ಉಪಶಮನವಾಗುವುದಿಲ್ಲ. ಚಿತ್ತವನ್ನು ಜಯಿಸಿದರೆ ಇಂದ್ರಿಯಗಳ ಮೇಲೆ ವಿಜಯ ಸಾಧಿಸಿದಂತೆಯೇ ಆಗುತ್ತದೆ. ಯಾವ ಮನವು ಅಂತರಂಗದಲ್ಲಿ ಆತ್ಮರಸಿಕತೆಯನ್ನೂ ಬಹಿರಂಗದಲ್ಲಿ ನೀರಸತೆಯನ್ನೂ ಹೊಂದುವ ಅಭ್ಯಾಸ ಮಾಡುವುದರಲ್ಲಿ ಉದ್ವಿಗ್ನಗೊಳ್ಳುವುದಿಲ್ಲವೋ ಅವರ ಮನವು ಶಾಂತವಾಗುವುದು. ಮನವನ್ನು ಪ್ರಯತ್ನಪೂರ್ವಕವಾಗಿ ನಿರೋಧಗೊಳಿಸಿ ದುರ್ವ್ಯಸನಗಳನ್ನು ತ್ಯಾಗ ಮಾಡಿದರೆ ಅದು ಚಂಚಲತೆಯಿಂದ ಮುಕ್ತವಾಗಿ ವಿವೇಕದ ಕಡೆಗೆ ಹೊರಳುತ್ತದೆ. ವಿವೇಕ ಸಂಪನ್ನವಾದ ಮನವು ವಿಜಿತೇಂದ್ರಿಯವೆನಿಸಿಕೊಳ್ಳುತ್ತದೆ. ಲೌಕಿಕದ ಯಾವುದೇ ವಾಸನೆಯಿಂದ ಅದು ಮೋಹಗೊಳ್ಳುವುದಿಲ್ಲ.


ರಾಜ ವಿಪಶ್ಚಿತನ ಕಥೆಯ ಮೂಲಕ ಈ ಎಲ್ಲ ವಿಷಯಗಳನ್ನು ವಸಿಷ್ಠ ಮುನಿಯು ಶ್ರೀರಾಮನಿಗೆ ತಿಳಿಸುತ್ತಾನೆ.

**(ಮುಂದುವರಿಯುವುದು)**



**ನಂ. ೨೫೧, ೧೨ನೇ 'ಬಿ' ಕ್ರಾಸ್, ೧ನೇ 'ಬಿ' ಮುಖ್ಯರಸ್ತೆ,**
**ಮಹಾಲಕ್ಷ್ಮಿಪುರಂ, ಬೆಂಗಳೂರು–೫೬೦ ೦೮೬.**

**ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ ಆಯ್ದ ಕಥೆಗಳು**




# ಭ್ರಮೆ

ಒಂದು ದಿನ ಒಬ್ಬ ಸಂನ್ಯಾಸಿ ಹಿಮಾಲಯ ಸಹ್ಯಾದ್ರಿ ಪರ್ವತಗಳನ್ನಿಳಿದು ಗುಡ್ಡವಿದ್ದಲ್ಲಿಗೆ ಬಂದ. ಗುಡ್ಡ ಕೇಳಿತು, "ಮಹಾತ್ಮರೇ ನನ್ನಷ್ಟು ಎತ್ತರದವರನ್ನು ಎಲ್ಲಿಯಾದರೂ ನೋಡಿರುವಿರಾ? ಸಂನ್ಯಾಸಿ ಹೇಳಿದ, "ಇಲ್ಲ ನಿನ್ನಷ್ಟೇ ಎತ್ತರದ ಗುಡ್ಡ ಎಲ್ಲಿಯೂ ನೋಡಲಿಲ್ಲ. ಆದರೆ ನಿನಗಿಂತ ಸಾವಿರ ಪಾಲು ಹಿರಿದಾದ ಬೆಟ್ಟಗಳನ್ನು ನೋಡಿದ್ದೇನೆ!" ಆಶ್ಚರ್ಯದಿಂದ ಗುಡ್ಡ ಕೇಳಿತು, "ಎಲ್ಲಿ ಆ ಬೃಹತ್ ಬೆಟ್ಟಗಳು." ಸಂನ್ಯಾಸಿ ಎಂದ, "ಇದೋ ಇಲ್ಲಿಯೇ ನಿನ್ನ ಹಿಂದೆಯೇ?" ಆ ಬೃಹದಾಕಾರದ ಬೆಟ್ಟವನ್ನು ನೋಡುವುದೇ ತಡ ಗುಡ್ಡದ ತಲೆಕೆಳಗಾಗಿತ್ತು!

ಗುಡ್ಡದ ಭ್ರಮೆ ಈಗ ಬೆಟ್ಟಕ್ಕೆ ತಗುಲಿತ್ತು. "ನನ್ನಷ್ಟು ಎತ್ತರ ಈ ಪ್ರಪಂಚದಲ್ಲಿ ಯಾರಿದ್ದಾರೆ?" ಎಂದು ಅದು ಅಹಂಕರಿಸಿತು. ಅಲ್ಲೇ ಇದ್ದ ಸಂನ್ಯಾಸಿಗಳು, "ಒಂದಷ್ಟು ಮೇಲೆ ನೋಡು ತಿಳಿಯುತ್ತದೆ" ಎಂದರು. ಒಲ್ಲದ ಮನಸ್ಸಿನಿಂದಲೇ ನೋಡಿತು. ಅಲ್ಲಿ ಅನಂತ ಆಗಸದಲ್ಲಿ ಲಕ್ಷಾಂತರ ಮೇಘಗಳು ತೇಲುತ್ತಲಿದ್ದವು. ಅದು ಕಂಡು ಬೆಟ್ಟವು ಗುಡ್ಡದಂತೆ ಮನದಲ್ಲಿಯೇ ನಾಚಿ ಮೌನ ತಳೆಯಿತು! ನಾವು ನಮ್ಮಂತರಂಗದ ವಾಣಿಯನ್ನು ಕೇಳಿ ನಡೆಯದಿದ್ದರೆ ಇಂಥ ಪ್ರಸಂಗ ಬರುವುದು ಸಹಜ.

**ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ**

# ಒಂಟಿತನ ಬೇಸರ–ಏಕತನ ಸುಂದರ



ನಿವೃತ್ತ ಹಿರಿಯ ಬ್ಯಾಂಕ್ ಅಧಿಕಾರಿಗಳಾದ ಶ್ರೀ ಹೆಚ್.ವಿ. ಶ್ರೀನಿವಾಸ ಅವರ ಕಾವ್ಯನಾಮವೇ ಸಾಯಿಬಿಂದು. ಪ್ರಗತಿಪರ ಅಧ್ಯಾತ್ಮ ಚಿಂತಕರೂ ಉಪನ್ಯಾಸಕರೂ ಆಡಳಿತ, ತತ್ತ್ವಜ್ಞಾನ, ಧ್ಯಾನ, ವ್ಯಕ್ತಿತ್ವ ವಿಕಸನ, ಬ್ಯಾಂಕಿಂಗ್ ಮುಂತಾದ ಗಂಭೀರ ವಿಷಯಗಳನ್ನು ಕುರಿತು ಪುಸ್ತಕಗಳನ್ನು ರಚಿಸಿದ್ದಾರೆ. ಸಾಯಿ ಎಂದರೆ ಸಾಗರ. ಬಿಂದು ಎಂದರೆ ಹನಿ. ಸಾಯಿ ಎಂಬ ಸಾಗರದಲ್ಲಿ ತಾನು ಒಂದು ಹನಿ ಎಂದು ತಮ್ಮ ಕಾವ್ಯನಾಮದ ಬಗ್ಗೆ ವಿವರಣೆ ನೀಡುತ್ತಾರೆ. 'ವ್ಯಕ್ತಿತ್ವ ವಿಕಸನ ಲೇಖನ ಮಾಲೆ'ಯಲ್ಲಿ ಅವರ ಚಿಂತನೆಗಳನ್ನು ಕಾಣುವಿರಿ.

ಮಹಾನ್ ಬುದ್ಧನು ಹಲವಾರು ದಶಕಗಳ ಕಠೋರ ಸಾಧನೆಯನ್ನು ಮಾಡಿದರೂ ಅಂತಿಮವನ್ನು ಅರಿಯಲ್ಲೇ ಇಲ್ಲ. ಕಾರಣ, ಅಲ್ಲಿ ಪ್ರತ್ಯೇಕಭಾವವಿತ್ತು. ಒಮ್ಮೆ ತಾನೇ ಶೂನ್ಯನಾದ, ಅದೊಂದು ಅಮೃತಘಳಿಗೆ. ನಿಜವಾದ ಜ್ಞಾನೋದಯವಾಗುವುದು ಕ್ಷಣಮಾತ್ರದಲ್ಲಿ. ಅದು ಎಲ್ಲ ಬುದ್ಧಿಶಕ್ತಿಗಳಿಗೂ ತಿಳಿವಳಿಕೆಗಳಿಗೂ ಮೀರಿದ್ದು. ಅದೇ ಪೂರ್ಣ.



ಹಂಬಲಿಸುತ್ತ, ಹಂಬಲಿಸುತ್ತ ನಾವೂ ಸಹ ಮಹಾಪುರುಷರ ಸಹಾಯ ಹಸ್ತದಿಂದ, ಕೃಪಾಕಟಾಕ್ಷದಿಂದ, ಉತ್ತುಂಗದ ಕಡೆ ಮೇಲೇರಿ ಧ್ಯಾನವೊಂದೇ ಯುಕ್ತಮಾರ್ಗ. ಜ್ಞಾನೋದಯ ಅಥವಾ ಸತ್ಯದ ಸಾಕ್ಷಾತ್ಕಾರ ಅಥವಾ ಅಂತಿಮ ಅರಿವು ಅಥವಾ ತನ್ನರಿವು ಯಾವುದೋ ಕ್ಷಣದಲ್ಲಿ ಘಟಿಸಬಹುದು. ಆಗ ತಾನಿರುವುದಿಲ್ಲ. ತಾನಿದ್ದರೂ ಹೇಳಲು ಸಾಧ್ಯವಿಲ್ಲ. ಹೇಳಲು ಸಾಧ್ಯವಾದರೂ ಹೇಳುವ ಅಗತ್ಯವಿರುವುದಿಲ್ಲ. ಅಲ್ಲಿ ಅನ್ಯರು, ಅನ್ಯತೆಗಳೇ ಇರುವುದಿಲ್ಲ.

ಕಲ್ಲು ಇದೆ. ಅದು ತನ್ನ ಮಟ್ಟಿಗೆ ಇದೆ. ತಾನು ಒಂದು ಶೂನ್ಯ ಪ್ರಜ್ಞೆಯಾಗಿದೆ. ಆದರೆ ಅದು ಅಸ್ತಿತ್ವದ ಭಾಗವೇ ಆಗಿದೆ. ಆದರೂ ತಾನಿಲ್ಲದಂತೆ ಇದೆ. ಹಾಗೆಯೇ ಸಮಗ್ರ ಪ್ರಜ್ಞೆಯು ಅಸ್ತಿತ್ವದಲ್ಲಿದೆ. ಸಮಗ್ರದ ಆಟ ನಿರಂತರ ನಡೆದಿದೆ. ಅದು ತನ್ನ ವಿನೋದ, ಆನಂದ. 100 ಕನ್ನಡಿಗಳನ್ನು ಸುತ್ತಲೂ ಇಟ್ಟು, ತಾನು ಒಬ್ಬನೇ ಕುಣಿಯುತ್ತಾ 100 ಮಂದಿ ವಿರುದ್ಧ ಗತಿಯಲ್ಲಿ ಕುಣಿಯುತ್ತಿರುವುದನ್ನು ನೋಡಿ, ಆನಂದಿಸಿದಂತೆ!

ಕರ್ತೃಭಾವವಿಲ್ಲದೆ, ಭೋಕ್ತೃಭಾವವಿಲ್ಲದೆ, ಮಾಲೀಕ ಭಾವವಿಲ್ಲದೆ, ವಿಹಿತ ಕರ್ಮಗಳಲ್ಲಿ, ಅರ್ಪಣಾ ಭಾವದಲ್ಲಿ ತೊಡಗಿಸಿಕೊಂಡು, ದಕ್ಷನಾಗಿ ದಕ್ಕಿರುವ ಪಾತ್ರಗಳನ್ನು ಆಟದಂತೆ ನಿರ್ವಹಿಸುತ್ತಾ, ತಾನು ಇದ್ದೂ ಸಹ ಇಲ್ಲದಂತೆ, ತಾನು ನಿಜಕ್ಕೂ ಇಲ್ಲದಿದ್ದರೂ ಸದಾ ಪ್ರಜ್ಞೆಯಾಗಿ ಇರುವಂತಹ, ಏಕೈಕ ಉಪಸ್ಥಿತಿಯಲ್ಲೇ, ಜೀವಿಯು ನೆಲೆಯಾಗುವುದು ಸರಿಯೋ ಸರಿ. ಅದು ಆತ್ಮನ ನೆಲೆ, ಭಗವಂತನ ನೆಲೆ, ಧೀಮಂತ ನೆಲೆ. ಪ್ರಪಂಚದ ಭೀಕರ, ಅಬ್ಬರದ ಅಲೆಗಳು ಅವನನ್ನು ಸ್ಪರ್ಶಿಸುವುದಿಲ್ಲ. ಸುಮ್ಮನಿರಬಲ್ಲವನಿಗೆ ಸಮಸ್ಯೆಗಳಿಲ್ಲ. ಸಮಸ್ಯೆಗಳು ಅವನ ಹೊರವಲಯವಾದ ದೇಹವನ್ನು ಸ್ಪರ್ಶಿಸಬಹುದು. ಆದರೆ, ಅವು ಅವನ ಅರಿವಿನ ಒಳಕೇಂದ್ರವನ್ನು ಸ್ಪರ್ಶಿಸುವುದಿಲ್ಲ. ತಾನೇ ನಿಜಕ್ಕೂ ಕೇಂದ್ರ. ಅದು ಪರಿಧಿಯಿಲ್ಲದ ಕೇಂದ್ರ, ಅಖಂಡತೆಗೆ ಪರಿಧಿ ಎಲ್ಲಿ ಬಂತು? ಅಖಂಡದಲ್ಲಿ ಎಲ್ಲವೂ ಕೇಂದ್ರವೇ. ಅಲ್ಲಿ ನಾನು ಶೂನ್ಯ ಸಿಂಹಾಸನ ಚಕ್ರವರ್ತಿ.

ಹೊರಗೆ ತನನನ. ಒಳಗೆ ಮೌನ. ಅದುವೇ ಸಾಮರಸ್ಯ. ಸುಮ್ಮನಿರುವುದು ಸುಂದರ.

ಒಂಟಿತನ ಬೇಸರ. ಏಕತನ ಸವಿ ಸುಂದರ. ಧ್ಯಾನಿಗೆ ಮನವೇ ಮಂದಿರ. ಶೂನ್ಯ ಮನವೇ ದೇವಾಲಯ.

ಸುಮ್ಮನಿರು...ಸುಮ್ಮನಿರು...ನೀನು ವ್ಯಷ್ಟಿಯಲ್ಲ. ನಿನಗೆ ಯಾವ ಸಂಬಂಧವೂ ಇಲ್ಲ. ನಿನಗೆ ಯಾವ ಬಂಧನವೂ ಇಲ್ಲ. ನೀನು ಸಮಷ್ಟಿ. ನೀನು ಆನಂದಸ್ವರೂಪ...ನೀನು ನೀನೇ...ನೀನು ನೀನೇ.

ಓ ಧ್ಯಾನಿ...ನೀನೇ ಧನ್ಯ...ನೀನೇ ಸತ್ಯ...ನೀನೇ ಪರಮಭಾಗ್ಯಶಾಲಿ...ನಿನಗೆ ಜಯವು..ನಿನಗೆ ಮಂಗಳವು. ಸತ್ಯಂ ಶಿವಂ ಸುಂದರಂ.

**ಸತ್–ಚಿತ್–ಆನಂದ**

ಸತ್...ಚಿತ್..ಆನಂದದ ಉಪಸ್ಥಿತಿಯಲ್ಲಿ ಇರುವ ಮತ್ತು ಆ ಸ್ಥಿತಿಗೆ ಸಾಧಕರನ್ನು ತಲಪಿಸುವ ಪರಿಪೂರ್ಣ ಪರಮಹಂಸರನ್ನು, ಸತ್...ಚಿತ್..ಆನಂದ ಸದ್ಗುರು ಎಂದು ಕರೆಯುತ್ತೇವೆ. ತೋರಿಕೆಯಲ್ಲಿ ಹಲವಾರು ಸದ್ಗುರುಗಳು ರೂಪನಾಮಗಳಿಂದ ಬೇರೆಯಾಗಿ ಕಂಡರೂ ಅವರೆಲ್ಲ ಒಂದೆ. ಕಾರಣ, ಅವರೆಲ್ಲರೂ ಸತ್ಯವನ್ನು ಕಂಡವರು. ಸತ್ಯದಲ್ಲೇ ನೆಲೆಯಾದವರು ಮತ್ತು ಸತ್ಯಸ್ವರೂಪವೇ ಆಗಿರುವವರು.

ಸತ್–ಚಿತ್–ಆನಂದ–ಏನದು? ಇದರ ಬಗ್ಗೆ ಶಾಸ್ತ್ರಗ್ರಂಥಗಳ ಮತ್ತು ಪಂಡಿತರುಗಳ ವ್ಯಾಖ್ಯಾನಗಳು ಇವೆ. ಆದರೆ ಇಲ್ಲಿನ ಪ್ರಯತ್ನ, ಸರಳವಾಗಿ ಅರಿಯುವ ಒಂದು ಸಾಮಾನ್ಯ ಚಿಂತನೆ. ಇದನ್ನು ಒಂದು ದೃಷ್ಟಿಕೋನ ಅಥವಾ ಪ್ರಜ್ಞಾಹಂತವೆಂದು ಭಾವಿಸಿದರೂ ಸರಿಯೇ.

ಸತ್ ಎಂದರೆ ಸತ್ಯವಾದದ್ದು, ಶಾಶ್ವತವಾದದ್ದು, ಅನಾದಿ, ಅನಂತವಾದದ್ದು, ಅವ್ಯಕ್ತವಾದದ್ದು, ನಿರಾಕಾರವಾದದ್ದು, ಎಲ್ಲ ತೋರುವ, ತೋರದಿರುವ ಇರುವಿಕೆಗೆ ಆಧಾರವಾದದ್ದು.

ಚಿತ್ ಎಂದರೆ ಪ್ರಜ್ಞೆ, ಅರಿವು. ಮಲಿನ ಪ್ರಜ್ಞೆಯೇ ಮನಸ್ಸು ಅಥವಾ ಸಂಸಾರ. ಶುದ್ಧ ಪ್ರಜ್ಞೆಯೇ ಈಶ್ವರ.

ಆನಂದವೆಂದರೆ ಆ ಸತ್ಯಕ್ಕೆ, ಆ ಶುದ್ಧ ಅರಿವಿಗೆ ಭಿನ್ನವಲ್ಲದ ಸಹಜ ಸ್ಥಿತಿ. ಪ್ರಜ್ಞೆಯು ಸತ್ಯದಲ್ಲೇ ನೆಲೆಯಾದಾಗ, ಅದು ಆನಂದವೇ. ಅಂತಹ ಉಪಸ್ಥಿತಿಯಲ್ಲಿರುವವನೇ ಸ್ಥಿತಪ್ರಜ್ಞ. ಪ್ರಜ್ಞೆಯು ಸತ್ಯವನ್ನು ತೊರೆದು, ಅಸತ್ಯದ ಕಡೆಗೆ ಹೊರಟಾಗ, ಅದು ದುಃಖವೇ. ಸಾಕಾರಗಳೆಲ್ಲವೂ ಹೊರಗೆ ತೋರುವುವು; ಬದಲಾವಣೆಗೆ ಒಳಪಟ್ಟವು.

ಚಿತ್ ಯಾವಾಗಲೂ ತನ್ನ ಸ್ಥಾನದಿಂದ ಕದಲಬಾರದು. ತನ್ನ ನೆಲೆ ತನಗಿರಬೇಕು. ತನ್ನ ಸ್ಥಾನದಿಂದ ಕದಲಿದರೆ ಅದು ದುಃಖ. ಪ್ರಜ್ಞೆಯು ಸ್ಥಿರವಾಗಿರಬೇಕು. ಅಸ್ಥಿರವಾದರೆ ಅದು ಚಂಚಲತೆ. ಅದು ಮನಸ್ಸಿನ ಗುಣ.

ಆ ಸತ್ಯದಲ್ಲೇ, ಆ ಶುದ್ಧ ಅರಿವಿನಲ್ಲೇ ಆನಂದವಿರುವುದು. ಆನಂದವೆಂದರೆ ಸಂತೋಷವಲ್ಲ. ಸಂತೋಷವು ಬರುವುದು ಹೊರಗಿನಿಂದ. ಅದು ಮನಸ್ಸಿನ ಅಂಶ. ಆನಂದವು ಬರುವುದೂ ಅಲ್ಲ; ಹೋಗುವುದೂ ಅಲ್ಲ; ಅದು ಇರುವುದೇ. ಅದು ಪ್ರಜ್ಞೆಯ ಲಕ್ಷಣ. ಅದು ತಾನೇ ತಾನಾಗಿ ಇರುವುದು. ಸಂತೋಷಕ್ಕೆ ಸಂತೋಷಿಯೊಬ್ಬನಾಗಿರುತ್ತಾನೆ. ಆದರೆ, ಆನಂದಕ್ಕೆ, ಆನಂದ ಸವಿಯುವ ಬೇರೊಬ್ಬನಿರುವುದಿಲ್ಲ. ಆನಂದವೇ ತಾನಾಗಿರುತ್ತಾನೆ.

ಆ ಸತ್ಯ ಸಹಜದ, ಆ ಶುದ್ಧ ಅರಿವಿನ, ಆ ಆನಂದದ ವಿಸ್ಮರಣೆಯೇ ಸಂಸಾರ, ಬಂಧನ, ದುಃಖಗಳಿಗೆ ಕಾರಣ. ಸಕಲ ಸಂಸಾರ ವ್ಯಾಮೋಹ ಬಂಧನಗಳಿಂದ ಪಾರಾಗಲು ವಿಮುಖರಾಗಬೇಕು, ಮತ್ತು ಸ್ವಸ್ಥಾನವನ್ನು ಸೇರಬೇಕು. ಸ್ವಸ್ಥಾನದಲ್ಲಿ ಸ್ಥಿರವಾಗುವುದೇ ಮನೆ ಸೇರುವಿಕೆ. ಅದೇ ಸತ್–ಚಿತ್–ಆನಂದ.

ಸತ್–ಚಿತ್–ಆನಂದ, ಇವು ಬೇರೆ ಬೇರೆಯಲ್ಲ. ಅವೆಲ್ಲವೂ ಒಂದೇ ಆದ ಸಹಜ ಇರುವಿಕೆ. ಸಾಧಕನು ತೋರಿಕೆಯಲ್ಲಿ ಹಲವಾರು ಕರ್ಮಗಳಲ್ಲಿ ನಿರತನಾದರೂ ಸತ್ಯದಲ್ಲಿ, ಅವನ ಪ್ರಜ್ಞೆಯು ನೆಲೆಯಾಗಿ, ಸುಮ್ಮನಿದ್ದರೆ, ಅವನೇ ಆನಂದ ಸ್ವರೂಪ.

ಸುಮ್ಮನಿರುವುದೇ ದೊಡ್ಡ ಸಾಧನೆ. ಅದು ಮನಸ್ಸಿನಿಂದ ಸುಮ್ಮನಿರುವುದು. ಸಂಪೂರ್ಣ ಸುಮ್ಮನಿರಬಲ್ಲವನಿಗೆ, ಯಾವ ಬೇರೆ ಸಾಧನೆಗಳೂ ಅಗತ್ಯವಿರುವುದಿಲ್ಲ. ಪೂಜಾದಿಗಳ ಅಗತ್ಯವಿಲ್ಲ. ಅಂತಹ ಸ್ಥಿತಿಯನ್ನು ಅರಿತು ಪಡೆಯಲು ಸಹಕಾರಿಯಾಗುವುದೆಂದರೆ ಅದು ಆಲೋಚನಾರಹಿತವಾದ ಧ್ಯಾನ.

ಧ್ಯಾನವೆಂದರೆ, ಅದು ನಿಜಕ್ಕೂ ಮೌನ. ಅದು ಮಾನಸಿಕ ಮೌನ; ಮಾನಸಿಕ ನಗ್ನತೆ; ಮಾನಸಿಕ ಶೂನ್ಯತೆ. ಅದು ತಲೆಬೋಳಿಸುವ ಪ್ರಕ್ರಿಯೆಯಲ್ಲ. ಅದು ಮನ ಬೋಳಿಸುವ ಪ್ರಕ್ರಿಯೆ. ಮನಸ್ಸು ಖಾಲಿಯಾಗಬೇಕು. 'ಮನಸ್ಸು ಇಲ್ಲವಾದಾಗ 'ನಾನು' ಎಂಬ ಉಪಾಧಿಯು ಇರದೆ, ಆನಂದವು ತಾನೇ ತಾನಾಗಿರುತ್ತದೆ'. ಅಂತಹ ಪ್ರಜ್ಞೆಯಲ್ಲಿ ಲೀನವಾದವರನ್ನು 'ಸತ್–ಚಿತ್–ಆನಂದ ಸ್ವರೂಪ' ಎಂದು ತಿಳಿಯುತ್ತೇವೆ. ಅಲ್ಲಿ ಪ್ರತ್ಯೇಕತೆ ಇರುವುದಿಲ್ಲ. ಆ ಉಪಸ್ಥಿತಿಯು ಸಮಗ್ರ ಇರುವಿಕೆಯ ಸ್ಥಿತಿ.


ಸುಮ್ಮನಿರಲು ಕಲಿಯಬೇಕು. ಹೊರಗಿನ ಕಟ್ಟಡ ಕುಸಿದರೇನಂತೆ. ಸುಮ್ಮನಿರುವವತೆ ಒಳಗಿರುವ ಬುನಾದಿಯು ಭದ್ರವೇ ಬುನಾದಿ ಸರಿಯಿದ್ದರೆ ಎಂತಹ ಕಟ್ಟಡವನ್ನಾದರೂ ಕಟ್ಟಬಹುದು. ಪ್ರಪಂಚವೇ ಕಟ್ಟಡ. ಪರಮಾತ್ಮವೇ ಬುನಾದಿ. ಆನಂದವಿರುವುದು ಪರಮಾತ್ಮನಲ್ಲಿ.

ಇಂತಹ ಬುನಾದಿಯನ್ನು ಭದ್ರವಾಗಿ ಇರಿಸಿಕೊಳ್ಳುವ ಪ್ರಯತ್ನವೇ ಧ್ಯಾನ. ತನ್ನಲ್ಲಿ ತಾನಿರುವುದು. ತನ್ನ ಮನೆಯಲ್ಲಿ ತಾನಿರುವುದು. ತನ್ನ ಇರುವಿಕೆಯಲ್ಲಿ ತಾನಿರುವುದು. ತನ್ನನ್ನು ಬಿಟ್ಟು ಮತ್ತೊಂದು ಇಲ್ಲದಂತೆ ಇರುವುದು. ಸತ್–ಚಿತ್–ಆನಂದ ಸದ್ಗುರುವಿಗೆ ಜಯವು.

ಪ್ರೀತಿಸಿ....ಪ್ರಾರ್ಥಿಸಿ...ಧ್ಯಾನಿಸಿ...ಧನ್ಯರಾಗಿ


**(ಮುಂದುವರಿಯುವುದು)**

**'ಮೈತ್ರೇಯಿ' ೧೮೯೮ಲ, ೭ನೇ ಮುಖ್ಯರಸ್ತೆ, 'ಇ' ವಿಭಾಗ, ೨ನೇ ಹಂತ, ರಾಜಾಜಿನಗರ (ಸುಬ್ರಮಣ್ಯನಗರ) ಬೆಂಗಳೂರು–೫೬೦ ೦೧೦.**



# ಪ್ರಾಚೀನ ಭಾರತದ ಮಹರ್ಷಿಗಳು–೧೩

# ಋಷಭ





ಡಾ. ಎಸ್. ಹೇಮಲತಾ.

ಪೂರ್ವದಲ್ಲಿ ನಾಭಿಯೆಂಬ ಪ್ರಸಿದ್ಧ ರಾಜನಿದ್ದನು. ಅವನು ಅಗ್ನಿಷ್ಟೋಮವೆಂಬ ಯಾಗವನ್ನು ನಡೆಸಿದನು. ಯಾಗಾಂತ್ಯದಲ್ಲಿ ಶ್ರೀಮನ್ನಾರಾಯಣನೇ ಪ್ರತ್ಯಕ್ಷನಾಗಿ ರಾಜನಿಗೆ ಅನುಗ್ರಹಿಸಿದನು; ಅದರಂತೆಯೇ ಮಹಾರಾಣಿಯಾದ ಮೇರುದೇವಿಯಲ್ಲಿ ತನ್ನಂಶದಿಂದ ಅವತರಿಸಿದನು. ಇದೇ ಋಷಭಾವತಾರವು. ಮಗುವು ಬೆಳೆಯುತ್ತ ಸಮಬುದ್ಧಿ, ಇಂದ್ರಿಯನಿಗ್ರಹ, ವಿರಕ್ತಿ, ಪ್ರಭುಶಕ್ತಿ, ಮಹಾವಿಭೂತಿಗಳಂತಹ ವಿಶಿಷ್ಟ ಗುಣಗಳನ್ನು ವೃದ್ಧಿಪಡಿಸಿಕೊಂಡಿತು. ಹೀಗೆ ಸತ್ವಗುಣಪ್ರಧಾನನಾದ, ಇಂದ್ರಿಯ ಬಲದಿಂದ ಎಲ್ಲರನ್ನೂ ಮೀರಿಸಿದ ಅವನಿಗೆ ಋಷಭನೆಂಬ ಹೆಸರು ಅನ್ವರ್ಥವಾಗಿದ್ದಿತು. ಋಷಭವೆಂದರೆ ಶ್ರೇಷ್ಠವಾದ ಗೂಳಿಯೆಂದೂ ಈ ಪದವು ಸಮಾಸಾಂತ್ಯದಲ್ಲಿ ಪರಮಶ್ರೇಷ್ಠನೆಂದೂ ಅರ್ಥವಾಗುತ್ತದೆ.

ಯೋಗಿವರ್ಯನಾದ ಋಷಭನ ನಾಡಿನಲ್ಲಿ ಒಮ್ಮೆ ಇಂದ್ರನು ಬಹಳ ಕಾಲದವರೆಗೆ ಮಳೆಯನ್ನೇ ಸುರಿಸಲಿಲ್ಲ. ಋಷಭನು ತಾನೇ ಇಂದ್ರನಾಗಿ, ಸ್ವಶಕ್ತಿಯಿಂದಲೇ ಸುವೃಷ್ಟಿಯನ್ನುಂಟುಮಾಡಿದನು. ತಾನು ಸರ್ವಜ್ಞನಾಗಿದ್ದರೂ ಕೆಲವು ಕಾಲದವರೆಗೆ ಗುರುಕುಲವಾಸವನ್ನೂ ಗೃಹಸ್ಥಾಶ್ರಮವನ್ನೂ ಶ್ರದ್ಧೆಯಿಂದ ನಡೆಸಿ ತನ್ನ ದೇಶದ ಪ್ರಜೆಗಳಿಗೆ ಸನ್ಮಾರ್ಗವನ್ನು ತೋರಿಸಿಕೊಟ್ಟನು. ದೇವೇಂದ್ರನ ಪುತ್ರಿಯಾದ ಜಯಂತಿಯು ಇವನ ಮಡದಿಯಾಗಿದ್ದಳು. ಋಷಭನ ಪುತ್ರನಾದ ಭರತನಿಂದಲೇ ಈ ಭೂಭಾಗಕ್ಕೆ ಭರತವರ್ಷವೆಂದು ಹೆಸರು ಬಂದಿತೆಂದು ಹೇಳುತ್ತಾರೆ. ಉಳಿದ ಮಕ್ಕಳೂ ಮಹಾಭಾಗವತರಾಗಿದ್ದು ಲೋಕದಲ್ಲಿ ಭಗವದ್ಧರ್ಮವನ್ನು ಪ್ರಕಾಶಪಡಿಸಿದರು.

ಋಷಭನು ಕರ್ಮಗಳಿಗೆ ವಶನಾಗದೆ ಕೇವಲ ಆನಂದಮಯನಾಗಿ ರಾಗದ್ವೇಷಾದಿಗಳನ್ನು ಬಿಟ್ಟು, ಪುರುಷಾರ್ಥಗಳನ್ನು ಸಾಧಿಸುವ ಮಾರ್ಗವನ್ನು ಎಲ್ಲರಿಗೂ ಬೋಧಿಸುತ್ತಿದ್ದನು. ಭೂಸಂಚಾರ ಮಾಡುತ್ತ, ಪ್ರಭುವಿನಲ್ಲಿ ಪೂರ್ಣಭಕ್ತಿಯನ್ನು ಪ್ರಚಾರ ಮಾಡುತ್ತಿದ್ದನು. ತನ್ನ ಮಕ್ಕಳಿಗೂ ಮೋಕ್ಷಧರ್ಮವನ್ನು ಬೋಧಿಸಿ ಅವರೆಲ್ಲರನ್ನೂ ಸನ್ಮಾರ್ಗಪ್ರವರ್ತಕರನ್ನಾಗಿ ಮಾಡಿದನು. ಅನಂತರ ಅವಧೂತಮಾರ್ಗವನ್ನು ಹಿಡಿದು, ಯೋಗವ್ರತಗಳನ್ನು ಆಚರಿಸುತ್ತ ಭೂಮಂಡಲವನ್ನು ಸುತ್ತಿದನು. ಕೊನೆಗೆ ಹಿಮಾಲಯದ ಹೇಮಕೂಟವೆಂಬ ಪರ್ವತದಲ್ಲಿ ಋಷಭನು ಸಹಸ್ರಾರು ವರ್ಷ ತಪಸ್ಸನ್ನು ಮಾಡುತ್ತಿದ್ದನು. ಆದ್ದರಿಂದ ಈ ಪರ್ವತಕ್ಕೆ ಋಷಭ ಪರ್ವತವೆಂದೇ ಹೆಸರಾಯಿತು. ಅಲ್ಲಿ ಋಷಭನೊಡನೆ ಸಂಭಾಷಿಸಲು ಅನೇಕ ಮಹರ್ಷಿಗಳು ಬರುತ್ತಿದ್ದರು.

ಒಂದು ಸಲ ಋಷಭರು ತಪಸ್ವಿಗಳೊಡನೆ ಮಾತನಾಡುತ್ತಿದ್ದಾಗ, ಕೆಲವು ಪರ್ವತಾರೋಹಿ ಯಾತ್ರಿಕರು ಬಂದರು. ಅವರು ತಮ್ಮತಮ್ಮಲ್ಲಿಯೇ ಹರಟುತ್ತ, ಗಲಾಟೆ ಮಾಡುತ್ತ ಬರುತ್ತಿದ್ದರು. ಈ ಗಲಾಟೆಯಿಂದಾಗಿ ಋಷಭರಿಗೆ ತಪಸ್ವಿಗಳೊಡನೆ ಮಾತನಾಡಲು ಪ್ರತಿಬಂಧಕವುಂಟಾಯಿತು. ಒಡನೆಯೇ ಪರ್ವತರಾಜನನ್ನು ಕರೆದು, "ಈ ಪರ್ವತದ ಮೇಲೆ ನಿಂತು ಯಾರಾದರೂ ಮಾತನಾಡಿದರೆ ಅವರ ಮೇಲೆ ಕಲ್ಲಿನ ಮಳೆಗರೆದು ಅವರು ಮಾತನಾಡುವುದನ್ನು ನಿಲ್ಲಿಸು" ಎಂದು ಆದೇಶಿಸಿದರು. ವಾಯುದೇವನಿಗೂ ಅಲ್ಲಿ ಶಬ್ದ ಮಾಡದಂತೆ ಆದೇಶಿಸಿದರು. ಈಗಲೂ ತಪಶ್ಚರಣೆ ಮಾಡದವರು, ನಿಯಮ ವ್ರತಾನುಷ್ಠಾನವಿಲ್ಲದವರಿಗೆ ಈ ಪರ್ವತವನ್ನು ಹತ್ತಲು ಸಾಧ್ಯವಿಲ್ಲವೆಂದು ಹೇಳುತ್ತಾರೆ. ಅಲ್ಲಿ ಇದ್ದಕ್ಕಿದ್ದಂತೆಯೇ ಮೋಡಗಳು ಆವರಿಸುವುದು; ಆಲಿಕಲ್ಲಿನ ಮಳೆ ಸುರಿಯುವುದು. ಆದ್ದರಿಂದ ಯಾತ್ರಿಕರು ಅಲ್ಲಿಗೆ ಹೋಗಲು ಮನಸ್ಸು ಮಾಡುವುದಿಲ್ಲ.

ಋಷಭಯೋಗಿಯು ತನ್ನನ್ನು ಆಶ್ರಯಿಸಿದವರನ್ನು

ಉದ್ಧರಿಸಿದ ಹಲವಾರು ಕಥೆಗಳಿವೆ. ಉಜ್ಜಯಿನಿಯಲ್ಲಿ ಒಬ್ಬ ದುರಾಚಾರಿಯಾದ ಬ್ರಾಹ್ಮಣನಿದ್ದನು. ಆತ ಸ್ನಾನಸಂಧ್ಯಾದಿಗಳನ್ನು ಲೆಕ್ಕಿಸದೆ ಪಿಂಗಲೆ ಎಂಬ ವೇಶ್ಯೆಯೊಡನೆ ರಮಿಸುತ್ತಿದ್ದನು. ಆದರೆ ಯೋಗಾಯೋಗದಿಂದ ಋಷಭಮಹಾಮುನಿಗಳು ಅಲ್ಲಿಗೆ ಬಂದರು. ಅವರನ್ನು ಕಂಡಕೂಡಲೇ ಇವರಿಬ್ಬರೂ ಸಾಷ್ಟಾಂಗ ನಮಸ್ಕಾರ ಮಾಡಿ ಭಕ್ತಿಭಾವದಿಂದ ಮನೆಗೆ ಕರೆದೊಯ್ದರು. ಉತ್ತಮವಾದ ಪೀಠದ ಮೇಲೆ ಕೂಡಿಸಿ ಷೋಡಶೋಪಚಾರಗಳಿಂದ ಪೂಜಿಸಿ, ಹಲವು ಬಗೆಯ ಪಕ್ವಾನ್ನಗಳನ್ನು ಮಹರ್ಷಿಗಳಿಗೆ ಉಣಬಡಿಸಿದರು. ಅನಂತರ ಮಂಚದ ಮೇಲೆ ಹಾಸಿಗೆಯನ್ನು ಸಿದ್ಧಪಡಿಸಿ, ಇಬ್ಬರೂ ನಿದ್ದೆ ಬರುವವರೆಗೂ ಗಾಳಿ ಬೀಸುತ್ತ, ಕಾಲುಗಳನ್ನು ಒತ್ತುತ್ತ ಸೇವೆ ಮಾಡಿದರು. ಸೂರ್ಯೋದಯವಾದ ಕೂಡಲೇ ಋಷಭ ಯೋಗಿಗಳು ಸಂತೋಷದಿಂದ ಹೊರಟುಹೋದರು.

ಕಾಲಕ್ರಮದಲ್ಲಿ ಬ್ರಾಹ್ಮಣ ಮತ್ತು ಪಿಂಗಲೆಯೆಂಬ ಆ ವೇಶ್ಯೆ-ಇಬ್ಬರೂ ಮರಣಹೊಂದಿದರು. ಮುಂದಿನ ಜನ್ಮದಲ್ಲಿ ವೇಶ್ಯೆಯು ಸುಮತಿಯೆಂಬ ಹೆಸರಿನಿಂದ ದಶಾರ್ಣದೇಶದ ಅಧಿಪತಿಯಾದ ವಜ್ರಬಾಹುವಿನ ಮಡದಿಯಾದಳು; ಬ್ರಾಹ್ಮಣನು ಅವಳ ಮಗನಾಗಿ ಜನಿಸಿದನು. ಸುಮತಿಯ ಮೈತುಂಬ ಹುಣ್ಣುಗಳಾದವು. ಹಾಲು ಕುಡಿಯುತ್ತಿದ್ದ ಮಗುವಿಗೂ ವಿಷವು ಸೇರಿ, ಅದರ ಮೈಯಲ್ಲಿಯೂ ಹುಣ್ಣುಗಳಾದವು. ರಾಜನು ಬಹಳಷ್ಟು ಹಣವನ್ನು ವೆಚ್ಚಮಾಡಿ, ಉತ್ತಮ ವೈದ್ಯರಿಂದ ಚಿಕಿತ್ಸೆ ಮಾಡಿಸಿದನು. ಆದರೆ ಪ್ರಯೋಜನವೇನೂ ಆಗಲಿಲ್ಲ. ತಾಯಿ ಮಕ್ಕಳಿಬ್ಬರೂ ಒಂದೇ ಸಮನೆ ಆಕ್ರಂದನ ಮಾಡುವರು. ರಾಜನು ಕೊನೆಗೆ ಜುಗುಪ್ಸೆ ಹೊಂದಿ, "ಇವರು ಮಹಾದೋಷಿಗಳು; ಈ ಪಾಪಗಳು ಭೋಗಿಸಿದ್ದಲ್ಲದೆ ಶರೀರವನ್ನು ಬಿಡಲಾರವು" ಎಂದು ತೀರ್ಮಾನಿಸಿ, ಅವರನ್ನು ನೋಡಲಾರದೆ, ದೂರದ ನಿರ್ಜನವಾದ ಅರಣ್ಯಕ್ಕೆ ಕಳಿಸಿಬಿಟ್ಟನು. ಸುಮತಿಯು ದುಃಖಿಸುತ್ತ, ಮಗುವನ್ನು ಎತ್ತಿಕೊಂಡು ನಿಧಾನವಾಗಿ ಹೋಗುತ್ತ, ಭಿಕ್ಷೆ ಬೇಡುತ್ತ ಜೀವನ ಸಾಗಿಸುತ್ತಿದ್ದಳು. ವ್ಯಾಧಿಯು ಹೆಚ್ಚುತ್ತ ಬಂದು, ಒಂದು ದಿನ ಮಗುವು ಮರಣಕ್ಕೆ ಈಡಾಯಿತು. ರಾಜಪತ್ನಿಯ ಪ್ರಲಾಪಕ್ಕೆ ಮಿತಿಯೇ ಇರಲಿಲ್ಲ. ಈ ವಿಧವಾಗಿ ಶೋಕಿಸುತ್ತಿರುವಾಗ ಋಷಭಯೋಗಿಗಳು ಅಲ್ಲಿಗೆ ಬಂದರು. ಆ ಮಹಾಜ್ಞಾನಿಯು ಪೂರ್ವಜನ್ಮದ ಉಪಕಾರಕ್ಕಾಗಿಯೇ ಅಲ್ಲಿಗೆ ಬಂದರೆನ್ನಬಹುದು. ರಾಜಪತ್ನಿಗೆ ಅನೇಕ ವಿಧವಾಗಿ ಉಪದೇಶ ಮಾಡಿ, ಭಸ್ಮವನ್ನು ತೆಗೆದು ಹೆಣದ ಹಣೆಗೆ ಹಚ್ಚಿ, ಬಾಯಲ್ಲಿಯೂ ಹಾಕಿದರು. ಕೂಡಲೇ ಮಗುವು ಅಳಹತ್ತಿತು. ರಾಣಿಯು ಮಗುವನ್ನು ಅಪ್ಪಿಕೊಂಡಳು. ಯೋಗಿಯ ದರ್ಶನದಿಂದಲೇ ಅವರಿಬ್ಬರ ಮೈಮೇಲಿನ ಹುಣ್ಣುಗಳೂ ಮಾಯವಾದವು. ಈ ವಿಷಯವನ್ನು ತಿಳಿದ ರಾಜನು, ಅವರನ್ನು ಮತ್ತೆ ಅರಮನೆಗೆ ಕರೆಸಿಕೊಂಡನು. ಋಷಭರು ಹೀಗೆ ಪೂರ್ವಾಪರಜ್ಞಾನಿಗಳೂ ಮತ್ತು ಭಕ್ತಪೋಷಕರೂ ಆಗಿದ್ದರು.

ನಂ. ೧೧, ಎ.ಜಿ. ಲೇಔಟ್, ನ್ಯೂ ಬಿಇಎಲ್ ರಸ್ತೆ,
ಬೆಂಗಳೂರು-೫೬೦ ೦೫೪.

**ಶ್ರೀ ಸಿದ್ಧೇಶ್ವರಸ್ವಾಮಿಗಳ ಪ್ರವಚನಗಳಿಂದ ಆಯ್ದ ಕಥೆಗಳು**

# ಜಗನ್ಮಿತ್ರ



ಓರ್ವ ವೃದ್ಧ ಭಕ್ತ ಒಬ್ಬಂಟಿಗ. ಆತಿಥ್ಯಕ್ಕೆ ಹೆಸರಾದ ವಿಶಾಲ ಮನೆ, ಅವನದು. ಒಂದು ದಿನ ವಿಪರೀತ ಮಳೆ. ರಾತ್ರಿ ಸಮಯ. ಭಕ್ತನು ಬಾಗಿಲು ಹಾಕಿ ಮಲಗಿದ. ಮಧ್ಯ ರಾತ್ರಿ ಯಾರೋ ಬಾಗಿಲು ತಟ್ಟಿದರು. ಭಕ್ತ ಬಾಗಿಲು ತೆಗೆದ. ಹೊರಗೆ ಒಬ್ಬ ಯಾತ್ರಿಕ ಮುದುಕ ನೆನೆನೆದು ನಡಗುತ್ತಿದ್ದ. ಭಕ್ತ ಆತನನ್ನು ಒಳಗೆ ಕರೆದು ಊಟಕ್ಕೆ ಬಡಿಸಿದ. ತಡಮಾಡದೆ ಯಾತ್ರಿಕನು ತಟ್ಟೆಗೆ ಕೈ ಹಾಕಿದ. "ತಡೆ, ದೇವರ ಹೆಸರನ್ನು ತೆಗೆದುಕೋ!" ಎಂದ ಭಕ್ತ. "ಊಟಕ್ಕಾಗಿ ದೇವರನ್ನು ಏಕೆ ನೆನೆಯಬೇಕು?" ಎಂದ ಯಾತ್ರಿಕ. "ಹಾಗಾದರೆ ನಿನಗೆ ಈ ಮನೆಯಲ್ಲಿ ಅನ್ನವಿಲ್ಲ-ಆಶ್ರಯವಿಲ್ಲ" ಎಂದು ಭಕ್ತನು ಯಾತ್ರಿಕನನ್ನು ಹೊರಗೆ ಹಾಕಿದ.

ಅದೇ ದಿನ ರಾತ್ರಿ ಭಗವಂತನು ವೃದ್ಧನಾಗಿ ಭಕ್ತನ ಕನಸಿನಲ್ಲಿ ಕಾಣಿಸಿದ. "ಯಾರು ನೀನು?" ಎಂದು ಭಕ್ತ ಕೇಳಿದ. "ನಾನು ಭಗವಂತ" ಎಂದ ವೃದ್ಧ. "ಅದೇಕೆ ತಂದೆ ನಡಗುತ್ತಿರುವೆಯಲ್ಲ" ಎಂದು ಭಕ್ತ ಭಗವಂತನಿಗೆ ಕೇಳಿದ. "ಹೌದು, ಏನು ಮಾಡಲಿ? ನಿನ್ನೆ ನೀನು ಹೊರಗೆ ಹಾಕಿದ ಮೇಲೆ ರಾತ್ರಿ ಇಡೀ ನಾನು ಮಳೆಯಲ್ಲಿ ನೆನೆದು ಹೋದೆ!" "ಹಾಗಾದರೆ ರಾತ್ರಿ ವೃದ್ಧನ ರೂಪದಲ್ಲಿ ಬಂದವ ನೀನೇ ಏನು?" ಎಂದು ಭಕ್ತ ಕೇಳಿದ. "ಹೌದು ನಾನೇ! ಆ ವೃದ್ಧನಿಗೆ ನಾನು 70 ವರ್ಷ ಅನ್ನ ಕೊಟ್ಟು ಆಶ್ರಯವನ್ನಿತ್ತು ಕಾಪಾಡಿದ್ದೆ. ನೀನು ಒಂದು ದಿನ ಅವನಿಗೆ ಆಶ್ರಯ ಕೊಡಲಿಲ್ಲವೇಕೆ?" ಎಂದು ಭಗವಂತ ನುಡಿದಾಗ ಭಕ್ತನ ಕಣ್ಣು ತೆರೆದಿತ್ತು! ದೇವನು ದಯಾಸಾಗರನು, ಜಗನ್ಮಿತ್ರನು ಎಂಬ ಅರಿವಾಗಿತ್ತು! ●

ಸಂಗ್ರಹ: ಡಾ॥ ಶ್ರದ್ಧಾನಂದಸ್ವಾಮಿ



ಗುರುವಾಯೂರು ಕೃಷ್ಣನ ಮಹಾಭಕ್ತರಾದ ಮಹಾಕವಿ **ಮೇಪ್ಪತ್ತೂರು ನಾರಾಯಣ ಭಟ್ಟತ್ತಿರಿ**ಯವರ ಮಹಾನ್ ಭಕ್ತಿಕಾವ್ಯ 'ನಾರಾಯಣೀಯಮ್' ಈ ಸಂಚಿಕೆಯಿಂದ ಆರಂಭಿಸಿದ್ದೇವೆ. ಸ್ವತಃ ಸನಾತನ ಧರ್ಮದ ಶ್ರದ್ಧಾವಂತ ಅನುಯಾಯಿಗಳಾದ **ಶ್ರೀ ಬಿಂಡಿಗನವಿಲೆ ನಾರಾಯಣಸ್ವಾಮಿ** ಇದರ ಅನುವಾದಕರು.



# ನಾರಾಯಣೀಯಮ್

### ಸರ್ಗ: 6

## ಭಗವದ್ರೂಪಿನಲ್ಲಿ ಸಮಗ್ರ ವಿಶ್ವ

**ಏವಂ ಚತುರ್ದಶ ಜಗನ್ಮಯತಾಂ ಗತಸ್ಯ**
**ಪಾತಾಲ ಮೀಶ ತವ ಪಾದತಲಂ ವದಂತಿ ।**
**ಪಾದೋರ್ಧ್ವದೇಶಮಪಿ ದೇವ ರಸಾತಲಂ ತೇ**
**ಗುಲ್ಫದ್ವಯಂ ಖಲಂ ಮಹಾತಲಮದ್ಭುತಾತ್ಮನಾ ॥1॥**

ಭಗವನ್! ಈ ರೀತಿಯಾಗಿ ಹದಿನಾಲ್ಕು ಲೋಕಗಳ ರೂಪದಲ್ಲಿ ಹೊರಬಂದ ನಿನ್ನ ಪಾದದ ತಳವನ್ನು ಪಾತಾಳವೆಂದು ಹೇಳುತ್ತಾರೆ. ಹೇ ದೇವ! ನಿನ್ನ ಪಾದದ ಮೇಲ್ಭಾಗವನ್ನು ರಸಾತಳವೆಂದು, ಹೇ ಅದ್ಭುತಾತ್ಮನೇ ! ನಿನ್ನ ಪಾದದ ಮೇಲಿನ ಮಣಿಗಂಟುಗಳೆರಡನ್ನು ಮಹಾತಳವೆಂದು ಹೇಳುತ್ತಾರೆ. (1)

**ಜಙ್ಘೇ ತಲಾತಲಮಥೋ ಸುತಲಂ ಜಾನೂ**
**ಕಿಂಚೋರುಭಾಗಯುಗಲಂ ವಿತಲಾತಲೇ ದ್ವೇ ।**
**ಕ್ಷೋಣೀತಲಂ ಜಘನ ಮಂಬರಮಂಗ ನಾಭಿ–**
**ರ್ವಕ್ಷಶ್ಚ ಶಕ್ರನಿಲಯಸ್ತವ ಚಕ್ರಪಾಣೇ ॥ 2 ॥**

ಚಕ್ರಪಾಣಿಯಾದ ಪ್ರಭುವೇ ! ನಿನ್ನೆರಡು ಕಿರುತೊಡೆಗಳು ತಲಾತಲವಾಗಿ, ಮೊಣಕಾಲುಗಳೆರಡೂ ಸುತಲವಾಗಿ ಹಾಗೂ ತೊಡೆಗಳೆರಡೂ ವಿತಲ ಮತ್ತು ಅತುಲವೆಂಬ ಎರಡು ಲೋಕಗಳಾಗಿ, ನಿನ್ನ ಪೃಷ್ಠವು ಭೂಲೋಕವಾಗಿ, ಹೊಕ್ಕಳು ಭುವರ್ಲೋಕವಾಗಿ, ಎದೆಯು ಸ್ವರ್ಲೋಕವಾಗಿದೆ. (2)



ಕನ್ನಡಾನುವಾದ:
ಬಿಂಡಿಗನವಿಲೆ ನಾರಾಯಣಸ್ವಾಮಿ

**ಗ್ರೀವಾ ಮಹಸ್ತವ ವ ಮುಖಂ ಚ ಮನಸ್ತಪಸ್ತು**
**ಫಾಲಂ ಶಿರಸ್ತವ ಸಮಸ್ತ ಮಯಸ್ಯ ಸತ್ಯಂ ।**
**ಏವಂ ಜಗನ್ಮಯತನೋ ಜಗದಾಶ್ರಿತೈರ–**
**ಪ್ಯನ್ಯೈರ್ನಿಬದ್ಧವಪುಷೇ ಭಗವನ್ ನಮಸ್ತೇ ॥ 3 ॥**

ನಿನ್ನ ಕೊರಳು ಮಹರ್ಲೋಕವಾಗಿದ್ದು, ಮುಖವು ಜನಲೋಕ, ಹಣೆಯು ತಪೋಲೋಕ ಹಾಗೂ ಸಮಸ್ತವೂ ಆಗಿರುವ ನಿನ್ನ ಶಿರವು ಸತ್ಯಲೋಕವಾಗಿದೆ. ಹೇ ಜಗತ್ತೇ ಶರೀರವಾಗಿರುವ ಭಗವಂತ! ಈ ರೀತಿಯಾಗಿ ಜಗತ್ತನ್ನು ಆಶ್ರಯಿಸಿರುವ ಇತರ ಅವಯವಗಳ ಮೂಲಕವು ಸಂಪಾದಿಸಲ್ಪಟ್ಟ ಶರೀರವನ್ನು ಪಡೆದವನೇ! ನಿನಗೆ ನಮಸ್ಕಾರ. (3)

**ತ್ವದ್ಬ್ರಹ್ಮರಂಧ್ರ ಪದಮೀಶ್ವರ ವಿಶ್ವಕಂದ**
**ಛಾಂದಾಂಸಿ ಕೇಶವ ಘನಾಸ್ತವ ಕೇಶಪಾಶಾಃ ।**
**ಉಲ್ಲಾಸಿಚಿಲ್ಲಿಯುಗಲಂ ದ್ರುಹಿಣಸ್ಯಂ ಗೇಹಂ**
**ಪಕ್ಷ್ಮಾಣಿ ರಾತ್ರಿದಿವಸೌ ಸವಿತಾ ಚ ನೇತ್ರೇ ॥ 4 ॥**

ಜಗತ್ ಕಾರಣನಾದ ಪ್ರಭುವೇ! ನಿನ್ನ ಸಹಸ್ರಾರವೆಂಬ ಬ್ರಹ್ಮರಂಧ್ರ ಪದವೇ ವೇದಗಳು. ಹೇ ಕೇಶವ! ನಿನ್ನ ಸುಂದರ ಹುಬ್ಬುಗಳೇ ಬ್ರಹ್ಮನ ವಾಸಸ್ಥಾನ, ಕಣ್ಣುರೆಪ್ಪೆಗಳೇ ರಾತ್ರಿ ಮತ್ತು ಹಗಲು ಹಾಗೂ ಕಣ್ಣುಗಳೇ ಸೂರ್ಯ. (4)

**ನಿಶ್ಶೇಷ ವಿಶ್ವರಚನಾ ಚ ಕಟಾಕ್ಷ ಮೋಕ್ಷಃ**
**ಕರ್ಣೌದಿಶೋಽಶ್ವಿಯುಗಲಂ**
**ತವ ನಾಸಿಕೇ ದ್ವೇ ।**
**ಲೋಭತ್ರಪೇ ಚ ಭಗವನ್ನಧರೋತ್ತರೋಷ್ಠೌ**
**ತಾರಾಗಣಾಶ್ಚ ದಶನಾಶ್ಯಮನಶ್ಚ ದಂಷ್ಟ್ರಾ ॥ 5 ॥**

ಹೇ ಭಗವನ್! ನಿನ್ನ ಕಡೆಗಣ್ಣನೋಟವೇ ಸಂಪೂರ್ಣ ವಿಶ್ವಸೃಷ್ಟಿಯ ಕಾರ್ಯ, ಕಿವಿಗಳೇ ದಿಕ್ಕುಗಳು, ನಿನ್ನೆರಡು ನಾಸಿಕಗಳೇ ಅಶ್ವಿನೀ ದೇವತೆಗಳು, ಕೆಳತುಟಿ ಹಾಗೂ ಮೇಲ್ತುಟಿಗಳೇ ಲೋಭ ಮತ್ತು ಲಜ್ಜೆ, ಹಲ್ಲುಗಳೇ ನಕ್ಷತ್ರ ಸಮೂಹ ಹಾಗೂ ದವಡೆ ಹಲ್ಲುಗಳೇ ಯಮ. (5)

**ಮಾಯಾ ವಿಲಾಸಹಸಿತಂ ಶ್ವಸಿತಂ ಸಮೀರೋ**
**ಜಿಹ್ವಾ ಜಲಂ ವಚನಮೀಶ ಶಕುಂತ ಪಂಕ್ತಿಃ ।**
**ಸಿದ್ಧಾದಯಃ ಸ್ವರಗಣಾ ಮುಖರಂಧ್ರಮಗ್ನಿ–**
**ರ್ದೇವಾ ಭುಜಾಃ ಸ್ತನಯುಗಂ ಧರ್ಮದೇವ ॥ 6 ॥**

ಹೇ ಒಡೆಯ! ನಿನ್ನ ಮೋಹಕವಾದ ನಗೆಯೇ ಮಾಯೆ, ಉಸಿರೇ ಗಾಳಿ, ನಾಲಗೆಯೇ ನೀರು, ನಿನ್ನ ವಚನಗಳಾದರೋ ಪಕ್ಷಿ ಸಂಕುಲ, ಷಡ್ಜಾದಿ ಸ್ವರ ಸಮೂಹಗಳೇ ಸಿದ್ಧಗಣಗಳು, ನಿನ್ನ ಮುಖ ರಂಧ್ರವೇ ಅಗ್ನಿ, ಭುಜಗಳೇ ದೇವತೆಗಳು, ನಿನ್ನೆರಡು ವಕ್ಷಗಳೇ ಧರ್ಮದೇವತೆಗಳು. (6)

**ಪೃಷ್ಠಂ ತ್ವಧರ್ಮ ಇಹದೇವ ಮನಃಸುಧಾಂಶು–**
**ರವ್ಯಕ್ತಮೇವ ಹೃದಯಾಂಬುಜಮಂಬುಜಾಕ್ಷ ।**
**ಕುಕ್ಷಿಃ ಸಮುದ್ರ ನಿವಹಾ ವಸನಂ ತು ಸಂಧ್ಯೇ**

**ಶೇಷಃ ಪ್ರಜಾಪತಿರಸೌ ವೃಷಣೌ ಚ ಮಿತ್ರಃ ॥ 7 ॥**

ಕಮಲಗಣ್ಣಿನ ಒಡೆಯ! ನಿನ್ನ ಬೆನ್ನು ಅಧರ್ಮ, ವಿರಾಟದೇಹದಲ್ಲಿ ನಿನ್ನ ಮನಸ್ಸೇ ಚಂದ್ರ, ಹೃದಯಕಮಲವೇ ಅವ್ಯಕ್ತ, ಹೊಟ್ಟೆಯೇ ಸಮುದ್ರದ ಸಮೂಹಗಳು, ವಸ್ತ್ರವಾದರೋ ಎರಡು ಸಂಧ್ಯೆಗಳು, ನಿನ್ನ ಜನನೇಂದ್ರಿಯವೇ ಪ್ರಜಾಪತಿಬ್ರಹ್ಮ, ನಿನ್ನ ಎರಡು ವೃಷಣಗಳೇ ಮಿತ್ರದೇವತೆಗಳು. (7)

**ಶ್ರೋಣೀಸ್ಥಲಂ ಮೃಗಗಣಾಃ ಸದಯೋರ್ನಖಾಸ್ತೇ**
**ಹಸ್ತ್ಯುಷ್ಟ್ರಸೈಂಧವ ಮುಖಾ ಗಮನಂ ತು ಕಾಲಃ ।**
**ವಿಪ್ರಾದಿ ವರ್ಣಭವನಂ ವದನಾಬ್ಜ ಬಾಹು–**
**ಚಾರೂರುಯುಗ್ಮ ಚರಣಂ ಕರುಣಾಂಬುಧೇ ತೇ ॥ 8 ॥**

ಹೇ ಕರುಣಾಸಾಗರ! ನಿನ್ನ ಕಟಿ ಪ್ರದೇಶವೇ ಮೃಗಗಳ ಸಮೂಹ, ಕಾಲಿನ ಉಗುರುಗಳೇ ಆನೆ, ಒಂಟೆ, ಕುದುರೆ ಮುಂತಾದವು, ನಿನ್ನ ಚಲಿಸುವಿಕೆಯೇ ಕಾಲ, ನಿನ್ನ ಮುಖಕಮಲ, ಬಾಹುಗಳು, ಸುಂದರವಾದ ತೊಡೆಗಳು ಹಾಗೂ ಎರಡು ಕಾಲುಗಳೇ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬೀ ಚತುರ್ವರ್ಣಗಳ ಉತ್ಪತ್ತಿ ಸ್ಥಾನ. (8)

**ಸಂಸಾರ ಚಕ್ರಮಯಿ ಚಕ್ರಧರ ಕ್ರಿಯಾಸ್ತೇ**
**ವೀರ್ಯಂ ಮಹಾಸುರಗಣೋಸ್ಥಿ ಕುಲಾನಿ ಶೈಲಾಃ ।**
**ನಾಡ್ಯಃ ಸರಿತ್ಸಮುದಯಸ್ತ ರವಶ್ಚ ರೋಮ**
**ಜೀಯಾದಿದಂ ವಪುರನಿರ್ವಚನೀಯಮೀಶ ॥ 9 ॥**

ಹೇ ಚಕ್ರಧರನಾದ ಪ್ರಭುವೇ! ನಿನ್ನ ಕ್ರಿಯೆಯೇ ಸಂಸಾರಚಕ್ರ; ನಿನ್ನ ವೀರ್ಯವೇ ಮಹಾ ಅಸುರರ ಸಮೂಹ; ನಿನ್ನ ಮೂಳೆಗಳೇ ಪರ್ವತಗಳು; ನಾಡಿಗಳೇ ನದಿಗಳು; ನಿನ್ನ ಕೂದಲೇ ಮರಗಳು. ಓ ಈಶ! ಅನಿರ್ವಚನೀಯವಾದ ನಿನ್ನ ವಿರಾಟ್‌ರೂಪಕ್ಕೆ ಜಯವಾಗಲಿ. (9)

**ಈದೃಗ್ಜ ಗನ್ಮಯ–ವಪುಸ್ತವ ಕರ್ಮಭಾಜಾಂ**
**ಕರ್ಮಾವಸಾನಸಮಯೇ ಸ್ಮರಣೀಯಮಾಹುಃ ।**
**ತಸ್ಯಾಂತರಾತ್ಮವಪುಷೇ ವಿಮಲಾತ್ಮನೇ ತೇ**
**ವಾತಲಯಾಧಿಪ ನಮೋಽಸ್ತು ನಿರುಂಧಿ ರೋಗಾನ್ ॥ 10 ॥**

ಇಂತಹ ನಿನ್ನ ವಿರಾಟ್‌ರೂಪವಾದ ಶರೀರ, ಕರ್ಮಮಾರ್ಗವನ್ನು ಅನುಸರಿಸುವ ಎಲ್ಲ ಜೀವಗಳಿಗೂ ಕರ್ಮಕಳೆಯುವ ಸಮಯದಲ್ಲಿ ಸ್ಮರಣೆಗೆ ಯೋಗ್ಯವಾದದ್ದು ಎಂದು ಹೇಳಲ್ಪಡುತ್ತದೆ. ಗುರುವಾಯೂರಪ್ಪ! ವಿರಾಟ್ ರೂಪದಲ್ಲಿ ಅಂತರಾತ್ಮನಾಗಿ ಶುದ್ಧ ಸತ್ತ್ವದಿಂದ ಇರುವ ವಿಮಲಾತ್ಮನೇ, ನಿನಗೆ ನಮಸ್ಕಾರ. ನನ್ನ ರೋಗವನ್ನು ಗುಣಪಡಿಸು. (10)

**ಸರ್ಗ: 7**

## ಸೃಷ್ಟಿ ಮಾಡಲು ಬ್ರಹ್ಮನಿಗೆ ಆಜ್ಞೆ

**ಏವಂ ದೇವ ಚತುರ್ದಶಾತ್ಮಕ–ಜಗದ್ರೂಪೇಣ ಜಾತಃ ಪುನ–**
**ಸ್ತಸ್ಯೋರ್ಧ್ವಂ ಖಲು ಸತ್ಯಲೋಕನಿಲಯೇ ಜಾತೋಽಸಿ ಧಾತಾ ಸ್ವಯಂ ।**
**ಯಂ ಶಂಸಂತಿ ಹಿರಣ್ಯಗರ್ಭಮಖಿಲ–ತ್ರೈಲೋಕ್ಯ–ಜೀವಾತ್ಮಕಂ**
**ಯೋಽಭೂತ್ ಸ್ಫೀತರಜೋ–ವಿಕಾರ–ವಿಕಸನ್ನಾನಾ–ಸಿಸೃಕ್ಷಾರಸಃ॥1॥**

ಹೇ ದೇವ! ಈ ರೀತಿ ಹದಿನಾಲ್ಕು ಲೋಕಗಳ ರೂಪದಲ್ಲಿ ನೀನು ಆವಿರ್ಭವಿಸಿ, ಮತ್ತೆ ನೀನೇ ಅವುಗಳ ಮೇಲಿರುವ ಸತ್ಯಲೋಕದಲ್ಲಿ ಸೃಷ್ಟಿಕರ್ತನಾದ ಬ್ರಹ್ಮನಾಗಿ ಜನಿಸಿದೆ. ಅವನನ್ನು ಮೂರು ಲೋಕಗಳಲ್ಲಿರುವ ಜೀವಗಳ ಆತ್ಮವೆಂದೂ ಹಿರಣ್ಯ ಗರ್ಭನೆಂದೂ ಗುಣಗಾನ ಮಾಡಲಾಯಿತು. ಆ ಬ್ರಹ್ಮನು ರಜೋಗುಣದ ಉದ್ದೀಪನದಿಂದ ನಾನಾ ವಿಧವಾದ ಸೃಷ್ಟಿ ರಚನೆಯಲ್ಲಿ ತೊಡಗಬಯಸಿದ. (1)

**ಸೋಽಯಂ ವಿಶ್ವವಿಸರ್ಗ–ದತ್ತ ಹೃದಯಃ ಸಂಪಶ್ಯಮಾನಃ ಸ್ವಯಂ**
**ಬೋಧಂ ಖಲ್ವನವಾಪ್ಯ ವಿಶ್ವವಿಷಯಂ ಚಿಂತಾಕುಲಸ್ತಸ್ಥಿವಾನ್।**
**ತಾವತ್ ತ್ವಂ ಜಗತಾಂ ಪತೇ ತಪತಪೇತ್ಯೇವಂ ಹಿ ವೈಹಾಯಸೀಂ**
**ವಾಣೀಮೇನಮಶಿಶ್ರವಃ ಶ್ರುತಿಸುಖಾಂ ಕುರ್ವಂಸ್ತಪಃ ಪ್ರೇರಣಾಂ ॥2॥**



ಆ ಬ್ರಹ್ಮನು ವಿಶ್ವದ ಸೃಷ್ಟಿಗೆ ಉತ್ಸುಕನಾಗಿದ್ದರೂ ಅದರ ಬಗ್ಗೆ ತಾನು ಚಿಂತಿಸಿದರೂ ವಿಶ್ವದ ಬಗ್ಗೆ ಯಾವುದೇ ಜ್ಞಾನವೂ ಉಂಟಾಗದಿರಲು ಚಿಂತಾಕುಲನಾದ. ಹೇ ಜಗತ್ಪತಿಯೇ! ಆಗ ನೀನು ಅವನಿಗೆ ತಪಸ್ಸನ್ನು ಮಾಡುವಂತೆ ಪ್ರಚೋದಿಸುತ್ತಾ 'ತಪಸ್ಸು ಮಾಡು, ತಪಸ್ಸು ಮಾಡು' ಎಂಬುದಾಗಿ ಕಿವಿಗೆ ಮಧುರವಾಗಿರುವಂತೆ ಆಕಾಶವಾಣಿಯ ಮೂಲಕ ಅವನು ಕೇಳುವಂತೆ ಮಾಡಿದೆ. (2)

**ಕೋಽಸೌ ಮಾಮವದತ್ ಪುಮಾನಿತಿ ಜಲಪೂರ್ಣೇ ಜಗನ್ಮಂಡಲೇ**
**ದಿಕ್ಷೂದ್ವೀಕ್ಷ್ಯ ಕಿಮಪ್ಯನೀಕ್ಷಿತವತಾ ವಾಕ್ಯಾರ್ಥಮುತ್ಪಶ್ಯತಾ ।**
**ದಿವ್ಯಂ ವರ್ಷಸಹಸ್ರಮಾತ್ತತಪಸಾ ತೇನ ತ್ವಮಾರಾಧಿತ–**
**ಸ್ತಸ್ಮೈ ದರ್ಶಿತವಾನಸಿ ಸ್ವನಿಲಯಂ ವೈಕುಂಠಮೇಕಾದ್ಭುತಂ ॥3॥**

'ಯಾರು ಆ ವ್ಯಕ್ತಿ–ಈ ರೀತಿ ನುಡಿದಿದ್ದು?' ಎಂಬುದಾಗಿ ಜಲಾವೃತವಾದ ಜಗನ್ಮಂಡಲದಲ್ಲಿ ಬ್ರಹ್ಮನು ಎಲ್ಲ ದಿಕ್ಕುಗಳಲ್ಲಿಯೂ ತನ್ನ ದೃಷ್ಟಿಯನ್ನು ಹರಿಸಿ ಯಾರೂ ಕಾಣದಿರಲು, ಅಶರೀರವಾಣಿಯ ವಾಕ್ಯದ ಅರ್ಥವನ್ನು ಅರಿತು ಒಂದು ಸಾವಿರ ದಿವ್ಯವರ್ಷಗಳ ಕಾಲ ತಪಸ್ಸು ಮಾಡಿದಾಗ ಅವನಿಂದ ಆರಾಧಿತನಾದ ನೀನು ನಿನ್ನ ನಿಲಯವಾದ ಏಕಮೇವಾದ್ವಿತೀಯವೂ ಅದ್ಭುತವೂ ಆದ

ವೈಕುಂಠವನ್ನು ಅವನಿಗೆ ತೋರಿದೆ. (3)

**ಮಾಯಾ ಯತ್ರ ಕಲಾಪಿ ನೋ ವಿಕುರುತೇ ಭಾತೇ ಜಗದ್ಭ್ಯೋ ಬಹಿಃ**
**ಶೋಕ-ಕ್ರೋಧ-ವಿಮೋಹ-ಸಾಧ್ವಸಮುಖಾ ಭಾವಾಸ್ತು ದೂರಂ ಗತಾಃ ।**
**ಸಾಂದ್ರಾನಂದಝರೀ ಚ ಯತ್ರ ಪರಮ ಜ್ಯೋತಿಃ ಪ್ರಕಾಶಾತ್ಮಕೇ**
**ತತ್ತೇಧಾಮ ವಿಭಾವಿತಂ ವಿಜಯತೇ ವೈಕುಂಠರೂಪಂ ವಿಭೋ ॥4॥**

ಹೇ ವಿಭುವೇ! ಹದಿನಾಲ್ಕು ಲೋಕಗಳ ಹೊರಗೆ ಪ್ರಕಾಶಿಸುತ್ತಿರುವ, ಮಾಯೆಯು ಯಾವುದೇ ವಿಕಾರ ಉಂಟು ಮಾಡದಿರುವ, ಶೋಕ, ಕ್ರೋಧ, ಮೋಹ, ಭಯ ಮುಂತಾದ ಮನೋವಿಕಾರಗಳು ದೂರ ಇರುವ, ಪರಮಜ್ಯೋತಿರ್ಮಯವಾದ ಸಚ್ಚಿದಾನಂದವು ಪ್ರಕಾಶಿಸುತ್ತಿರುವ, ಹೆಪ್ಪುಗಟ್ಟಿದ ಆನಂದ ಪ್ರವಹಿಸುತ್ತಿರುವ ನಿನ್ನ ಧಾಮವಾದ ವೈಕುಂಠವನ್ನು ಬ್ರಹ್ಮನಿಗೆ ತೋರಿದೆ. (4)

**ಯಸ್ಮಿನ್ ನಾಮ ಚತುರ್ಭುಜಾ ಹರಿಮಣಿಶ್ಯಾಮಾವದಾತತ್ವಿಷೋ**
**ನಾನಾಭೂಷಣ-ರತ್ನದೀಪಿತ ದಿಶೋ ರಾಜದ್ವಿಮಾನಾಲಯಾಃ ।**
**ಭಕ್ತಿ ಪ್ರಾಪ್ತ-ತಥಾವಿಧೋನ್ನತ ಪದಾ ದೀವ್ಯಂತಿ ದಿವ್ಯಾ ಜನಾ-**
**ಸ್ತತ್ತೇ ಧಾಮ ನಿರಸ್ತಸರ್ವಶಮಲಂ ವೈಕುಂಠರೂಪಂ ಜಯೇತ್ ॥5॥**

ಆ ವೈಕುಂಠದಲ್ಲಿ ಚತುರ್ಭುಜಗಳಿಂದ ಕೂಡಿದ ಇಂದ್ರನೀಲಮಣಿ ಸದೃಶವಾದ ಶ್ಯಾಮಲಕಾಂತಿಯಿಂದ ಕಂಗೊಳಿಸುತ್ತಿರುವ, ದಿಕ್ಕುಗಳನ್ನೇ ಬೆಳಗಿಸುವ, ನಾನಾ ವಿಧವಾದ ಭೂಷಣಗಳಿಂದ ಹಾಗೂ ರತ್ನಗಳಿಂದ ವಿಜೃಂಭಿಸುತ್ತಿರುವ, ಭವ್ಯವಾದ ವಿಮಾನಗಳನ್ನೇ ಆಲಯವನ್ನಾಗಿ ಮಾಡಿಕೊಂಡ, ತಮ್ಮ ಏಕಾಂತ ಭಕ್ತಿಯಿಂದ ಅತ್ಯುಚ್ಚ ಪದವಿಯನ್ನು ಪಡೆದ ದೇವತೆಗಳು ಪ್ರಕಾಶಿಸುತ್ತಿದ್ದು, ಸಮಸ್ತಪಾಪ ರಹಿತವಾದ, ನಿನ್ನ ಧಾಮವಾದ ಆ ವೈಕುಂಠಕ್ಕೆ ಜಯವಾಗಲಿ. (5)

**ನಾನಾ ದಿವ್ಯ ವಧೂ ಜನೈರಭಿವೃತಾ ವಿದ್ಯುಲ್ಲತಾ-ತುಲ್ಯಯಾ**
**ವಿಶ್ವೋನ್ಮಾದನ-ಹೃದ್ಯಗಾತ್ರಲತಯಾ ವಿದ್ಯೋತಿತಾಶಾಂತರಾ ।**
**ತ್ವತ್ಪಾದಾಂಬುಜ ಸೌರಭೈಕ ಕುತುಕಾಲ್ಲಕ್ಷ್ಮೀಃ ಸ್ವಯಂ ಲಕ್ಷ್ಯತೇ**
**ಯಸ್ಮಿನ್ ವಿಸ್ಮಯನೀಯ-ದಿವ್ಯವಿಭವಂ ತತ್ತ್ವೇ ಪದಂ ದೇಹಿ ಮೇ ॥6॥**

ಆ ವೈಕುಂಠದಲ್ಲಿ ನಾನಾ ದಿವ್ಯಾಂಗನೆಯರಿಂದ ಆವೃತವಾದ ಮಿಂಚಿನ ಬಳ್ಳಿಯನ್ನು ಹೋಲುವ, ವಿಶ್ವವನ್ನೇ ಉನ್ಮತ್ತಗೊಳಿಸುವ ಕಮನೀಯ ಲತೆಯಂತೆ ಆಕರ್ಷಣೆಯುಳ್ಳ ಶರೀರದಿಂದ ಕೂಡಿದ, ದಿಕ್ಕುಗಳನ್ನೇ ಬೆಳಗುವ, ಲಕ್ಷ್ಮಿಯು ನಿನ್ನ ಪಾದಕಮಲಗಳ ಸೌರಭವನ್ನು ಸವಿಯುವ ಕುತೂಹಲದಿಂದ ತಾನೇ ನೋಡುತ್ತಿರುವ, ವಿಸ್ಮಯನ್ನುಂಟುಮಾಡುವ ಆ ನಿನ್ನ ವೈಕುಂಠವನ್ನು ನನಗೆ ನೀಡು. (6)

**ತತ್ರೈವಂ ಪ್ರತಿದರ್ಶಿತೇ ನಿಜಪದೇ ರತ್ನಾಸನಾಧ್ಯಾಸಿತಂ**
**ಭಾಸ್ವತ್ಕೋಟಿ-ಲಸತ್ಕಿರೀಟ-ಕಟಾಕ್ವಾದ್ಯಾಕಲ್ಪ-ದೀಪ್ರಾ ಕೃತಿ ।**
**ಶ್ರೀವತ್ಸಾಂಕಿತ-ಮಾತ್ತ ಕೌಸ್ತುಭಮಣಿ-ಚ್ಛಾಯಾರುಣಂ ಕಾರಣಂ**
**ವಿಶ್ವೇಷಾಂ ತವ ರೂಪಮೈಕ್ಷತ ವಿಧಿಸ್ತತ್ತೇ ವಿಭೋ ಭಾತು ಮೇ॥7॥**

ಈ ರೀತಿ ಪ್ರದರ್ಶಿತವಾದ ಆ ನಿನ್ನ ಆಲಯದಲ್ಲಿ ರತ್ನ ಸಿಂಹಾಸನದಲ್ಲಿ ವಿರಾಜಮಾನನಾಗಿರುವ ಕೋಟ್ಯಂತರ ಸೂರ್ಯ ಪ್ರಕಾಶದಲ್ಲಿ ಹೊಳೆಯುತ್ತಿರುವ ಕಿರೀಟ, ಕಂಕಣ ಮುಂತಾದ ಅಂಗಭೂಷಣಗಳಿಂದ ಶೋಭಾಯಮಾನವಾದ, ಶ್ರೀವತ್ಸ ಚಿಹ್ನೆಯುಳ್ಳ, ಕೌಸ್ತುಭಮಣಿಯಿಂದ ಕೆಂಪಾದ ವಕ್ಷಸ್ಥಳದಿಂದ ಪ್ರಕಾಶಿಸುತ್ತಿರುವ, ಎಲ್ಲದಕ್ಕೂ ಮೂಲಕಾರಣನಾದ ನಿನ್ನ ದಿವ್ಯ ಮಂಗಳ ರೂಪವನ್ನು ಬ್ರಹ್ಮನು ನೋಡಿದ. ಹೇ ವಿಭುವೇ! ಆ ಸೌಭಾಗ್ಯವನ್ನು ನನಗೂ ಕರುಣಿಸು. (7)

**ಕಾಲಾಂಭೋದ-ಕಲಾಯ ಕೋಮಲರುಚೀ ಚಕ್ರೇಣ ಚಕ್ರಂ ದಿಶಾ-**
**ಮಾವೃಣ್ವಾನ-ಮುದಾರಮಂದಹಸಿತ-ಸ್ಯಂದ ಪ್ರಸನ್ನಾನನಂ ।**
**ರಾಜತ್ಕಂಬುಗದಾರಿಪಂಕಜಧರ-ಶ್ರೀಮದ್ಭುಜಾಮಂಡಲಂ**
**ಸ್ರಷ್ಟುಸ್ತುಷ್ಟಿಕರಂ ವಪುಸ್ತವ ವಿಭೋ ಮದ್ರೋಗಮುದ್ವಾಸಯೇತ್ ॥8॥**

ಹೇ ವಿಭುವೇ! ಕಾರ್ಮೋಡದ ನೀಲವರ್ಣದಂತೆ ಹಾಗೂ ನೀಲ ನೈದಿಲೆ ಹೂವಿನಂತೆ ಕಮನೀಯವಾದ ಶ್ಯಾಮ ಕಾಂತಿಯಿಂದ ಕೂಡಿ, ಎಲ್ಲ ದಿಕ್ಕುಗಳಲ್ಲೂ ಆವರಿಸಿರುವ, ಉದಾರವಾದ ಮುಗುಳುನಗೆಯಿಂದ ತುಂಬಿದ ಪ್ರಸನ್ನವಾದ ಮುಖವುಳ್ಳ, ಬೆಳಗುತ್ತಿರುವ ಶಂಖ, ಚಕ್ರ, ಗದೆ ಹಾಗೂ ಕಮಲಗಳಿಂದ ಕೂಡಿದ ಚತುರ್ಭುಜಗಳಿಂದ ಶೋಭಿಸುತ್ತಿರುವ, ಬ್ರಹ್ಮನಿಗೆ ಆನಂದವನ್ನು ನೀಡಿದ, ನಿನ್ನ ದಿವ್ಯ ಮಂಗಳ ವಿಗ್ರಹವು ನನ್ನ ರೋಗವನ್ನು ನಾಶಮಾಡಲಿ. (8)

**ದೃಷ್ಟ್ವಾ ಸಂಭೃತ-ಸಂಭ್ರಮಃ ಕಮಲಭೂಸ್ತ್ವತ್ಪಾದ ಪಾಥೋರುಹೇ**
**ಹರ್ಷಾವೇಶ-ವಶಂವದೋ ನಿಪತಿತಃ ಪ್ರೀತ್ಯಾ ಕೃತಾರ್ಥೀಭವನ್ ।**
**ಜಾನಾಸ್ಯೇವ ಮನೀಷಿತಂ ಮಮ ವಿಭೋ ಜ್ಞಾನಂ ತದಾಪಾದಯ**
**ದ್ವೈತಾದ್ವೈತ-ಭವತ್ಸ್ವರೂಪ ಪರಮಿತ್ಯಾ ಚಷ್ಟ ತಂ ತ್ವಾಂ ಭಜೇ ॥9॥**

ಹೇ ವಿಭುವೇ! ನಿನ್ನನ್ನು ಕಂಡು ಅತಿ ಸಂಭ್ರಮದಿಂದ ಕಮಲಜನಾದ ಬ್ರಹ್ಮನು ಹರ್ಷಾವೇಶದಲ್ಲಿ ಮುಳುಗಿ ನಿನ್ನ ಪಾದ ಕಮಲಗಳ ಮೇಲೆ ಬಿದ್ದು ಆನಂದದಿಂದ ತಾನು ಕೃತಾರ್ಥನಾದನೆಂದುಕೊಂಡು, 'ನನ್ನ ಇಚ್ಛೆಯು ನಿನಗೆ ತಿಳಿದೇ ಇದೆ. ನಿನ್ನ ದ್ವೈತ ಹಾಗೂ ಅದ್ವೈತ ಸ್ವರೂಪವಾದ ಆ ಜ್ಞಾನವನ್ನು ನನಗೆ ನೀಡು' ಎಂದು ಬೇಡಿದ. ಅಂತಹ ನಿನ್ನನ್ನು ನಾನು ಭಜಿಸುತ್ತೇನೆ. (9)

**ಆತಾಮ್ರೇ ಚರಣೇ ವಿನಮ್ರಮಥ ತಂ ಹಸ್ತೇನ ಹಸ್ತೇ ಸ್ಪೃಶನ್**
**ಬೋಧಸ್ತೇ ಭವಿತಾ ನ ಸರ್ಗವಿಧಿಭಿ-ರ್ಬಂಧೋಪಿ ಸಂಜಾಯತೇ ।**
**ಇತ್ಯಾಭಾಷ್ಯ ಗಿರಂ ಪ್ರತೋಷ್ಯ ನಿತರಾಂ ತಚಿತ್ತಗೂಢಃ ಸ್ವಯಂ**
**ಸೃಷ್ಟೌ ತಂ ಸಮುದೈರಯಃ ಭಗವನ್ನುಲ್ಲಾಸಯೋಲ್ಲಾಘತಾಂ ॥10॥**

ಅರುಣಕಾಂತಿಯಿಂದ ಕೂಡಿದ ನಿನ್ನ ಚರಣಗಳಲ್ಲಿ ಬಿದ್ದ ಬ್ರಹ್ಮನ ಕೈಯನ್ನು ನಿನ್ನ ಕೈಯಿಂದ ಸ್ಪರ್ಶಿಸುತ್ತಾ 'ನೀನು ಬೇಡಿದ ಜ್ಞಾನ ಪ್ರಾಪ್ತವಾಗಲಿ; ಸೃಷ್ಟಿಕಾರ್ಯದಲ್ಲಿ ನಿನಗೆ ಕರ್ಮ ಜನಿತವಾದ ಯಾವ ಬಂಧನವೂ ಉಂಟಾಗದಿರಲಿ' ಎಂಬುದಾಗಿ ನುಡಿದು ಅವನನ್ನು ಸಂಪೂರ್ಣವಾಗಿ ಆನಂದಗೊಳಿಸಿ ನೀನೇ ಅವನ ಹೃದಯದಲ್ಲಿ ಅಂತರಾತ್ಮನಾಗಿ ಉಳಿದು ಅವನನ್ನು ಸೃಷ್ಟಿಕಾರ್ಯಕ್ಕೆ ಪ್ರಚೋದಿಸಿದೆ. ಹೇ ಭಗವನ್! ಅಂತಹ ನೀನು ನನ್ನ ಆರೋಗ್ಯ ಕೂಡಲೇ ಸುಧಾರಿಸಿ ಉಲ್ಲಾಸಮಯವಾಗುವಂತೆ ಮಾಡು. (10)

**(ಮುಂದುವರಿಯುವುದು)**

# ೧೦೭, **"ಕೇಶವ ಕೃಪ" ೧೭ನೇ ಕ್ರಾಸ್, ೧ನೇ ಬ್ಲಾಕ್,**
**ರಾಜಾಜಿನಗರ, ಬೆಂಗಳೂರು-೫೬೦ ೦೧೦**

▶▶ 13ನೇ ಪುಟದಿಂದ

ಕಲ್ಯಾಣಿಯ ನೈರುತ್ಯ ದಿಕ್ಕಿನ ಕಡೆಗೆ ಕರೆದೊಯ್ಯಿತು. ಅಲ್ಲಿ ಒಂದು ಸಂಪಿಗೆಯ ತೋಪು. ಆ ಗುಂಪು ತ್ರಿದಂಡವನ್ನು ಅನುಸರಿಸುತ್ತಾ ಸಂಪಿಗೆ ತೋಪನ್ನು ಪ್ರವೇಶಿಸಿತು. ಒಂದು ಬಕುಳ ವೃಕ್ಷ. ಅದರ ಬಳಿ ದಕ್ಷಿಣ ದಿಕ್ಕಿಗೆ ತಿರುಗುವಂತೆ ಸೂಚಿಸಿತು. ಮುಂದೆ ಅವರು ಬಂದದ್ದು ಒಂದು ತುಳಸಿ ವನಕ್ಕೆ. ತುಳಸಿ ಗಿಡಗಳು ಯಥೇಚ್ಛವಾಗಿ ಬೆಳೆದಿದ್ದ ಆ ಸ್ಥಳದಲ್ಲಿ ಗಿಡಗಳ ಮಧ್ಯೆ ಒಂದು ಚೆನ್ನಾಗಿ ಬೆಳೆದ ಹುತ್ತ ಕಂಡಿತು. ಅಲ್ಲಿಗೆ ಕರೆದೊಯ್ದ ತ್ರಿದಂಡ ರಾಮಾನುಜರು ಆ ಹುತ್ತವನ್ನು ಮೂರು ಬಾರಿ ಪ್ರದಕ್ಷಿಣೆ ಮಾಡುವಂತೆ ಮಾಡಿತು. ಅವರು ತ್ರಿದಂಡವನ್ನು ಎರಡು ಕೈಗಳಲ್ಲೂ ನಮಸ್ಕಾರ ಮುದ್ರೆಯಲ್ಲಿ ಹಿಡಿದುಕೊಂಡು ಪರಮಭಕ್ತಿ ಪ್ರಪತ್ತಿಗಳೊಂದಿಗೆ ಪ್ರದಕ್ಷಿಣೆ ಮಾಡುತ್ತಿದ್ದರೆ ವಿಷ್ಣುವರ್ಧನನಿಂದ ಮೊದಲ್ಗೊಂದು ಅಲ್ಲಿದ್ದ ಗುಂಪಿನವರೆಲ್ಲರೂ ಉಸಿರುಗಟ್ಟಿ ನೋಡುತ್ತಿದ್ದರು.

ಮೂರು ಪ್ರದಕ್ಷಿಣೆಗಳ ಅನಂತರ ಹುತ್ತದ ಎದುರು ನಿಂತು ಶ್ರೀಮನ್ನಾರಾಯಣನ ಸ್ಮರಣೆ ಮಾಡುತ್ತಿದ್ದಂತೆ ಅವರಿಗೆ ಅವನು ಅಲ್ಲೇ ಇರುವಂತೆ ಭಾಸವಾಯಿತು. ಕೂಡಲೇ ಮಹಾರಾಜರತ್ತ ತಿರುಗಿ, "ಈ ಹುತ್ತಕ್ಕೆ ಕ್ಷೀರಾಭಿಷೇಕ ನಡೆಯಬೇಕು. ಸುತ್ತಮುತ್ತಲ ಹಳ್ಳಿಗಳಿಂದ ಎಷ್ಟು ಸಂಗ್ರಹಿಸಲು ಸಾಧ್ಯವೋ ಅಷ್ಟು ಕ್ಷೀರ ಕುಂಭಗಳನ್ನು ತರಲು ದಯಮಾಡಿ ಆದೇಶಿಸಬೇಕು" ಎಂದರು. ಸ್ವಲ್ಪ ಸಮಯದಲ್ಲೇ ಹಾಲಿನ ಮಡಕೆಗಳು ಸಾಲುಗಟ್ಟಿ ಬರಲಾರಂಭಿಸಿದವು. ಒಂದರ ಹಿಂದೆ ಒಂದರಂತೆ ಬಂದ ಹಾಲಿನ ಮಡಕೆಗಳು ಒಂದು ಕಡೆ ಇಡಲ್ಪಟ್ಟವು.

ಎಲ್ಲ ಒಟ್ಟು ಸೇರಿದ ಮೇಲೆ ಒಂದೂವರೆ ಆಳೆತ್ತರವಿದ್ದ ಹುತ್ತದ ಮೇಲೆ ಮಡಕೆಗಳಿಂದ ಹಾಲು ಸುರಿಯುವಂತೆ ರಾಮಾನುಜರು ಗ್ರಾಮಸ್ಥರಿಗೆ ಆದೇಶಿಸಿದರು. ಒಬ್ಬರ ಹಿಂದೆ ಒಬ್ಬರಂತೆ ಹೆಂಗಸರು ಗಂಡಸರು ಹಾಲು ಮಡಕೆಗಳನ್ನು ಹೊತ್ತು ಬಂದು ಹುತ್ತದ ಸುತ್ತ ನಿಂತು ಅದರೊಳಕ್ಕೆ ಹಾಲು ಸುರಿದು ಹೋಗಲಾರಂಭಿಸಿದರು. ಹಾಲು ಹುತ್ತದೊಳಕ್ಕೆ ಪ್ರವೇಶಿಸುತ್ತಿದ್ದಂತೆ ಅದರಲ್ಲಿ ಸರ್ಪಗಳು ಬುಳು ಬುಳನೆ ಹೊರಬರಲಾರಂಭಿಸಿದವು. ನೆರೆದಿದ್ದ ಜನ ಗಾಬರಿಗೊಂಡರು. ರಾಮಾನುಜರು ಅವರಿಗೆ ಶಾಂತರಾಗಿರಲು ಸೂಚಿಸಿ ಅವುಗಳನ್ನು ಅವುಗಳ ಪಾಡಿಗೆ ಹೋಗಲು ಬಿಟ್ಟುಬಿಡಿ ಎಂದರು. ರಾಮಾನುಜರ ಮಾತಿಗೆ ಮಂತ್ರಮುಗ್ಧರಾದಂತೆ ಅಲ್ಲಿ ನೆರೆದವರೆಲ್ಲರೂ ತಂತಮ್ಮ ಸ್ಥಳಗಳಲ್ಲಿ ನಿಂತರು. ಆದರೆ ಹುತ್ತಕ್ಕೆ ಕ್ಷೀರಾಭಿಷೇಕ ಮಾತ್ರ ಮುಂದುವರಿಯಿತು. ಹುತ್ತದ ಮಣ್ಣು ಕುಸಿದು ಹುತ್ತದೊಳಗಿನ ಮಣ್ಣು ಹಾಲಿನೊಂದಿಗೆ ಮಿಶ್ರಣಗೊಂಡಾಗ ರಾಮಾನುಜರು "ಆಹ್! ಶ್ರೀಮನ್ನಾರಾಯಣ ದರ್ಶನ ನೀಡಿದ" ಎಂದು ಉತ್ಸಾಹ ಸಂಭ್ರಮಗಳಿಂದ ಉದ್ಗರಿಸಿದರು. ಅಲ್ಲಿದ್ದವರೆಲ್ಲರೂ ಉತ್ತೇಜಿತರಾಗಿ ಕುತೂಹಲದಿಂದ ಈಗ ನೆಲಸಮಗೊಂಡಿದ್ದ ಹುತ್ತವಿದ್ದ ಸ್ಥಳದತ್ತ ನೋಡಲಾರಂಭಿಸಿದರು.

ಹೌದು! ಧ್ಯಾನಾವಸ್ಥೆಯಲ್ಲಿದ್ದಾಗ ರಾಮಾನುಜರು ಶ್ರೀಹರಿ ಹೇಳಿದ್ದ ಮಾತು ಸಾಕಾರಗೊಂಡಿತ್ತು. ಅವರಿಗೆ ಹಾಲಿನಿಂದ ಮುದ್ದೆಯಾಗಿದ್ದ ಮಣ್ಣಿನ ನಡುವೆ ಹುತ್ತದ ಕೆಳಭಾಗದಲ್ಲಿ ಮೂರ್ತಿಯ ಕಿರೀಟ ಭಾಗ ಗೋಚರಿಸಿ ಅವರಿಗೆ ರೋಮಾಂಚನ ಉಂಟುಮಾಡಿತ್ತು. ಅಂದು ಬಹುಧಾನ್ಯ ಸಂವತ್ಸರ ಮಕರಮಾಸ ಶುಕ್ಲ ಪಕ್ಷ ಚತುರ್ದಶಿ ಗುರುವಾರ! ಪುನರ್ವಸು ನಕ್ಷತ್ರ.

ಅವರೊಮ್ಮೆ ಜೈ ಶ್ರೀಮನ್ನಾರಾಯಣ! ಎಂದು ಉದ್ಘೋಷಿಸಿದರು. ಕೂಡಲೇ ಮಹಾರಾಜನೂ ಸೇರಿ ಅಲ್ಲಿ ನೆರೆದಿದ್ದ ಎಲ್ಲ ಜಾತಿ, ವರ್ಗಗಳ ಜನರೂ ಮೈಮರೆತು 'ಜೈ ಶ್ರೀಮನ್ನಾರಾಯಣ' ಎಂದು ಗಟ್ಟಿಯಾದ ದನಿಯಲ್ಲಿ ಉದ್ಘೋಷಿಸಿದರು. ದೇವರ ಮುಂದೆ ಸ್ಥಾನಮಾನ ಏನು ಬಂತು? ಜಾತಿ ಮತ ಏನು ಬಂತು. ರಾಜನಾಗಲೀ ರೈತನಾಗಲೀ ಭಿಕ್ಷುಕನಾಗಲೀ ಎಲ್ಲರೂ ಒಂದೇ. ಅವರಿಗೆಲ್ಲ ಇದ್ದಿದ್ದು ಒಂದೇ ಭಾವಬಂಧನ ಭಕ್ತಿಯೇ ಆಗಿತ್ತು.

ಹೀಗೆ ಎಲ್ಲರೂ ಭಾವಲೋಕದಲ್ಲಿ ಮುಳುಗಿರಲು ರಾಮಾನುಜರ ಮನಸ್ಸಿನಲ್ಲಿ 'ತಿರುಮಣ್!' ಎಂಬ ಪದದ ಹೊಳಹು ಉಂಟಾಯಿತು. ಅದು ಮನಸ್ಸಿಗೆ ಬರುತ್ತಿದ್ದಂತೆ ರಾಮಾನುಜರ ತ್ರಿದಂಡ ಅವರನ್ನು ಒಂದು ದಿಕ್ಕಿಗೆ ಸೆಳೆದಂತಾಯಿತು. ಎಲ್ಲರಿಗೂ ಅಲ್ಲಿಯೇ ಇರುವಂತೆ ಹೇಳಿ ರಾಮಾನುಜರು ತ್ರಿದಂಡ ಎಳೆಯುತ್ತಿದ್ದ ಕಡೆಗೆ ಹೆಜ್ಜೆ ಹಾಕಿದರು. ಅವರು ಹೋಗುತ್ತಿದ್ದ ದಾರಿಯಲ್ಲಿ ತುಳಸಿಯ ಗಿಡಗಳು ಸಾಲಾಗಿ ಚೆಲ್ಲಿದ್ದವು. ಅದೇ ಮಾರ್ಗದಲ್ಲಿ ಹಲವು ಹೆಜ್ಜೆಗಳು ಹಾಕಿದ ಅನಂತರ ಅಲ್ಲೊಂದು ಕಡೆ ರಾಮಾನುಜರಿಗೆ ನಿಲ್ಲುವಂತಾಯಿತು. ಅವರು ನಿಂತು ಹಿಂದೆ ನಿಂತಿದ್ದ ಶಿಷ್ಯನಿಗೆ ಒಂದು ಜಾಗ ತೋರಿಸಿ ಅಲ್ಲಿ ಸ್ವಲ್ಪ ಅಗೆಯುವಂತೆ ಸೂಚಿಸಿದರು. ಅವನು ಒಂದು ಕೋಲಿನಿಂದ ನೆಲವನ್ನು ಸ್ವಲ್ಪವೇ ಕೆದಕಿದಾಗ ಅವರಿಗೆ ಕಂಡಿತು ಇನ್ನೊಂದು ಅದ್ಭುತ! ತಿರುಮಣ್! ಬೆಳ್ಳನೆ ಹೊಳೆಯುತ್ತಿದ್ದ ತಿರುಮಣ್! ಹಾರೆಗಳಿಂದ ಇನ್ನಷ್ಟು ಅಗಿಯಲು ಸೂಚಿಸಿದರು. ಅಗಿದಷ್ಟೂ ತಿರುಮಣ್! ರಾಮಾನುಜರಿಗೆ ಅವರ ಶಿಷ್ಯರಿಗೆ ಆದ ಆನಂದಕ್ಕೆ ಪಾರವೇ ಇಲ್ಲ. ಇನ್ನು ಮುಂದೆ ಶ್ರೀವೈಷ್ಣವ ಲಾಂಛನ ಧರಿಸಲು ಯಾವ ಅಡ್ಡಿಯೂ ಇಲ್ಲ. ಯಥೇಚ್ಛ ತಿರುಮಣ್ ಗಣಿಯೇ ಅವರಿಗೆ ಬಾಯ್ತೆರೆದುಕೊಂಡಿತ್ತು. ಶಿಷ್ಯರು ಕೂಡೆಗಳಲ್ಲಿ ತಿರುಮಣ್ ತುಂಬಿಕೊಂಡರು.

**(ಮುಂದುವರಿಯುವುದು)**

▶▶ 5ನೇ ಪುಟದಿಂದ

ಸತ್ಯದತ್ತ ಜನರನ್ನು ಆಕರ್ಷಿಸಿದ ಬ್ರಹ್ಮಚೈತನ್ಯರು ಲೌಕಿಕಾಸಕ್ತಿ ಕಡಮೆ ಮಾಡಿಕೊಳ್ಳಬೇಕೆಂದೂ ಅಂತರಂಗದಲ್ಲಿ ಶಾಂತಿಯನ್ನು ಸಾಧಿಸಬೇಕೆಂದೂ ಶಿಷ್ಯರಿಗೆ ಹೇಳುತ್ತಿದ್ದರು. ಮೋಕ್ಷ ಸಾಧನೆಗೆ ಯೋಗಿಯೇ ಸಂನ್ಯಾಸಿಯೇ ಆಗಿರಬೇಕೆಂಬುದಿಲ್ಲವೆಂದೂ ಸಂಸಾರದಲ್ಲಿದ್ದುಕೊಂಡೇ ಅಧ್ಯಾತ್ಮ ಉನ್ನತಿಯನ್ನು ಸಾಧಿಸಬಹುದೆಂದೂ ಅವರು ಸಾರಿದರು. ಅಂತರಂಗದ ಶಾಂತಿಯನ್ನು ಸಾಧಿಸಲು ನಿರಂತರ ರಾಮ ನಾಮ ಜಪವೇ ರಾಜಮಾರ್ಗವೆಂದು ಒತ್ತಿ ಒತ್ತಿ ಹೇಳಿದ ಅವರು ಹಾಗೆಯೇ ನಡೆದುಕೊಂಡರು. ಅವರ ಈ ಬೋಧನೆ ಮಹಾರಾಷ್ಟ್ರ, ಕರ್ನಾಟಕ ಹಾಗೂ ಉತ್ತರ ಭಾರತದ ಕೆಲವು ಪ್ರದೇಶಗಳಿಗೂ ಹಬ್ಬಿತು. ನಮ್ಮ ಚಿಕ್ಕಬಳ್ಳಾಪುರ ಜಿಲ್ಲೆಯ ಚಿಂತಾಮಣಿಯ ವೆಂಕಣ್ಣಯ್ಯನವರು ಬ್ರಹ್ಮಚೈತನ್ಯ ಮಹಾರಾಜರ ದರ್ಶನ ಭಾಗ್ಯವನ್ನು ಪಡೆದಿದ್ದ ಅದೃಷ್ಟಶಾಲಿಗಳು.

ಬ್ರಹ್ಮಚೈತನ್ಯರು ವೈದಿಕ ಅನುಷ್ಠಾನವನ್ನು ಅನುಸರಿಸುತ್ತಾ ಪ್ರವಚನ ಮತ್ತು ರಾಮ ಭಜನೆಯ ಮೂಲಕ ಭಕ್ತಿಮಾರ್ಗದ ಪ್ರಚಾರ ಮಾಡಿದರು. ಅವರು ಬೋಧಿಸಿದ 'ಶ್ರೀರಾಮ್ ಜಯ್‌ರಾಮ್ ಜಯ್ ಜಯ್ ರಾಮ್' ರಾಮ ಮಂತ್ರ ಇಂದಿಗೂ ಅವರ ಭಕ್ತರ ಪಾಲಿನ ಕಾಮಧೇನು ಕಲ್ಪವೃಕ್ಷ ಆಗಿದೆ. ಗೋರಕ್ಷಣೆ, ನಾಮಜಪ, ಅನ್ನದಾನ, ಭಜನೆ ಸಂಕೀರ್ತನೆ, ತೀರ್ಥಯಾತ್ರೆಗಳನ್ನು ಎಲ್ಲ ಹಿಂದೂಗಳು ತಪ್ಪದೇ ಮಾಡಬೇಕೆಂದು ಸಾರಿದರು.

ಗೋಂದಾವಲಿ ಬ್ರಹ್ಮಚೈತನ್ಯರು 1913ನೇ ಇಸವಿ ಡಿಸೆಂಬರ್ 22ರಂದು ಗೋಂದಾವಲಿಯಲ್ಲಿ ಬ್ರಹ್ಮೀಭೂತರಾದರು. ಆ ನೆನಪಿಗಾಗಿ ಈ ಬಾರಿಯ ಈ ಲೇಖನ. ●



### ಕಾನ್ಹೋಪಾತ್ರಳ ವಿಗ್ರಹ

**ಪಂ**ಢರಾಪುರದ ವಿಟ್ಠಲನ ದೇಗುಲದಲ್ಲಿ ರಖುಮಾಯಿ ವಿಠೋಬಾರ ವಿಗ್ರಹಗಳ ತುಸು ಅಂತರದಲ್ಲೇ ಕಾನ್ಹೋಪಾತ್ರಳ ವಿಗ್ರಹವನ್ನೂ ಪ್ರತಿಷ್ಠಾಪಿಸಲಾಗಿದ್ದು ನಿತ್ಯ ಪೂಜೆಯನ್ನು ಅದು ಸಲ್ಲಿಸಿಕೊಳ್ಳುತ್ತಿರುವುದು ಮರಾಠಿಗರಿಗೆ ಆಕೆಯ ಮೇಲಿರುವ ನಂಬಿಕೆ, ಪ್ರೀತಿ ಶ್ರದ್ಧೆಗಳನ್ನು ಸೂಚಿಸುತ್ತದೆ. ವಿಗ್ರಹ ನಿಂತಿರುವ ಮೇಲ್ಭಾಗದಲ್ಲಿ ಶ್ರೀ ಸಂತ ಕಾನ್ಹೋಪಾತ್ರಾ ಎಂದು ಬರೆಯಲಾಗಿದೆ. ಮಹಿಳೆಯೊಬ್ಬಳಿಗೆ ಸಂತಳೆಂದು ಗೌರವಿಸಿ ಪೂಜಿಸುತ್ತಿರುವುದು ಅವಳು ಪಡೆದಿರುವ "ಸಂತ" ಎಂಬುದರ ಹೆಗ್ಗಳಿಕೆಯನ್ನು ಸೂಚಿಸುತ್ತದೆ.

# ಧೀಮಂತೆ ಸಂತ ಕಾನ್ಹೋಪಾತ್ರಾ

**ಹ**ದಿನೈದನೆಯ ಶತಮಾನದಲ್ಲಿ ಆಗಿ ಹೋದ ಮರಾಠೀ ಸಂತ ಕವಿ ಈ ಕಾನ್ಹೋಪಾತ್ರ ಎಂಬುವವಳು. ಹಿಂದೂ ಧರ್ಮದಲ್ಲಿ ಪ್ರಸಿದ್ಧಿ ಪಡೆದಿರುವ ವಾರಕರೀ ಪಂಥದ ಭಕ್ತೆ. ಪಂಢರಾಪುರದ ಪಾಂಡುರಂಗನ ಪರಮ ಭಕ್ತೆ. ಅನೇಕ ಓವಿ ಪದ್ಯಗಳನ್ನೂ ಅಭಂಗಗಳನ್ನೂ ಭಕ್ತಿಪೂರ್ಣ ಸಾಹಿತ್ಯವನ್ನೂ ಮರಾಠೀ ಭಾಷೆಯಲ್ಲಿ ರಚಿಸಿ ಪ್ರಸಿದ್ಧಿಯಾಗಿರುವಾಕೆ.

ಕಾನ್ಹೋಪಾತ್ರಳ ಬದುಕಿನ ಬಗ್ಗೆ ತಿಳಿದುಬಂದಿರುವುದು ತುಂಬ ಕಮ್ಮಿ. ಪಂಢರಾಪುರದ ದಕ್ಷಿಣ ದಿಕ್ಕಿನಲ್ಲಿ ಸಮೀಪವೇ ಇರುವ "ಮಂಗಳವಟಿ"ವೆಂಬ ಗ್ರಾಮದಲ್ಲಿ ಈಕೆಯ ಜನನವಾಯಿತು. ಜನನದ ದಿನಾಂಕವಾಗಲೀ, ಮರಣದ ದಿನಾಂಕವಾಗಲೀ ಖಚಿತವಾಗಿ ತಿಳಿದುಬಂದಿಲ್ಲ. ಮಂಗಳವಟಿಯಲ್ಲಿ ವಾಸಿಸುತ್ತಿದ್ದ "ಶ್ಯಾಮಾ" ಎಂಬ ವೇಶ್ಯೆಯ ಮಗಳಾಗಿ ಈಕೆ ಜನಿಸಿದಳೆಂದು ಕೆಲವೆಡೆಯಲ್ಲಿ ಹೇಳಲಾಗಿದೆ. ಮಗುವಿಗೆ "ಕಾನ್ಹೋಪಾತ್ರಾ" ಎಂದು ಹೆಸರಿಡಲಾಯಿತು. ಇದರ ಅರ್ಥ ಕೃಷ್ಣ ಅಥವಾ ಕನ್ಹಯ್ಯನಿಗೆ ಪ್ರೀತಿಪಾತ್ರಳಾದವಳು ಅಥವಾ ಕೃಷ್ಣ ಕೃಪೆಗೆ ಪಾತ್ರಳಾದವಳು ಎಂದು. ಕಾನ್ಹೋಪಾತ್ರಿ ಎಂದು ಕೂಡ ಈಕೆಯನ್ನು ಕರೆಯುತ್ತಿದ್ದರು.



■ಡಾ. ಅನಸೂಯಾದೇವಿ
ನಿವೃತ್ತ ಪ್ರಾಧ್ಯಾಪಕಿ, ಚಿಂತಕಿ, ಕಾದಂಬರಿಗಾರ್ತಿ.

ಕಾನ್ಹೋಪಾತ್ರಳ ತಾಯಿ ಶ್ಯಾಮಾ ಬಹಳ ಐಶ್ವರ್ಯವಂತಳಾಗಿಯೂ ತನ್ನ ವೃತ್ತಿಯಲ್ಲಿಯೇ ಅನೇಕ ಸಿರಿ ಸಂಪತ್ತುಗಳನ್ನು ಸಂಪಾದಿಸುತ್ತಿದ್ದವಳಾಗಿಯೂ ಇದ್ದಳೆನ್ನಲಾಗಿದೆ. ಆಕೆ ಇದ್ದ ಮಂಗಳವಟಿ ಅಥವಾ ಮಂಗಳವೇಧಾ ಎಂಬುದು ಬಹಳ ಪ್ರಸಿದ್ಧವಾಗಿದ್ದ ಅಂದಿನ ನಗರವೇ ಆಗಿತ್ತು. ಹಾಗೂ ಈ ನಗರವು ಪಂಢರಪುರದ ಪಾಂಡುರಂಗನ (ವಿಠೋಬನ) ದೇಗುಲದಿಂದ ಬಹಳ ಸಮೀಪವೂ ಇದ್ದಿತ್ತು. ಈ **ಮಂಗಳವೇಧಾ** ಎಂಬ ಸ್ಥಳ ಅನೇಕ ಸಂತರಿಗೆ ಜನ್ಮಸ್ಥಳವೆನಿಸಿದೆ. ವಾರಕರೀ ಪಂಥದ ಸಂತರಾದ ದಾಮೋಜಿ ಪಂತ್ ಚೋಕಾಮೇಳಾ ಮುಂತಾದವರು ಜನಿಸಿದ್ದು ಮಂಗಳಮೇಧಾದಲ್ಲಿಯೇ. ಹೀಗಾಗಿ ಆ ಪಟ್ಟಣದಲ್ಲಿನ ವಿಟ್ಠಲ ಭಕ್ತಿಪಂಥವೂ ಪ್ರಖ್ಯಾತವಾಗಿತ್ತು. ನಗರದ ವೇಶ್ಯಾಮಣಿ ಎನಿಸಿದ್ದ ಶ್ಯಾಮಾಳಿಗೆ ತನ್ನ ಮಗಳ ತಂದೆ ಯಾರೆಂದು ಗೊತ್ತಿರಲಿಲ್ಲವೆನ್ನಲಾಗಿದೆ. ಆದರೆ ಆ ಊರು, ಊರಿನ ಸುತ್ತಮುತ್ತ ಪ್ರಚಲಿತವಾಗಿ ಬಂದ ದಂತಕಥೆಗಳ ಪ್ರಕಾರ ಮಂಗಳವೇಧೆಯ ಗ್ರಾಮಾಧಿಕಾರಿಯಾಗಿದ್ದ **ಸದಾಶಿವ ಮಾಲಾಗುಜರ್** ಎಂಬಾತನೇ ಕಾನ್ಹೋಪಾತ್ರಳ ತಂದೆ. ಕಾನ್ಹೋಪಾತ್ರಳ ಜೀವಿತದ ಬಗೆಗಿನ ಲಿಖಿತ ದಾಖಲೆಗಳು ಏನೂ ದೊರಕಿಲ್ಲವಾದರೂ ಅವಳ ಜನನ, ಬಾಲ್ಯ, ಬದುಕಿನ ಕುರಿತಾದ ಅನೇಕ ಕಥೆಗಳು ಶತಮಾನಗಳಲ್ಲಿಯೂ ದಾಟಿ ಬಂದು ಪ್ರಚಲಿತವಾಗಿರುವುದರಿಂದ ಅವುಗಳೊಳಗೇ ಸತ್ಯವನ್ನು ಊಹಿಸಿ ಅಥವಾ ಶೋಧಿಸಿ ತಿಳಿಯಬೇಕಾಗಿದೆ. ಆದರೆ ಆಕೆ ರಚಿಸಿದ ಓವಿ, ಅಭಂಗ, ಕವಿತೆಗಳು ಮರಾಠೀ ಸಾಹಿತ್ಯದಲ್ಲಿ ಉಳಿದು ಬಂದು ದಾಖಲೆಯಾಗಿರುವುದು ಅವಳ ಪಾಂಡುರಂಗನೆಡೆಗಿನ ಅಸೀಮ ಭಕ್ತಿಯ ನಿರೂಪಣೆ, ಸಂಕಟಗಳ ನಿವೇದನೆ ಕವಿತೆಗಳಲ್ಲಿರುವುದರಿಂದ ಅವಳ ಜೀವಿತದ ಬಗ್ಗೆಯೂ ಊಹಿಸಿ ತಿಳಿಯಬಹುದಾಗಿದೆ.

ತಾಯಿ ಶ್ಯಾಮಾ ತನ್ನ ವೃತ್ತಿಗನುಗುಣವಾಗಿಯೇ ಬಾಲಕಿ ಕಾನ್ಹೋಪಾತ್ರಳಿಗೆ ನೃತ್ಯ, ಸಂಗೀತದಲ್ಲಿ ಶಿಕ್ಷಣ ಕೊಡಿಸಿ ಬೆಳೆಸಿದಳು. ಏನೂ ಅರಿಯದ ಮುಗ್ಧೆ ಬಾಲಕಿ ಕಾನ್ಹೋಪಾತ್ರ ತುಂಬ ಆಸಕ್ತಿಯಿಂದ ಸಂಗೀತ, ನೃತ್ಯವಿದ್ಯೆಯಲ್ಲಿ ಪರಿಣತಿ ಪಡೆದಳು. ಇಷ್ಟಲ್ಲದೆ ಈ ಬಾಲಕಿ ತುಂಬ ರೂಪವತಿಯೂ

ಆಗಿದ್ದಳೆನ್ನಲಾಗಿದೆ. ಅಂದಿನ ದಿನಗಳಲ್ಲಿ ಊರಿನ ಜನರು ಅವಳನ್ನು "ಅಪ್ಸರೆ" ಎಂದೇ ಕರೆಯುತ್ತಿದ್ದರಂತೆ. ಯೌವನಕ್ಕೆ ಪದಾರ್ಪಣ ಮಾಡಿದ ಹದಿಹರೆಯದ ಚೆಲುವೆ ಕಾನ್ಹೋಪಾತ್ರ ಮತ್ತೂ ರೂಪಸಿಯಾದಳು. ತನ್ನ ವೇಶ್ಯಾವೃತ್ತಿಗೆ ಅವಳನ್ನು ಸೇರಿಸಿಕೊಂಡರೆ ತುಂಬ ಲಾಭ, ಆಸ್ತಿ ಪಡೆಯಬಹುದೆಂಬ ಲೆಕ್ಕಾಚಾರ ತಾಯಿ ಶ್ಯಾಮಾಳದ್ದಾಗಿತ್ತು.

ಆದರೆ ತಾಯಿಯ ಲೆಕ್ಕಾಚಾರ ತಲೆಕೆಳಗಾಗುವಂತೆ ವಿಧಿಯ ಏರ್ಪಾಡು ನಡೆದಿತ್ತು. ತಾಯಿ ಕೊಡಿಸಿದ ನೃತ್ಯ ಸಂಗೀತಾದಿ ಶಿಕ್ಷಣಗಳೆಲ್ಲ ಕಾನ್ಹೋಪಾತ್ರಳಲ್ಲಿ ಕಲೆಯು ನೀಡುವ ಅಧ್ಯಾತ್ಮವಾದೊಂದು ಬೆಳಕನ್ನು ತುಂಬುತ್ತ ಬಂದಿತ್ತು ಎಂಬುದು ತಾಯಿಗೆ ಅರಿವಿಲ್ಲದಾಯಿತು. ಶ್ಯಾಮಾಳಿಗೆ ತನ್ನ ಪುತ್ರಿ ತುಂಬ ರೂಪಸಿ, ಸೊಗಸಾದ ನೃತ್ಯಗಾರ್ತಿ, ಅತ್ಯಂತ ಸೊಗಸಾಗಿ ಹಾಡಬಲ್ಲಳು ಎಂಬ ಎಲ್ಲ ಬಗೆಯ ಹೆಮ್ಮೆ ತುಂಬಿಕೊಂಡಿತ್ತು. ಆದರೆ ಕಾನ್ಹೋಪಾತ್ರಳಿಗೆ ಬಾಲ್ಯದಿಂದಲೂ ಒಲಿದದ್ದು ಕಲೆಯ ಜೊತೆ ಜೊತೆಯಾಗಿ ವಿಟ್ಠಲ ಭಕ್ತಿ, ಕೃಷ್ಣ ಭಕ್ತಿ! ಆ ಊರಿನಲ್ಲಿ ಸದಾ ತುಂಬಿರುತ್ತಿದ್ದ ಸಂತರುಗಳ ಭಜನೆಗಳ ಸದ್ದು, ತಾಳ ತಂಬೂರಿಗಳ ನಾದ ನಿನಾದ, ಭಕ್ತರ, ಸಂತರ ವಿಟ್ಠಲ ವಿಟ್ಠಲ ಎಂದು ಕೂಗುತ್ತ ಸಾಗುವ ವಾರಕರೀ ಮೆರವಣಿಗೆ ಇವೆಲ್ಲ ಕಾನ್ಹೋಳನ್ನು ತುಂಬ ಆಕರ್ಷಿಸುತ್ತಿದ್ದವು. ಹೇಳಿ ಕೇಳಿ ಹೆಚ್ಚಾಗಿ ಸಂತರುಗಳೇ, ವಿಟ್ಠಲನ ಭಕ್ತರೇ ವಾಸಿಸುತ್ತಿದ್ದ, ನೆಲೆಯಾಗಿದ್ದ ಊರು ಅದು! ಇಂಥ ಭಕ್ತಿಯಾವೇಶದ ವಾತಾವರಣದಲ್ಲಿ ಅಂದಿನ ಸಮಾಜದ ಒಂದು ಬದುಕಿನ ವ್ಯವಸ್ಥೆಯಂತೆ ವೇಶ್ಯೆಯೊಬ್ಬಳ ಮನೆ! ಕಾನ್ಹೋಳಿಗೆ ಜೀವದ ತುಡಿತವೆಲ್ಲ ವಿಟ್ಠಲನ ಪ್ರೀತಿಯೆಡೆಗೆ! ಆಕರ್ಷಣೆಯೆಲ್ಲ ವಾರಕರೀ ಪಂಥದೆಡೆಗೆ! ತನ್ನ ಹಾಡು, ನೃತ್ಯಗಳೆಲ್ಲ ವಿಟ್ಠಲನ ಭಕ್ತಿಯಾಗಿ ಪರಿಣಮಿಸುವಲ್ಲಿಗೆ! ಹತ್ತಿರವೇ ಇದ್ದ ವಿಠೋಬನ ದೇಗುಲದ ಕಡೆಗೆ!

ಮುಂದೊಂದು ದಿನ ತಾಯಿ ಶ್ಯಾಮಾ ಮಗಳ ಬಳಿ ಹೇಳಿದಳು. "ನೋಡು....ದೆಹಲಿಯ ಬಾದಷಹಾರು ನಿನ್ನನ್ನು ಬಯಸಿದ್ದಾರೆ. ತುಂಬ ಆಸ್ತಿ, ಚಿನ್ನ, ವಜ್ರ ವೈಡೂರ್ಯ, ಹಣ ಎಲ್ಲವನ್ನೂ ಕೊಡುವುದಾಗಿ ಹೇಳಿ ಕಳಿಸಿದ್ದಾರೆ. ಇದು ಯಾರಿಗೂ ಸಿಕ್ಕದ ಭಾಗ್ಯ. ಮೊಗಲ್ (ಮುಸ್ಲಿಂ) ಬಾದಷಹರ ನೋಟ ನಿನ್ನ ಮೇಲೆ ಹರಿದಿದೆ ಎಂದರೆ ನಿನ್ನ ಜನುಮಗಳ ಸುಕೃತವೆಂದೇ ತಿಳಿ. ಅವರಿಗೇ ನಿನ್ನ ಮೀಸಲು ಮುರಿಯುವ ಸಮಾರಂಭ ಮಾಡುತ್ತೇನೆ. ಇದರಿಂದ ನನ್ನ ಪ್ರತಿಷ್ಠೆ ಈ ಸಮಾಜದಲ್ಲಿ ಮತ್ತೂ ವಿಜೃಂಭಿಸುತ್ತದೆ. ಒಪ್ಪಿಕೋ ಮಗಳೇ..."

ಆದರೆ ಕಾನ್ಹೋಪಾತ್ರ ದಿಟ್ಟತನದಿಂದ ತಾಯಿಯ ಬಯಕೆಯನ್ನು ಎದುರಿಸಿ ನಿಂತಳು. ಬಾದಷಹನ ಹತ್ತು ಹಲವು ಅರಸಿಯರೊಡನೆ ತಾನೊಬ್ಬಳಾಗಿ ಬದುಕುವುದು ಸಾಧ್ಯವೇ ಇಲ್ಲ, ತಾನು ಸಜ್ಜನನೊಬ್ಬನನ್ನು, ಭಕ್ತಿ ಪಂಥದ ಯಾರಾದರೂ ತರುಣನನ್ನು ಮದುವೆಯಾಗಿ ಗೃಹಿಣಿಯಾಗಿ ಬಾಳುತ್ತೇನೆ. ವೇಶ್ಯಾವೃತ್ತಿಗೆ ನಾನೆಂದೂ ಹೆಜ್ಜೆಯಿಡಲಾರೆ" ಎಂದು ಖಡಾಖಂಡಿತವಾಗಿ ನಿರಾಕರಿಸಿಬಿಟ್ಟಳು. ತಾಯಿ ಮಗಳಿಗೆ ವಿಪರೀತ ವಾಗ್ಯುದ್ಧ ನಡೆದು ಅಸಮಾಧಾನದ ಬೆಂಕಿ ಧಗಧಗನೆ ಉರಿಯಿತು.

ಹೀಗಿರುವಾಗ ಗ್ರಾಮಾಧಿಕಾರಿ ಸದಾಶಿವ ಮಲಾಗುಜರ್ ಒಮ್ಮೆ ಶ್ಯಾಮಾಳ ಬಳಿ ಕಾನ್ಹೋಪಾತ್ರಳನ್ನು ತಾನು ಬಯಸುವುದಾಗಿಯೂ ಅವಳ ನೃತ್ಯ ಸಂಗೀತಾದಿಗಳಿಗೆ ತಾನು ಮನ ಸೋತಿರುವುದಾಗಿಯೂ ಬಂದು ಹೇಳಿದನೆಂದು ಮತ್ತೊಂದು ದಾಖಲೆಯಲ್ಲಿದೆ. ಶ್ಯಾಮಾ ಭಯಭೀತಳಾಗಿ "ಅವಳು ನಿನಗೇ ಹುಟ್ಟಿದಾಕೆ. ನಿನ್ನ ಮಗಳು" ಎಂದು ಎಷ್ಟೇ ಹೇಳಿದರೂ ಅದನ್ನು ಆತ ಒಪ್ಪದೇ, "ನೀನು ವೇಶ್ಯೆ, ಹೇಗೆ ಹೇಳುತ್ತೀ ಅವಳು ನನಗೇ ಹುಟ್ಟಿದವಳು ಎಂದು?" ಎಂದು ಮುಂತಾಗಿ ಶ್ಯಾಮಾಳನ್ನು ನಿಂದಿಸಿದನು ಎಂದು ಈ ಕಥೆ ತಿಳಿಸುತ್ತದೆ. ಈ ಸಲುವಾಗಿ ತಾಯಿ ಮಗಳಿಗೆ ಆತ ವಿಪರೀತವಾಗಿ ಹಿಂಸೆ ಕೊಟ್ಟನು ಎನ್ನುತ್ತದೆ.

## ಕಾನ್ಹೋಪಾತ್ರಳ ಕವಿತೆಗಳು


**ಕಾ**ನ್ಹೋಪಾತ್ರಳ ರಚನೆಗಳು ಎಷ್ಟು ಸಂಖ್ಯೆಯಲ್ಲಿದ್ದವೋ ತಿಳಿಯದು. ಆದರೆ ಉಳಿದುಬಂದಿರುವುದು ಅವಳ ಮೂವತ್ತು ಅಭಂಗಗಳು ಮಾತ್ರ. ಈ ಅಭಂಗಗಳನ್ನು ಒಂದೂ ಬಿಡದೆ ಮರಾಠಿಗರು ಇವತ್ತಿಗೂ ಪ್ರಚಲಿತವಿರಿಸಿಕೊಂಡು ಹಾಡುತ್ತಿದ್ದಾರೆ ಎನ್ನುವುದು ಅವಳ ರಚನೆಗಳ ಜನಪ್ರಿಯತೆಗೆ ಸಂಕೇತವಾಗಿದೆ.
ಕವಿ ಹೃದಯದ ಕಾನ್ಹೋಳ ರಚನೆಗಳಲ್ಲಿ ಹೆಚ್ಚಾಗಿ ತುಂಬಿರುವುದು ಭಗವಂತನಲ್ಲಿ ಆತ್ಮನಿವೇದನೆ.

ಇವೆಲ್ಲದರಿಂದ ರೋಸಿಹೋದ ಕಾನ್ಹೋಪಾತ್ರ ಕಡೆಗೆ ತಾಯಿಯನ್ನೂ, ಮಂಗಳವೇಡೆಯನ್ನೂ ತ್ಯಜಿಸಿಬಿಟ್ಟಳು. ದಾಸಿಯ ವೇಷ ಧರಿಸಿ ಸಂತರ ತಂಡ ಒಂದರ ಜೊತೆಗೆ ಪಂಢರಾಪುರಕ್ಕೆ ಹೊರಟುಹೋದಳು, ಹೀಗೆ ವೇಷ ಬದಲಿಸಿ ಅಲ್ಲಿಂದ ಪಾರಾಗಲು ಅವಳ ಒಬ್ಬ 'ಹೌಸಾ' ಎಂಬ ಮುದಿ ದಾಸಿ ಸಹಾಯ ಮಾಡಿದಳು ಎಂದು ಇಲ್ಲಿ ತಿಳಿಸಲಾಗಿದೆ. ಅನೇಕ ಕಥೆಗಳಲ್ಲಿ ಈ ಹೌಸಾ ಎಂಬ ದಾಸಿಯ ಉಲ್ಲೇಖವಿದೆ.


## ಕಾನ್ಹೋಪಾತ್ರ ಮತ್ತು ವಿವಾಹ

**ಮ**ರಾಠೀ ವಿದ್ವಾಂಸರಾದ ಶ್ರೀ ತಾರಾ ಭವಾಲ್ಕರ್ ಅವರು ಹೇಳಿರುವ ಪ್ರಕಾರ ಕಾನ್ಹೋಪಾತ್ರಳು ಗೃಹಿಣಿಯಾಗಿ ವಿಟ್ಠಲ ಭಕ್ತಿಯಲ್ಲಿ ಬಾಳನ್ನು ಕಂಡುಕೊಳ್ಳ ಬಯಸಿದ್ದಳಂತೆ. ತನಗಿಂತ ರೂಪವಂತನಾಗಿರುವವನನ್ನು ಮದುವೆಯಾಗಲು ಇಚ್ಛಿಸಿ ಹಂಬಲಿಸಿದ್ದಳಂತೆ. (ಅತ್ಯಂತ ಹಳೆಯ ಕೃತಿಯಾದ "ಭಕ್ತಿ-ವಿಜಯ" ಎಂಬ ಪುಸ್ತಕದಲ್ಲಿ ದಾಮಾಜಿ ಪಂಥ ಎಂಬ ಯುವಕ ಸಂತರನ್ನು ಮದುವೆಯಾಗಲು ಕಾನ್ಹೋ ಹಂಬಲಿಸಿದ್ದಳೆಂದು ನಮೂದಿಸಲಾಗಿದೆ) ಆದರೆ ವೇಶ್ಯೆಯ ಮನೆತನದಲ್ಲಿ ಹುಟ್ಟಿದ ಹೆಣ್ಣುಮಗಳನ್ನು ವಿವಾಹವಾಗುವುದು, ಅವಳಿಗೆ ವಿವಾಹ ಮಾಡುವುದು ಎರಡೂ ಸಮಾಜ ಬಾಹಿರ ಕೃತ್ಯವೆನಿಸಿತ್ತಾದ್ದರಿಂದ ಬಹಿಷ್ಕಾರದ ಶಿಕ್ಷೆಗೆ ಒಳಗಾಗಬೇಕಿತ್ತೆಂದು ತಿಳಿಸುತ್ತಾ, ಹೀಗಾಗಿ ಕಾನ್ಹೋ ಅವಿವಾಹಿತೆಯಾಗಿಯೇ ಉಳಿದಳು ಎಂದು ತಾರಾ ಭವಾಲ್ಕರ್ ಹೇಳುತ್ತಾರೆ.

ಪಂಢರಾಪುರದಲ್ಲಿ ವಿಠೋಬನ ದರ್ಶನವಾದ ಮೇಲೆ ತನ್ನ ಮನಸ್ಸು ಶಾಂತವಾಯಿತು, ಅಭೂತಪೂರ್ವ ಅನುಭವವಾಯಿತು ಎಂದು ತನ್ನ ಅಭಂಗವೊಂದರಲ್ಲಿ ಹೇಳಿಕೊಂಡಿದ್ದಾಳೆ. ಸಂತರ ಗುಂಪಿನಲ್ಲಿ ಬಡದಾಸಿಯೊಬ್ಬಳಂತೆ ಮುಖವನ್ನು ಮರೆಮಾಡಿಕೊಂಡು ತಲೆ ತಗ್ಗಿಸಿಕೊಂಡಿರುತ್ತಿದ್ದ ಆಕೆ ವಿಟ್ಠಲ (ಕೃಷ್ಣ)ನ ಬಗ್ಗೆ ಅನೇಕ ಕಥೆಗಳನ್ನು, ಅವನ ಅಪಾರ ಮಹಿಮೆಗಳನ್ನು ಕುರಿತು ಕೇಳುತ್ತ ಪರವಶಳಾಗುತ್ತಿದ್ದಳಂತೆ. ಕಡೆಗೊಮ್ಮೆ ಆಕೆಯೇ ಕಾನ್ಹೋಪಾತ್ರ ಎಂದು ತಾಯಿ ಹುಡುಕಲು ಅಟ್ಟಿದ್ದ ದೂತರಿಗೆ ಗೊತ್ತಾದಾಗ ಅವಳನ್ನು ಹಿಡಿದೆಳೆಯಲು, ಒಯ್ಯಲು ಯತ್ನಿಸಿದಾಗ ಪಾಂಡುರಂಗ ವಿಟ್ಠಲನ ಪಾದಗಳನ್ನು ಅಪ್ಪಿ ಹಿಡಿದು ತನ್ನ ಪತಿ ಇವನೇ, ಇವನನ್ನೇ ನಾನು ವಿವಾಹವಾಗಿದ್ದೇನೆ. ನಾನು ಇವನ ಪತ್ನಿ ಎಂದು ಗಟ್ಟಿಯಾಗಿ ಕೂಗಿ ಘೋಷಿಸಿದಳು! ಶ್ಯಾಮಾ ಕಳಿಸಿದ್ದ ದೂತರು ಮತ್ತೆ ಅವಳನ್ನು ಮುಟ್ಟಲಾರದೆ ಹಿಂದಿರುಗಿ "ನಿಮ್ಮ ಮಗಳಿಗೆ ಪಾಂಡುರಂಗ ದೇವರ ಜೊತೆಗೇ



ಅಕ್ಕಮಹಾದೇವಿ



ಮೀರಾಬಾಯಿ




ಕಾನ್ಹೋಪಾತ್ರ

ವಿವಾಹವಾಗಿದೆ" ಎಂದು ತಿಳಿಸಿದರಂತೆ.

ಹೀಗೆ ತನ್ನನ್ನು ತಾನೇ ವಿಟ್ಠಲನಿಗೆ ಸಮರ್ಪಿಸಿಕೊಂಡು ಅವನನ್ನೇ ವಿವಾಹ (ಸ್ವಯಂವರ) ಮಾಡಿಕೊಂಡ ಕಾನ್ಹೋಪಾತ್ರ ದೇಗುಲದ ಬಳಿಯೇ ಸಣ್ಣ ಕುಟೀರವೊಂದನ್ನು ಹೌಸಾಳ ನೆರವಿನಿಂದ ನಿರ್ಮಾಣ ಮಾಡಿಕೊಂಡು ಅಲ್ಲಿಯೇ ವಿರಕ್ತೆಯಾಗಿ, ಭಕ್ತಳಾಗಿ ಬಾಳುತ್ತ ದಿನಗಳೆದಳು. ಪಾಂಡುರಂಗನ ಧ್ಯಾನ, ಭಜನೆಗಳನ್ನು ಬಿಟ್ಟು ಆಕೆ ಏನನ್ನೂ ಒಲ್ಲಳು. ಪರಮ ವೈರಾಗ್ಯ ಮೂರ್ತಿಯಾಗಿಯೇ ಆಯಸ್ಸನ್ನು ಕಳೆದ ಕಾನ್ಹೋಪಾತ್ರಾಳಿಗೆ ಗುರು ಇಂಥವರೇ, ಇಂಥಾ ಗುರುವಿನ ಶಿಷ್ಯೆ ಎಂಬುದಾಗಿ ಯಾರೂ ಇರಲಿಲ್ಲ. ತನ್ನ ಪಾಡಿಗೆ ತಾನು ಭಕ್ತಿ ಪೂರ್ಣ ರಚನೆಗಳನ್ನು ಮಾಡುತ್ತ, ಸ್ತುತಿಸುತ್ತ, ಹಾಡುತ್ತ ಇದ್ದು ಬಿಟ್ಟಳು. ಅಂಕಿತ ಕೊಟ್ಟ ಗುರು ಯಾರೂ ಇರಲಿಲ್ಲ. ಆದರೆ ಆಕೆ ಭಕ್ತಿಯ ಕಡಲಾಗಿ ಪಾಂಡುರಂಗನ ಪತ್ನಿಯಾಗಿ ಅವನ ಸನ್ನಿಧಿಯಲ್ಲೇ ಬಾಳಿ, ಅವನ ಸನ್ನಿಧಿಯಲ್ಲೇ ಮರಣ ಹೊಂದಿದಾಕೆ. ಹೀಗಾಗಿ ಅವಳು ಸಂತಳೆನ್ನಿಸಿಕೊಂಡಳು.

ದಿನಕ್ಕೆರಡು ಬಾರಿ ವಿಟ್ಠಲನ ದೇಗುಲದ ಶುಚಿತ್ವ ಕಾಪಾಡಲು, ಪರಿಸರವನ್ನು ಚೊಕ್ಕಟವಾಗಿಡಲು ತಪ್ಪದೇ ಕೆಲಸ ಮಾಡುತ್ತ




ಫಂಡರಾಪುರದಲ್ಲಿರುವ ಕಾನ್ಹೋಪಾತ್ರಳ ಸಮಾಧಿ

ಸೇವಾಕಾರ್ಯ ನಿರ್ವಹಿಸುತ್ತಿದ್ದವಳು ಕಾನ್ಹೋಪಾತ್ರಾ.

ಆದರೆ ಹೆಣ್ಣಾದವಳು ಸಮಾಜಕ್ಕೆ ಡೊಗ್ಗು ಸಲಾಮು ಮಾಡದೆ ಅವಳ ಪಾಡಿಗೆ ಅವಳು ಎಷ್ಟೇ ವಿರಕ್ತ ಬದುಕಿನಲ್ಲಿದ್ದರೂ ಸಮಾಜದಲ್ಲಿನ ದುಷ್ಟರು ಸುಮ್ಮನೇ ಬಿಡದೆ ತೊಂದರೆ ಕೊಟ್ಟು ಹಿಂಸೆ ಮಾಡುವುದು ಅಂದೂ ಇತ್ತು, ಇಂದೂ ಇದೆ! ಆಕೆ ವಿಟ್ಠಲನ ಸನ್ನಿಧಿಯಲ್ಲಿರುವುದನ್ನು ತಿಳಿದ ಸದಾಶಿವ ಮಲಾಗುಜರ್ ತನ್ನನ್ನು ತಿರಸ್ಕರಿಸಿ ಹೋದವಳೆಂಬ ಸಿಟ್ಟಿಗೆ ಮತ್ತೆ ಮತ್ತೆ ಕಾನ್ಹೋಳಿಗೆ ಉಪದ್ರವ ಕೊಡಲಾರಂಭಿಸಿದ. ಕಡೆಗೊಮ್ಮೆ ಬೀದರ್‌ನ ಮುಸ್ಲಿಂ ದೊರೆಯೊಬ್ಬನ ಜೊತೆ ಸೇರಿಕೊಂಡು ಸಂಚು ಹೂಡತೊಡಗಿದ. ಬೀದರ್‌ನ ಬಾದಷಹ ಕಾನ್ಹೋಪಾತ್ರಳ ಅನುಪಮ ಸೌಂದರ್ಯದ ಬಗ್ಗೆ ಕೇಳಿ ತಿಳಿದಿದ್ದವನೇ. ಈಗ ಸದಾಶಿವನ ವರ್ಣನೆಯಿಂದ ಮತ್ತಷ್ಟು ಲಾಲಸೆಗೊಳಗಾಗಿ ತನ್ನ ಅರಮನೆಗೆ ಬರಲೇಬೇಕೆಂದು ಹೇಳಿ ಕಳಿಸಿದ ತನ್ನ ದೂತರೊಂದಿಗೆ! ಕಾನ್ಹೋ ಸ್ಪಷ್ಟವಾಗಿ ನಿರಾಕರಿಸಿ ತನ್ನ ಪತಿ ವಿಠೋಬನನ್ನು ಬಿಟ್ಟು ಉಳಿದ ಪುರುಷರೆಲ್ಲ ತನಗೆ ಅಣ್ಣ ತಮ್ಮಂದಿರು ಎಂದು ಹೇಳಿ ಕಳಿಸಿದಳು.

> **ಕಾ**ಯಾ ವಾಚಾ ಮನಸಾ ತಾನು ಪಾಂಡುರಂಗನ ಪತ್ನಿ ಎಂದು ಸ್ವಯಂಘೋಷಣೆ ಮಾಡಿಕೊಂಡು ವಿರಾಗಿಣಿಯಾಗಿ ಪಾಂಡುರಂಗನ ಸನ್ನಿಧಿಯಲ್ಲಿ ಸದಾ ಭಕ್ತಿ ಗೀತೆಗಳನ್ನೂ ತನ್ನ ರಚನೆಗಳನ್ನೂ ಹಾಡುತ್ತ ಹಾಡುತ್ತ ತಂಬೂರಿ ಹಿಡಿದು ನರ್ತಿಸುತ್ತ ಭಕ್ತಿ ಪರವಶತೆಯಲ್ಲಿ ಬಾಳಿದ ಕಾನ್ಹೋಪಾತ್ರಳ ಬದುಕಿಗೆ ಸಾಕ್ಷಿಯಾದ ಅಂದಿನ ಸಾಮಾನ್ಯ ಜನರು, ಸಂತರು, ಅರ್ಚಕರು, ಭಕ್ತರು ತಾವಾಗಿ ಅವಳನ್ನು "ಸಂತ"ಳೆಂದು ಕರೆದು ಬಿರುದಿತ್ತು ಗೌರವಿಸಿದರು. ವೇಶ್ಯೆಯ ಮಗಳೆಂದು ತಿರಸ್ಕರಿಸಿದ್ದ, ಅಥವಾ ಬಯಸಿದ್ದ ಜನರೇ ಮುಂದೆ ಅವಳನ್ನು "ಸಂತ ಕಾನ್ಹೋಪಾತ್ರಾ ಮಾತಾ" ಎಂದು ಗೌರವಿಸುತ್ತ ಬಂದರು.

ಕ್ಷುದ್ರನಾದ ಬಾದಷಹ ಅವಳನ್ನು ಸೆರೆಹಿಡಿದು ತರಲು ತನ್ನ ಸೈನ್ಯದ ತುಕಡಿಯೊಂದನ್ನು ಕಳುಹಿಸಿದ! ಆ ಸೈನಿಕರು ದೇಗುಲದೊಳಗಿದ್ದ ಕಾನ್ಹೋಪಾತ್ರ ಹೊರಬಂದು ಶರಣಾಗದಿದ್ದರೆ ದೇಗುಲವನ್ನೇ ಪೂರ್ತಿಯಾಗಿ ನಾಶಪಡಿಸುವೆವೆಂದು ಘೋಷಿಸಿ ದೇಗುಲವನ್ನು ಸುತ್ತುವರಿದು ಶಸ್ತ್ರ ಸನ್ನದ್ಧರಾಗಿ ನಿಂತರು! ತನ್ನಿಂದಾಗಿ ದೇವಸ್ಥಾನ ನಾಶವಾಗಬಾರದೆಂದು ಆಲೋಚಿಸಿದ ಕಾನ್ಹೋಪಾತ್ರ, "ಖಂಡಿತ ಹೊರಗೆ ಬರುತ್ತೇನೆ, ಆದರೆ ಕಡೇ ಬಾರಿಗೆ ನನ್ನ ಪತಿಯೊಂದಿಗೆ ತುಸುವೇ ಸಮಯ ಕಡೆಯ ಭೇಟಿಯಾಗಿ ಬರುತ್ತೇನೆ" ಎಂದಾಕೆ ಕೂಗಿ ಹೇಳಿ ಸಮ್ಮತಿ ದೊರಕಿಸಿಕೊಂಡಳು.

ಎಷ್ಟು ಹೊತ್ತಾದರೂ ಆಕೆ ಹೊರಗೆ ಬರಲಿಲ್ಲ. ಸೈನಿಕರು ಕಾದು ಸುಸ್ತಾಗಿ ಏನೋ ಮೋಸ ಇರಬಹುದೆಂದು ಶಂಕಿಸಿ

ದೇಗುಲದ ಒಳಗೆ ನುಗ್ಗಿದಾಗ ಕಂಡಿದ್ದೇನು? ಕಾನ್ಹೋಪಾತ್ರ ವಿಠೋಬನ ಪ್ರತಿಮೆಯ ಪಾದಗಳ ಬಳಿ ಪ್ರಾಣ ತ್ಯಾಗ ಮಾಡಿ ನಿರ್ಜೀವವಾಗಿದ್ದವಳನ್ನು ಕಂಡರು. ಆಕೆ ಕಡೆಗೂ ವಿಟ್ಠಲನೇ ತನ್ನ ಪತಿ ಎಂಬುದನ್ನು ಸತ್ಯವಾಗಿಸಿಬಿಟ್ಟಳು.

ಅನೇಕ ವಿಷಯಗಳಲ್ಲಿ ಕನ್ನಡದ ನಮ್ಮ ಅಕ್ಕಮಹಾದೇವಿಯನ್ನು, ಸಂತ ಮೀರಾಳನ್ನು ಕಾನ್ಹೋಪಾತ್ರಳು ಹೋಲುತ್ತಾಳೆಂಬುದು ಸುಳ್ಳಲ್ಲ. ಅಕ್ಕ ಕೌಶಿಕ ಮಹಾರಾಜನನ್ನು ಧಿಕ್ಕರಿಸಿ ಶಿವನೇ ತನ್ನ ಪತಿ ಎಂದು ಹೊರಟಾಕೆ. ಮೀರಾ ಕೃಷ್ಣನೇ ನನ್ನ ಪತಿ ಎಂದು ಬಾಳಿದಾಕೆ. ಅಕ್ಕಮಹಾದೇವಿಗು ಸಮಾಜದ ಪುರುಷರು ಬಹಳವೇ ತೊಂದರೆ, ರಗಳೆ ಮಾಡಿದ್ದರೆಂದು ಆಕೆಯ ವಚನಗಳೇ ತಿಳಿಸುತ್ತವೆ. ಮೀರಾಳಿಗೆ ಸ್ವತಃ ಅವಳ ಮೈದುನ ಮಹಾರಾಜನೇ ತುಂಬ ಹಿಂಸೆ ಕೊಟ್ಟು ಬದುಕ ಬಿಡದೇ ಸತಾಯಿಸಿದ. ಕಾನ್ಹೋಪಾತ್ರಾ, ಮೀರಾ, ಅಕ್ಕಮಹಾದೇವಿ ಇವರೆಲ್ಲ ತಮ್ಮ ಬದುಕೆಲ್ಲ ನೋವು ಕಾವುಗಳಲ್ಲಿ ಬೆಂದು ಬಾಗಿ ಸಾಗಿ, ಮಾಗಿ ದೈವದ ಪತ್ನಿಯಾಗುವುದರಲ್ಲಿ ಸಾರ್ಥಕ್ಯವನ್ನು ಕಂಡವರಾಗಿದ್ದಾರೆ. ಎಂತಲೇ ಇವರೆಲ್ಲ ಸಂತರು, ಶರಣೆಯರು. ಅಸಾಮಾನ್ಯ ಭಕ್ತೆಯರು. ಅಸಾಧಾರಣ ಧೃತಿವಂತೆಯರು.

ಅನಂತರ ಕಾನ್ಹೋಪಾತ್ರಳ ಶವವನ್ನು ಅದೇ ದೇಗುಲದ ದಕ್ಷಿಣ ಭಾಗದಲ್ಲೇ ಸಮಾಧಿ ಮಾಡಲಾಯಿತು. ಪಂಢರಾಪುರದ ವಿಟ್ಠಲನ ದೇಗುಲದೊಳಗೇ ಇರುವ ಏಕೈಕ ಸಂತ-ಸಮಾಧಿ ಎಂದರೆ ಅದು ಕಾನ್ಹೋಪಾತ್ರಳದು ಮಾತ್ರ! ಇಂದಿಗೂ ವಿಟ್ಠಲನ ದೇಗುಲದ ದಕ್ಷಿಣ ಭಾಗದಲ್ಲಿರುವ ಆಕೆಯ ಸಮಾಧಿಗೆ ಬಿಡದೇ ಪೂಜೆ ಸಲ್ಲುತ್ತಿರುವುದನ್ನು ಕಾಣಬಹುದಾಗಿದೆ. ವಿಟ್ಠಲನ ಸನಿಹದಲ್ಲೇ ಆಕೆಯ ಪ್ರತಿಮೆಯೂ ಪೂಜೆಗೊಳ್ಳುತ್ತಿದೆ. ವಿಟ್ಠಲನ ದೇಗುಲದ ದಕ್ಷಿಣ ದ್ವಾರದ ಪ್ರಾಂಗಣದಲ್ಲೇ ಆಕೆಯ ಸಮಾಧಿಗೂ ಪೂಜೆ ಸಲ್ಲುತ್ತಿದೆ!

ಆಕೆಯ ಸಾವಿನ ಬಗ್ಗೆ ಮತ್ತೂ ಕೆಲವು ಊಹಾಪೋಹಗಳು, ವದಂತಿಗಳು ಇವೆಯಾದರೂ ಯಾವುದರಲ್ಲೂ ಖಚಿತತೆ ಇಲ್ಲ, ಸತ್ಯಾಂಶ ದೊರೆತಿಲ್ಲ. ಆಕೆಯನ್ನು ರಾಜ ಬಾದಷಹನೇ ಕೊಲ್ಲಿಸಿದ್ದು ಎಂದೂ ಹೇಳುತ್ತಾರೆ. ನಿರ್ದಿಷ್ಟವಾಗಿ ಏನೂ ತಿಳಿದುಬಂದಿಲ್ಲ. ಆಕೆಯ ಜನ್ಮ ದಿನಾಂಕದಂತೆ ಸಾವಿನ ದಿನಾಂಕವೂ ಸರಿಯಾಗಿ ತಿಳಿಯದೇ ಹೋಗಿದೆ. ಪವಾರ್ ಎಂಬ ಸಂಶೋಧಕರು ಆಕೆ 1480ರಲ್ಲಿ ಮರಣವನ್ನೈದಿದಳು ಎನ್ನುತ್ತಾರೆ. ಮತ್ತಿನ ಕೆಲವು ವಿದ್ವಾಂಸರು 1448, 1468, 1470 ಎಂದೆಲ್ಲ ತರ್ಕಿಸಿದ್ದಾರೆ.

## ಕಾನ್ಹೋಪಾತ್ರಳ ಸಾಹಿತ್ಯ

ದೊರಕಿರುವ ಮೂವತ್ತು ಅಭಂಗಗಳಲ್ಲಿ ಇಪ್ಪತ್ತೂರು ಕವಿತೆಗಳನ್ನು ವಾರಕರೀ ಪಂಥದ "ಸಕಲ ಸಂತ ಗಾಥಾ" ಗ್ರಂಥದಲ್ಲಿ ಸೇರಿಸಿಕೊಂಡು ದಾಖಲಿಸಿದ್ದಾರೆ. ಅವಳ ರಚನೆಗಳಲ್ಲಿ ಹೆಚ್ಚಿನವು ಅವಳ ಜೀವನದ ಯಾತನೆಯ ಚಿತ್ರಣಗಳಿಂದಲೇ ಕೂಡಿದೆ. ಕವಿತೆಗಳ ಮೂಲವಸ್ತುವೇ ದುಃಖ, ಸಂಕಟ, ನೋವು! ಆದರೆ ಅವು ಸುಲಭ ಶೈಲಿಯಲ್ಲಿ ಅರ್ಥವಾಗುವಂತಿದೆಯೆಂದು ವಿಮರ್ಶಕರ ಅಭಿಪ್ರಾಯ. ಭಾವಾಭಿವ್ಯಕ್ತಿ ಸರಳತೆಯಲ್ಲಿದ್ದು ಮನ ಮಿಡಿಯುವಂಥ ಕವಿತೆಗಳೆಂದು ಗುರುತಿಸಿದ್ದಾರೆ. ಕಾನ್ಹೋಳ ಸಾಹಿತ್ಯವು ಶೋಷಿತರನ್ನು ದೈನ್ಯಾವಸ್ಥೆಯಿಂದ ಬಿಡುಗಡೆಯಾಗಿಸಬಲ್ಲ ಎಚ್ಚರದ ಸಂದೇಶ ಗೀತೆಗಳಾಗಿವೆ ಎಂದಿದ್ದಾರೆ ದೇಶಪಾಂಡೆ ಎಂಬ ವಿಮರ್ಶಕರು.

ತನ್ನ ಬದುಕಿನ ವೃತ್ತಿಯ ಬಗ್ಗೆ ಕಾನ್ಹೋಪಾತ್ರಾಳಲ್ಲಿ ಜುಗುಪ್ಸೆ ಹೇವರಿಕೆ ತುಂಬಿದ್ದು ಅದನ್ನೆಲ್ಲ ವಿಠೋಬನಿಗೆ ನಿವೇದಿಸಿಕೊಂಡಿದ್ದಾಳೆ. ಒಲ್ಲದ ಈ ವೃತ್ತಿಯ ಬದುಕಿನಿಂದ ಬಿಡುಗಡೆ ಕೊಡಿಸೆಂದು ಪದೇ ಪದೇ ವಿಠೋಬನಲ್ಲಿ ಪೀಡಿಸಿ ಬೇಡಿದ್ದಾಳೆ. ತಮ್ಮ ಸುಖಕ್ಕಾಗಿ ವೇಶ್ಯಾ ಸ್ತ್ರೀಯರನ್ನು ಬಯಸುವ ಜನರೇ ತಮ್ಮ ಕುಲವನ್ನು ವೇಶ್ಯೆಯರೆಂದು ಜರಿದು ಕೀಳಾಗಿ ಕಾಣುವುದನ್ನು ಕಂಡು ವ್ಯಂಗ್ಯವಾಡಿದ್ದಾಳೆ ಕವಿತೆಗಳಲ್ಲಿ. ವೇಶ್ಯೆಯರೆನ್ನಿಸಿಕೊಂಡಿರುವ ಹೆಣ್ಣುಮಕ್ಕಳ ನೋವು ಕಾವ್ಯ, ಆಸೆ ನಿರಾಸೆಗಳೆಲ್ಲ ಅವಳ ಕವಿತೆಗಳಲ್ಲಿ ಚಿತ್ರಣವಾಗಿವೆ. ತಮ್ಮಂಥ ಹೆಂಗಳೆಯರ ಮೈ ಚರ್ಮ ಮೋಹಿಸಿ ಕಾಮಾತುರರಾಗಿ ಬರುವವರು ನಾವೂ ಒಂದು ಭಾವನೆಗಳಿರುವ ಮನುಷ್ಯ ಜೀವ ಎಂದು ಏಕೆ ಗುರುತಿಸಲಾರರು? ಎಂಬ ಪ್ರಶ್ನೆ ಅವಳ ಕಾವ್ಯಾಭಿವ್ಯಕ್ತಿಯಲ್ಲಿದೆ.

ಯಾವ ಗುರುವಿನಿಂದಲೂ ದೀಕ್ಷೆ ಪಡೆದವಳಲ್ಲವಾದುದರಿಂದ ಕಾನ್ಹೋ ತನ್ನ ಕವಿತೆಗಳಲ್ಲಿ ನಾರಾಯಣ, ಶ್ರೀಪತಿ, ವಿಠೋಬಾ ಎಂಬ ಹೆಸರುಗಳ ಅಂಕಿತವನ್ನು ತಾನೇ ಇರಿಸಿಕೊಂಡು ಕಾವ್ಯ ರಚನೆ ಮಾಡಿದ್ದಾಳೆ.


ವಿಠೋಬನೆಂಬ ನಾಮ ಸ್ಮರಣೆ ತನ್ನನ್ನು ಹೇಗೆ ಅಪಾಯಗಳಿಂದ, ಸಂಕಷ್ಟಗಳಿಂದ ಪಾರು ಮಾಡಿತೆಂದು ಅನೇಕ ಅಭಂಗಗಳಲ್ಲಿ ಅಭಿವ್ಯಕ್ತಿಸಿದ್ದಾಳೆ. "ನಾನು ನಿನ್ಹೊಬ್ಬನಿಗೇ ಸೇರಿದವಳು ಎನ್ನುವಾಗ ಮತ್ತಾರೊ ನನ್ನನ್ನು ಎಳೆದೊಯ್ಯಬಹುದೆ? ಸಿಂಹಕ್ಕೆ ಮೀಸಲಾಗಿಹ ಪಾಲನ್ನು ನರಿಯೊಂದು ಪಡೆದು ತಿನ್ನಬಹುದೆ? ನನ್ನ ಈ ದೇಹ, ಜೀವಗಳನು ನಿನ್ನ ಪಾದದಲಿ ಕೆಡವಿದ್ದೇನೆ. ನಿನ್ನ ಬಿರುದು ಉಳಿಸಿಕೊಳ್ಳಲಾದರೂ ಅದನ್ನು ಉಳಿಸಿಕೋ ವಿಠೋಬಾ" ಎಂಬ ಅವಳ ರಚನೆಯೊಂದು ಬೀದರ್‌ನ ಬಾದಷಹ ಅವಳನ್ನು ಒಯ್ಯಲು ಬಂದಾಗ ರಚಿಸಿದ್ದೆಂದು ಡಾ. ರಾನಡೆ ಹೇಳುತ್ತಾರೆ.

### ಕಾನ್ಹೋಪಾತ್ರಳ ಒಂದು ಕವಿತೆಯ ಅನುವಾದ

**ಬಿದ್ದವರ ಮೇಲೆತ್ತಿ ಉದ್ಧರಿಸುವವ**
**ಎಂಬ ಬಿರುದೇಕೆ ನಿನಗೆ ಪ್ರಭೂ?**
**ಬಿದ್ದಿರುವ ನನ್ನೆಡೆಗೇಕೆ ನೋಡಲೊಲ್ಲೆ?**
**ಕೀಳುಕುಲದವಳೆಂದು ನಿನಗೂ ತಾತ್ಸಾರವೆ?**
**ನಂಬಿಕಾರ್ಹವಾದ ಪ್ರೀತಿಯನು ಎಲ್ಲೂ ಕಾಣದೆ**
**ಕಾನ್ಹೋಪಾತ್ರ ಬಂದು ಬಿದ್ದಿಹಳು ನಿನ್ನ ಪಾದದಿ**
**ನಿನ್ನ ದಯೆಯಿಂ ಉದ್ಧಾರವಾಗುವೆ ನಾನೆಂಬ**
**ಸವಾಲೊಡ್ಡಿ ಬಂದಿಹಳು ಶರಣಾಗಿ**
**ನಾರಾಯಣನೆ, ಸ್ವೀಕರಿಸಲೊಲ್ಲೆಯಾ?**
**ವಿಟ್ಠಲನೇ, ಉದ್ಧರಿಸಲೊಲ್ಲೆಯಾ?**

ಈಗ ಕಾನ್ಹೋಪಾತ್ರಳ ಸಮಾಧಿಯ ಮೇಲೆ ಮರವೊಂದು ಬೆಳೆದು ನಿಂತಿದೆ. ಭಕ್ತರು ಇಂದಿಗೂ ಈ ಮರ, ಸಮಾಧಿಗೆ ಪೂಜೆ ಸಲ್ಲಿಸುತ್ತಿದ್ದಾರೆ. ಮಂಗಳವಾಡೆ (ಅವಳ ಜನಿಸಿದ ಊರು) ಯಲ್ಲೂ ದೇಗುಲವೊಂದನ್ನು ಅವಳ ಹೆಸರಿನಲ್ಲಿ ನಿರ್ಮಾಣ ಮಾಡಿ ಕಾನ್ಹೋಪಾತ್ರಳ ವಿಗ್ರಹಾರಾಧನೆಯನ್ನು ಮಾಡಿಕೊಂಡು ಬರುತ್ತಿದ್ದಾರೆ. ತನ್ನ ಕುಲವೃತ್ತಿಯನ್ನು ಜರಿದು ಒದೆದು ದೇವರಲ್ಲಿ ಶರಣಾಗಿ ದೇವರಿಗೆ ಮಾತ್ರ ಮುಡಿಪಾಗಿ ಬಾಳಿದ ಧೀಮಂತ ಹೆಣ್ಣು ಕಾನ್ಹೋಪಾತ್ರಾ!

**ಶ್ರೀಕೃಷ್ಣಕೃಪಾ, ಸೆಡಾರ್ ಬ್ಲಾಕ್-೨, ಹರವಿಜಯ ಅಪಾರ್ಟ್‌ಮೆಂಟ್ಸ್,**
**ರವಿಗುಡ್ಡ, ಇಟ್ಟಮಡು, ಬನಶಂಕರಿ ೩ನೇ ಹಂತ,**
**ಬೆಂಗಳೂರು-೫೬೦ ೦೦೫**



# ಗೀತಾ ಪ್ರವಚನ

■ ಸಂತ ವಿನೋಬಾ ಬಾವೆ.
■ ಕನ್ನಡ ಅನುವಾದ: ಸಿದ್ದವನಹಳ್ಳಿ ಕೃಷ್ಣಶರ್ಮಾ



**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

# ಏಕಾಗ್ರತೆ ಸಾಧಿಸುವುದು ಹೇಗೆ?

8. ಏಕಾಗ್ರತೆ ಬೇಕೆ? ಸರಿಯೆ. ಅದನ್ನು ಸಾಧಿಸುವುದು ಹೇಗೆ? ಅದಕ್ಕೆ ಮಾಡಬೇಕಾದುದೇನು? ಭಗವಂತ ಹೇಳುತ್ತಾನೆ. ಆತ್ಮನಲ್ಲಿ ಮನಸ್ಸು ನಿಲ್ಲಿಸು–

"ನ ಕಿಂಚದಪಿ ಚಿಂತಯೇತ್–ಬೇರೇನೂ ಯೋಚಿಸಬೇಡ."

ಸರಿ ಆದರದನ್ನು ಹೇಗೆ ಸಾಧಿಸುವುದು? ಮನಸ್ಸನ್ನು ನಿಯತಗೊಳಿಸುವುದು ಬಹಳ ಮಹತ್ತ್ವದ್ದು. ವಿಚಾರ ಚಕ್ರಗಳನ್ನು ಬಲವಾಗಿ ನಿಲ್ಲಿಸದೆ ಏಕಾಗ್ರತೆ ಎಲ್ಲಿಯದು? ಹೊರಗಿನ ಚಕ್ರಗಳನ್ನು ಹೇಗಾದರೂ ನಿಲ್ಲಿಸಬಹುದು. ಒಳಗಿನ ಚಕ್ರ ಮಾತ್ರ ತಿರುಗುತ್ತಲೇ ಇರುತ್ತದೆ. ಚಿತ್ತದ ಏಕಾಗ್ರತೆಗೆ ಬಾಹ್ಯ ಸಾಧನಗಳನ್ನು ಬಳಸಿದಂತೆಲ್ಲ ಈ ಒಳಗಿನ ಚಕ್ರ ಹೆಚ್ಚು ಹೆಚ್ಚು ವೇಗದಿಂದ ತಿರುಗಲಾರಂಭಿಸುತ್ತದೆ. ನೀವು ನೆಟ್ಟಗೆ ಕುಳಿತುಕೊಳ್ಳಿ. ಕಣ್ಣು ಸ್ಥಿರವಾಗಿರಿಸಿ ಆಸನ ಹಾಕಿ. ಇವುಗಳಿಂದ ಮನಸ್ಸನ್ನು ಏಕಾಗ್ರಗೊಳಿಸಲಾಗುವುದಿಲ್ಲ. ಮನಸ್ಸಿನೊಳಗಿನ ಚಕ್ರವನ್ನು ನಿಲ್ಲಿಸಲುಬೇಕಾದುದನ್ನು ಸಾಧಿಸಬೇಕು. ಅದು ಮುಖ್ಯ ವಿಚಾರ.

9. ಹೊರಗಿನ ಅಪರಂಪಾರ ಸಂಸಾರ ಮನಸ್ಸಿನಲ್ಲಿ ತುಂಬಿರುತ್ತದೆ. ಅದನ್ನು ನಿಲ್ಲಿಸುವ ಹೊರತು ಏಕಾಗ್ರತೆ ಅಸಾಧ್ಯ. ನಮ್ಮ ಆತ್ಮದ ಅಪಾರ ಜ್ಞಾನ ಶಕ್ತಿಯನ್ನು ಹೊರಗಿನ ಕ್ಷುದ್ರವಸ್ತುಗಳಿಗಾಗಿ ನಾವು ಹಾಳು ಮಾಡುತ್ತೇವೆ. ಅದು ಸಲ್ಲದು. ಯಾರನ್ನೂ ಲೂಟಿ ಮಾಡದೆ ಸ್ವಂತ ಪ್ರಯತ್ನದಿಂದ ಶ್ರೀಮಂತನಾದ ಮನುಷ್ಯ ಹೇಗೆ ಅತಿವ್ಯಯ ಮಾಡಲಾರನೋ ಹಾಗೇ ನಾವು ನಮ್ಮ ಆತ್ಮದ ಜ್ಞಾನ ಶಕ್ತಿಯನ್ನು ಕ್ಷುದ್ರ ವಸ್ತುಗಳ ಚಿಂತನೆಯಲ್ಲಿ ಹಾಳುಮಾಡಕೂಡದು. ನಮ್ಮ ಅಮೂಲ್ಯ ನಿಧಿ ಈ ಜ್ಞಾನ ಶಕ್ತಿ. ಅಂಥದನ್ನು ಸ್ಥೂಲ ವಿಷಯಗಳಲ್ಲಿ ನಾವು ಹಾಳುಮಾಡುತ್ತೇವೆ. ಈ ಪಲ್ಯ ಚೆನ್ನಾಗಿಲ್ಲ. ಇದಕ್ಕೆ ಉಪ್ಪು ಸಾಲದು. ಎಷ್ಟು ಗುಂಜಿಯಯ್ಯಾ ಕಡಮೆಯಾದದ್ದು? ಅರ್ಧ ಹರಳು ಉಪ್ಪು ಕಡಮೆಯಾದರೆ ಆ ಮಹಾವಿಚಾರಕ್ಕಾಗಿ ನಮ್ಮ ಜ್ಞಾನ ಹಾಳು. ಶಾಲೆಯ ನಾಲ್ಕು ಗೋಡೆಗಳೊಳಗೆ ಮಕ್ಕಳಿಗೆ ಪಾಠ ಹೇಳುತ್ತಾರೆ. ಗಿಡದ ಕೆಳಗೆ ಕೂಡಿಸಿದರೆ ಗುಬ್ಬಿ ಕಾಗೆಗಳನ್ನು ಕಂಡು ಅವರ ಮನಸ್ಸು ಏಕಾಗ್ರವಾಗಲಾರದಂತೆ. ಚಿಕ್ಕಮಕ್ಕಳು ಅವರು. ಗುಬ್ಬಿ ಕಾಣಿಸದಿದ್ದರೆ ಸರಿ, ಆಯಿತು ಅವರ ಏಕಾಗ್ರತೆ. ನಾವೋ ದೊಡ್ಡ ದಡ್ಡರು. ನಮಗೆ ಕೊಂಬು ಬೆಳೆದಿವೆ. ಏಳೇಳು ಗೋಡೆಗಳೊಳಗಡೆ ನಮ್ಮನ್ನಿಟ್ಟರು ಏಕಾಗ್ರತೆ ಬರಲಿಕ್ಕಿಲ್ಲ. ಏಕೆಂದರೆ ಲೋಕದಲ್ಲಿನ ತೀರ ಕ್ಷುಲ್ಲಕ ವಿಷಯಗಳನ್ನು ಚರ್ಚಿಸುವವರು ನಾವು. ಪರಮಾತ್ಮನನ್ನು ಕಾಣಬಲ್ಲ ಜ್ಞಾನವನ್ನು ಪಲ್ಯದ ರುಚಿಯ ಚರ್ಚೆಗಳಿಗಾಗಿ ಹಾಳು ಮಾಡುವವರು. ಅದರಲ್ಲೇ ಕೃತಕೃತ್ಯರಾಗುವವರು!

ಇಂಥ ಈ ಭಯಾನಕ ಸಂಸಾರ ಹಗಲಿರುಳೂ ನಮ್ಮ ಸುತ್ತ ಹೊರಗೂ ಒಳಗೂ ತಿರುಗುತ್ತಿದೆ. ಪ್ರಾರ್ಥನೆ ಭಜನೆಗಳಲ್ಲೂ ಸಹ ನಮ್ಮ ಉದ್ದೇಶ ಹೊರಗಿನದೇ. ಪರಮಾತ್ಮನೊಂದಿಗೆ ತನ್ಮಯವಾಗಿ ಒಂದು ಕ್ಷಣವಾದರೂ ಸಂಸಾರವನ್ನು ಮರೆಯೋಣ ಎಂಬ ಭಾವನೆ ಶೂನ್ಯ. ಪ್ರಾರ್ಥನೆಯೂ ಒಂದು ಪ್ರದರ್ಶನ ಎನ್ನುವಂತಾಗಿದೆ ನಮ್ಮ ಮನಸ್ಸಿನ ಸ್ಥಿತಿ. ಇಂಥಲ್ಲಿ ಆಸನ ಹಾಕಿದರೇನು, ಕಣ್ಣು ಮುಚ್ಚಿಕೊಂಡರೇನು? ಎಲ್ಲವೂ ವ್ಯರ್ಥ. ನಮ್ಮ ನಮ್ಮ ಮನಸ್ಸಿನ ಓಟ ಸದಾ ಹೊರಗೇ ಹರಿಯುತ್ತಿದ್ದರೆ ತಮ್ಮ ಸಾಮರ್ಥ್ಯವೆಲ್ಲವೂ ನಷ್ಟವಾಗುತ್ತದೆ. ಯಾವ ಬಗೆಯ ವ್ಯವಸ್ಥೆಯೂ ನಿಯಂತ್ರಣ ಶಕ್ತಿಯೂ ಉಳಿಯುವುದಿಲ್ಲ. ಈ ವಿಷಯ ಈಗ ನಮ್ಮ ದೇಶದಲ್ಲಿ ಪದೇ ಪದೇ ಅನುಭವವಾಗುತ್ತಿದೆ.

ವಾಸ್ತವವಾಗಿ ಭರತವರ್ಷ ಪರಮಾರ್ಥದ ಭೂಮಿ. ಇಲ್ಲಿನ ಜನ ಈಗಲೂ ಮೇಲ್ಮಟ್ಟದಲ್ಲಿದ್ದಾರೆ ಎಂದು ತಿಳಿಯುತ್ತಾರೆ. ಇಂಥ ದೇಶದಲ್ಲಿ ನಮ್ಮ ನಿಮ್ಮ ಸ್ಥಿತಿ ಹೇಗಿದೆ! ತೀರ ಸಣ್ಣ ಪುಟ್ಟ ವಿಷಯಗಳಲ್ಲಿ ನಾವು ತೋರಿಸುವ ಆಸಕ್ತಿಯನ್ನು ನೋಡಿದರೆ ವಿಷಾದವಾಗುತ್ತದೆ. ನಮ್ಮ ಚಿತ್ತ ಕ್ಷುದ್ರ ವಿಷಯಗಳಲ್ಲಿಯೇ ತೊಡಗಿಕೊಂಡಿದೆ.

**ಕೇಳಲು ಕಥೆ ಪುರಾಣ ಸವಿನಿದ್ದೆ**
**ಮಲಗಿದರೆ ಮನವು ಚಿಂತೆಯ ಮುದ್ದೆ**



ಗಹನ ಕರ್ಮಗತಿ ಇಂತಿರಲು ಏಕಳುತ್ತಿದ್ದೀ?

ಕಥೆ, ಪುರಾಣ, ಕೇಳಲು ಹೋದರೆ ನಿದ್ದೆ ಬಂದುಬಿಡುತ್ತದೆ. ನಿದ್ದೆ ಮಾಡಬೇಕೆಂದು ಮಲಗಿದರೆ ಚಿಂತೆ ಮುತ್ತುತ್ತದೆ. ವಿಚಾರಚಕ್ರ ಪ್ರಾರಂಭವಾಗುತ್ತವೆ. ಶೂನ್ಯಾಗ್ರತೆ ಒಂದು ಕಡೆ, ಅನೇಕಾಗ್ರತೆ ಇನ್ನೊಂದು ಕಡೆ. ಏಕಾಗ್ರತೆ ಎಲ್ಲಿಯೂ ಇಲ್ಲ. ಇಷ್ಟು ಮಟ್ಟಿಗೆ ಮನುಷ್ಯ ಇಂದ್ರಿಯಗಳ ಗುಲಾಮನಾಗಿದ್ದಾನೆ. ಒಮ್ಮೆ ಒಬ್ಬ "ಕಣ್ಣು ಅರ್ಧೋನ್ಮೀಲಿತವಾಗಿರಬೇಕೆಂದು ಏಕೆ ಹೇಳಿದ್ದಾರೆ?" ಎಂದು ನನ್ನನ್ನು ಕೇಳಿದ. ಅದಕ್ಕೆ ನಾನು "ಸುಲಭವಾಗಿಯೇ ಹೇಳುತ್ತೇನೆ. ಪೂರ್ತಿಯಾಗಿ ಕಣ್ಣುಮುಚ್ಚೆ ನಿದ್ರೆಬರುತ್ತದೆ. ಪೂರ್ತಿ ತೆರೆದಿಟ್ಟರೆ ನಾಲ್ಕು ಕಡೆಗೂ ದೃಷ್ಟಿ ಹೋಗುವುದರಿಂದ ಏಕಾಗ್ರತೆಯುಂಟಾಗುವುದಿಲ್ಲ. ಮುಚ್ಚಿದರೆ ನಿದ್ರೆ. ಅದು ತಮೋಗುಣ. ತೆರೆದಿಟ್ಟರೆ ಎಲ್ಲ ಕಡೆಗೂ ದೃಷ್ಟಿ ಹರಿಯುತ್ತದೆ–ಅದು ರಜೋಗುಣ. ಅದಕ್ಕಾಗಿ ಮಧ್ಯದ ಸ್ಥಿತಿಯನ್ನು ಹೇಳಿದೆ" ಎಂದೆ. ಅರ್ಥವಿಷ್ಟೆ, ಮನಸ್ಸಿನ ನಿಲುವನ್ನು ಬದಲಾಯಿಸದೆ ಏಕಾಗ್ರತೆ ಬರಲಾರದು. ಅದಕ್ಕಾಗಿ ಮನದ ನಿಲುವು ಶುದ್ಧವಾಗಿರಬೇಕು. ಬರೀ ಆಸನ ಹಾಕಿದರೆ ಅದು ಆಗದು. ವ್ಯವಹಾರವೆಲ್ಲವೂ ಶುದ್ಧವಾಗಿರಬೇಕಾದುದು ಅಗತ್ಯ. ವ್ಯವಹಾರ ಶುದ್ಧವಾಗಿರಬೇಕಾದರೆ ಅದರ ಉದ್ದೇಶ ಬದಲಾಗಬೇಕು. ವೈಯಕ್ತಿಕ ಲಾಭ, ವಾಸನಾತೃಪ್ತಿ. ಇಂಥ ಬಾಹ್ಯ ವಿಷಯಗಳಿಗಾಗಿ ವ್ಯವಹಾರ ಮಾಡಬಾರದು.

11. ದಿನವೆಲ್ಲ ನಾವು ವ್ಯವಹಾರ ಮಾಡುತ್ತೇವೆ. ಇದೆಲ್ಲ ಆಟಾಟೋಪದ ಉದ್ದೇಶವೇನು?

ಇನಿತೇಕೆ ಸಕಲ ಅಟ್ಟಹಾಸ? ಇನಿದಾಗಲೆನ್ನ ಕಡೆಯ ನಿಮಿಷ।

ಎಲ್ಲ ಅಟ್ಟಹಾಸ, ಎಲ್ಲ ಆರ್ಭಟ, ನಮ್ಮ ಕೊನೆಯ ಗಳಿಗೆ ಮಧುರವಾಗಲೆಂದಲ್ಲವೇ? ಬದುಕಿನುದ್ದಕ್ಕೂ ಕಹಿ ವಿಷವನ್ನುಣ್ಣಬೇಕು. ಏಕೆ...? ಆ ಕೊನೆಯ ಗಳಿಗೆ, ಆ ಸಾವು ಪವಿತ್ರವಾಗಲಿ ಎಂದು. ನಿತ್ಯ ಕೊನೆಯ ಕ್ಷಣ ಬರುವುದು ಸಂಜೆಯಲ್ಲಿ. ನಿತ್ಯಕರ್ಮಗಳನ್ನೆಲ್ಲ ಪವಿತ್ರಭಾವನೆಯಿಂದ ನಡೆಸಿದ್ದರೆ ರಾತ್ರಿಯ ಪ್ರಾರ್ಥನೆ ಮಧುರವಾದೀತು. ಆ ಕೊನೆಯ ಕ್ಷಣ ಮಧುರವಾದರೆ ಅಂದಿನ ಕರ್ಮಗಳೆಲ್ಲ ಸಫಲವಾದಂತೆ. ಆಗ ನನ್ನ ಮನಸ್ಸಿನ ಏಕಾಗ್ರತೆ ಸಾಧ್ಯ.

ಏಕಾಗ್ರತೆಗೆ ಇಂಥ ಜೀವನಶುದ್ಧಿ ಅಗತ್ಯ. ಬಾಹ್ಯ ವಸ್ತುಗಳ ಯೋಚನೆ ನಿಲ್ಲಬೇಕು. ಮಾನವನ ಆಯುಸ್ಸು ಹೆಚ್ಚೇನೂ ಇಲ್ಲ. ಆದರೂ ಈ ಅಲ್ಪ ಆಯುಸ್ಸಿನಲ್ಲೂ ಸಹ ಪರಮೇಶ್ವರ–ಸುಖವನ್ನನುಭವಿಸುವ ಸಾಮರ್ಥ್ಯವುಂಟು. ಇಬ್ಬರು ಮನುಷ್ಯರು ಒಂದೇ ರೂಪದವರು, ಇಬ್ಬರಿಗೂ ಎರಡು ಕಣ್ಣು, ಅವುಗಳ ನಡುವೆ ಒಂದು ಮೂಗು, ಅದಕ್ಕೆ ಎರಡು ಹೊಳ್ಳೆಗಳು. ಎಲ್ಲವೂ ಒಂದೇ ತರದ್ದಾಗಿದ್ದರೂ ಒಬ್ಬ ದೇವತ್ವಕ್ಕೆ ಏರಲು ಅರ್ಹ, ಇನ್ನೊಬ್ಬ ಪಶುಸಮಾನ. ಹೀಗೇಕಾಗಬೇಕು? ಒಬ್ಬನೇ ಒಬ್ಬ ದೇವರ ಮಕ್ಕಳು ಎಲ್ಲರೂ. ಹಾಗಿದ್ದರೂ ಈ ಅಂತರವೇಕೆ? ಈ ಇಬ್ಬರೂ ಮನುಷ್ಯರ ಜಾತಿ ಒಂದೇ ಇದ್ದೀತೆಂದು ಅನಿಸುವುದಿಲ್ಲ. ನರನಿಂದ ನಾರಾಯಣ ಒಬ್ಬ; ನರನಿಂದ ವಾನರ ಒಬ್ಬ!

12. ಮನುಷ್ಯ ಎಂಥ ಉಚ್ಚ ಸ್ಥಿತಿಗೇರಬಲ್ಲ ಎಂಬುದರ ದೃಷ್ಟಾಂತವಾಗಿ ಹಿಂದೆ ಅನೇಕ ಮಹಾಪುರುಷರು ಬಾಳಿದರು. ಈಗಲೂ ಅಂಥವರನೇಕರು ನಮ್ಮಲ್ಲಿ ಬದುಕಿದ್ದಾರೆ. ಇದು ಅನುಭವದ ಮಾತು. ಈ ನರದೇಹದ ಶಕ್ತಿಯೇನು ಎಂಬುದನ್ನು ತೋರಿಸುವ ಶರಣರು ಆಗಿಹೋದರು. ಈಗಲೂ ಇದ್ದಾರೆ. ಈ ದೇಹ ಧರಿಸಿಕೊಂಡೇ ಮನುಷ್ಯ ಇಂಥ ಅದ್ಭುತ ಕೃತಿಗಳನ್ನು ಮಾಡಬಲ್ಲನಾದರೆ ನಾನೇಕೆ ಮಾಡಲಾರೆ?" ನನ್ನ ಕಲ್ಪನೆಗೆ ನಾನೇಕೆ ತಡೆ ಹಾಕಬೇಕು? ಯಾವ ನರದೇಹದಲ್ಲಿದ್ದುಕೊಂಡೇ ಇತರರು ನರವೀರರಾದರೋ, ಆ ನರದೇಹದಲ್ಲೇ ನಾನೂ ಇದ್ದೇನೆ. ಆದರೂ ನಾನೇಕೆ ಹೀಗಿರುವುದು? ನನ್ನಲ್ಲಿ ಏನೋ ತಪ್ಪಿರಬೇಕು. ನನ್ನ ಈ ಚಿತ್ತ ಸರ್ವದಾ ಹೊರಕ್ಕೆ ಧಾವಿಸುತ್ತಿದೆ. ಇತರರ ಗುಣ ದೋಷಗಳನ್ನು ನೋಡುವುದರಲ್ಲೇ ನನ್ನ ಶಕ್ತಿ ಹಾಳಾಗುತ್ತಿದೆ. ಬೇರೆಯವರ ದೋಷಗಳನ್ನು ನಾನೇಕೆ ನೋಡಬೇಕು?

ಎಣಿಸಲೇ ಹೆರರ ಗುಣದೋಷ । ನನಗೇನು ಕೊರೆ ಲೋಪದೋಷ?

ನನ್ನದು ಕಡಮೆ ತಪ್ಪು ಇವೆಯೇ? ಯಾವಾಗಲೂ ಇತರರ ಸಣ್ಣಪುಟ್ಟ ವಿಷಯಗಳನ್ನೇ ನೋಡುತ್ತಿದ್ದರೆ ಚಿತ್ತದ ಏಕಾಗ್ರತೆಯನ್ನು ನಾ ಸಾಧಿಸಬಲ್ಲೆನೆ? ಹೀಗೆ ಮಾಡಿದರೆ ನನಗೆ ಎರಡೇ ಸ್ಥಿತಿ ಪ್ರಾಪ್ತವಾಗುತ್ತವೆ. ಶೂನ್ಯಾವಸ್ಥೆ ಎಂದರೆ ನಿದ್ರೆ ಅಥವಾ ಅನೇಕಾಗ್ರತೆ. ತಮೋಗುಣ, ರಜೋಗುಣಗಳಲ್ಲೇ ನನ್ನ ತೊಳಲಾಟವಾದೀತು.

ಹೀಗೆ ಕೂತಿರು, ಹೀಗೆ ಕಣ್ಣಿಡು, ಹೀಗೆ ಆಸನ ಹಾಕು–ಇತ್ಯಾದಿಯಾಗಿ ಪರಮಾತ್ಮ ಸೂಚನೆ ಕೊಟ್ಟಿಲ್ಲವೆಂದಲ್ಲ. ಆದರೆ ಚಿತ್ತದ ಏಕಾಗ್ರತೆ ಇದಕ್ಕಿಂತ ಹಿರಿದು. ಅದನ್ನು ತಿಳಿದರೆ ಮಾತ್ರವೇ ಇವುಗಳ ಉಪಯೋಗ. ಚಿತ್ತದ ಏಕಾಗ್ರತೆ ಅವಶ್ಯವೆಂಬುದು ಒಮ್ಮೆ ಮನವರಿಕೆಯಾದರೆ ಮನುಷ್ಯ ಸಾಧನೆಗಳನ್ನು ತಾನೇ ಹುಡುಕಿಕೊಂಡಾನು.

## 28. ಬಾಳಿನಲ್ಲಿ ಪರಿಮಿತತನ

13. ಈ ಚಿತ್ತದ ಏಕಾಗ್ರತೆಗೆ ನೆರವಾಗುವ ಎರಡನೆಯ ವಿಷಯ



48ನೇ ಪುಟಕ್ಕೆ



**ಸ್ವಾಮಿ ನಿಮಿಷಾನಂದಜೀಯವರ ಲೇಖನ ಮಾಲೆ ನಮ್ಮ ದೈನಂದಿನ ಜೀವನಗಳನ್ನು, ನಮ್ಮ ಪ್ರಾಚೀನ ಶಾಸ್ತ್ರಗಳನ್ನು ಆಧರಿಸಿ, ಹೇಗೆ ಉತ್ತಮಪಡಿಸಿಕೊಳ್ಳಬಹುದು ಎಂಬುದನ್ನು ತಿಳಿಯಪಡಿಸುವಂತಹವು. ಮರೀಚಿ ಮಹರ್ಷಿಗಳ ಮಕ್ಕಳಾದ ಕಶ್ಯಪರು ಮಾನವ ಧರ್ಮದ ಮೂಲಭೂತ ರಹಸ್ಯ ತತ್ತ್ವಗಳನ್ನು ಕಶ್ಯಪ ಸೂತ್ರಗಳಲ್ಲಿ ವಿವರಿಸಿದ್ದಾರೆ.**

# ಪಾಶಾಚ್ಛೇದನೇನ ಸದಾಶಿವತ್ವಂ

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

ನಾವು ಪ್ರಪಂಚದಲ್ಲಿದ್ದರೂ ತಾವರೆ ಎಲೆಯ ಮೇಲಿನ ನೀರಿನಂತೆ ಅದನ್ನು ತಾಗಿಸಿಕೊಳ್ಳದೆ ಮುಕ್ತತೆಯಿಂದ ಆನಂದದಲ್ಲಿ ತೇಲಾಡುತ್ತಿರುತ್ತೇವೆ. ಶಿವನ ಅರಿವಿಲ್ಲದೆ ನಾವು ಜೀವಂತ ಶವವಾಗಿದ್ದೇವೆ. ಹುಟ್ಟುತ್ತಿರುವಂತೆ ಯಾವುದಾದರು ಮಗು ಸೆರೆಮನೆಯಲ್ಲಿ ಹುಟ್ಟಿದಾಗ, ಅದರ ತಂದೆ-ತಾಯಿಯ ಶಿಕ್ಷೆ ಮುಗಿಯುವವರೆಗೂ ಮಗು ಅಲ್ಲೇ ಬೆಳೆಯುತ್ತದೆ. ಬೆಳೆಯುವ ವಯಸ್ಸಿನಲ್ಲಿ ಸೆರೆಮನೆಯೇ ಸರ್ವವೂ, ಅದೇ ಪ್ರಪಂಚ ಎಂಬುದು ಆ ಮಗುವಿಗೆ ಅನಿಸುತ್ತದೆ. ಬಾವಿಯಲ್ಲಿ ಇರುವ ಕಪ್ಪೆಯಂತೆ ಕೂಪಮಂಡೂಕವಾಗಿಬಿಡುತ್ತದೆ. ನಾವು ದೇವರನ್ನು ಭಾವ ಚಿತ್ರಗಳಲ್ಲಿ ನೋಡಿದ್ದೇವೆ. ಆಕಾರಗಳಲ್ಲಿ ಮತ್ತು ರೂಪಗಳಲ್ಲಿ ನೋಡಿದ್ದೇವೆ. ಆದರೆ ಅನುಭವಿಸಿಲ್ಲವಾದ್ದರಿಂದ ನಾವು ಶಿವ ಆಗದೆ ಶವ ಆಗಿದ್ದೇವೆ.

ನಾವು ಮನಸ್ಸೆಂಬ ವಸ್ತ್ರವನ್ನು ಭಗವಂತ ಎಷ್ಟು ಸುಂದರವಾಗಿ ರಚಿಸಿದ್ದಾನೆ, ಇದನ್ನು ಎಂತಹ ಅದ್ಭುತ ಗುಣಗಳಿಂದ ಅಲಂಕರಿಸಿದ್ದಾನೆ, ಈ ವಸ್ತ್ರದ ಮೇಲೆ ಏನೆಲ್ಲ ಕೆಲಸಗಳನ್ನು ಮಾಡಿದ್ದಾನೆ. ಆದರೆ ನಾವು ಮಾಡಿರುವುದು ಏನು? ಈ ಮನಸ್ಸೆಂಬ ವಸ್ತ್ರವನ್ನು ಗಂಟು ಮಾಡಿದ್ದೇವೆ. ಅದು ಇಂದಿನ ದಿವಸ ಬಿಡಿಸಲಾಗದ ಕಗ್ಗಂಟಾಗಿ ಕುಳಿತಿದೆ. ಇದನ್ನು ಯಾವ ರೀತಿ ಬಿಡಿಸಬೇಕು ಎಂಬುದನ್ನು ವಿಶದವಾಗಿ ತಿಳಿಹೇಳುತ್ತಾ ತಮ್ಮ ಸೂತ್ರಗಳೆಂಬ ಕತ್ತರಿ, ಚಾಕು ಮತ್ತು ಕೃತಿಯನ್ನು ನಮ್ಮ ಕೈಗೆ ಕೊಟ್ಟು, ಇದನ್ನು ಹರಿಯುತ್ತಾ ಬನ್ನಿ, ಬಿಡಿಸುತ್ತಾ ಬನ್ನಿ ಎಂದು ಹೇಳಿ ತಾಪವನ್ನು ಭಸ್ಮಮಾಡುವ ತಪಸ್ಸಿನ ಮಹತ್ತ್ವವನ್ನು ತಿಳಿಸುತ್ತಾರೆ ಕಶ್ಯಪರು. ಆದ್ದರಿಂದಲೇ ಇಲ್ಲಿ ನಾರದ ಮುನಿಗೆ ಹೇಳಿದ ಒಂದು ಮಹತ್ತಾದಂತಹ ವಾಕ್ಯವನ್ನು ನೆನಪಿಸಿಕೊಳ್ಳಬೇಕಾಗುತ್ತದೆ. ದೇವಸ್ಥಾನಕ್ಕೆ ಹೋದಾಗ ನಮಗೆ ದೇವರ ಮೇಲೆ ಗಮನವಿಲ್ಲದೆ, ಕುಳಿತುಕೊಳ್ಳುವ ಆಸನ ಚೆನ್ನಾಗಿದೆಯೇ, ಸ್ವಚ್ಛವಾಗಿದೆಯೇ, ಶುದ್ಧವಾಗಿದೆಯೇ, ಜಮಖಾನ ಹಾಸಿದ್ದಾರೆಯೇ, ಪೀಠ ಇಟ್ಟಿದ್ದಾರೆಯೇ ಎಂಬುದರ ಬಗ್ಗೆ ಗಮನವಿರುತ್ತದೆ. ಎಲ್ಲವೂ ಅನುಕೂಲವಾಗಿದ್ದರೆ ನಮಗೆ ಅಲ್ಲಿ ಕುಳಿತು ಧ್ಯಾನಕ್ಕೆ ಹೋದಾಗ ಸುಖವಾದ ನಿದ್ರೆ ಬರುತ್ತದೆ. ದೇಹದ ಅನುಕೂಲಕ್ಕೆ ನಾವು ಪ್ರಾಮುಖ್ಯ ಕೊಟ್ಟಾಗ ಏನನ್ನೂ ಸಾಧಿಸಲಾಗುವುದಿಲ್ಲ.

ಲೌಕಿಕ, ಭೌತಿಕ, ಸಂಸ್ಕಾರ, ಸಂಸ್ಕೃತಿ ತಿಳಿದಿರುವ ನಮಗೆ ಅಂತರಾತ್ಮ ಏನು ಎಂಬುದು ತಿಳಿದಿಲ್ಲ. ಹಾಗಾಗಿ ನಮ್ಮಲ್ಲಿ ಸದಾ ಜುಗುಪ್ಸೆಯೇ ತುಂಬಿದೆ. ನಮಗೆ ಸ್ವಾತಂತ್ರ್ಯವಿಲ್ಲ. ಆದ್ದರಿಂದಲೇ ನಾವು ತಪಸ್ಸನ್ನು ತೀವ್ರಗೊಳಿಸಬೇಕು. ಆಗ ನಮಗೆ ಮೂರನೆಯ ಸ್ವಾತಂತ್ರ್ಯ ಸಿಗುತ್ತದೆ ಎಂದು ಕಶ್ಯಪ ಮುನಿ ಹೇಳುತ್ತಾರೆ. ಈ ಸ್ವಾತಂತ್ರ್ಯ ಸಿಕ್ಕಾಗ, ಯಾವಾಗಲೂ ಸತ್ಸಂಗಗಳಲ್ಲಿರಬೇಕೆನಿಸುತ್ತದೆ.

'ಸತ್ಸಂಗ' ಎಂದರೇನು? ಸತ್ಯವನ್ನೇ ಸದಾ ಮಾತನಾಡುವಂತಹ ಜನರ ಸಂಗ ಮಾಡುವುದು, ಹಾಗಾದರೆ 'ಸತ್ಯ' ಎಂದರೇನು? ಇಲ್ಲಿ ಲೌಕಿಕದಲ್ಲಿ ನಾವು ತಿಳಿದುಕೊಂಡಂತಹ ಸತ್ಯ ಇದಲ್ಲ. 'ಸತ್' ಎಂದರೆ ಯಾವುದರಿಂದಲೂ ಸೃಷ್ಟಿಯಾಗದಿರುವಂತಹ, ಯಾವುದರಿಂದಲೂ ನಾಶವಾಗದಿರುವಂತಹ, ತಾನು ತಾನುತಾನಾಗೇ ಇರುವಂತಹ, ಯಾವುದೇ ಕಾರಣಕ್ಕೂ ತನ್ನ ರೂಪ, ಗುಣ, ಚೈತನ್ಯ ಮತ್ತು ಶಕ್ತಿಯಲ್ಲಿ ಬದಲಾವಣೆಯಾಗದಂತಹ ಒಂದು ಅಮೂಲ್ಯವಾದ, ಶುಭ್ರವಾದ, ಪರಿಶುದ್ಧವಾದ, ನಿರ್ಮಲ ನಿರಾಕಾರ ರೂಪದಲ್ಲಿರುವ ಒಂದು ಶಕ್ತಿ. ಈ 'ಸತ್' ಅನ್ನೇ ನಾವು ದೇವರು ಎನ್ನುವುದು. ಸದಾ ನಿಶ್ಚಿತರಾಗಿರುವ ಸೂರ್ಯ, ಚಂದ್ರ, ನಕ್ಷತ್ರಾದಿಗಳಿಗಿಂತಲೂ 'ಸತ್' ಆಗಿ ಉಳಿದಿರುವಂತಹ 'ಬ್ರಹ್ಮನ್' ಎಂಬುದೇ ನಿರಾಕಾರ. ನಿರ್ಗುಣ, ನಿಶ್ಚಲ ಶಕ್ತಿ, ಇದು ತಾನೇ ತಾನಾಗಿ ಇರುವಂತಹದ್ದು. ಅದಕ್ಕೇ ಇದನ್ನು 'ಸತ್' ಎನ್ನುವುದು. ಈ 'ಸತ್' ಎನ್ನುವ ಶಕ್ತಿಯ ಬಗ್ಗೆ ಶ್ರವಣ ಮಾಡುವುದು, ಜಿಜ್ಞಾಸೆ ಮಾಡುವುದೇ 'ಸತ್ಸಂಗ'. ಸತ್ಸಂಗ ಎಂದರೆ ಹಲವು ಆತ್ಮಗಳು ಸೇರಿರುವ ಸಂಗಮಾತ್ರವೇ ಅಲ್ಲ, ಅದು ನಮಗೆ ಸತ್ಯದರ್ಶನವನ್ನು ಮೂರು ರೀತಿಯಲ್ಲಿ

ಮೂಡಿಸುತ್ತವೆ. ಸತ್ ಎನ್ನುವ ಸತ್ಯ, ನಾವು ಯಾರು ಎನ್ನುವ ಸತ್ಯ, ಪರಮಾತ್ಮ ಏನು ಎನ್ನುವ ಸತ್ಯ. ಇವುಗಳ ಸಂಬಂಧ ಏನು ಎಂಬುದನ್ನು ತಿಳಿಸುವ ಸಂಗವೇ ಸತ್ಸಂಗ.

ಸತ್ಸಂಗ ನಮ್ಮ ಆತ್ಮಕ್ಕೆ ಮೂರು ರೀತಿಯ ಆಹಾರ ನೀಡುತ್ತದೆ. ಸತ್ಸಂಗದಲ್ಲಿ ಮೊಟ್ಟಮೊದಲು ನಮಗೆ ಸಿಗುವ ಆಹಾರ 'ಶ್ರವಣ', ಎರಡನೆಯದು 'ಮನನ' ಮತ್ತು ಮೂರನೆಯದು 'ನಿದಿಧ್ಯಾಸನ'. ಶ್ರವಣ ಎಂದರೆ ಕೇಳಿಸಿಕೊಳ್ಳುವುದು, ಮನನ ಎಂದರೆ ಕೇಳಿದ್ದನ್ನು ಅರ್ಥಮಾಡಿಕೊಳ್ಳುವುದು. ಅರ್ಥಮಾಡಿಕೊಂಡಿದ್ದನ್ನು ಚಿಂತನೆಮಾಡಿ ಜೀವನದಲ್ಲಿ ಅಳವಡಿಸಿಕೊಳ್ಳುವುದೇ ನಿದಿಧ್ಯಾಸನ. ಈ ಸತ್ಸಂಗದ ಮಹತ್ತ್ವವನ್ನು ತುಳಸೀದಾಸರ ರಾಮಾಯಣದ ಸುಂದರಕಾಂಡದಲ್ಲಿ ಹೀಗೆ ವಿವರಿಸಿದ್ದಾರೆ. ಒಮ್ಮೆ ಹನುಮಂತ ರಾಮನ ಹತ್ತಿರ ಹೋಗಿ ನಾನು ನಿನ್ನನ್ನು ನನ್ನ ಎದೆಯಲ್ಲಿ ಭಕ್ತಿ ಮೂಲಕ ಇಟ್ಟುಕೊಳ್ಳಬೇಕು ಎಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಾ ಅನಂತರ ಕೇಳುತ್ತಾನೆ. ಅಲ್ಲದೆ ಏಳು ಲೋಕಗಳಾದ ದೇವರ ಲೋಕದಲ್ಲಿ, ಇಂದ್ರಲೋಕದಲ್ಲಿ, ವೈಕುಂಠ, ಕೈಲಾಸ, ಮಣಿದ್ವೀಪ, ಬ್ರಹ್ಮಾಂಡ ಇತ್ಯಾದಿಗಳಲ್ಲೇ ಮಹತ್ತಾದುದು, ಅಮೂಲ್ಯವಾದುದು ಬೆಲೆಕಟ್ಟಲು ಸಾಧ್ಯವಾಗದೇ ಇರುವಂತಹದು ಯಾವುದು ಎಂದು. ಗಗನದಿಂದ ಭೂಮಂಡಲದವರೆಗೂ ಮಧ್ಯದಲ್ಲಿ ಯಾವುದೇ ತರಹದ ಮಹತ್ತ್ವದ ವಿಷಯಗಳಿದ್ದರೂ ಶಕ್ತಿ ಇದ್ದರೂ ಎಲ್ಲಕ್ಕಿಂತಲೂ ಮಹತ್ತ್ವವಾದದ್ದು, ಅಮೂಲ್ಯವಾದದ್ದು "ಸತ್ಸಂಗ" ಎನ್ನುತ್ತಾನೆ ರಾಮ. ಸತ್ಸಂಗ ನಮ್ಮ ಮಾನಸಿಕ ಒತ್ತಡ, ಮನಸ್ಸಿನ ಉದ್ವೇಗವನ್ನು ತೆಗೆಯುತ್ತದೆ. ನಮ್ಮದೇ ಆದಂತಹ ಅಂತರಾಳದ ಅಂತರಾತ್ಮದ ಪ್ರಪಂಚದಲ್ಲಿ ನಾವು ಕುಳಿತಿರುತ್ತೇವೆ. ಭಜನೆ ಕೀರ್ತನೆಗಳನ್ನು ಕೇಳುತ್ತಾ ನಮ್ಮನ್ನು ನಾವೇ ಮರೆಯುತ್ತೇವೆ. ಅದರಲ್ಲಿ ಅಷ್ಟೊಂದು ಶಕ್ತಿ ಇದೆ. ಸತ್ಸಂಗದಲ್ಲಿ ಇರುವುದರಿಂದ ಮಾನಸಿಕ ಸ್ವಾತಂತ್ರ್ಯ ಸಿಗುತ್ತದೆ. ಯಾವಾಗಲೂ ಸತ್ಸಂಗದಲ್ಲಿದ್ದರೆ, ಅದರಲ್ಲೇ ತಲ್ಲೀನರಾಗಿದ್ದರೆ ನಿನ್ನೆ ಇದ್ದಂತಹ ಸಮಸ್ಯೆ ಇಂದು ಸಮಸ್ಯೆಯಾಗಿ ಕಾಣಿಸುವುದಿಲ್ಲ. ಇಂದಿನ ಸಮಸ್ಯೆ ನಾಳೆಗೆ ಸಮಸ್ಯೆಯಾಗಿ ಉಳಿಯುವುದು ಎಂಬ ಚಿಂತೆ ಬರುವುದಿಲ್ಲ.

ಇತರ ಲೌಕಿಕ ವಿಚಾರಗಳಂತಲ್ಲದೆ 'ಸತ್' ಬಗೆಗಿನ ಯಾವುದೇ ಮಾತಾಗಲಿ, ವಿಚಾರವಾಗಲಿ ನಮ್ಮ ಕಿವಿಯಲ್ಲಿ ಶ್ರವಣವಾದಾಗ ನಮ್ಮ ಮನಸ್ಸನ್ನೇ ಸಕಾರವಾಗಿ ಮಾರ್ಪಾಡು ಮಾಡಿಬಿಡುತ್ತದೆ. ಪರಿವರ್ತನೆಯಿಂದ ಸಾಧನೆಯ ಮಾರ್ಗದತ್ತ ಸಾಗಲು ಅಡ್ಡಬರುವುದು ನಮ್ಮಲ್ಲಿನ ದ್ವಂದ್ವ. ದ್ವಂದ್ವ ನಿವಾರಣೆಗೆ ಸತ್ಸಂಗವೇ ದಾರಿ. ಆದ್ದರಿಂದಲೇ ಸತ್ಸಂಗಕ್ಕೆ ಇಷ್ಟೊಂದು ಮಹತ್ತ್ವ. ಸತ್ಸಂಗದಿಂದಾಗಿ ದೃಢತನದಿಂದ ನಾವು ಸಾಧನೆ ಆರಂಭಿಸುತ್ತೇವೆ. ಈ ದೃಢತನ ನಮ್ಮನ್ನು ತಪಸ್ಸಿನ ಮಾರ್ಗಕ್ಕೆ ಕೊಂಡೊಯ್ಯುತ್ತದೆ.

ನಮ್ಮ ಜೀವನದಲ್ಲಿ ಅನುಭವಿಸುತ್ತಿರುವ ಅನೇಕ ರೀತಿಯ ತಾಪಗಳನ್ನು ಭಸ್ಮ ಮಾಡುವ ಅಂತರ್‌ಜ್ವಾಲೆಯೇ ತಪಸ್ಸು. ಕಲಿಯುಗದಲ್ಲಿ ಸತ್ಸಂಗದಲ್ಲಿ, ಭಾಗವಹಿಸಿದಾಗ ಸಹಜ ರೀತಿಯಲ್ಲಿ ನಾವು ತಪಸ್ಸಿಗೆ ಒಳಗಾಗುತ್ತೇವೆ. ಇದು ಹೇಗೆ ಎಂಬುದನ್ನು ನೋಡೋಣ. ನಾವೆಲ್ಲರೂ ಶ್ರದ್ಧೆ, ಭಕ್ತಿಯಿಂದ ಸತ್ಸಂಗದಲ್ಲಿ ಪಾಲ್ಗೊಳ್ಳಲು ಹೋಗುತ್ತೇವೆ. ಅಲ್ಲಿ ಬಂದ ಇತರ ಭಕ್ತರೂ ಕೂಡ ಅದೇ ಭಾವನೆಯನ್ನು ಹೊಂದಿರುತ್ತಾರೆ. ಸತ್ಯಾನ್ವೇಷಣೆಯಲ್ಲಿ ಆಳವಾದ ಆಸಕ್ತಿಯನ್ನು ಹೊಂದಿರುವ ಆತ್ಮಗಳು ಜೊತೆ ಸೇರಿ ದೈವತ್ವದ ಕಡೆಗೆ ಗಮನವನ್ನು ಹರಿಸಿದಾಗ ನಮ್ಮಲ್ಲೆ ದಿವ್ಯ ಸ್ಪಂದನಗಳು ಉದ್ಭವವಾಗುತ್ತವೆ. ಈ ರೀತಿಯ ಕಂಪನ ನಮ್ಮಲ್ಲಿ ವಿಶೇಷವಾದ ಶಾಖವನ್ನು ಉತ್ಪತ್ತಿ ಮಾಡುತ್ತವೆ. ಈ ಶಾಖವನ್ನು ತೇಜಸ್ಸು ಎಂದು ಕರೆಯುತ್ತೇವೆ. ನಾವು ಈಗಾಗಲೆ ತಿಳಿದಂತೆ ಪ್ರಾಣಮಯಕೋಶದಿಂದ ನಮ್ಮ ಸುತ್ತ ಒಂದು ಚೈತನ್ಯದ ಪ್ರಭಾವಳಿ ಇರುತ್ತದೆ. ಸತ್ಸಂಗದಲ್ಲಿ ಸೇರಿದ ನಾವು ಅಕ್ಕಪಕ್ಕ ಕುಳಿತಿದ್ದಾಗ ಎಲ್ಲರ ಪ್ರಭಾವಳಿಯೂ ಒಂದಾಗಿ ತೇಜಸ್ಸಾಗಿ ಪರಿವರ್ತನೆಯಾಗುತ್ತದೆ. ತೇಜಸ್ಸು ಎನ್ನುವುದು ಈಶ್ವರನ ಮಹಾಶಕ್ತಿ. ಇದು ಹರಿತವಾದ ಕತ್ತರಿಯ ಹಾಗೆ ನಮ್ಮ ಅಹಂಕಾರದ ಗಂಟುಗಳನ್ನು ಕತ್ತರಿಸಿ ನಮ್ಮನ್ನು ಅರಿಷಡ್ವರ್ಗಗಳಿಂದ ಬಿಡುಗಡೆ ಮಾಡುತ್ತದೆ. ದೇವಸ್ಥಾನದಲ್ಲಿ ಧ್ಯಾನಿಸಿದಾಗ ನಮ್ಮ ಆತ್ಮಶಕ್ತಿ ವೃದ್ಧಿಯಾಗುತ್ತದೆ. ಆದರೆ ಸತ್ಸಂಗದಲ್ಲಿ ಭಾಗವಹಿಸಿದಾಗ ನಮ್ಮ ತಪೋಶಕ್ತಿ ಹೆಚ್ಚಾಗುತ್ತದೆ. ಇದಕ್ಕೆ ಇನ್ನೊಂದು ಕಾರಣವಿದೆ. ಪ್ರತಿ ಸತ್ಸಂಗದಲ್ಲೂ ನಾರದ ಮಹಾಮುನಿ, ಅಶ್ವತ್ಥಾಮ, ಆಂಜನೇಯ ಇನ್ನಿತರ ಚಿರಂಜೀವಿಗಳು ಸೂಕ್ಷ್ಮ ರೂಪದಲ್ಲಿ ಅಲ್ಲಿದ್ದು ನೆರೆದ ಭಕ್ತರಿಗೆಲ್ಲ ತಮ್ಮ ಕೃಪೆಯನ್ನು ಹರಿಸುತ್ತಾರೆ. ಅವರ ಚೈತನ್ಯವು ನಮ್ಮ ಚೈತನ್ಯದೊಂದಿಗೆ ಬೆರೆತು ತೇಜೋ ಅಗ್ನಿಯಾಗಿ ಅನಂತರ ತಪೋ ಅಗ್ನಿಯಾಗಿ ಪರಿವರ್ತನೆಯಾಗುವುದು. ಭಸ್ಮಧರನ ಚೈತನ್ಯವಾದ ಈ ತಪೋ ಅಗ್ನಿ ನಮ್ಮೆಲ್ಲರ ಕರ್ಮದ ಗಂಟುಗಳನ್ನು ಭಸ್ಮ ಮಾಡುತ್ತದೆ. ಚಿರಂಜೀವಿಗಳ ಸಾನ್ನಿಧ್ಯದಿಂದ ಸತ್ಸಂಗ ನಡೆಯುವ ಸ್ಥಳವೇ ತಪೋಭೂಮಿಯಾಗಿ ಮಾರ್ಪಾಡಾಗುತ್ತದೆ. ಹಾಗೂ ಇಲ್ಲಿರುವ ನಮ್ಮ ತೇಜಸ್ಸು ಓಜಸ್ಸಾಗಿ ನಮ್ಮಲ್ಲಿ ಆನಂದ ಉಕ್ಕಿಹರಿಯುತ್ತದೆ. ಆದ್ದರಿಂದ ಪ್ರತಿ ಸತ್ಸಂಗದಲ್ಲೂ ಚಿರಂಜೀವಿಗಳ ಕೃಪೆಯಿಂದ ಸತ್ ಚಿತ್ ಆನಂದದ ಅನುಭವ ನಮಗಾಗುತ್ತದೆ. ಸತ್ಸಂಗ ಯಾವುದೇ ಭಾಷೆಯಲ್ಲಿ ನಡೆಯುತ್ತಿರಬಹುದು. ಅದು ನಮಗರಿಯದ ಭಾಷೆಯಾದರೂ ನಾವು ಅದರಲ್ಲಿ ಭಾಗವಹಿಸಬೇಕು. ಏಕೆಂದರೆ ಆ ಭಾಷೆ ನಮ್ಮ ಬುದ್ಧಿಗೆ ನಿಲುಕದಿದ್ದರೂ ಅಲ್ಲಿರುವ ಚೈತನ್ಯವನ್ನು ನಮ್ಮ ಆತ್ಮ ಆಸ್ವಾದಿಸುತ್ತದೆ. ಹಾಗಾಗಿ ಕಶ್ಯಪರು ಇಲ್ಲಿ ಹೇಳುವುದು – ಸತ್ಸಂಗದಲ್ಲಿದ್ದಾಗ ನಮ್ಮಲ್ಲಿ ಮೊದಲಿಗೆ ಅರಿಷಡ್ವರ್ಗಗಳ ನಾಶವಾಗುವುದು. ಮನಸ್ಸು ಶಾಂತಿಯಿಂದಿದ್ದು ದಿವ್ಯ ಮಧುರಪ್ರೇಮ, ನಮ್ಮಲ್ಲಿ ಉಕ್ಕಿ ಹರಿಯುವುದು. ನಮ್ಮ ಇಂದ್ರಿಯಗಳು ನಮ್ಮ ನಿಗ್ರಹದಲ್ಲಿದ್ದು ನಮ್ಮಿಚ್ಛೆಯಂತೆ ಹೇಗೆ ಸದುಪಯೋಗಕ್ಕೆ ಮಾತ್ರ ಬಳಸಬಹುದು ಎಂಬ ಜ್ಞಾನ ಬರುವುದು. ಈ ಜ್ಞಾನದಂತೆ ನಡೆದುಕೊಳ್ಳಬಲ್ಲ ದೃಢಶಕ್ತಿ ನಮ್ಮಲ್ಲಿ ಬರುವುದು. ಗುರುವಿನ ಅನುಗ್ರಹದಿಂದ ಹರಿತಗೊಂಡ ನಮ್ಮ ಚಾಕು ಅಂದರೆ ನಮ್ಮ ಎಡೆಬಿಡದ ತೀವ್ರ ಸಾಧನೆ, ತಪಸ್ಸು ನಮ್ಮಲ್ಲಿರುವ ಪಾಶಗಳನ್ನೆಲ್ಲ ಕತ್ತರಿಸುತ್ತಾ ನಾವು ಅವುಗಳಿಂದ ಮುಕ್ತರಾಗಿ, ಸ್ವತಂತ್ರರಾಗಿ ನಮ್ಮೊಳಗಿರುವ ಅರಿವು ನಾವೇ ಆಗಿ, ಸದಾಶಿವರಾಗುವೆವು. ಇದನ್ನೇ 'ಪಾಶಾಚ್ಛೇದನೇನ ಸದಾಶಿವತ್ವಂ' ಎಂಬ ತಮ್ಮ ಎಂಟನೆಯ ಸೂತ್ರದಲ್ಲಿ ಕಶ್ಯಪರು ನಮಗೆ ವಿಶದವಾಗಿ ಹೇಳುತ್ತಿದ್ದಾರೆ.

**(ಮುಂದುವರಿಯುವುದು)**

**ಶ್ರೀ ನಿಮಿಷಾಂಬಾ ಆಶ್ರಮ, ನಂ. ೭೩, ೪ನೇ ಕ್ರಾಸ್,**
**ಕಾನ್‌ಕಾರ್ಡ್ ಗಾರ್ಡನ್ ಸಿಟಿ ಲೇಔಟ್, ಆರ್.ವಿ. ಕಾಲೇಜು**
**ಅಂಚೆ, ಬೆಂಗಳೂರು–೫೬೦ ೦೫೯.**

# ಮಹಾನಾರಾಯಣೋಪನಿಷತ್ತು



ಶ್ರೀಮತಿ ರಾಜೇಶ್ವರಿ ಕೃಷ್ಣ.

**(ಕಳೆದ ಸಂಚಿಕೆಯಿಂದ ಮುಂದುವರಿದಿದೆ)**

"ಮಹಾನಾರಾಯಣೋಪನಿಷತ್ತಿ"ನಲ್ಲಿ ನಾರಾಯಣ, ವಿಷ್ಣು, ಆದಿತ್ಯ, ಶಿವ, ರುದ್ರ, ದೇವಿ, ಗಣಪತಿ ಮುಂತಾದ ದೇವತೆಗಳ ಸ್ತುತಿ-ಪ್ರಾರ್ಥನೆಗಳು ಬರುತ್ತವೆ. ಹೀಗಾಗಿ, ಇಲ್ಲಿ ಬರುವ ಅನೇಕ ಮಂತ್ರಗಳು ಉಪಾಸನಾಪರವಾಗಿವೆಯೆಂದೂ ತನ್ಮೂಲಕ ಮೋಕ್ಷಕ್ಕೆ ಅರ್ಹರಾಗಬಹುದೆಂದೂ ಹಲವೆಡೆ ವ್ಯಾಖ್ಯಾನಿಸಲಾಗಿದೆ. ಇಂಥ ಅರ್ಥವಿವರಣೆಗಳು ಎಲ್ಲರಿಗೂ ಇಷ್ಟವಾಗುತ್ತವೆ, ಒಪ್ಪಿಗೆಯಾಗುತ್ತವೆ. ಪುರಾಣಪ್ರಸಿದ್ಧರಾದ ದೇವತೆಗಳನ್ನು ತಮಗೆ ಇಷ್ಟವಾದ ನಾಮ-ರೂಪಗಳಿಂದ ಗುಣಗಾನ ಮಾಡಿ ಸುಖಿಸುವುದು, ಸಂತೋಷಿಸುವುದು, ಭಾವುಕ ಭಕ್ತರಿಗೆ ಸುಲಭ ಮಾರ್ಗ. ಆದರೆ ಸ್ವಲ್ಪ ಮುಂದುವರಿದು ಈ ಮಂತ್ರಗಳ ತತ್ತ್ವಪ್ರಧಾನ ಅರ್ಥವನ್ನೂ ವ್ಯಾಪಕತೆಯನ್ನೂ ಗ್ರಹಿಸುವುದು ಸಾಧ್ಯವಾದರೆ, ಈ ಬೇರೆ ಬೇರೆ ಶಬ್ದವಾಚಕಗಳೆಲ್ಲ ಮೂಲದಲ್ಲಿ ಏಕಮೇವಾದ್ವಿತೀಯವಾದ ಆ ಪರಬ್ರಹ್ಮವನ್ನೇ ಸೂಚಿಸುತ್ತವೆ ಎಂದು ಮನವರಿಕೆಯಾಗುತ್ತದೆ. ಇಲ್ಲಿ 'ಶಿವ' ಎಂದರೆ ಮಂಗಳಸ್ವರೂಪ ['ಶಂ (ಮಂಗಳ) ಕರೋತಿ ಇತಿ ಶಂಕರ' ಅಥವಾ ಶಿವ]; ವಿಷ್ಣು ಎಂದರೆ ಎಲ್ಲೆಡೆ ಪ್ರವೇಶಿಸಿ ಇರುವ ವ್ಯಾಪಕ ತತ್ತ್ವ-ಎಲ್ಲರಲ್ಲಿಯೂ ಪ್ರಜ್ಞೆರೂಪದಿಂದ ಪ್ರವೇಶ ಮಾಡಿರುವವನು (ವಿಷ್- ಪ್ರವೇಶಣೇ ಧಾತು-'ತಸ್ಮಾದೇವೋಚ್ಯತೇ ವಿಷ್ಣುರ್ವಿಶಧಾತೋಃ ಪ್ರವೇಶನಾತ್'). ಇದನ್ನೇ **ವಿಷ್ಣುಸಹಸ್ರನಾಮ**ದಲ್ಲಿ "ಅನೇಕರೂಪರೂಪಾಯ ವಿಷ್ಣವೇ ಪ್ರಭವಿಷ್ಣುವೇ' ಎಂದು ಸ್ತುತಿಸಲಾಗಿದೆ. ಇಂಥ ಪರಮಾತ್ಮಪರ ಸಮನ್ವಯ ಸಾಧ್ಯವಾದರೆ ಈ ಮಂತ್ರಗಳೆಲ್ಲ ಮತ್ತಷ್ಟು ಅದ್ಭುತವಾಗಿ ಬೆಳಗುತ್ತವೆ, ಪ್ರಜ್ವಲಿಸುತ್ತವೆ.

## ನಿತ್ಯಾನುಸಂಧಾನ

ಈ ಉಪನಿಷತ್ತಿನ ಮುಂದಿನ ಭಾಗದಲ್ಲಿ ನಾರಾಯಣ ಸೂಕ್ತ ಶಿವೋಪಾಸನ ಮಂತ್ರಗಳು, ಪೃಥ್ವಿ-ಜಲ-ಆದಿತ್ಯ ದೇವತಾ ಪ್ರಾರ್ಥನೆಗಳು, ತ್ರಿಸುಪರ್ಣ ಹಾಗೂ ವೈಶ್ವದೇವ ಮಂತ್ರಗಳು, "ಪರತತ್ತ್ವ ನಿರೂಪಣ", "ಜ್ಞಾನ ಸಾಧನ ನಿರೂಪಣ" ಹಾಗೂ. "ಆತ್ಮಯಜ್ಞ" ಸೇರಿವೆ (ಸುಮಾರು 135 ಮಂತ್ರಗಳು). ಬೆಳಗ್ಗೆ ಕಣ್ಣು ಬಿಟ್ಟಾಗಿನಿಂದ ರಾತ್ರಿ ಕಣ್ಣು ಮುಚ್ಚುವವರೆಗೆ, ತದನಂತರ ಸ್ವಪ್ನ-ಸುಷುಪ್ತಿಗಳಲ್ಲೂ ನಮ್ಮ ಎಲ್ಲ ನಿತ್ಯಕರ್ಮಗಳಲ್ಲಿ, ಎಷ್ಟೊಂದು ಬಗೆಯಲ್ಲಿ ನಾವು ಹೇಗೆ ಈ ದೇವತೆಗಳ ರೂಪದಲ್ಲಿರುವ ಪರಮಾತ್ಮನನ್ನು ಗುರುತಿಸಿ, ಅನುಸಂಧಾನ ಮಾಡಬಹುದು ಎಂಬುದಕ್ಕೆ ಇಲ್ಲಿ ಅನನ್ಯವಾದ ಮಂತ್ರಗಳಿವೆ. "ನಾರಾಯಣ ಸೂಕ್ತ"ದಲ್ಲಿ "ನಾಮರೂಪಾತ್ಮಕವಾಗಿರುವ ಈ ಜಗತ್ತೆಲ್ಲ ನಾರಾಯಣನೇ-ನಮಗೆ ಕಾಣುವುದು, ಪರೋಕ್ಷವಾಗಿ ಕೇಳುವುದನ್ನೆಲ್ಲ ಒಳಗೂ ಹೊರಗೂ ವ್ಯಾಪಿಸಿರುವ ಅವನಿಗೆ ನಮಸ್ಕರಿಸೋಣ" ಎಂದು ಬಹು ಬಗೆಯಲ್ಲಿ ಪ್ರತಿಪಾದಿಸುವ, ಸುಶ್ರಾವ್ಯವಾದ ಪ್ರಸಿದ್ಧ ಮಂತ್ರಗಳಿವೆ.



**ಯಚ್ಚ ಕಿಂಚಿಜ್ಜಗತ್ಸರ್ವಂ ದೃಶ್ಯತೇ ಶ್ರೂಯತೇಽಪಿ ವಾ ।**
**ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ ॥**

ಅನಂತರ ಉಪನಿಷತ್ತು, 'ಇದೋ ಆದಿತ್ಯಮಂಡಲದಲ್ಲಿ ಪ್ರಕಾಶಿಸುತ್ತಿರುವ ದೇವರೂ ಇವನೇ' ಎಂದು ಸೂರ್ಯನಾರಾಯಣನನ್ನು ಸ್ತುತಿಸುತ್ತಿದೆ. ಈ ಆದಿತ್ಯನೇ ನಮ್ಮ ಬುದ್ಧಿಯನ್ನು ಬೆಳಗುತ್ತಿರುವ ಪ್ರತ್ಯಕ್ಷ ದೇವರು. ಇದಾದ ಮೇಲೆ ಶಿವೋಪಾಸನ ಮಂತ್ರಗಳು ಬರುತ್ತವೆ. ನಮ್ಮ ಮನೆಗಳಲ್ಲಿ, ದೇವಸ್ಥಾನಗಳಲ್ಲಿ ನಡೆಯುವ ಪೂಜೆಗಳಲ್ಲಿ ಈ ಸುಪ್ರಸಿದ್ಧ ಮಂತ್ರಗಳನ್ನು ಕಂಠಸ್ಥವಾಗಿ ವಾಚಿಸಲಾಗುತ್ತದೆ- "ಓಂ ನಿಧನಪತಯೇ ನಮಃ । ನಿಧನಪತಾಂತಿಕಾಯ ನಮಃ....ಶಿವಾಯ ನಮಃ....ಶಿವಲಿಂಗಾಯ ನಮಃ....". "ರುದ್ರಾಭಿಷೇಕ", "ಮಹನ್ಯಾಸ" ಮುಂತಾದ ಪೂಜಾಕಲ್ಪಗಳಲ್ಲಿ ಸ್ವರಬದ್ಧವಾಗಿ ಪಠಿಸುವ, ಸದಾಶಿವನ

ಐದು ಮುಖಗಳನ್ನು ಸ್ತುತಿಸುವ ಮಂತ್ರಗಳೂ ಇಲ್ಲೇ ಬರುತ್ತವೆ. "ಸದ್ಯೋಜಾತಾಯ....', "ವಾಮದೇವಾಯ....", "ಅಘೋರೇಭ್ಯೋಥ ಘೋರೇಭ್ಯೋ..., "ತತ್ಪುರುಷಾಯ ವಿದ್ಮಹೇ....", "ಈಶಾನಃ ಸರ್ವ ವಿದ್ಯಾನಾಂ....' ಎಂಬ ಈ ಐದು ಮಂತ್ರಗಳಲ್ಲಿ ಲೋಕ ಕಲ್ಯಾಣದ ಪ್ರಾರ್ಥನೆಗಳಿವೆ, ಸರ್ವಾಂತರ್ಯಾಮಿಯಾದ ಭಗವಂತನ ರೂಪಗಳಿಗೆ ವಂದನೆಗಳನ್ನು ಅರ್ಪಿಸಲಾಗಿದೆ. ಇಂಥ ಜ್ಞಾನಾರ್ಜನೆಯ ಮಾರ್ಗದಲ್ಲಿ ಹಲವಾರು ಅಡ್ಡಿಗಳು ಬರಬಹುದು. ಈ ಪ್ರತಿಬಂಧಕಗಳ ನಿವಾರಣೆಗಾಗಿ (ನಮ್ಮೊಳಗಿನ ಶತ್ರುಗಳಾದ ಕಾಮ-ಕ್ರೋಧಾದಿಗಳ ನಾಶಕ್ಕಾಗಿ) ಜಪಿಸಬೇಕಾದ "ರಾಕ್ಷೋಘ್ನ ಮಂತ್ರಗಳು" ಮುಂದೆ ಬರುತ್ತವೆ. ಸಾಮಾನ್ಯವಾಗಿ ಹೊಸ ಮನೆಯ ಗೃಹಪ್ರವೇಶದ ಹಿಂದಿನ ರಾತ್ರಿ, ದುಷ್ಟಶಕ್ತಿಗಳ ನಾಶಕ್ಕಾಗಿ "ರಾಕ್ಷೋಘ್ನ ಹೋಮ"ವನ್ನು ಮಾಡುತ್ತಾರೆ ('ಘ್ನ'-ನಾಶ) -ಅಗ್ನಿದೇವತೆಯು ರಾಕ್ಷಸವಿನಾಶಕನೆಂದು ಪ್ರಸಿದ್ಧವಾಗಿದೆ. ಇದಾದ ಮೇಲೆ **ಪೃಥಿವೀ ದೇವತಾ ಹಾಗೂ ಜಲದೇವತಾ ಪ್ರಾರ್ಥನೆಗಳು,** ಗಾಯತ್ರಿ ಜಪ ಮಂತ್ರಗಳೊಂದಿಗೆ **ಸಂಧ್ಯಾವಂದನೆ**ಯ ಹಾಗೂ ಆದಿತ್ಯದೇವತಾಚಿಂತನೆಯ ಮಂತ್ರಗಳು ಬರುತ್ತವೆ. ಎಲ್ಲರಿಗೂ ಜೀವನಾಧಾರವಾಗಿರುವ ಜಲವನ್ನು ಅಮೃತವೆಂದು ಹೊಗಳಿ, ಈ "ಅಬ್ದೀವತೆ"ಯ ಅನುಗ್ರಹದಿಂದ ಬರಗಾಲ-ಕ್ಷಾಮಾದಿಗಳನ್ನೂ ಪರಿಹರಿಸಿಕೊಳ್ಳಬಹುದು ಎಂದು ವ್ಯಾಖ್ಯಾನಿಸಲಾಗಿದೆ. ಅಂತೆಯೇ ಆದಿತ್ಯ ದೇವತೆಯ ಜಪ-ಚಿಂತನೆಯೂ ಬಹಳ ಆವಶ್ಯಕ. ಈ ಆದಿತ್ಯವನ್ನು ಛಾಂದೋಗ್ಯೋಪನಿಷತ್ತಿನಲ್ಲಿ "ದೇವ ಮಧು" ಎಂದು ಕರೆಯಲಾಗಿದೆ. ಜೇನಿನಂತೆ ಎಲ್ಲರಿಗೂ ಪ್ರಿಯವಾಗಿದ್ದುಕೊಂಡು ಜಗತ್ತನ್ನು ಸಲಹುತ್ತಿದ್ದಾನೆ ಎಂಬುದು ಸೂಚನೆ.

## ತ್ರಿಸುಪರ್ಣಗಳು

ಮುಂದಿನ ಭಾಗದಲ್ಲಿ, ಕೆಲವು ಮಹಾಪಾಪಗಳ ಪರಿಹಾರಕ್ಕಾಗಿ ಪಠಿಸಬೇಕಾದ "ತ್ರಿಸುಪರ್ಣ ಮಂತ್ರಗಳು" ಬರುತ್ತವೆ (ಮೂರು ಅನುವಾಕಗಳಲ್ಲಿವೆ). ತ್ರಿಮೂರ್ತಿಗಳಾದ ಬ್ರಹ್ಮ-ವಿಷ್ಣು-ಮಹೇಶ್ವರರು ಯಾವ ಸರ್ವದೇವತಾ ಸ್ವರೂಪಿಯಾದ ಪರಮಾತ್ಮನಿಂದ ಉಂಟಾದರೋ, ಆತನೇ **ತ್ರಿಸುಪರ್ಣ**. ಆ ಭಗವಂತನ ಮಹಿಮೆಯನ್ನು ಪ್ರತಿಪಾದಿಸುವುದರಿಂದ ಈ ಮಂತ್ರಗಳು ತ್ರಿಸುಪರ್ಣಗಳು. ಸಾಮಾನ್ಯವಾಗಿ ಪೂಜಾದಿ ಸಂತರ್ಪಣೆಗಳಲ್ಲಿ, ಬ್ರಾಹ್ಮಣರ ಭೋಜನ ಪಂಕ್ತಿಯಲ್ಲಿ ಈ ಮಂತ್ರಗಳನ್ನು ಪಠಿಸುತ್ತಾರೆ.- 'ಯೇ ಬ್ರಾಹ್ಮಣಾಃ ತ್ರಿಸುಪರ್ಣಂ ಪಠಂತಿ....' ಎಲ್ಲ ಪಾಪಗಳು ಕಳೆದ ಮೇಲೆ, ಜ್ಞಾನಕ್ಕೆ ಮುಖ್ಯ ಸಾಧನವಾದ ಧಾರಣಾ ಶಕ್ತಿ ಅಥವಾ ಮೇಧಾ ಶಕ್ತಿ ಬೇಕಾಗುತ್ತದೆ. ಮುಂದಿನ ಭಾಗದಲ್ಲಿ ಈ "ಮೇಧೆ" ಅಥವಾ ಧಾರಣಾಶಕ್ತಿಯನ್ನು ದೇವಿಯ ರೂಪದಲ್ಲಿ ಸ್ತುತಿಸಲಾಗಿದೆ-"ಮೇಧಾಸೂಕ್ತ". ಶಾಸ್ತ್ರಗಳನ್ನು ಮನಸ್ಸಿನಲ್ಲಿ ಧಾರಣೆ ಮಾಡಿ ವೇದಾಧ್ಯಯನಸಂಪನ್ನರಾಗಲು ಇದು ಅತ್ಯಂತ ಆವಶ್ಯಕ. ಇಲ್ಲಿ ಇಂದ್ರ, ಸರಸ್ವತಿ ಹಾಗೂ ಅಶ್ವಿನಿ ದೇವತೆಗಳ ಪ್ರಾರ್ಥನೆ ಇದೆ. ಇದಾದ ಮೇಲೆ "ಮೃತ್ಯು ನಿವಾರಣ ಮಂತ್ರಗಳು", "ಪ್ರಜಾಪತಿ ಪ್ರಾರ್ಥನಾ ಮಂತ್ರ" ಹಾಗೂ "ಪಾಪ ನಿವಾರಕ ಮಂತ್ರಗಳು" ಬರುತ್ತವೆ. ಇಲ್ಲಿ ಆಯುಷ್ಯಾರೋಗ್ಯ ಐಶ್ವರ್ಯಾದಿಗಳು ಹಾಗೂ ಮೋಕ್ಷ ಸುಖಕ್ಕಾಗಿ ಪ್ರಾರ್ಥಿಸಲಾಗಿದೆ. "ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಮ್...." ಎಂಬ ಸುಪ್ರಸಿದ್ಧವಾದ "ಮಹಾಮೃತ್ಯುಂಜಯ ಮಂತ್ರ"ವೂ ಇಲ್ಲಿದೆ (ಪರಮೇಶ್ವರನ ಪ್ರಾರ್ಥನೆ). ಮುಂದೆ ಮುಖ್ಯವಾಗಿ "ವಿರಜಾಹೋಮ ಮಂತ್ರಗಳು" "ವೈಶ್ವದೇವ ಮಂತ್ರಗಳು" ಹಾಗೂ "ಪ್ರಾಣಾಹುತಿ ಮಂತ್ರಗಳು" ಬರುತ್ತವೆ. "ರಜಸ್ಸು" ಎಂದರೆ ಪಾಪ-ಎಲ್ಲ ಪಾಪಗಳ ಪರಿಹಾರಕ್ಕಾಗಿ ವಿರಜಾಹೋಮ ಮಂತ್ರಗಳು. ಸಾಮಾನ್ಯವಾಗಿ ಗೃಹಸ್ಥರು ಸಂನ್ಯಾಸಾಶ್ರಮವನ್ನು ಸ್ವೀಕರಿಸುವ ಸಮಯದಲ್ಲಿ ಶುದ್ಧಿಗಾಗಿ ಈ ಹೋಮಗಳನ್ನು ಮಾಡಿಸುತ್ತಾರೆ. 'ಮನೋವಾಗಾದಿ ಇಂದ್ರಿಯಗಳು, ಪಂಚಪ್ರಾಣಗಳು ಶುದ್ಧವಾಗಲಿ, ಗುರುಮುಖೇನ ತತ್ತ್ವಜ್ಞಾನವು ಲಭಿಸಲಿ' ಎಂಬುದು ಪ್ರಾರ್ಥನೆ. ನಮ್ಮ ಮನಸ್ಸು ಒಳ್ಳೆಯದನ್ನೇ ಯೋಚಿಸುವಂತಾದರೆ ಬಾಯಲ್ಲೂ ಒಳ್ಳೆಯ ಮಾತುಗಳು ಹೊರಡುತ್ತವೆ, ಮಾಡುವ ಕೆಲಸವೂ ಒಳ್ಳೆಯದಾಗಿರುತ್ತದೆ- ಇದೇ **ತ್ರಿಕರಣ ಶುದ್ಧಿ** (ಕರಣ-ಇಂದ್ರಿಯ). ಇನ್ನು ವಿಶ್ವೇದೇವತೆಗಳು-ದೇವತೆಗಳ ಪೈಕಿ ಒಂದು ಗುಂಪಿಗೆ ಸೇರಿದವರು- ಇವರಿಗೆಲ್ಲ ಅಗ್ನಿಯ ಮೂಲಕ ಹವಿರರ್ಪಣೆ ಆಗಬೇಕು. ಈ "ವೈಶ್ವದೇವ ಮಂತ್ರ"ಗಳನ್ನು ಅನ್ನಶುದ್ಧಿ ಹಾಗೂ ಸಂಸ್ಕಾರದಂಥ ಕೆಲವು ನಿಯತಕರ್ಮಗಳಿಗಾಗಿ ಬಳಸುತ್ತಾರೆ. ನಾವು ತಿನ್ನುವ ಅನ್ನ (ಆಹಾರ) ಶುದ್ಧವಾಗಿರಬೇಕು-ಅದನ್ನು ಮೊದಲು ಎಲ್ಲ ಪ್ರಧಾನ ದೇವತೆಗಳಿಗೂ ಸಮರ್ಪಿಸಬೇಕು. "ಪ್ರಾಣಾಹುತಿ ಮಂತ್ರ"ಗಳಲ್ಲಿ ಹೇಗೆ ನಾವು ಭೋಜನಕ್ಕೆ ಮುಂಚೆ ಪ್ರಾಣಾಹುತಿಗಳನ್ನು ಕೊಡಬೇಕು, ಆಮೇಲೆ ಭೋಜನ ಸ್ವೀಕರಿಸಬೇಕು ಎಂಬ ವಿವರಣೆ ಇದೆ. ಪ್ರಾಣದೇವತೆಗೂ ನೀರಿಗೂ ನಿಕಟ ಸಂಬಂಧವಿದ್ದು, ನಮ್ಮ ಆಚಮನ- ಆಪೋಶನ ವಿಧಿಗಳಲ್ಲಿ (**ಅಮೃತೋಪಸ್ತರಣಮ**ಸಿ....) ಇದನ್ನು ಗುರುತಿಸಬಹುದು. ನಮ್ಮೊಳಗಿರುವ ವೈಶ್ವಾನರ ಅಗ್ನಿಗೆ (ಜಾಠರಾಗ್ನಿ) ಆಹುತಿಯ ರೂಪದಲ್ಲಿ ಆಹಾರವನ್ನು ಅರ್ಪಿಸುತ್ತೇವೆ-ಅವನೇ ಅದನ್ನು ಜೀರ್ಣಗೊಳಿಸುತ್ತಾನೆ. ಊಟವಾದ ಮೇಲೆ ಉತ್ತರಾಪೋಶನವನ್ನು ಸ್ವೀಕರಿಸಿ, ಹೇಳುವ ಮಂತ್ರಗಳಲ್ಲಿ 'ನಾವು ಸೇವಿಸಿದ ಆಹಾರವು ನಮ್ಮ ಶರೀರದೊಳಗೆ ಸರಿಯಾಗಿ ಅರಗಿ, ಬಲಪುಷ್ಟಿಗಳನ್ನು ನೀಡಲಿ' ಎಂಬ ಪ್ರಾರ್ಥನೆಯೊಂದಿಗೆ ಆತ್ಮಸ್ವರೂಪದ ಅನುಸಂಧಾನ ಇದೆ. ನಾವು ಪ್ರತಿನಿತ್ಯ ಮಾಡುವ ಕರ್ಮಗಳಲ್ಲಿ ಎಂಥ ಉದಾತ್ತ, ಸುಸಂಸ್ಕೃತ ಭಾವನೆ-ತಾದಾತ್ಮ್ಯ! ಈ ಎಲ್ಲ ಶಾಸ್ತ್ರೀಯ ಕರ್ಮಗಳಲ್ಲಿ ನಂಬಿಕೆ, ವಿಶ್ವಾಸ ಬಹಳ ಮುಖ್ಯ-ಇದೇ ಶ್ರದ್ಧೆ ಎನಿಸುತ್ತದೆ. ಭಗವಂತನ ಕೃಪೆಯಿಂದಲೇ ನಮ್ಮ ಪಾಲನೆ- ಪೋಷಣೆ, ಎಲ್ಲವೂ ನಡೆಯುತ್ತಿದೆ. ಹೀಗಾಗಿ ಆತನನ್ನು ಸದಾ ಸ್ಮರಿಸಬೇಕು-ಕೃತಜ್ಞತೆ ಸಲ್ಲಿಸಬೇಕು ಎಂಬುದು ತಾತ್ಪರ್ಯ.

## ಕರ್ಮಸಂನ್ಯಾಸ

ಮುಂದೆ "ಇಂದ್ರ-ಸಪ್ತರ್ಷಿ ಸಂವಾದ" ಎಂಬ ಸಣ್ಣ ಭಾಗ ಬರುತ್ತದೆ. ಒಮ್ಮೆ ಏಳು ಜನ ಋಷಿಗಳು ಸ್ವರ್ಗಲೋಕಕ್ಕೆ ತೆರಳಿ, ದೇವೇಂದ್ರನನ್ನು ಐಶ್ವರ್ಯಕ್ಕಾಗಿ ಪ್ರಾರ್ಥಿಸುತ್ತಾರೆ. ಅನಂತರ ತಮ್ಮ ಶಾಸ್ತ್ರವಿಹಿತ ಕರ್ಮಗಳಿಂದ ಜನರಿಗೆ ಕ್ಷೇಮ-ಸುಭಿಕ್ಷಗಳನ್ನುಂಟುಮಾಡುತ್ತಾರೆ-ಆದ್ದರಿಂದ ನಾವೂ ಎಲ್ಲ ದೇವತೆಗಳನ್ನು ಆರಾಧಿಸಬೇಕು ಎಂಬುದು ಸೂಚನೆ. ಮುಂದೆ ಎರಡು ಮಂತ್ರಗಳಿವೆ-**ಅಗ್ನಿಸ್ತುತಿ ಮಂತ್ರ** ಹಾಗೂ ಅಭೀಷ್ಟಯಾಚನಾ ಮಂತ್ರ. ಈ ಉಪನಿಷತ್ತಿನ ಕೊನೆಯಲ್ಲಿ **ಪರತತ್ತ್ವ-ನಿರೂಪಣ, ಜ್ಞಾನಸಾಧನ ನಿರೂಪಣ** ಹಾಗೂ **ಆತ್ಮಯಜ್ಞ** ಎಂಬ ಭಾಗಗಳಿವೆ. ಇಲ್ಲಿಯವರೆಗೆ ಕಾಮ್ಯಕರ್ಮ- ಫಲಗಳ ಬಗ್ಗೆ ಹೇಳಿದ್ದಾಯಿತು. ಈಗ ಇದರಿಂದ ಒದಗುವ

ಸುಖ–ದುಃಖ, ಜರಾಮರಣಗಳನ್ನು ಗೆಲ್ಲುವ ಉಪಾಯಗಳನ್ನು ಸೂಚಿಸಲಾಗಿದೆ. ಇದೇ ಕರ್ಮಸಂನ್ಯಾಸ–ಅಂದರೆ ಕರ್ಮಕ್ಕೆ ಬೀಜವಾದ ಕಾಮನೆಯನ್ನು ("ಆಸೆಯೇ ದುಃಖಕ್ಕೆ ಮೂಲ ಕಾರಣ...."), ಅದಕ್ಕೆ ಮೂಲವಾದ ಅವಿದ್ಯೆಯನ್ನು ಕಳೆದುಕೊಳ್ಳುವುದು. ಇಂಥ **ಕರ್ಮಸಂನ್ಯಾಸ** ಅಥವಾ "ನೈಷ್ಕರ್ಮ್ಯ ಸಿದ್ಧಿ"ಗಾಗಿ ಕೆಲವು ಅಂತರಂಗ ಹಾಗೂ ಬಹಿರಂಗ ಸಾಧನಗಳನ್ನು ಪ್ರಸ್ತಾವಿಸಲಾಗಿದೆ–ಸತ್ಯ, ತಪಸ್ಸು, ದಮ (ಬಾಹ್ಯೇಂದ್ರಿಯಗಳ ನಿಗ್ರಹ), ಶಮ (ಮನಸ್ಸಿನ ನಿಯಂತ್ರಣ), ದಾನ–ಧರ್ಮ, ಪ್ರಜನನ (ಗೃಹಸ್ಥನಾದವನು ಧರ್ಮಪತ್ನಿಯಲ್ಲಿ ಸತ್ಪ್ರಜೆಯನ್ನು ಪಡೆಯುವುದು), ಅಗ್ನ್ಯಾಧಾನ (ಅಗ್ನಿಯು ಪ್ರತ್ಯಕ್ಷ ದೇವತೆ. ಇಂಥ ಅಗ್ನಿಯನ್ನು ಆಧಾನ ಮಾಡುವುದು–ಅಂದರೆ ಪ್ರತಿದಿನ ಹೋಮಗಳೊಂದಿಗೆ ಅರ್ಚಿಸುವುದು). ಅಗ್ನಿಹೋತ್ರ (ಒಂದು ನಿತ್ಯಕರ್ಮ–ಅಗ್ನಿಯನ್ನು ಸ್ಥಾಪಿಸಿಕೊಂಡು ಹೋಮ ಮಾಡುವುದು), ಯಜ್ಞ, ಉಪಾಸನೆ ಹಾಗೂ ಉತ್ಕೃಷ್ಟವಾದ ಸಂನ್ಯಾಸವೆಂಬ ಮೋಕ್ಷ ಸಾಧನ. ಕರ್ಮಸಂನ್ಯಾಸವೆಂದರೆ ಕರ್ತೃತ್ವ ಬುದ್ಧಿಯ ('ನಾನು ಮಾಡುತ್ತಿದ್ದೇನೆ' ಎಂಬ ಅಹಂಕಾರ) ತ್ಯಾಗ, ದೇಹಾಭಿಮಾನ ತೊರೆದು ಅಸಂಗವಾಗಿರುವುದು. ಈ ಸಾಧಕ ಕ್ರಮವಾಗಿ ದೇವತೆಗಳನ್ನೆಲ್ಲ ಉಪಾಸನೆಯಲ್ಲಿ ಒಂದಾಗಿಸಿಕೊಂಡು, ಅನಂತರ ಶ್ರವಣ–ಮನನ–ನಿದಿಧ್ಯಾಸನಗಳಿಂದ (ಇವೆಲ್ಲ ಮುಖ್ಯ ಸಾಧನಗಳು) ಇದನ್ನೂ ಮೀರಿದ ಸರ್ವಾತ್ಮವಾದ, ಏಕಮೇವಾದ್ವಿತೀಯವಾದ ಪರಬ್ರಹ್ಮದಲ್ಲಿ ನೆಲೆ ನಿಂತರೆ ಪರಿಪೂರ್ಣ ಸಂನ್ಯಾಸ ಸಿದ್ಧಿಸುತ್ತದೆ. ಇಂಥ ಸಂನ್ಯಾಸಸಹಿತವಾದ ಜ್ಞಾನ 'ವಿಜ್ಞಾನ'ವಾದಾಗ–ಅಂದರೆ ಅನುಭವಗಮ್ಯವಾದಾಗ –ಅದೇ ಮೋಕ್ಷ ಪ್ರಾಪ್ತಿ. ಇದಕ್ಕಿಂತ ಹೆಚ್ಚಿನ ಪುರುಷಾರ್ಥ–ಪದವಿ ಇಲ್ಲ ಎಂದು ತಿಳಿಸುತ್ತ ಉಪನಿಷತ್ತು ಕೊನೆಗೊಳ್ಳುತ್ತದೆ–"ತಸ್ಮಾದ್ ಬ್ರಹ್ಮಣೋ ಮಹಿಮಾನಮಾಪ್ನೋತಿ...."



**ವೈಶಿಷ್ಟ್ಯ:** ಈ ಉಪನಿಷತ್ತಿನ ಪ್ರತಿಯೊಂದು ಮಂತ್ರವೂ ವಿಶಿಷ್ಟವಾಗಿದ್ದು, ನಮಗೆ ಭಗವಂತನ ಮಹಿಮೆಯನ್ನು ಬಗೆ–ಬಗೆಯಾಗಿ ತಂದುಕೊಟ್ಟು, ಅದರ ಹಿಂದಿರುವ ಮೂಲತತ್ತ್ವವನ್ನು ಮನದಟ್ಟು ಮಾಡುವ ಮುಖ್ಯೋದ್ದೇಶ ಹೊಂದಿದೆ. ಆ ಮಹಾಚೈತನ್ಯವೇ ಸಾಕಾರ ರೂಪದಿಂದ ತೋರಿಕೊಂಡು ಎಲ್ಲವನ್ನೂ ವ್ಯಾಪಿಸಿದೆ ಎಂಬುದನ್ನು ಈ ಉಪನಿಷತ್ತು ಅತ್ಯಂತ ಹೃದಯಂಗಮವಾಗಿ ಚಿತ್ರಿಸಿದೆ. ಭಗವದ್ಗೀತೆಯಲ್ಲಿ ಕೃಷ್ಣ ಪರಮಾತ್ಮ ಇದೇ ಆಶ್ವಾಸನೆ ನೀಡಿದ್ದಾನೆ–

**ಯೋ ಮಾಂ ಪಶ್ಯತಿ ಸರ್ವತ್ರ**
**ಸರ್ವಂ ಚ ಮಯಿ ಪಶ್ಯತಿ ।**
**ತಸ್ಯಾಹಂ ನ ಪ್ರಣಶ್ಯಾಮಿ**
**ಸ ಚ ಮೇ ನ ಪ್ರಣಶ್ಯತಿ ॥**

ಯಾರು ಸರ್ವ ಜೀವಿಗಳಲ್ಲಿ ಎಲ್ಲರ ಆತ್ಮರೂಪೀ ವಾಸುದೇವನಾದ ನನ್ನನ್ನು ವ್ಯಾಪಕವಾಗಿ ನೋಡುತ್ತಾನೋ ಮತ್ತು ಸರ್ವಪ್ರಾಣಿಗಳನ್ನು ವಾಸುದೇವನಾದ ನನ್ನಲ್ಲಿ ನೋಡುತ್ತಾನೋ, ಅವನಿಗೆ ನಾನು ಕಾಣದೆ ಹೋಗುವುದಿಲ್ಲ. ಅವನೂ ನನಗೆ ಕಾಣದೆ ಹೋಗುವುದಿಲ್ಲ.

ಪಾರಮಾರ್ಥಿಕವಾಗಿ ವಿಶ್ಲೇಷಿಸಿದಾಗ ನಿಜವಾಗಿ ಶ್ರುತಿಗೆ ಸೃಷ್ಟಿಯ ಬಗ್ಗೆ ಹೇಳುವ ಉದ್ದೇಶವಿಲ್ಲ–ನೂಲಿಗಿಂತ ಬೇರೆಯಾಗಿ ಸೀರೆ, ಚಿನ್ನಕ್ಕಿಂತ ಬೇರೆಯಾಗಿ ಬಳೆ ಎಲ್ಲಿದೆ? ಸಾಧಕನನ್ನು ಸೋಪಾನ ಮಾರ್ಗದಿಂದ ಆ ಪರಮ ಲಕ್ಷ್ಯದ ಕಡೆಗೆ ಕರೆದೊಯ್ದು ಕೃತಕೃತ್ಯನನ್ನಾಗಿ ಮಾಡುವುದೇ ಅಂತಿಮ ಗುರಿ. ಜೀವಿಗಳ ಉದ್ಧಾರಕ್ಕಾಗಿ ಪರಮಕಾರುಣ್ಯದಿಂದ, ವ್ಯವಹಾರ ದೃಷ್ಟಿಯಿಂದ ಪ್ರಪಂಚದ ಸೃಷ್ಟಿಕರ್ತನೆನಿಸಿ, ಒಡೆಯನೆನಿಸಿ ಪರಮಾತ್ಮ ಎಲ್ಲರನ್ನೂ ಸಲಹುತ್ತಿದ್ದಾನೆ. ಹೀಗಾಗಿ ನಮ್ಮ ಹಿಂದಿನ ಋಷಿಗಳೆಲ್ಲ ಮೃತ್ತಿಕೆಯನ್ನೂ ದೂರ್ವೆಯನ್ನೂ ಗಂಗೆಯನ್ನೂ ದೇವತೆಗಳ ರೂಪದಲ್ಲಿ ಕಂಡುಕೊಂಡು, ಸ್ತುತಿಸಿ, ಧನ್ಯವಾದ ಅರ್ಪಿಸಿ, ಉಳಿದವರಿಗೂ ಬೋಧಿಸಿದ್ದಾರೆ. ಅವರ ನಾಗರಿಕತೆ–ಬದುಕು ದೇವತಾರಾಧನೆಗೆ, ತಪಸ್ಸು–ಮನಶ್ಶಾಂತಿಗೆ ಅನುಕೂಲವಾಗಿತ್ತು. ಇದಕ್ಕೆ ತದ್ವಿರುದ್ಧವಾಗಿ ಇಂದಿನ ನಾಗರಿಕತೆ ಹಾಗೂ ಸ್ವಾರ್ಥಪರ ಜೀವನಶೈಲಿಯಿಂದಾಗಿ ನಮ್ಮ ನದಿ–ನೀರು ಕಲುಷಿತವಾಗುತ್ತಿದೆ, ಭೂಮಿ ಒತ್ತುವರಿಯಾಗುತ್ತಿದೆ, ಹಸಿರು ಮರೆಯಾಗುತ್ತಿದೆ, ವಾತಾವರಣ ಹದಗೆಡುತ್ತಿದೆ. ನಾವೆಲ್ಲರೂ ನಮ್ಮ ಸುತ್ತಲಿನ ಪರಿಸರ ಹಾಗೂ ಇಡೀ ಸಮಾಜದ ಬಗ್ಗೆ ಉದಾತ್ತವಾದ "ಋಷಿದೃಷ್ಟಿ"ಯನ್ನು ಅಳವಡಿಸಿಕೊಂಡು, ಶ್ರದ್ಧೆಯಿಂದ ಬದುಕುವುದು ಸಾಧ್ಯವಾದರೆ ಇಂಥ ಅನೇಕ ಅನಾಹುತಗಳನ್ನು ತಪ್ಪಿಸಬಹುದು ಎಂದು ಹೇಳಿಕೊಡುತ್ತಿದೆ ಉಪನಿಷತ್ತು.

ನಮ್ಮ ಸಂಸ್ಕೃತಿ–ಸಂಪ್ರದಾಯವನ್ನೂ ತಾತ್ತ್ವಿಕ ಏಕತೆಯನ್ನೂ ತಂದುಕೊಡುವ ಈ ಉಪನಿಷತ್ತಿನುದ್ದಕ್ಕೂ ನಮ್ಮ ನಿತ್ಯದ ಸನ್ನಿವೇಶಗಳಲ್ಲಿ ಬಳಸುವ ಹಲವಾರು ಪದಗಳಿಗೆ ಅತ್ಯಂತ ಆಪ್ತವಾದ, ಸೂಕ್ತವಾದ ವ್ಯುತ್ಪತ್ತಿಗಳು (Etymology) ಸಿಗುತ್ತವೆ. ಈ "ಅರ್ಥಾನುಸಂಧಾನ"ದಿಂದ ನಾವು ಹೇಗೆ ನಿತ್ಯಜೀವನದಲ್ಲಿ ಪರಮಾತ್ಮನನ್ನು ನಿಲ್ಲಿಸಿಕೊಂಡು, ಸುಸ್ಥಿರ ಸಮಾಜಕ್ಕೆ ಮೌಲಿಕ ಕೊಡುಗೆ ನೀಡಬಹುದು ಎಂದು ತಿಳಿದುಬರುತ್ತದೆ. ಮಂತ್ರಗಳಲ್ಲಿ ಕೆಲವು ಆರ್ಷ (ಪ್ರಾಚೀನ ವೈದಿಕ) ಪ್ರಯೋಗಗಳ ಪರಿಚಯವೂ ಆಗುತ್ತದೆ. ದೇವತಾ ಪ್ರಾರ್ಥನೆಗೆ ಶಾಸ್ತ್ರೀಯ ಕರ್ಮಗಳಿಗೆ ಬಹಳ ಸೂಕ್ತವಾಗಿರುವ ಈ ಮಂತ್ರಗಳಲ್ಲಿ ಪರಮಾತ್ಮನಿಗೆ ಹಲವಾರು ವಿಶೇಷಣಗಳನ್ನು ನೀಡಲಾಗಿದೆ. ಇವೆಲ್ಲ ಪ್ರತೀಕವಾಗಿದ್ದು, ಆ ಪರಬ್ರಹ್ಮದಲ್ಲೇ ತಾತ್ಪರ್ಯವನ್ನು ಹೊಂದುತ್ತವೆ ಎಂದು ಅರಿತುಕೊಂಡರೆ ಸಾಧಕ ಕೃತಾರ್ಥನಾಗುತ್ತಾನೆ. ಪರಮಾತ್ಮನು ಸುಲಭಲಭ್ಯನೂ ಹೌದು, ಪರಮಗಮ್ಯನೂ ಹೌದು.

ನಾವು ಹೃಷ್ಟರಾಗಿ, ಪುಷ್ಟರಾಗಿ ಬಾಳಿ, ಅಮೂಲ್ಯವಾದ ಈ ಬದುಕನ್ನು ಎಲ್ಲ ದೇವತೆಗಳ ಶ್ರದ್ಧಾ–ಭಕ್ತಿ ಸಹಿತ ಆರಾಧನೆಗೆ ವಿನಿಯೋಗಿಸಬೇಕು. ಆ ದೇವತೆಗಳು ನಮ್ಮನ್ನು ಅನುಗ್ರಹಿಸಿದಾಗ ನಾವು ನಮ್ಮ ಆತ್ಮವಾದ ಪರಬ್ರಹ್ಮವನ್ನೇ ಅರಿತುಕೊಂಡು ಮುಕ್ತರಾಗಬಹುದು ಎಂಬುದು ಉಪನಿಷತ್ತಿನ ಸಂದೇಶ.

(ಆಭಾರ: "ಮಹಾನಾರಾಯಣೋಪನಿಷತ್ತು": ವೇ॥ ಬ್ರ॥ ಶ್ರೀ ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿಗಳು–ಅಧ್ಯಾತ್ಮ ಪ್ರಕಾಶ ಕಾರ್ಯಾಲಯ).

**೨೭/೨, ರತ್ನವಿಲಾಸ ರಸ್ತೆ, ಬಸವನಗುಡಿ,**
**ಬೆಂಗಳೂರು–೫೬೦ ೦೦೪.**

# ಶ್ರೀ ಯೋಗಿ ನಾರೇಯಣ ಮಠ, ಶ್ರೀಕ್ಷೇತ್ರ ಕೈವಾರ




ದೂರವಾಣಿ: 08154-239525 / ಮೊಬೈಲ್ : 9945337398

klnarayankaiwara53@gmail.com




**ಡಿಸೆಂಬರ್ 2019ನೇ ಮಾಹೆಯ ಸಾಪ್ತಾಹಿಕ ಸೇವೆಗಳ ವಿವರ**

## ನಾದಸುಧಾರಸ

ವಿನೂತನ ಯೋಜನೆಯಲ್ಲಿ ಅಮೋಘ ಸಂಕೀರ್ತನ ಸಂಗೀತ ಕಚೇರಿಗಳು

| ದಿನಾಂಕ | ಸಮಯ | ವಿದ್ವಾಂಸರ ಹೆಸರುಗಳು | ಕಾರ್ಯಕ್ರಮ |
|---|---|---|---|
| 07.12.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಹಂಸಧ್ವನಿ ಶ್ರೀನಿವಾಸ್ (ನಾಮ ಸಂಕೀರ್ತನೆ), ಮಾಲೂರು<br>ಶ್ರೀ ಮಂಜುನಾಥ್, ಮಾಲೂರು - ಕೀಬೋರ್ಡ್<br>ಶ್ರೀ ಮಣಿ, ಟೇಕಲ್ - ತಬಲ<br>ಶ್ರೀ ವಿಜಯ್‌ಕುಮಾರ್ - ರಿದಮ್ ಪ್ಯಾಡ್ | ಗಾಯನ |
| 12.12.2019<br>ಗುರುವಾರ | ಬೆಳಗ್ಗೆ 11.00 ರಿಂದ<br>12.00 ಗಂಟೆವರೆಗೆ | ಶ್ರೀ ವಾನರಾಶಿ ಬಾಲಕೃಷ್ಣ ಭಾಗವತ ಅವರಿಂದ<br>ಪೋತನ ಭಾಗವತ ಪ್ರವಚನ | ಹುಣ್ಣಿಮೆ |
| | ಸಂಜೆ 4.00 ಗಂಟೆಗೆ | ವಿಶೇಷ ಪೂಜೆ ಮತ್ತು ಆಲಂಬಗಿರಿಯಲ್ಲಿ ಗಿರಿ ಪ್ರದಕ್ಷಿಣೋತ್ಸವ<br>ಡಾ. ಎಂ.ಆರ್. ಜಯರಾಮ್ ಅವರ ನೇತೃತ್ವ | |
| 14.12.2019<br>ಶನಿವಾರ | ಸಂಜೆ<br>5.00 ಗಂಟೆಗೆ | ನಾದಸುಧಾರಸ ತಂಡದವರಿಂದ | ಗಾಯನ |
| 21.12.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ಕೇಶವಮೂರ್ತಿ ಭಾಗವತರ್, ಕುಪ್ಪಂ<br>ಶ್ರೀ ವೆಂಕಟಸ್ವಾಮಿ, ಕುಪ್ಪಂ - ಹಾರ್ಮೋನಿಯಂ<br>ಶ್ರೀ ಪಾಪಯ್ಯ - ಕುಪ್ಪಂ - ತಬಲ | ಹರಿಕಥೆ |
| 28.12.2019<br>ಶನಿವಾರ | ಸಂಜೆ<br>5.00 ಗಂಟೆಗೆ | ಶ್ರೀ ನಟರಾಜ್, ಮಾಲೂರು (ಕರ್ನಾಟಕ ಶಾಸ್ತ್ರೀಯ ಸಂಗೀತ)<br>ಶ್ರೀ ಹೇಮಂತ್ ಕುಮಾರ್, ತಿರುಪತಿ - ಪಿಟೀಲು<br>ಶ್ರೀ ಕೆ. ರಾಮ್‌ಕುಮಾರ್, ಕೈವಾರ - ಮೃದಂಗ | ಗಾಯನ |



**ಬಾಲಕೃಷ್ಣ ಭಾಗವತರ್**
ಸಂಯೋಜಕರು:
ಶ್ರೀ ಯೋಗಿನಾರೇಯಣ ಸಂಕೀರ್ತನಾ ಯೋಜನೆ

**ಡಾ॥ ಎಂ.ಆರ್. ಜಯರಾಮ್**
ಧರ್ಮಾಧಿಕಾರಿಗಳು

## ಮಲ್ಲಾರ ಚಂದಾದಾರರಲ್ಲಿ ವಿನಂತಿ

ಮಲ್ಲಾರ ಕಛೇರಿಯಲ್ಲಿ ಹಂಚಿಕೆಯ ವಿಭಾಗದಿಂದ ಚಂದಾದಾರ/ಓದುಗರಿಗೆ 3ನೇ ದಿನಾಂಕದೊಳಗಾಗಿ ತಲುಪುವಂತೆ ಪತ್ರಿಕೆ ಕಳುಹಿಸಲಾಗುತ್ತಿದೆ. ಯಾವುದೇ ಕಾರಣದಿಂದ 10ನೇ ದಿನಾಂಕದೊಳಗಾಗಿ ತಲುಪದಿದ್ದರೆ ಸ್ಥಳೀಯ ಅಂಚೆ ಕಚೇರಿಯಲ್ಲಿ ವಿಚಾರಿಸಿ ಖಚಿತಪಡಿಸಿಕೊಳ್ಳಬೇಕು. ತಲುಪದ ಬಗ್ಗೆ ನಮ್ಮ ಕಛೇರಿಯ ಹಂಚಿಕೆ ವಿಭಾಗಕ್ಕೆ ಪೋಸ್ಟ್ ಕಾರ್ಡ್ ಮೂಲಕ 20ನೇ ದಿನಾಂಕದೊಳಗಾಗಿ ಲಿಖಿತವಾಗಿ ದೂರು ಸಲ್ಲಿಸಬೇಕು. ಪೋಸ್ಟ್ ಕಾರ್ಡ್‌ನಲ್ಲಿ ನಿಮ್ಮ ಗ್ರಾಹಕ ಸಂಖ್ಯೆ, ಸದಸ್ಯತ್ವ (ವಾರ್ಷಿಕ, ಪೋಷಕ ಇತ್ಯಾದಿ) ವಿಳಾಸವನ್ನು ಸ್ಪಷ್ಟವಾಗಿ ಬರೆದಿರಬೇಕು. ದೂರು ಬಂದ ನಂತರ ಆ ತಿಂಗಳ ಸಂಚಿಕೆಯನ್ನು ಮಾತ್ರ ನಂತರದ ತಿಂಗಳಿನ ಸಂಚಿಕೆಯೊಂದಿಗೆ ಪ್ರತ್ಯೇಕವಾಗಿ ಕಳುಹಿಸುವ ವ್ಯವಸ್ಥೆ ಮಾಡಲಾಗುತ್ತದೆ. ಇತರ ಹಳೆಯ ಸಂಚಿಕೆಗಳು ಲಭ್ಯವಿಲ್ಲ. ಅಂಚೆ ಅಧಿಕಾರಿಗಳನ್ನು ಸಂಪರ್ಕಿಸಲು ಅನುಕೂಲ ವಾಗುವಂತೆ ದೂರನ್ನು ಲಿಖಿತವಾಗಿ ಮಾತ್ರ ನೀಡಬೇಕಾಗಿ ವಿನಂತಿ: ಫೋನ್ ಕರೆ ಸಾಕಾಗುವುದಿಲ್ಲ. ಡಿ.ಡಿ./ಚೆಕ್‌ಗಳು 'Sri Yogi Nareyana Study Centre' ಹೆಸರಿನಲ್ಲಿ ಮಾತ್ರ ಕಳಿಸಬೇಕು; ಅಲ್ಲಿ ಬೇರೇನೂ ಇರಬಾರದು; ಕಾರ್ಯಾಲಯ ವಿಳಾಸಕ್ಕೆ ಕಳಿಸಬೇಕು.

ಸಂಪಾದಕರು.



**ಶ್ರೀ ಕಂಚಿ ಕಾಮಕೋಟಿ ಪೀಠದ ಪರಮಾಚಾರ್ಯ ಚಂದ್ರಶೇಖರೇಂದ್ರ ಸರಸ್ವತಿ ಸ್ವಾಮಿಗಳವರು** ಇತ್ತೀಚಿನ ವರೆಗೂ ಜೀವಿಸಿದ್ದು ಪಾದಚಾರಿಗಳಾಗಿಯೇ ದೇಶ ಸಂಚಾರ ಮಾಡುತ್ತಾ **ಕರತಲ ಭಿಕ್ಷಾ ತರುತಲ ವಾಸಃ** ಎಂಬಂತೆ ಪರಿಶುದ್ಧ ಸಂನ್ಯಾಸ ಜೀವನ ನಡೆಸಿ ಶತಾಯುಷಿಗಳಾಗಿ ಬ್ರಹ್ಮೈಕ್ಯರಾದರು. ಅವರು ಸನಾತನ ಧರ್ಮದ ಸಾರಸರ್ವಸ್ವವನ್ನೂ ಆಧುನಿಕ ಪರಿಭಾಷೆಯಲ್ಲಿ ಎಲ್ಲರಿಗೂ ಅರ್ಥವಾಗುವಂತೆ ತಿಳಿ ಭಾಷೆಯಲ್ಲಿ ವಿವರಿಸಿದ್ದಾರೆ. ಅವರ ಮುಂಬಯಿ ಭಕ್ತರು ಒಂದೂಗೂಡಿ **'ಶ್ರೀ ಕಂಚಿ ಮಹಾಸ್ವಾಮಿ ಪೀಠಾರೋಹಣ ಶತಾಬ್ದಿ ಮಹೋತ್ಸವ ಟ್ರಸ್ಟ್' (ಮುಂಬೈ–400 002)** ರಚಿಸಿಕೊಂಡು ಪರಮಾಚಾರ್ಯರ ಅತ್ಯಂತ ಅಮೂಲ್ಯವಾದ ವಿಚಾರಗಳನ್ನೆಲ್ಲ 'ದೈವವಾಣಿ' ಎಂಬ ಹೆಸರಿನಲ್ಲಿ 7 ಬೃಹತ್ ಸಂಪುಟಗಳಲ್ಲಿ ಹೊರತಂದಿದ್ದಾರೆ. ಈ ಬರಹವನ್ನು ಎರಡನೆ ಸಂಪುಟದಿಂದ ಆಯ್ಕೆ ಮಾಡಿ ಕೃತಜ್ಞತಾಪೂರ್ವಕವಾಗಿ ಪ್ರಕಟಿಸುತ್ತಿದ್ದೇವೆ.

# ನಮ್ಮನ್ನು ನಮ್ಮಂತೆ ಮಾಡುವವನು

# ಒಬ್ಬ ರಾಜ ಮತ್ತು ರಾಣಿಯ ಕತೆ

ಒಂದಾನೊಂದು ಕಾಲದಲ್ಲಿ ಒಬ್ಬ ರಾಜ ಇದ್ದ. ಒಬ್ಬ ರಾಜ ಇದ್ದ ಎಂದರೆ ಶತ್ರುರಾಜನೊಬ್ಬನೂ ಇದ್ದ ಎಂದೇ ಅರ್ಥ. ಆ ಶತ್ರುರಾಜನು ಈ ರಾಜನ ರಾಜ್ಯದ ಮೇಲೆ ಆಕ್ರಮಣ ಮಾಡಿದ. ದುರದೃಷ್ಟವಶದಿಂದ ಈ ರಾಜನು ಸೋತುಬಿಟ್ಟ.

'ಗೆಲುವು ಅಥವಾ ವೀರಸ್ವರ್ಗ' ಎಂದು ಅನೇಕ ರಾಜರು ರಣಾಂಗಣದಲ್ಲಿ ತಾವೇ ಪ್ರಾಣಾರ್ಪಣ ಮಾಡುತ್ತಾರೆ. ಕೆಲವು ರಾಜರು ಓಡಿಹೋಗಿ ತಲೆಮರೆಸಿಕೊಳ್ಳುತ್ತಾರೆ. ಆದರೆ ಅದರಿಂದ ಅವರ ಪರಾಕ್ರಮಕ್ಕಾಗಲಿ ಗೌರವಕ್ಕಾಗಲಿ ಲೋಪವಾಗುವುದಿಲ್ಲ. ಅವರು ಅವಿತುಕೊಳ್ಳುತ್ತಾರೆ, ಸೈನ್ಯವನ್ನು ಕೂಡಿಸುತ್ತಾರೆ, ಆಕ್ರಮಣ ಮಾಡಿ ಪ್ರತೀಕಾರವೆಸಗುತ್ತಾರೆ. ಅತಿಪರಾಕ್ರಮಿಗಳಾದ ರಜಪೂತ ರಾಜರೂ ಮುಸ್ಲಿಂ ಆಕ್ರಮಣದ ವೇಳೆ ಓಡಿಹೋಗುತ್ತಿದ್ದರು, ದೊಡ್ಡ ಸೇನೆಯನ್ನು ಜಮಾವಣೆ ಮಾಡುತ್ತಿದ್ದರು, ಮತ್ತೆ ಯುದ್ಧಕ್ಕೆ ನಿಲ್ಲುತ್ತಿದ್ದರು.

ಈ ಕತೆಯಲ್ಲಿನ ರಾಜನೂ ಪ್ರಾಣಾರ್ಪಣೆ ಮಾಡಲಿಲ್ಲ, ಬದಲಿಗೆ ರಣರಂಗದಿಂದ ಓಡಿಹೋದ. ಅವನು ಒಬ್ಬನೇ ಓಡಿಹೋಗಲಿಲ್ಲ, ತನ್ನ ರಾಣಿಯನ್ನೂ ಕುದುರೆಯ ಮೇಲೆ ಕೂರಿಸಿಕೊಂಡು ಹೋದ. ಅವಳು ಆಗ ತುಂಬುಗರ್ಭಿಣಿ.

ಈಗ ಮಾಡುವಂತೆ ಆ ದಿನಗಳಲ್ಲೂ ಜನರು ಭೂಗತರಾಗುತ್ತಿದ್ದರು. ಹೀಗೆಯೇ ಆ ರಾಜನ ಆಪ್ತಸಚಿವನೂ ಭೂಗತನಾದ. ರಾಜನೂ ರಾಣಿಯೂ ತಪ್ಪಿಸಿಕೊಂಡು ಹೋಗಿದ್ದಾರೆಂಬುದು ಅವನಿಗೆ ಮಾತ್ರ ಗೊತ್ತಿತ್ತು.

ರಾಜನೂ ರಾಣಿಯೂ ಕುದುರೆಯೇರಿ ಕಾಡಿನೊಳಗೆ ಸಾಗಿದ್ದರು. ಆ ರಾಜನನ್ನು ಪತ್ತೆಮಾಡಲೆಂದು ಶತ್ರುರಾಜನು ಕುದುರೆ ಸವಾರರನ್ನು ಅಟ್ಟಿದನು. ಅವರಲ್ಲಿ ಕೆಲವರು ಈ ಕಾಡಿಗೂ ಬಂದರು. ಅವರು ಈ ರಾಜನನ್ನು ದೂರದಿಂದಲೇ ಕಂಡರು, ಅಟ್ಟಿಕೊಂಡು ಹೋದರು. ದುರುದೃಷ್ಟವೇ ಆ ರಾಜನ ಬೆನ್ನಟ್ಟಿತ್ತು. ಶತ್ರುಗಳು ಬಹು ಸಮೀಪಕ್ಕೆ ಬಂದಿದ್ದರು.

ಕುದುರೆಯನ್ನೋಡಿಸುತ್ತಿದ್ದ ರಾಜನು ದಾರಿಯಲ್ಲಿ ಒಬ್ಬ ಬೇಟೆಗಾರನ ಗುಡಿಸಿಲನ್ನು ಕಂಡ. ಅವನಿಗೆ ತತ್‌ಕ್ಷಣವೇ ಏನೋ ತೋಚಿತು, ಕುದುರೆಯನ್ನು ನಿಲ್ಲಿಸಿ ಕೆಳಗಿಳಿದ, ರಾಣಿಯನ್ನೂ ಇಳಿಸಿಕೊಂಡ.

ರಾಜನು ರಾಣಿಗೆ ಹೇಳಿದ, "ಶತ್ರುಗಳು ನನ್ನನ್ನು ಬಿಡುವುದಿಲ್ಲ. ಅವರು ಬಹಳ ಜನ ಇದ್ದಾರೆ. ಅವರ ವಿರುದ್ಧ ಹೋರಾಡುವುದು ನನಗೆ ಸಾಧ್ಯವಾಗದೆನಿಸುತ್ತದೆ. ನಾನು ಸಾಯುವುದು ನಿಶ್ಚಿತ. ಆದರೆ ನೀನು ನನ್ನ ಜತೆ ಸಾಯಬಾರದು. ಯಾಕೆ ಗೊತ್ತೆ? ಇನ್ನೇನು ನಿನ್ನ ಹೆರಿಗೆಯ ಹೊತ್ತು ಹತ್ತಿರವಾಗುತ್ತಿದೆ. ಮಗನೇ ಹುಟ್ಟಬಹುದು. ಅವನು ನಮ್ಮ ಕುಟುಂಬವನ್ನು ಉಳಿಸಬಹುದು. ನಾನು ಶತ್ರುಗಳನ್ನು ದಮನ ಮಾಡಲಾಗದಿದ್ದರೂ ಅವನು ಶತ್ರುಗಳ ಬೆನ್ನಟ್ಟಿ ಕಾದು ಗೆದ್ದು ನಮ್ಮ ರಾಜ್ಯವನ್ನು ಹಿಂದಕ್ಕೆ ಪಡೆಯಬಹುದು. ಆದ್ದರಿಂದ, ನೀನು ಪತಿವ್ರತೆಯಂತೆ ನನ್ನೊಡನೆ ಸಾಯುವುದಕ್ಕಿಂತ, ನನ್ನ ಆಸೆಯನ್ನು ಪೂರೈಸಲು ಬದುಕಿ ಉಳಿಯಬೇಕು. ಮಗುವಿಗೆ ಜನ್ಮಕೊಡು, ಚೆನ್ನಾಗಿ ಬೆಳೆಸು. ಈ ಬೇಡನ ಗುಡಿಸಲಲ್ಲಿ ಇರು, ನಿನ್ನ ಯೋಗಕ್ಷೇಮವನ್ನು ನೋಡಿಕೊ."

ಅವಳಿಗೆ ದುಃಖ ಉಮ್ಮಳಿಸಿ ಬಂತು. ರಾಜನ ಮಾತುಗಳನ್ನು ಒಪ್ಪಿಕೊಳ್ಳುವುದು ಕಷ್ಟವಾಯಿತು. ಆದರೆ ರಾಜಧರ್ಮವನ್ನು ಪಾಲಿಸಬೇಕಾಗಿತ್ತು. ತನ್ನ ಮನೆತನದ ಗೌರವವನ್ನೂ ಕೀರ್ತಿಯನ್ನೂ ಕಾಪಾಡಬೇಕಾಗಿತ್ತು, ಹಾಗಾಗಿ ಅವನ ಮಾತಿನಂತೆ ನಡೆಯುವುದು ಅನಿವಾರ್ಯವಾಗಿತ್ತು.

"ನನ್ನ ಪತಿವಾಕ್ಯವೆಂದರೆ ಅದು ನನಗೆ ವೇದವಾಕ್ಯ. ಅವನ ಆಣತಿಯಂತೆ 'ಸಾಯಲು' ಸಿದ್ಧಳಾಗಬಹುದಾದರೆ, ಅವನದೇ ಆದೇಶದಂತೆ 'ಬದುಕಿ ಉಳಿಯಲು' ಸಿದ್ಧಳಾಗಬೇಡವೆ?" ಹೀಗೆ ಅವಳು ತನ್ನನ್ನು ತಾನು ಸಮಾಧಾನಮಾಡಿಕೊಂಡಳು, ಗುಡಿಸಿಲಿನಲ್ಲಿ ಅವಿತುಕೊಂಡಳು.

ಕ್ಷಣಾರ್ಧದಲ್ಲಿ ಶತ್ರುಸೈನಿಕರು ರಾಜನನ್ನು ಸೆರೆಹಿಡಿದರು. ಅವನ ಕತೆ ಮುಗಿಯಿತು. ಅವನು ತನ್ನ ರಾಣಿಯನ್ನೂ ತನ್ನೊಡನೆ ಕರೆತಂದಿದ್ದನೆಂಬುದು ಅವರಿಗೆ ಗೊತ್ತಾಗಲಿಲ್ಲ. ಅವಳು ಕುದುರೆಯೇರಿ ಬರುವಾಗ ರಾಜನ ಮುಂದೆ ಕೂತಿದ್ದರಿಂದ, ಹಿಂಬಾಲಿಸುತ್ತಿದ್ದ ಶತ್ರುಗಳಿಗೆ ಕಂಡಿರಲಿಲ್ಲ.

ಹಾಗಾಗಿ, ಅವರೆಲ್ಲರೂ ತಮ್ಮ ಕೆಲಸ ಮುಗಿಯಿತೆಂದು ಭಾವಿಸಿದರು, ರಾಣಿಗಾಗಿ ಹುಡುಕಲಿಲ್ಲ, ಕಾಡಿನಿಂದ ಸಂತೋಷವಾಗಿ ಹಿಂದಿರುಗಿದರು.

ವಿಶಾಲಹೃದಯವೂ ಸ್ವಇಚ್ಛೆಯಿಂದ ಸಹಾಯ ಮಾಡುವ ಸಹಜಾತುರವೂ ವಿದ್ಯಾವಂತರೂ ಆಧುನಿಕರೂ ಆಗಿರುವವರಲ್ಲಿ ಇರುವುದಕ್ಕಿಂತ ಜನಸಾಮಾನ್ಯರಲ್ಲಿ ಹೇರಳವಾಗಿರುತ್ತದೆ. ಯಾವಾಗಲೂ ಅದು ಹಾಗೆಯೇ.

ಆ ಬೇಡನ ತಾಯಿ ರಾಜಮನೆತನದ ಆ ನಾರಿಯನ್ನು ತನ್ನ ಮಗಳೆಂಬಂತೆ ನೋಡಿಕೊಂಡಳು. ಕಾಲಕ್ರಮದಲ್ಲಿ ರಾಣಿಯು ಗಂಡು ಮಗುವಿಗೆ ಜನ್ಮವಿತ್ತಳು. ತನ್ನ ಕರ್ತವ್ಯ ಮುಗಿಯಿತು ಎನ್ನುವಂತೆ, ತತ್‌ಕ್ಷಣ ಸತ್ತೂಹೋದಳು.

ಹತ್ತು-ಹನ್ನೆರಡು ವರ್ಷ ಕಳೆಯಿತು.

ಶತ್ರುರಾಜನು ರಾಜ್ಯವನ್ನು ಆಳುತ್ತಿದ್ದ. ಆದರೆ ಪ್ರಜೆಗಳು ಸಂತೋಷವಾಗಿರಲಿಲ್ಲ. ಯುದ್ಧದಲ್ಲಿ ಸೋತಿದ್ದರೂ ತಮ್ಮನ್ನು ಪರಂಪರೆಯಿಂದ ಆಳುತ್ತಿದ್ದ ತಮ್ಮ ಆ ರಾಜನನ್ನು ಕುರಿತೇ ಯೋಚಿಸುತ್ತಿದ್ದರು.

ರಾಣಿಯ ರಾಜನ ಜತೆ ತಪ್ಪಿಸಿಕೊಂಡು ಹೋಗಿದ್ದಾಗಲಿ, ಅವಳು ಗಂಡು ಮಗುವಿಗೆ ಜನ್ಮವಿತ್ತಿದ್ದಾಗಲಿ ಜನಗಳಿಗೆ ತಿಳಿದೇ ಇರಲಿಲ್ಲ. ಆದರೂ ಅವರು ತಮ್ಮೆಲ್ಲ ಕಷ್ಟಗಳನ್ನೂ ತಾಳ್ಮೆಯಿಂದ ಸಹಿಸಿಕೊಂಡಿದ್ದರು.

ಮಂತ್ರಿಗೆ, ರಾಜನೂ ರಾಣಿಯೂ ತಪ್ಪಿಸಿಕೊಂಡು ಹೋದುದು ಗೊತ್ತಿತ್ತು. ಆದ್ದರಿಂದ ಅವನು ಯೋಚಿಸತೊಡಗಿದ, "ದೇವರ ದಯೆಯಿಂದ ರಾಣಿಗೆ ಒಬ್ಬ ಗಂಡು ಮಗ ಹುಟ್ಟಿ, ಯಾರಾದರೂ ಅವನನ್ನು ಸಾಕುತ್ತಿರುವುದಾದರೆ, ಅವನೀಗ ಹನ್ನೆರಡು ವರ್ಷದ ಬಾಲಕನಾಗಿರುತ್ತಾನಲ್ಲವೆ? ಪಾರಂಪರಿಕವಾಗಿ ರಾಜ್ಯವನ್ನಾಳಿದ ರಾಜಮನೆತನದ ಒಬ್ಬ ಕುಮಾರ ಅವನು. ಯುದ್ಧಕ್ಕೆ ಸೇನೆಯನ್ನು ಮುನ್ನಡೆಸುವುದಕ್ಕಾಗಲಿ, ಮಂತ್ರಿಗಳ ಸಹಾಯದಿಂದ ರಾಜ್ಯವನ್ನು ಆಳುವುದಕ್ಕಾಗಲಿ ಆ ವಯಸ್ಸು ಕಡಮೆಯಲ್ಲ. ಆದ್ದರಿಂದ ಅವನನ್ನು ಪತ್ತೆ ಮಾಡಬೇಕು. ಬಿಲ್ಲುಗಾರಿಕೆ ಮೊದಲಾದ ವಿದ್ಯೆಗಳಲ್ಲಿ ಅವನಿಗೆ ತರಬೇತಿ ಕೊಡಬೇಕು. ಆಗ ಜನರು ಅವನ ನೇತೃತ್ವದಲ್ಲಿ ಒಂದಾಗುತ್ತಾರೆ. ಈ ಶತ್ರುರಾಜನನ್ನು ಕಿತ್ತೊಗೆಯುತ್ತಾರೆ."

ಅವನೊಂದು ರಹಸ್ಯದಳವನ್ನು ರಚಿಸಿದ. ರಾಜಕುಮಾರನಿಗಾಗಿ ಹುಡುಕತೊಡಗಿದ. ಕೊನೆಗೊಮ್ಮೆ ಆ ಬೇಟೆಗಾರನ ಗುಡಿಸಿಲಿಗೆ ಬಂದ.

ಅಲ್ಲಿ ರಾಜಕುಮಾರನು ಬೇಡಸಮುದಾಯದ ಇತರ ಮಕ್ಕಳ ಜತೆ ಆಟವಾಡುತ್ತಿದ್ದ. ಅವರಂತೆಯೇ ಅವನ ಉಡುಪೂ ಇತ್ತು. ನಡುವಿಗೆ ತುಂಡು ದಟ್ಟಿ ಸುತ್ತಿದ್ದ, ತಲೆಗೂದಲಿಗೆ ಹಕ್ಕಿಯ ರೆಕ್ಕೆ ಸಿಕ್ಕಿಸಿಕೊಂಡಿದ್ದ, ಕತ್ತಿನ ಸುತ್ತ ಯಾವುದೋ ಮಣಿಗಳನ್ನು ಪೋಣಿಸಿದ ಸರವಿತ್ತು. ಅದರಲ್ಲೊಂದು ಹುಲಿಯುಗುರಿನ ಪದಕವಿತ್ತು. ಆದರೂ ಚಾಣಾಕ್ಷನಾದ ಆ ಮಂತ್ರಿ ಪತ್ತೆ ಮಾಡಿದ. ಆ ಬಾಲಕ ಅವನ (ರಾಜನಾದ) ತಂದೆಯನ್ನು ಹೋಲುತ್ತಿದ್ದ. ಅವನ ಮುಖದಲ್ಲಿ ರಾಜಕಳೆ ಇತ್ತು.

ಬೇಡನ ತಾಯಿ-ಆ ಮುದುಕಿ-ಇನ್ನೂ ಜೀವಂತವಾಗಿದ್ದಳು. ಮಂತ್ರಿಯು ಅವಳೊಡನೆ ಆ ಬಾಲಕನ ಬಗೆಗೆ ಮಾತಾಡಿದ.

ಕಾಡುಗಳಲ್ಲಿ ವಾಸಮಾಡುವ ಗುಡ್ಡಗಾಡು ಜನರು ನೇರ ನುಡಿಯವರು, ಸುಳ್ಳು ತಟವಟ ಅವರಿಗೆ ತಿಳಿಯದು. ಹಾಗಾಗಿ ಆ ಮುದುಕಿಯು ಮಂತ್ರಿಗೆ ಎಲ್ಲವನ್ನೂ ಇದ್ದದ್ದು ಇದ್ದ ಹಾಗೆ ಹೇಳಿದಳು, "ಅನೇಕ ವರ್ಷಗಳ ಹಿಂದೆ ಒಬ್ಬ ಗರ್ಭಿಣಿ ಬಂದು ಇಲ್ಲಿ ಆಶ್ರಯಕ್ಕಾಗಿ ಕೇಳಿದಳು. ನಾನು ಅವಳನ್ನು ನನ್ನ ಮಗಳೆಂಬಂತೆ ನೋಡಿಕೊಂಡೆ. ಆದರೂ ಅವಳು ತಾನು ಯಾರೆಂಬುದನ್ನು ಬಾಯಿಬಿಡಲೇ ಇಲ್ಲ; ಈ ಮಗುವನ್ನು ಹೆತ್ತು ತತ್‌ಕ್ಷಣವೇ ಸತ್ತುಹೋದಳು. ಅಲ್ಲಿಂದ ಮೊದಲಾಗಿ, ನಾನೇ ಅವನನ್ನು ತಾಯಿಯಂತೆ ಪಾಲಿಸುತ್ತಿದ್ದೇನೆ. ಅವನನ್ನು ನೋಡಿದರೆ ಅವನು ರಾಜವಂಶದ ಕುಡಿ ಎಂದೇ ನನಗೆ ಅನಿಸುತ್ತಿತ್ತು. ಆದರೆ, ಹೀಗೇ ಎಂದು ತಿಳಿಯಲಾರದೇ ಹೋದೆವು. ಆದ್ದರಿಂದ ನಮ್ಮಲ್ಲೇ ಒಬ್ಬನಂತೆ ಅವನನ್ನು ಬೆಳೆಸಿದ್ದೇವೆ."

ಮಂತ್ರಿಯು ಸರಿಯಾಗಿ ಲೆಕ್ಕಾಚಾರ ಮಾಡಿದ, "ಇಲ್ಲಿ ಬೆಳೆಯುತ್ತಿರುವವನು ನಮ್ಮ ರಾಜಕುಮಾರನೇ" ಎಂದು ಅರಿತುಕೊಂಡ.

ಮಂತ್ರಿಯು ಅದನ್ನೇ ಬೇಡನಿಗೆ ಹೇಳಿದ. ಮಗುವನ್ನು ಒಯ್ಯುವುದಾಗಿಯೂ ತಿಳಿಸಿದ. ಇದರಿಂದ ಬೇಡನಿಗೂ ಅವನ ತಾಯಿಗೂ ದುಃಖವಾಯಿತು. ಮಗುವನ್ನು ಸಲಹಿದವರಿಗೆ ಬೆಳೆಯುವ ಮಮತೆ ಅಂಥದು. ಇಂಥ ಮಮತೆಯ ಅಂಟು ಕಣ್ವಮಹರ್ಷಿ, ಜಡಭರತ ಮೊದಲಾದ ಮಹಾತ್ಮರನ್ನೇ ಕಾಡಿದೆ. ಆದರೂ ಆ ಬೇಡರು ಅದು ಅರಮನೆಗೆ ಸಂಬಂಧಿಸಿದ ವಿಷಯವೆಂಬುದನ್ನು ಮನದಟ್ಟು ಮಾಡಿಕೊಂಡರು, ಮಗುವನ್ನು ಕಳಿಸಿಕೊಡಲು ಒಪ್ಪಿದರು.

ಇಷ್ಟಾದರೂ ಬೇಡ-ಸಮುದಾಯದ ಇತರ ಮಕ್ಕಳೊಂದಿಗೆ ಆಟವಾಡುತ್ತಿದ್ದ ರಾಜಕುಮಾರನನ್ನು ಮಂತ್ರಿಯು ಕರೆದಾಗ, ಅವನು ಓಡಿಹೋಗಲು ಹೊರಟ. ಅವನಿಗೆ ಅವನ ಗೆಳೆಯರ ಸಹವಾಸ ಮೆಚ್ಚಾಗಿತ್ತು, ಹೊಸದಾಗಿ ಕಂಡ ಗಣ್ಯರೊಂದಿಗಿನ ಒಡನಾಟವು ಇಷ್ಟವಾಗಲಿಲ್ಲ.

ಅವನು ಬೇಡರ ಮಕ್ಕಳ ಹಾಗೆ ಹೇಳಿದ, "ಇವರೆಲ್ಲರೂ ನನ್ನವರು, ಇವರನ್ನು ಬಿಟ್ಟು ನಾನು ಎಲ್ಲಿಗೂ ಬರಲಾರೆ."

ಆಗ ಮಂತ್ರಿಯು ಅವನನ್ನು ಒತ್ತಟ್ಟಿಗೆ ಕರೆದು ಎಲ್ಲ ವಿದ್ಯಮಾನಗಳನ್ನೂ ವಿವರಿಸಿದ, "ನೀನು ರಾಜಮನೆತನದ ಒಬ್ಬ ರಾಜಕುಮಾರ, ನೀನು ಹುಟ್ಟುವ ಮೊದಲು, ಶತ್ರುಗಳಿಂದ ತಪ್ಪಿಸಿಕೊಂಡು ಓಡುತ್ತಿದ್ದ ನಿನ್ನ ತಂದೆಯನ್ನು ಕೊಂದರು. ನಿನ್ನ ತಾಯಿ ಈ ಬೇಡರ ಗುಡಿಸಲಲ್ಲಿ ನಿನ್ನನ್ನು ಹೆತ್ತು ಕೊನೆಯುಸಿರೆಳೆದಳು. ಆಗಿನಿಂದ ನೀನು ಇಲ್ಲಿ ಬೆಳೆಯುತ್ತಿದ್ದೀಯೆ. ಆದರೂ ಈ ರಾಜ್ಯವನ್ನು ಆಳಬೇಕಾದವನು ನೀನು. ನಿನ್ನ ನೇತೃತ್ವದಲ್ಲಿ ಶತ್ರುಗಳನ್ನು ಎದುರಿಸಿ ರಾಜ್ಯವನ್ನು ಗೆದ್ದು ಹಿಂದಕ್ಕೆ ಪಡೆಯಬೇಕು ಎಂದು ನಾವು ಯೋಚಿಸಿದ್ದೇವೆ. ಈಗಿನ ನಿನ್ನ ಸ್ಥಿತಿಗತಿಗಿಂತ ತುಂಬ ಮೇಲಿನ ಸ್ಥಾನಮಾನ ನಿನ್ನದೆನ್ನುವುದು ವಿಧಿಲಿಖಿತ. ಇಲ್ಲ ಎನ್ನಬೇಡ."

ಮಂತ್ರಿಯು-ಶೌರ್ಯ, ತಂದೆತಾಯಿಯಲ್ಲಿ ಪ್ರೇಮ-ಇಂಥ ಗುಣಗಳನ್ನು ಆ ಬಾಲಕನಲ್ಲಿ ಊರಿದ. ಶತ್ರುವಿನ ಮೇಲೆ ಕೆಚ್ಚಿನ ಹೋರಾಟ ಮಾಡಬೇಕಾದುದು ಏಕೆ ಮುಖ್ಯ ಎಂಬುದನ್ನು ವಿವರಿಸಿದ.

ಅದು ಅರ್ಥವಾಗುತ್ತಿದ್ದಂತೆಯೇ ಬಾಲಕನ ಮುಖಭಾವ ಬದಲಾಯಿತು. ಅರಸುತನಕ್ಕೆ ಹೊಂದಿಕೊಂಡ ಬಲ, ವರ್ಚಸ್ಸು ಮತ್ತು ಗಾಂಭೀರ್ಯದ ನೋಟವನ್ನು ಅಲ್ಲಿ ಕಾಣಬಹುದಾಗಿತ್ತು.

ರಾಜಕುಮಾರನು ಬೇಗ ಯುದ್ಧಕಲೆಯನ್ನು ಕಲಿತನು. ಬೇಡ ಸಮುದಾಯದಿಂದ ಬೀಳ್ಕೊಂಡು, ತನ್ನ ಮಂತ್ರಿಯ ಸಹಾಯದಿಂದ ಒಂದು ಸೈನ್ಯವನ್ನು ಕೂಡಿಸಿದನು. ಜನರಿಗೆ, ತಮ್ಮ ರಾಜಮನೆತನದ ವಾರಸುದಾರ ಬಂದಿರುವ ಸುದ್ದಿ ತಿಳಿಯಿತು; ತತ್‌ಕ್ಷಣವೇ ಉತ್ಸಾಹದಿಂದ ಬಂದು ಸೇರಿದರು.

ಆ ದಿನಗಳಲ್ಲಿ ರಾಜನಿಗೂ ಸಿಂಹಾಸನಕ್ಕೂ ಇದ್ದ ನಿಷ್ಠೆಯನ್ನು ಈಗಿನ ಪ್ರಜಾಪ್ರಭುತ್ವದ ರೀತಿಗೆ ಹೋಲಿಸುವಂತಿಲ್ಲ. ನಾಯಕನೊಬ್ಬನ ಮುಖಸ್ತುತಿ ಮಾಡುವುದು, ಕೆಲವರ್ಷಗಳ ಅನಂತರ ಪ್ರತ್ಯೇಕತಾ ಚಳವಳಿ ಮಾಡುವುದು, ಕೊನೆಗೆ ಅವನನ್ನು ಪೂರ್ತಿ ಉಪೇಕ್ಷಿಸುವುದು ಈಗಿನ ರೀತಿ. ಆಗ ನಿಷ್ಠೆಯು ಹೃತ್ಪೂರ್ವಕವಾಗಿ ಇರುತ್ತಿತ್ತು, ದೃಢವಾಗಿ ಇರುತ್ತಿತ್ತು. ಕೃಪಣತೆ ಇಲ್ಲದ ಅಂಥ ನಿಷ್ಠೆಗೆ ರಾಜರೂ ಅರ್ಹರಾಗಿರುತ್ತಿದ್ದರು. ಅಪಾರವಾದ ಋಜುತ್ವ ಮತ್ತು ಶಿಸ್ತು ಇದ್ದ ಆ ರಾಜರು ತಮ್ಮ ಪ್ರಜೆಗಳನ್ನು ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ರಾಜ-ಪರಂಪರೆಯಂತೆ ರಾಜ್ಯವನ್ನು ಆಳುವುದು ಎಂದರೆ ರಾತ್ರೋರಾತ್ರಿ ಗದ್ದುಗೆ ಏರುವುದು, ತಲೆತಿರುಗಿ ಮನಸೋ ಇಚ್ಛೆ ಆಳುವುದು ಎಂದು ಅರ್ಥವಲ್ಲ. ಈ ಕಥೆಯಲ್ಲಿನ ಹುಡುಗನಂತೆ



49ನೇ ಪುಟಕ್ಕೆ



# KALAJNANA

*(Written in 1813 A.D.)*

## Sri Yogi Nareyana Tataiah

### ಮೂಲಮು–21

ದಿಕ್ಕು ಲೇಕ ತಿರುಗು – ದೀನುಲ ಪಿಲುಪಿಂಚಿ
ವಡುಗು – ಪೆಂಡ್ಲಿ ಪಟ್ಟು – ವಕ್ಕ ದಿನಮು ।
ಎಚ್ಚೋಟ ದೇವತಾ – ಗೃಹಮು ಶಿಥಿಲಂ ಬೈನ
ಅಪ್ಪುಡೇ ಕಟ್ಟುಮನಿ – ಅಪ್ಪಣವುನು ।
ಮಗುವಲ ದೆಸ ಚೂಡ – ಮದಿಲೋನ ಚಿಂತಿಂಚಿ
ಪಲ್ಲೆ–ಪುರಮುಲ ಚೊರಡು – ಪಾವನುಂಡು ।
ಆದಿ ವಿಷ್ಣು – ಅಲ್ಲ – ಹರ ವಿಗ್ರಹುಲ ಪೂಜ
ಕೈಂಕರ್ಯ ತಸ್ತೀಕು –ಕೋಟಿ ಧನಮು ॥
ಧರಣಿ ಸ್ಥಾಪಿತ ಮೈಯುನ್ನ – ದ್ರವ್ಯಮೆಲ್ಲ ।
ವೆಳ್ಳ ತೀಯಿಂಚಿ ವೇಯಿಂಚು – ಬೊಕ್ಸಮುನಕು ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ 21 ॥

***Dikku laeka thirugu deenula pilupinchi,***
***Vadagu, pendli pattu vakka dinamu |***
***Yechchota devatha grihamu shithilambaina***
***Appudae kattumani appaanavunu |***
***Maguvala desa chooda madilona chinthinchi***
***Palle puramula choradu pavanundu |***
***Adi Vishnu, Allah, Hara vigrahula pooja***
***Kainkarya thastheeku koti dhanamu ||***
***Dharani sthapitha maiyunna dravyamella |***
***Vella theyinchi vaeyinchu boksamunaku |***
***Amara Naraeyanuni Sakha, Hara, mahatma |***
***Adhika BhavaBhanga, Kaiwaramu Bheemalinga | 21 |***

### Meaning:

All those who are humble and poor (deenulu), who are without help or support, will be sent for (or even searched for), and their Upanayanam or wedding (pendli) will be celebrated one day. If any sacred shrine (temple mosque etc.) happens to be damaged or partially destroyed, it will be immediately repaired or re-built. Since the noble (and dharmanishta) ruler will under a vow not to look at the faces of young or youthful women, he will not enter towns or villages while on tour. Government grants will be generously given for the proper maintenance and upkeep of Vishnu temples, mosques where prayers to Allah are offered and the shrines dedicated to Shiva. Proper supervision or inspection would be conducted to see that the traditional forms of prayer or worship are duly conducted in these holy places. All the treasure hidden in the bosom of the earth will be mined and it will fill the coffers (treasury) of the state.

### ಮೂಲಮು –22

ವೆದಕಿ ಚೂಚಿನ ಲೇರು – ವೆಲದುಲು ಸೇನಲೋ
ಕೈದವುನು ಸಾರಾಯಿ – ಕಲ್ಲು ಭಂಗಿ ।
ಅನ್ನಿ ಜಾತುಲುವಾರು – ಅನ್ನದಮ್ಮುಲ ರೀತಿ
ಅನ್ಯೋನ್ಯಮೈ ಯುಂದು – ಅನುದಿನಂಬು ।
ಪಶುವುಲು ಬಹು ಜಯಂ – ಪಾಲು – ಪೆರಗು –ನೆಯ್ಯಿ
ಜಲಮು ವಾಡಿನ ವಿಧಮು – ಜನುಲಕೆಲ್ಲ ।
ಪಪ್ಪು – ಬಿಯ್ಯಮು ಸೆಲವು – ವ್ಯಾಪಾರಕಾಂಡ್ಲೆಲ್ಲ
ಲೆಸ್ಸ ಶೋಧಿಂಚವಲೆ – ರಾಯಿ – ಮನ್ನು ॥
ಧನಮು–ಧಾನ್ಯಮು ಸರಿಸಮಮು–ದಂಡುಲೋನ ।
ಪದಿ ದಿನಾಲಕು ವಕ ರೋಜು – ಫೌಜುಕೆಲ್ಲ ।
ಅಮರನಾರೇಯಣುನಿ ಸಖ, – ಹರ, ಮಹಾತ್ಮ ।
ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ 22 ॥

*Vedakichoochina laeru Veladulu senalo,*
*Kaidavunu saryi, kallu bhangi |*
*Anni jathuluvaru annadammula reethi*
*Anonyamai yunduranudinambu |*
*Pashuvulu bahu jayam, palu peragu, neyyi*
*Jalamu vadina vidhamu janulakella*
*Pappu, biyyamu selavu vyapara kandlella*
*Lessa shodhinchavale rayi, mannu ||*
*Dhanamu, dhanyamu sarisamamu dandulona*
*|*
*Padi dinalku vaka roju phoujukella |*
*Amara Naraeyanuni Sakha, Hara, mahatma*
*|*
*Adhika BhavaBhanga, Kaiwaramu*
*Bheemalinga | 22 |*

## Meaning:

In the regime of this pure and pious ruler one will never find even one woman in the entire group of defence personnel. Alcoholic drinks, drugs (which induce hallucination such as heroins, LSD etc) will be confiscated (if found anywhere) by the government. Members of all communities will live together like brothers in amity and understanding. Cattle wealth will increase enormously. People will use dairy products such as milk, curds, ghee as they would use water for their daily needs. Rice-merchants and pulse-sellers will be required to sell cleaned and well-sifted grains, completely free from dirt, stones and dust. Those who serve in the army (phouju) will be given their ten-day quota of salary and in advance on a particular or specified day. There will be plenitude and prosperity, happiness and contentment all over the country and at all levels.

**ಮೂಲಮು – 23**

**ಷೋಡಶ ಮಹಾದಾನ – ಧರ್ಮ ಧನ್ಯುಂಡೈನ**
**ಆತ್ಮ ಯೋಗಾನಂದ – ಮಂದುಟರುದು ।**
**ಪುಟ್ಟು ಬ್ರಹ್ಮಚಾರಿ – ಪುರುಷುಡೈನ ಕಾನಿ**
**ಆತ್ಮಯೋಗಾನಂದ – ಮಂದುಟರುದು ।**
**ಇಷ್ಟ ವಿಗ್ರಹ ಪೂಜ – ಲೆನ್ನಿ ಜೇಸಿನ ಕಾನಿ**
**ಆತ್ಮ ಯೋಗಾನಂದ – ಮಂದುಟರುದು ।**
**ನೂಟಯೆನಿಮಿದಿ ದಿವ್ಯ – ತಿರುಪತುಲು ತಿರಿಗಿನಾ**
**ಆತ್ಮಯೋಗಾನಂದ – ಮುಂದುಟರುದು ॥**
**ಬ್ರಹ್ಮವಿದ್ಯಾ ಧುರಂ – ಧರುಡು ಗುರುಡು ।**
**ವಿಮಲ ವಿಜ್ಞಾನ ಧೃಢಮೂರ್ತಿ – ಚಕ್ರವರ್ತಿ ।**
**ಅಮರನಾರೇಯಣುನಿ ಸಖ, – ಹರ, ಮಹಾತ್ಮ ।**
**ಅಧಿಕ ಭವಭಂಗ, ಕೈವರಮು – ಭೀಮಲಿಂಗ ॥ ೨೩ ॥**

*Shodasha mahadana, dharma dhayundaina |*
*Athma yogananda mundutarudu |*
*Puttu bramachari purushudaina kani*
*Atma yogananda mundurarudu |*
*Ishta vigraha poojalenni jaesina kani |*
*Atma yogananda mundurarudu |*
*Nootyenimidi divya thiupathulu thirugina*
*Athma yogananda mundutarudu |*
*Brahma vidya dhurundharudu Gurudu |*
*Vimala vijnana dridhamurthi chakravarthi |*
*Amara Naraeyanuni Sakha, Hara, mahatma |*
*Adhika BhavaBhanga, Kaiwaramu*
*Bheemalinga | 23 |*

## Meaning:

It is extremely difficult to attain Atman Yogananda even by him who has earned enough "merit" by doing the sixteen prescribed mahadanas (the great gifts), like gifting of money, lands, cows, cloth etc... That ananda (bliss absolute) is not attainable even by one who has truly and consistently lived a Pure, pious and dharmic life. Even he who has religiously maintained the vow of Brahmacharya (self-restraint and abstinence) since his very birth
may not attain Atma yogananda. For him too who devotes his entire life to performing poojas as ordained in the Shastras, Atma Yogananda may be a mirage. Going regularly on pilgrimage to a hundred and eight holy pilgrim centers like Tirupathi with intense faith and unflagging devotion may not earn Atma yogananda. But the emperor mentioned (in the aforesaid stanzas) will be a guru par excellence with an expert knowledge of Brahma Vidya. He will be a very enlightened and highly-evolved soul, radiant with Vimala vijnana and a firm and steadfast mind and great spiritual power.

**(To be continued...)**



## ತಿರುಮಲೆಯ ಚರಿತಾಮೃತ


ತೆಲುಗು ಮೂಲ:
■ ಪಿ.ವಿ.ಆರ್.ಕೆ. ಪ್ರಸಾದ್
(ನಿವೃತ್ತ ಐ.ಎ.ಎಸ್. ಅಧಿಕಾರಿ)

■ ಕನ್ನಡಕ್ಕೆ: ಸೂರ್ಯವಂಶಿ


# ಇನ್ನೂರು ವರ್ಷಗಳ ಕಾಲ ನಿಂತಿದ್ದ ಗರುಡಗಂಬ

ಕ್ರಿ. ಶ. 1557 ಜುಲೈ 27ರ ಹೊತ್ತಿಗೆ ಒಂದು ಶಾಸನದಲ್ಲಿ ರಾಮರಾಜನ ಮಗ ತಿರುಮಲಯ್ಯರಾಜ ಚಂದ್ರಗಿರಿಯಿಂದ 21 ಜನರನ್ನು ದೇವಸ್ಥಾನಕ್ಕೆ ತುಪ್ಪವನ್ನು ಸರಬರಾಜು ಮಾಡುವುದಕ್ಕೆ ನೇಮಿಸಿದ (ಇವರುಗಳು ಅಲ್ಲಿಯವರೆಗೂ ರಾಜನಿಗೆ ತುಪ್ಪ ಸರಬರಾಜು ಮಾಡುತ್ತಿದ್ದರು).

ಈತನೇ ತಿರುಮಲೆಯಲ್ಲಿ ಡೋಲೋತ್ಸವ, ವಸಂತೋತ್ಸವಗಳಿಗೆ ದೇವಾದಾಯ ಮಾಡಿದರು. ಆ ದಿನಗಳಲ್ಲೇ ತಿರುಪತಿಯಲ್ಲಿ ಗೋವಿಂದರಾಜಸ್ವಾಮಿಯ ಉತ್ಸವ ವಿಗ್ರಹಗಳನ್ನು ಸುತ್ತಮುತ್ತಲಿನ ಗ್ರಾಮಗಳಿಗೆ ತೆಗೆದುಕೊಂಡು ಹೋಗಿ, ಉತ್ಸವವನ್ನು ಮಾಡಿ, ನೈವೇದ್ಯಗಳನ್ನು ಮಾಡುವ ಸಂಪ್ರದಾಯ ಪ್ರಾರಂಭವಾಯಿತು. ಅವಿಲಾಲ ಕೂಪುಚಂದ್ರಪೇಟೆಯ ಗ್ರಾಮಸ್ಥರು ಆ ಗ್ರಾಮಗಳಲ್ಲಿ ಮಂಟಪಗಳನ್ನು ಕಟ್ಟಿ ದೇವರನ್ನು ಉತ್ಸವ ಮಾಡಿಕೊಂಡು ತಂದು ನೈವೇದ್ಯಗಳನ್ನು ಮಾಡುತ್ತಿದ್ದರೆಂದು ಶಾಸನದಲ್ಲಿದೆ.

ಕ್ರಿ.ಶ. 1614ರಲ್ಲಿ ಶ್ರೀರಾಮನವಮಿಯ ಅನಂತರದ ದಿನ-ಶ್ರೀರಾಮ ಪಟ್ಟಾಭಿಷೇಕದ ಮಹೋತ್ಸವವನ್ನು ವೇಂಕಟೇಶ್ವರ ಆಲಯದಲ್ಲಿ 'ನೋಟಕ್ಕರ ವೆಂಕಟಯ್ಯನ್' ಎಂಬಾತ ದೇವಾದಾಯ ಮಾಡಿ ಈ ಸೇವೆಯನ್ನು ಪ್ರಾರಂಭಿಸಿದರು.

ಆ ದಿನಗಳಲ್ಲಿ ದೇವಾಲಯದಲ್ಲಿದ್ದ ಮಲಯಪ್ಪಸ್ವಾಮಿ, ಶ್ರೀದೇವಿ, ಭೂದೇವಿ, ಶ್ರೀರಾಮ, ಸೀತಾರಾಮಲಕ್ಷ್ಮಣರು, ವಿಷ್ವಕ್ಸೇನರು, ಹನುಮಂತ, ಸುಗ್ರೀವ, ಅಂಗದ, ರಾಮಾನುಜರ ವಿಗ್ರಹಗಳು ತಿರುಮಲೆಯ ಮಣಿಮಂಟಪಕ್ಕೆ ತಂದು, ಎಲ್ಲ ವಿಗ್ರಹಗಳಿಗೂ ಅಭಿಷೇಕ ಮಾಡಿ, ಭೂರಿ ನೈವೇದ್ಯಗಳನ್ನು ಸಮರ್ಪಿಸುತ್ತಿದ್ದರು. ಅನ್ನನೈವೇದ್ಯಗಳೇ ಅಲ್ಲದೇ 6 ರೀತಿಯ ಪಡಿ (ಭಕ್ಷ್ಯ) ನೈವೇದ್ಯಗಳು-ಅತಿರಸ, ಕಜ್ಜಾಯ, ದೋಸೆ, ವಡೆ, ಇಡ್ಲಿ, ಜಿಲೇಬಿಗಳನ್ನು ಮಾಡುತ್ತಿದ್ದರು.

ಆ ಕಾಲದಲ್ಲಿ ತೆಲುಗಿನಲ್ಲಿ ಕೆತ್ತಲ್ಪಟ್ಟ ಶಿಲಾಶಾಸನದಲ್ಲಿ ಮುಖ್ಯವಾದವುವೆಂದರೆ-25, 26 ನಂಬರುಗಳಿರುವ ಕ್ರಿ.ಶ. 1628 ವರ್ಷಕ್ಕೆ ಸೇರಿದ ಮಟ್ಲಕುಮಾರ ಅನಂತರಾಯರಿಗೆ ಸೇರಿದ್ದು.

ಇವರು ವೇಂಕಟಾಚಲದಿಂದ ಅಹೋಬಿಲದವರೆಗೂ ಇದ್ದ ರಾಜ್ಯವನ್ನು ಪಾಲಿಸುತ್ತಿದ್ದರು. ಇತರ ಬಿರುದುಗಳೊಂದಿಗೆ ವೇಂಕಟೇಶ್ವರ ಸೇವಾದುರಂಧರ ಎಂಬ ಬಿರುದನ್ನೂ ಈತನ ಶಾಸನಗಳಲ್ಲಿ ನೋಡಬಹುದು.

ಈತ ತಿರುಮಲೆಯ ವೇಂಕಟೇಶ್ವರನಿಗೆ ಸ್ವರ್ಣದ ಅಶ್ವ, ಸ್ವರ್ಣ ಸಿಂಧುರ (ಬಂಗಾರದ ಗಜವಾಹನ) ಸ್ವರ್ಣದ ಸರ್ವಭೂಪಾಲ ವಾಹನ, ಸ್ವರ್ಣ ಪದ್ಮಪೀಠ, ರತ್ನಗಳ ಕಿರೀಟ, ನೈವೇದ್ಯಕ್ಕೆ ಬಂಗಾರದ ತಟ್ಟೆ, ಮಾಡಿಸಿ, ಸಮರ್ಪಿಸಿದ. ಇವೇ ಅಲ್ಲದೇ ಉನ್ನತ ಕೇಳಿ ಮಂಟಪ, ಸೋಪಾನ ಮಾರ್ಗವನ್ನು, ಬೆಟ್ಟಕ್ಕೆ ನಡೆದುಕೊಂಡು ಹೋಗುವ ಮಾರ್ಗದಲ್ಲಿ ಕಟ್ಟಿಸಿದ. ಬೆಟ್ಟದ ಮೇಲಿರುವ ಮೊದಲನೆಯ ಗಾಳಿಗೋಪುರವನ್ನು ಕಟ್ಟಿಸಿದ್ದೂ ಈತನೇ.



ಈ ಶಾಸನಗಳಲ್ಲಿ ಆತ ಮಾಡಿದ ಇತರ ಧರ್ಮಕಾರ್ಯಲಾಗಿದೆ: ವಿವರವಾಗಿ ತಿಳಿಸಟ್ಟಿಲ್ಲದೆ.

- ಗೋವಿಂದರಾಜಸ್ವಾಮಿಯ ಆಲಯದಲ್ಲಿ ಬಂಗಾರದ ವಾಹನವನ್ನು ತಯಾರು ಮಾಡಿಸಿದ.
- ಕಾಳಹಸ್ತೀಶ್ವರಸ್ವಾಮಿಗೆ 'ಕನಕ ಮೋಹನ ಮಯೂರ ವಾಹನ'ವನ್ನು ತಯಾರು ಮಾಡಿಸಿದ.
- ತಿರುಮಲೆಯ ನಡೆಯುವ ದಾರಿಯಲ್ಲಿನ ವೇಂಕಟೇಶ್ವರನ ವಿಗ್ರಹ.
- ನಂದಲೂರಿ (ಕಡಪ ಜಿಲ್ಲೆ) ಯಲ್ಲಿ ನಾಲ್ಕು ಗೋಪುರಗಳು ಪುಷ್ಕರಿಣಿಯ ನಡುವೆ 'ನರಸಿಮಂಟಪ'
- ಕಡಪದಲ್ಲಿನ 'ಒಜಿಟಿಮಿಟ್ಟ' ರಾಮಾಲಯದಲ್ಲಿ ಮಂಟಪಗಳು, ಪ್ರಾಕಾರಗಳು, ಎರಡು ದೊಡ್ಡ ಗೋಪುರಗಳನ್ನು ನಿರ್ಮಿಸಿದ.
- ಚಿನ್ನಮಾಂಬಪುರ, ಚೆನ್ನಮಾಂಬಸಮುದ್ರ ಎಂಬ ಎರಡು ಬ್ರಾಹ್ಮಣ ಅಗ್ರಹಾರಗಳು.
- ಚೆನ್ನಕೇಶವಸ್ವಾಮಿ ಆಲಯವನ್ನು ಕಟ್ಟಿಸಿ, ಅದಕ್ಕೆ ಪ್ರಾಕಾರಗಳು, ಗೋಪುರಗಳನ್ನು ಕಟ್ಟಿಸಿ ಆಭರಣಗಳನ್ನು ಸಮರ್ಪಿಸಿದ (ಸಿದ್ಧವಟಂ ಗ್ರಾಮದಲ್ಲಿ).

● ಅಲ್ಲೇ ಇರುವ ಸಿದ್ಧವಟ್ಟೇಶ್ವರನಿಗೆ ಬಂಗಾರದ ನಂದೀವಾಹನವನ್ನು ತಯಾರು ಮಾಡಿಸಿದ.
● ಅನಂತರಾಜಪುರದಲ್ಲಿನ ಚಕ್ರಧರನಿಗೆ ಗೋಪುರ.
● ಚಂದ್ರಗಿರಿಯಲ್ಲಿನ ಶಿವನಿಗೆ (ಕಪರ್ದಿ) ಒಂದು ದೊಡ್ಡ ಗೋಪುರ.
● ಪುಷ್ಪಗಿರಿಯಲ್ಲಿನ ಪುಸವಾಚಲೇಶ್ವರ ಸ್ವಾಮಿಗೆ ಪ್ರಾಕಾರಗಳು, ಗೋಪುರಗಳನ್ನು ಕಟ್ಟಿಸಿದ.
● 'ದೇವುನಿ ಕಡಪ'ದಲ್ಲಿನ ವೇಂಕಟೇಶ್ವರ ಸ್ವಾಮಿಗೆ ಗೋಪುರಗಳು, ಪ್ರಾಕಾರಗಳನ್ನು ಕಟ್ಟಿಸಿದ.
● ರಾಯಚೋಟಿಯಲ್ಲಿನ ವೀರಭದ್ರನಿಗೆ ಎರಡು ಗೋಪುರಗಳು.
● ರಾಮೇಶ್ವರ, ಬದರೀಯಾತ್ರೆ ಮಾಡುವಂತಹ ಭಕ್ತರಿಗೆ ಅಲ್ಲಿ ಎರಡು ಅನ್ನಛತ್ರಗಳನ್ನು ನಿರ್ಮಿಸಿದ.
● ಕಪಿಲ ತೀರ್ಥದಲ್ಲಿ ಒಂದು ಅನ್ನಛತ್ರ.
● ತಿರುಮಲೆಯ ಕಾಲುದಾರಿಯಲ್ಲಿ ಅನ್ನಛತ್ರವನ್ನು ಕಟ್ಟಿಸಿದ.
● ಸಿದ್ಧವಟಂನಲ್ಲಿ, ನೆಲವನೂರು ಉರ್ಮಿಳ್ಳ, ಅನಂತರಾಜಪುರ ಗ್ರಾಮಗಳಲ್ಲೂ ಅನ್ನಛತ್ರಗಳನ್ನು ಕಟ್ಟಿಸಿದ.
● ಬಂಗಾರ, ಬೆಳ್ಳಿಯಿಂದ ತಾನು ತುಲಾಭಾರ ಮಾಡಿಕೊಂಡು, ಬಡವರಿಗೆ ಆ ಬಂಗಾರ, ಬೆಳ್ಳಿಯನ್ನು ದಾನ ಮಾಡಿದ.
● ಭೂದಾನಗಳು, ಗೋದಾನಗಳು, ಸಾವಿರಾರು ಜನರಿಗೆ ಮದುವೆಗಳು, ತನ್ನ ಖರ್ಚುಗಳಿಂದಲೇ ಮಾಡಿ, ಕನ್ಯಾದಾನಗಳನ್ನು ಮಾಡಿದ.
● ಯಜ್ಞಯಾಗಾದಿಗಳನ್ನು ಮಾಡಿ ಬ್ರಾಹ್ಮಣರಿಗೆ ಭೂರಿದಕ್ಷಿಣೆಗಳನ್ನು ನೀಡಿದ.
● ತಿರುವಳ್ಳೂರು ವೀರರಾಘವಸ್ವಾಮಿಗೆ ಒಂದು ವಸಂತ ಮಂಟಪವನ್ನು ಕಟ್ಟಿಸಿದ.
● ಶೇಷಾಚಲದಲ್ಲಿ ಶ್ರೀಪಾದಮಂಟಪ–ದೇವರ ಪಾದಗಳ ಮಂಟಪ ಬೆಟ್ಟಕ್ಕೆ ಹೋಗುವಾಗ ಪ್ರಾರಂಭದಲ್ಲೇ ಇದೆ.
● ಆ ಮಂಟಪಕ್ಕೆ ಮೇಲೆ–ಹೊಸ ಗೋಪುರ, ಆ ಮಂಟಪಕ್ಕೆ ಮೇಲೆ ಇದ್ದುದು ನಾನು ಕಾರ್ಯನಿರ್ವಹಣಾಧಿಕಾರಿಯಾಗಿದ್ದಾಗ ಪುನರ್ನಿರ್ಮಾಣ ಮಾಡಲಾಯಿತು. ಈ ಗೋಪುರದ ಅನಂತರ ಮತ್ತೊಂದು ಚಿಕ್ಕ ಗೋಪುರವಿದೆ. ಇದನ್ನೇ ಹೊಸ ಗೋಪುರವೆಂದು ಕರೆಯುತ್ತಾರೆ. ಆ ಗೋಪುರವನ್ನೇ ಈ ಮಟ್ಲಕುಮಾರ ಅನಂತರಾಯರು ಕಟ್ಟಿಸಿದರು.

–ಗೋವಿಂದರಾಜಸ್ವಾಮಿಯ ಆಲಯದಲ್ಲಿನ ದೊಡ್ಡ ಗೋಪುರವನ್ನು ನಿರ್ಮಿಸಿದ.

ರಾಜಶ್ರೀ ಶಿವರಾಜ ರಾಮಚಂದ್ರ ದಬೀರುಶಾಯಿ ಎಂಬ ರಾಜನು, ಅಪರಂಜಿ, ಅಂದರೆ ಬಂಗಾರಕ್ಕಿಂತಲೂ ಅಪ್ಪಟವಾದದ್ದು...ದೇವರಿಗೆ ಐದು ವರಹಗಳಷ್ಟು ತೂಕವಿರುವ ಅಪರಂಜಿಯನ್ನು ನೀಡಿದ್ದ. ಅದು 525 ಶ್ರೀರಂಗರಾಯ ವರಹಗಳ ಬೆಲೆ ಬಾಳುವಂತಿದ್ದು ಅದನ್ನು ನೈವೇದ್ಯಗಳಿಗೆ ಬೇಕಾಗುವ ಖರ್ಚಿಗಾಗಿ ವಿನಿಯೋಗಿಸಬೇಕೆಂದು ಕೇಳಿಕೊಂಡಿದ್ದ. ಈ ನೈವೇದ್ಯಗಳು ಭಾನೂಜೀಪಂತುಲುರವರ ನೈವೇದ್ಯ ಸೇವೆಯ ಅನಂತರವೆಂದು ಶಾಸನದಲ್ಲಿದೆ. ಆದರೆ ಅದರಲ್ಲಿ ಯಾವುದೇ ರಾಜನ ಪ್ರಸ್ತಾವನೆ ಇಲ್ಲ.

ಆಗ ರಾಜನ್ಯಾರೆಂದು ತಿಳಿಯದ ಪರಿಸ್ಥಿತಿ ಏರ್ಪಟ್ಟಿತ್ತು. ಅಷ್ಟರಲ್ಲೇ, ಕೆಲಕಾಲದ ಮುಂಚೆಯೇ ಶಿವಾಜಿ ಮಹಾರಾಜನು ಕೊಂಕಣ ತೀರವನ್ನು ಆಕ್ರಮಿಸಿ 4 ವರ್ಷಗಳ ಅನಂತರ ಕರ್ನೂಲಿನಿಂದ ವೆಲ್ಲೂರಿವರೆಗೂ ರಾಜ್ಯವನ್ನು ವಿಸ್ತರಿಸಿದ್ದ.

ಈ ಭಾನೂಜಿಪಂತುಲುಗಳು ಮಹಾರಾಷ್ಟ್ರ ಬ್ರಾಹ್ಮಣರು. ಆಗಲೇ ಮಹಾರಾಷ್ಟ್ರದವರು ಬೆಟ್ಟಕ್ಕೆ ಬರಲಾರಂಭಿಸಿದ್ದರು. ತಿರುಪತಿ ತಿರುಮಲೆಯ ಪ್ರಾಂತ್ಯವೂ ಶಿವಾಜಿಯ ಅಧೀನದಲ್ಲಿತ್ತು. ಅವರು ತೆಲುಗಿನಲ್ಲೇ ಶಾಸನಗಳನ್ನು ಮಾಡಿಸಿದ್ದರು.

19ನೆಯ ಶತಮಾನ ಪ್ರಾರಂಭವಾಗುವಷ್ಟರಲ್ಲಿ, ತಿರುಮಲೆಯ ದೇವಸ್ಥಾನದಲ್ಲಿ ಮರಾಠೀಯರ ಪ್ರಭಾವ ಪೂರ್ತಿಯಾಗಿ ಬಂದಿತ್ತು. ದೇವಸ್ಥಾನದಲ್ಲಿನ ಎಲ್ಲ ವ್ಯವಹಾರಗಳೂ ರಿಕಾರ್ಡುಗಳೂ ಮರಾಠೀ ಭಾಷೆಯಲ್ಲೇ (ಮೋಡಿ ಭಾಷೆ) ಇದ್ದುವು. ಇದನ್ನೇ ದೇಶಸ್ಥ ಎಂದೂ ಮರಾಠೀ ಎಂದೂ, ತಂಜಾವೂರು ಮರಾಠೀ ಎನ್ನುತ್ತಾರೆ. ಆರ್ಕಾಟು ನವಾಬನು ತಿರುಮಲೆಯ ಆಲಯದ ಆದಾಯವನ್ನೆಲ್ಲ ಅವರಿಗೇ ನೀಡಿದ್ದ. ಆಗ ದೇವಸ್ಥಾನದ ವ್ಯವಹಾರಗಳೆಲ್ಲವೂ ಈ ಮರಾಠೀಯಲ್ಲಿತ್ತು ಎನ್ನುತ್ತಾರೆ. ಆರ್ಕಾಟು ನವಾಬನು ತಿರುಮಲೆಯ ಆಲಯದ ಆದಾಯವನ್ನೆಲ್ಲ ಅವರಿಗೇ ನೀಡಿದ್ದ.

ಆಗ ದೇವಸ್ಥಾನದ ವ್ಯವಹಾರಗಳೆಲ್ಲವೂ ಈ ಮರಾಠೀ (ಮೋಡಿ) ಭಾಷೆಯಲ್ಲೇ ಇದ್ದವು. ಕೈಕೆಳಗೆ ತೆಗೆದುಕೊಂಡ ಅನಂತರವೂ ಸ್ವಲ್ಪಕಾಲ ಮರಾಠೀ ಭಾಷೆಯಲ್ಲೇ ವ್ಯವಹಾರ



ತಿರುಮಲೆಯ ಚರಿತಾಮೃತ ಗ್ರಂಥ ಬರೆದಿರುವ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆಯ ಶ್ರೀನಿವಾಸ ದೇವರ ಮಹಾಭಕ್ತರು. ಉತ್ತಮ ಐಎಎಸ್ ಅಧಿಕಾರಿ ಎಂದು ಕೀರ್ತಿ ಗಳಿಸಿರುವವರು. ಅನೇಕ ಹುದ್ದೆಗಳನ್ನು ಸಮರ್ಥವಾಗಿ ನಿರ್ವಹಿಸಿದ ಶ್ರೀಯುತರು ಪ್ರಧಾನಮಂತ್ರಿ ದಿವಂಗತ ಪಿ.ವಿ. ನರಸಿಂಹರಾಯರ ಪತ್ರಿಕಾ ಕಾರ್ಯದರ್ಶಿಗಳಾಗಿದ್ದವರು. ಅಂತೆಯೇ ತಿರುಮಲೆ ತಿರುಪತಿ ದೇವಸ್ಥಾನದ ನಿರ್ವಹಣಾ ಅಧಿಕಾರಿಗಳಾಗಿ ಅಪೂರ್ವ ಸೇವೆ ಸಲ್ಲಿಸಿರುವ ಶ್ರೀಯುತರು ತಮ್ಮನ್ನು 'ಶ್ರೀನಿವಾಸದಾಸ' ಎಂದು ಕರೆದುಕೊಳ್ಳುವಲ್ಲಿ ಹೆಮ್ಮೆ ಪಡುವ ಭಾಗವತರು. 'ತಿರುಮಲೆಯ ಚರಿತಾಮೃತ'ವನ್ನು ಕನ್ನಡಕ್ಕೆ ತಂದಿರುವ



ಶ್ರೀಮತಿ ಸೂರ್ಯವಂಶಿ ಉತ್ತಮ ಅನುವಾದಕಿ. ತೆಲುಗಿನಿಂದ ಹಲವಾರು ಕಾದಂಬರಿಗಳನ್ನು ಕನ್ನಡಕ್ಕೆ ತಂದಿರುವವರು. ಟಿಟಿಡಿ ನಿರ್ವಹಣಾಧಿಕಾರಿಗಳಾಗಿದ್ದ ಶ್ರೀ ಪಿ.ವಿ.ಆರ್.ಕೆ. ಪ್ರಸಾದ್‌ರವರು ತಿರುಮಲೆ ಪತ್ರಾಗಾರದಲ್ಲಿ ದೊರೆತ ಅನೇಕ ದಸ್ತಾವೇಜುಗಳನ್ನು, ಪ್ರಾಚೀನ ದಾಖಲೆಗಳನ್ನು, ಹಳೆಯ ರೆಕಾರ್ಡ್‌ಗಳನ್ನು, ಶಿಲಾಶಾಸನಗಳನ್ನು ಅಧ್ಯಯನ ಮಾಡಿ ರಚಿಸಿರುವ 'ತಿರುಮಲೆಯ ಚರಿತಾಮೃತ' ಒಂದು ಅಧಿಕೃತ ಗ್ರಂಥ. ಈ ಇಬ್ಬರು ದೈವಭಕ್ತರಿಗೆ ಹಾರ್ದಿಕ ಕೃತಜ್ಞತೆಗಳನ್ನು ಅರ್ಪಿಸುತ್ತಾ 'ತಿರುಮಲೆಯ ಚರಿತಾಮೃತ'ವನ್ನು ಓದುಗರಿಗೆ ನೀಡುತ್ತಿದ್ದೇವೆ

–ಸಂ.

ನಡೆಯುತ್ತಿತ್ತು.

17ನೆಯ ಶತಮಾನದ ಕೊನೆಯ ಭಾಗದಲ್ಲಿ ಹಳೆಯ ಧ್ವಜಸ್ತಂಭದ ಪದ್ಮಪೀಠದ ಮೇಲೆ ಪ್ರಾರಂಭದಲ್ಲೇ ತೆಲುಗಿನ ಶಾಸನವೊಂದು ಕಂಡುಬರುತ್ತದೆ. ಶ್ರೀ ವೇಂಕಟೇಶ್ವರನಿಗೆ ಪ್ರಣಾಮಗಳನ್ನು ಮಾಡುತ್ತಾ ಈ ಧ್ವಜಸ್ತಂಭದ ಸೇವೆ ಮಾಡಿದ ರಾಜಶ್ರೀ ಸಿದ್ಲ ಏರಿ ರಾಮಾಜೀಮಾದರ್ಸು ಪಂತುಲು ಬಗೆಗೆ ಇದರಲ್ಲಿದೆ.

ಅಂದರೆ, ಈ ಧ್ವಜಸ್ತಂಭವನ್ನು ಹೊಸದಾಗಿ ಈ ರಾಮೋಜಿಮಾದರ್ಸು ಪಂತುಲು ಸಮರ್ಪಿಸಿದರು. ಆ ಶಾಸನವನ್ನೇ ಪ್ರಮಾಣವಾಗಿ ತೆಗೆದುಕೊಂಡರೆ, ಆ ಧ್ವಜಸ್ತಂಭವೇ ಕೊಳೆತುಹೋಗಿ, ಶಿಥಿಲವಾದಾಗ ಕ್ರಿ.ಶ. 1982ರಲ್ಲಿ ನಾನು ಕಾರ್ಯನಿರ್ವಹಣಾಧಿಕಾರಿಯಾಗಿದ್ದಾಗ ಹೊಸ ಧ್ವಜಸ್ತಂಭವನ್ನು ಪ್ರತಿಷ್ಠಾಪಿಸುವಂತಹ ಸೌಭಾಗ್ಯವನ್ನು ದೇವರು ನನಗೆ ಕರುಣಿಸಿದ. ಅಂದರೆ ಆ ಹಳೆಯ ಧ್ವಜಸ್ತಂಭದ ಪ್ರತಿಷ್ಠಾಪನೆ ನಡೆದು ಇನ್ನೂರು ವರ್ಷಗಳು ಕಳೆದಿತ್ತು. (ಮಹಂತರ ಕಾಲದಲ್ಲಿ ಗರುಡಗಂಬ ವಾಲಿದೆಯೆಂಬ ಕಾರಣದಿಂದ ಧ್ವಜಸ್ತಂಭದ ಕೆಳಗೆ ನಿಧಿಗಾಗಿ, ಅಗೆದಿದ್ದರೆಂದು ಪ್ರಚಾರವಾದರೂ ಧ್ವಜಸ್ತಂಭವನ್ನು ಬದಲಿಸಿದಂತೆ ಎಲ್ಲೂ ದಾಖಲೆಗಳಿಲ್ಲ) ಮಹಂತರ ಕಾಲದಲ್ಲೇ ಆ ಧ್ವಜಸ್ತಂಭಕ್ಕೆ ಬಂಗಾರದ ಲೇಪನ ಹಚ್ಚಿ ಕವಚಗಳನ್ನು ತೊಡಿಸುವ ಏರ್ಪಾಟು ಮಾಡಿದರು.

### ಆಣಿವಾರಿ ಆಸ್ಥಾನ:

ತಿರುಮಲೆಯ ಆಲಯದಲ್ಲಿ ಹಿಂದಿನ ಕಾಲದಲ್ಲಿ 'ಆಣಿವಾರ' (ಆಣಿವಾರಿ) ಆಸ್ಥಾನ ಬಹಳ ವಿಶೇಷವಾದ ಹಬ್ಬವೆಂದೇ ಹೇಳಬೇಕು. ಇದು ಆಧ್ಯಾತ್ಮಿಕ ಅಥವಾ ಆಗಮ ಸಂಬಂಧದ ಉತ್ಸವವಲ್ಲ. ಲೌಕಿಕ ಉತ್ಸವವೇ ಆದರೂ ದೇವರ ಸನ್ನಿಧಾನದಲ್ಲಿ ನಡೆಯುವಂತಹ ಒಂದು ಅದ್ಭುತವಾದ ಕಾರ್ಯಕ್ರಮ.

ವರ್ಷದಲ್ಲಿ ನಡೆಸಿದ ಆದಾಯವ್ಯಯಗಳ ಲೆಕ್ಕಗಳನ್ನು ಸಮೀಕ್ಷಿಸುವುದಕ್ಕೆ ಆ ವರ್ಷದ ಖಾತೆಯನ್ನು ಮುಚ್ಚಿಹಾಕಿ, ಹೊಸ ವರ್ಷ, ಹೊಸ ಖಾತೆಯ ಪುಸ್ತಕಗಳನ್ನು ಇರಿಸುವಂತಹ ದಿನವೆಂದೇ ಹೇಳಬೇಕು. ದೀಪಾವಳಿಯ ಸಂದರ್ಭದಲ್ಲಿ ಅನೇಕ ವ್ಯಾಪಾರಿಗಳು ಖಾತಾಪದ್ಧತಿಗಳ ಹಳೆಯ ಪುಸ್ತಕಗಳನ್ನು ಪೂಜೆಯಲ್ಲಿರಿಸಿ, ಹೊಸ ಪುಸ್ತಕಗಳನ್ನು ಪ್ರಾರಂಭಿಸುತ್ತಾರೆ. ಈ ಆಲಯದಲ್ಲಿ ಅಲ್ಲಿಯವರೆಗೂ 'ಫಸ್ಲೀ' ಎಂಬ ವಾರ್ಷಿಕ ಆಚರಣೆಯಿತ್ತು.

ಹಳೆಯ ಆದಾಯ ವ್ಯಯಗಳೆಲ್ಲ ವ್ಯವಸಾಯದ ಮೇಲೆ ಆಧಾರಗೊಳ್ಳುತ್ತಿದ್ದುದರಿಂದ ಈ 'ಫಸ್ಲೀ' ವರ್ಷಗಳು ಬೆಳೆಗಳು ಕಾಲವನ್ನು ಆಧರಿಸಿದ್ದವು. ಕರ್ಕಾಟಕ ಸಂಕ್ರಮಣವನ್ನು ದೃಷ್ಟಿಯಲ್ಲಿರಿಸಿಕೊಂಡು ಆ ಸಂಕ್ರಮಣದ ದಿನದಿಂದ ಹೊಸ 'ಆರ್ಥಿಕ ವರ್ಷ' ಆರಂಭವಾದಂತೆ ಲೆಕ್ಕಹಾಕುತ್ತಾರೆ.



ಈಗ 'ಫಸ್ಲೀ' ಬಳಕೆಯಲ್ಲಿಲ್ಲದಿದ್ದರೂ ಅಲ್ಲಿಯವರೆಗೂ ಮಾಡುತ್ತಿದ್ದಂತೆ, ಲಾಂಛನಪ್ರಾಯವಾಗಿ ದೇವಸ್ಥಾನದಲ್ಲಿ ಈ 'ಆಣಿವಾರಿ' ಆಸ್ಥಾನ ವೈಭವದಿಂದ ನಡೆಯುತ್ತಿದೆ. ಪ್ರತೀ ದಿನದಂತೆಯೇ ಬೆಳಗ್ಗೆ ಮೊದಲ ನೈವೇದ್ಯದ ಅನಂತರ ಮಲಯಪ್ಪಸ್ವಾಮಿಯನ್ನು ದೇವಿಯರೊಂದಿಗೆ ಬಂಗಾರದ ಬಾಗಿಲಿಗೆ ಸರ್ವಭೂಪ್ಪಾಲ ವಾಹನದಲ್ಲಿ ಕರೆತರುತ್ತಾರೆ. ಈ ಉತ್ಸವಕ್ಕೆ ಸೇನಾಧಿಪತಿಯಿಂದ ಶ್ರೀ ವಿಷ್ವಕ್ಸೇನರನ್ನು ದೇವರ ಎಡಭಾಗದಲ್ಲಿ ಕುಳ್ಳಿರಿಸುತ್ತಾರೆ.

ಈ ಎಲ್ಲ ದೇವರುಗಳಿಗೂ ವಿಶೇಷ ಅಲಂಕಾರ ಮಾಡಿದ ಅನಂತರ ಗರ್ಭಗುಡಿಯಲ್ಲಿನ ಮೂಲದೇವರಿಗೆ ಎರಡನೆಯ ಅರ್ಚನೆ ನಡೆಯುತ್ತದೆ. ಹಣ್ಣುಗಳು, ಹೂವು, ನೈವೇದ್ಯಗಳೊಂದಿಗೆ ಬಂಗಾರದ ಬಾವಿಯ ಕಡೆಯಿಂದ ಮೇಳದೊಂದಿಗೆ ವಿಮಾನ ಪ್ರಾಕಾರದಲ್ಲಿ ಪ್ರದಕ್ಷಿಣೆಯಾಗಿ ಕರೆತಂದು ಮೂಲಮೂರ್ತಿಗೆ ಎರಡನೆಯ ಗಂಟೆ ನೈವೇದ್ಯ ಮಾಡುತ್ತಾರೆ.

ಅನಂತರ ಪರಿಮಳದ ಕಟ್ಟೆಯಿಂದ (ನರಸಿಂಹಸ್ವಾಮಿ ಆಲಯದ ಹಿಂಭಾಗದಲ್ಲಿದೆ) ಮೂಲಮೂರ್ತಿಗೆ, ಉತ್ಸವ ಮೂರ್ತಿಗೆ, ಸೇನಾಧಿಪತಿಗೆ ನೂತನ ವಸ್ತ್ರಗಳನ್ನು ಜೀಯ್ಯಂಗಾರರ ಮೂಲಕ ಮೆರವಣಿಗೆಯ ಮೂಲಕ ವಿಮಾನ ಪ್ರಾಕಾರದಲ್ಲಿ ಪ್ರದಕ್ಷಿಣೆಯಾಗಿ ತಾಳ – ಮೇಳಗಳೊಂದಿಗೆ ಕರೆತರುತ್ತಾರೆ. ಮೂಲಮೂರ್ತಿಗೆ ಮೊದಲು ನೂತನ ವಸ್ತ್ರವನ್ನು ಸಮರ್ಪಿಸಿ, ಗೋಷ್ಠಿ, ತೀರ್ಥವನ್ನು ನೀಡಿ ಅನಂತರ ಬಂಗಾರದ ಬಾಗಿಲಲ್ಲಿರುವ ಉತ್ಸವಮೂರ್ತಿಗಳಿಗೆ ನೂತನ ವಸ್ತ್ರವನ್ನು ಸಮರ್ಪಿಸುತ್ತಾರೆ. ಅನಂತರ ಸೇನಾಧಿಪತಿ ವಿಷ್ವಕ್ಸೇನರಿಗೆ ಹೊಸ ವಸ್ತ್ರವನ್ನು ಸಮರ್ಪಿಸುತ್ತಾರೆ.

ಅನಂತರ ಉತ್ಸವಮೂರ್ತಿಗಳಿಗೆ ಆರತಿ, ಅಕ್ಷತಾರೋಹಣೆಯ ಉತ್ಸವ ನಡೆಯುತ್ತದೆ. ಅನಂತರ ಮಾತ್ರಾದಾನ (ಅರ್ಚಕರಿಗೆ ಅಕ್ಕಿಯನ್ನು ನೀಡುವುದು) ಅನಂತರ ಅರ್ಚಕರಿಗೆ ಪವಿತ್ರ ವಸ್ತ್ರ, ಆರತಿ, ಶಠಗೋಪವನ್ನು ನೀಡುತ್ತಾರೆ.

ಆ ಕಾರ್ಯಕ್ರಮದ ಅನಂತರ ದೊಡ್ಡ ಜೀಯ್ಯಂಗಾರರಿಗೆ ಪವಿತ್ರವಸ್ತ್ರವನ್ನು ತಲೆಗೆ ಕಟ್ಟಿ, ಅವರ ಬಳಿಯಿರುವ ದೇವಸ್ಥಾನದ ಬೀಗದ ಕೈಗಳು, ಬಂಗಾರದ ಸೀಲನ್ನು ತೆಗೆದುಕೊಂಡು ದೇವರ ಪಾದಗಳ ಬಳಿಯಲ್ಲಿರಿಸಿ, ಪುನಃ ಆ ಬೀಗಗಳು, ಸೀಲನ್ನು ದೊಡ್ಡ ಜೀಯ್ಯಂಗಾರರಿಗೆ ಸಮರ್ಪಿಸುತ್ತಾರೆ.

ದೊಡ್ಡ ಜೀಯ್ಯರ್‌ರವರಿಗೆ ಶಠಗೋಪ, ವಿಳ್ಯೇದೆಲೆ, ಗಂಧವನ್ನು ನೀಡಿ ಪವಿತ್ರ ವಸ್ತ್ರವನ್ನು ಬಿಚ್ಚುತ್ತಾರೆ. ಹಾಗೆಯೇ ಚಿಕ್ಕ ಜೀಯ್ಯರ್‌ರವರಿಗೂ ಸತ್ಕರಿಸುತ್ತಾರೆ. ಇವರಿಗೆ ಬೀಗದ ಕೈಗಳಿರುವುದಿಲ್ಲ. ಇವರುಗಳು ಜೀಯ್ಯಂಗಾರರ ಪ್ರತಿನಿಧಿಯಾಗಿ

ಎಲ್ಲ ಸೇವೆಗಳಲ್ಲೂ ಪಾಲ್ಗೊಳ್ಳುತ್ತಾರಾದ್ದರಿಂದ ಅವರನ್ನೂ ಗೌರವಿಸುತ್ತಾರೆ.

ಅನಂತರ ಸರ್ಕಾರದ ಪರವಾಗಿ ಮುಖ್ಯನಿರ್ವಹಣಾಧಿಕಾರಿಗೆ ಪವಿತ್ರ ವಸ್ತ್ರವನ್ನು ತಲೆಗೆ ಕಟ್ಟಿ, ಅವರ ಅಧಿಕಾರದ ಬೀಗದ ಕೈಗಳು, ಮುದ್ರೆಯನ್ನು ದೇವರ ಪಾದಗಳಿಗೆ ಸಮರ್ಪಿಸಿ, ಪುನಃ ಅವುಗಳನ್ನು ಅವರಿಗೇ ಹಿಂದಿರುಗಿಸಿ, ಚಂದನ ತಾಂಬೂಲಗಳನ್ನು ನೀಡಿ, ಶಠಗೋಪವನ್ನು ನೀಡಿ, ಅವರ ತಲೆಗೆ ಕಟ್ಟಿದ ಪವಿತ್ರ ವಸ್ತ್ರವನ್ನು ಬಿಚ್ಚುತ್ತಾರೆ. ಅನಂತರ ಜೆ.ಇ.ಓ. ಡೆಪ್ಯೂಟಿ ಇ.ಓ.ಗಳು. ಪೇಷ್ಕಾರ್, ಪಾರುಪತ್ತೇದಾರರು...ಈ ರೀತಿ ಅವರವರ ಅಧಿಕಾರದ ಪರಿಧಿಯ ಪ್ರಕಾರ ಅವರುಗಳಿಗೆ ಆರತಿಯನ್ನು ಮಾಡಿ ಮರ್ಯಾದೆ ಮಾಡುತ್ತಾರೆ.

ಅನಂತರ ಮೈಸೂರು ಮಹಾರಾಜರ ಆರತಿಯನ್ನು ಮಾಡುತ್ತಾರೆ. ಅನಂತರ ಅನ್ನಮಯ್ಯನ ವಂಶದವರ ಆರತಿ ನಡೆಯುತ್ತದೆ. ಅನಂತರ ಟ್ರಸ್ಟ್‌ಫಂಡ್‌ನಲ್ಲಿ ಅಲ್ಲಿಯವರೆಗೂ ಹಣವನ್ನು ಕಟ್ಟಿದವರ ಪರವಾಗಿ ಆರತಿಗಳು ನಡೆದ ಅನಂತರ ರೂಪಾಯಿಯನ್ನು ಸಲ್ಲಿಸಿದವರಿಗೆ, ರೂಪಾಯಿ ಆರತಿಯನ್ನು ನೀಡಲಾಗುತ್ತದೆ. ಇದು ಈ ಉತ್ಸವದಲ್ಲಿನ ಆಚಾರ.

ಕೊನೆಯದಾಗಿ ಧರ್ಮಕರ್ತರಾಗಿ ದೊಡ್ಡ ಜೀಯ್ಯರ್‌ರವರಿಗೆ ಪುನಃ ಪವಿತ್ರ ವಸ್ತ್ರವನ್ನು ತಲೆಗೆ ಕಟ್ಟಿ ಆರತಿ ಮಾಡುತ್ತಾರೆ. ಆಗ ಧರ್ಮಕರ್ತ ಮಂಡಲಿಯ ಅಧ್ಯಕ್ಷರಿದ್ದರೆ, ಅವರಿಗೂ ಪವಿತ್ರ ವಸ್ತ್ರವನ್ನು ಕಟ್ಟಿ ಶಠಾರಿಯನ್ನು ನೀಡುತ್ತಾರೆ.

ಅನಂತರ ಕಾರ್ಯನಿರ್ವಹಣಾಧಿಕಾರಿಗೆ ಪವಿತ್ರ ವಸ್ತ್ರ, ಶಠಾರಿ ನಡೆದ ಅನಂತರ ಪ್ರಸಾದ ವಿನಿಯೋಗದೊಂದಿಗೆ ಪಾರುಪತ್ತೇದಾರರ ಎಚ್ಚರಿಕೆಯೊಂದಿಗೆ ಈ 'ಆಣಿವಾರಿ ಆಸ್ಥಾನ' ಮುಗಿಯುತ್ತದೆ.

ಅದನ್ನು ನೋಡುವ ಅವಕಾಶ ಯಾರಿಗೂ ಇರುವುದಿಲ್ಲ. ಎಲ್ಲರೂ ನೋಡಿ ಆನಂದಿಸಬೇಕೆಂದು ಸಂಜೆ, ವಿಶೇಷವಾದ ಪುಷ್ಪಗಳಿಂದ ಮುಖ್ಯವಾಗಿ ಮಲ್ಲಿಗೆ, ಜಾಜಿಗಳಿಂದ ಮಾಡಿದ ದೊಡ್ಡ ಪುಷ್ಪಪಲ್ಲಕ್ಕಿಯಲ್ಲಿ ದೇವರ ಉತ್ಸವ ಅಂದರೆ ಮಲಯಪ್ಪಸ್ವಾಮಿ, ಶ್ರೀದೇವಿ, ಭೂದೇವಿಯನ್ನು ದೇವಸ್ಥಾನದ ಬೀದಿಗಳಲ್ಲಿ ಉತ್ಸವ ಮಾಡುತ್ತಾರೆ.

ಪುಷ್ಪಪಲ್ಲಕ್ಕಿ ಸೇವೆ ಕ್ರಿ.ಶ. 1982ರಲ್ಲಿ ಮೊದಲ ಬಾರಿ ಪ್ರಾರಂಭಿಸುವ ಭಾಗ್ಯವನ್ನು ದೇವರು, ನನಗೆ ಕಲ್ಪಿಸಿದರು.

ಅಂದಿನಿಂದ ಇಂದಿನವರೆಗೂ ಆ ಸೇವೆ ನಿರಂತರವಾಗಿ ನಡೆದುಕೊಂಡು ಬರುತ್ತಿದೆ. ದೇವಸ್ಥಾನದ ಅರ್ಚಕರು, ಜೀಯ್ಯರು, ಅಧಿಕಾರಿಗಳು, ಧರ್ಮಕರ್ತರೆಲ್ಲರೂ ಅವರವರ ಕರ್ತವ್ಯಗಳು ದೇವರಿಂದಲೇ ಸಂಕ್ರಮಿಸಿದೆಯೆಂದು ವ್ಯಕ್ತಪಡಿಸುತ್ತಾ ಶ್ರೀನಿವಾಸನಿಗೆ ವಿಧೇಯರಾಗಿದ್ದು ಅವರ ಸಂಸ್ಥಾನದ ರಕ್ಷಣೆಯ ಜವಾಬ್ದಾರಿಯನ್ನು ತ್ರಿಕರಣ ಶುದ್ಧಿಯಿಂದ ನೆರವೇರಿಸುವುದಕ್ಕೆ ಪುನರಂಕಿತವಾಗುವಂತಹ ಸನ್ನಿವೇಶವೇ ಈ ಉತ್ಸವ.

ಕ್ರಿ.ಶ. 1980ಕ್ಕೂ ಮೊದಲು ವರ್ಷಕ್ಕೆ ಮೂರು ಬಾರಿ ಯುಗಾದಿ, ಆಣಿವಾರಿ, ದೀಪಾವಳಿ, ಆಸ್ಥಾನಗಳಲ್ಲಿ ಮಾತ್ರ ಆ ತಿರುಮಲೇಶನಿಗೆ ನೂತನ ವಸ್ತ್ರವನ್ನು ಸಮರ್ಪಿಸುತ್ತಿದ್ದರು.

ಆ ರೀತಿ ಆ ಮೂರು ವಸ್ತ್ರಗಳನ್ನೇ ಒಗೆದು ಪ್ರತೀ ಶುಕ್ರವಾರ ಅಭಿಷೇಕದ ಅನಂತರ ದೇವರಿಗೆ ಉಡಿಸುತ್ತಿದ್ದರು. ಆದರೆ 1980ರಿಂದ ಪ್ರತೀ ಶುಕ್ರವಾರ ಅಭಿಷೇಕದ ಅನಂತರ ನೂತನ ವಸ್ತ್ರ ಸಮರ್ಪಣೆಯ ಸೇವೆಯನ್ನು ಪ್ರಾರಂಭಿಸಿ, ವಸ್ತ್ರಸೇವೆಯ ಅವಕಾಶವನ್ನು ಭಕ್ತರಿಗೆ ಕಲ್ಪಿಸುವಂತಹ ಅದೃಷ್ಟವನ್ನೂ ಆ ಶ್ರೀನಿವಾಸ ನನಗೆ ಉಂಟುಮಾಡಿದ.

ಮುಂದುವರಿಯುವುದು




ವ್ಯಕ್ತಿತ್ವ ವಿಕಸನ ಅಧ್ಯಾತ್ಮ ಮಾಸಪತ್ರಿಕೆ

# ಮಲ್ಲಾರ

## ಚಂದಾ ಪತ್ರಕ

**ನೀವು ಚಂದಾದಾರರಾಗಿ !**
**ನಿಮ್ಮ ಬಂಧು ಮಿತ್ರರನ್ನು**
**ಚಂದಾದಾರರನ್ನಾಗಿ ಮಾಡಿ !**

**ಕೈವಾರ ಶ್ರೀ ಯೋಗಿ ನಾರೇಯಣರ** ವಿಚಾರಗಳಿಂದ ಪ್ರೇರಣೆ ಪಡೆದು, ಭಾರತೀಯ ಸನಾತನ ಧರ್ಮ, ಸಂಸ್ಕೃತಿ, ಪರಂಪರೆಗಳನ್ನು ಕುರಿತು ಅಪೂರ್ವ ಮಾಹಿತಿಯನ್ನು ನೀಡುತ್ತಿರುವ ಜನಪ್ರಿಯ ಮಾಸಪತ್ರಿಕೆ **ಮಲ್ಲಾರ**. ಸುಲಭ ಬೆಲೆಯ ಸಮೃದ್ಧ ಸಾಹಿತ್ಯದ ರೂವಾರಿ ಮಲ್ಲಾರ.

ಮಲ್ಲಾರ ಚಂದಾದಾರರಾಗಲು ಕೆಳಗಿನ ಪತ್ರಕವನ್ನು ತುಂಬಿ 'Sri Yogi Nareyana Study Centre' ಹೆಸರಿನಲ್ಲಿ ಡಿಡಿ ಅಥವಾ ಚೆಕ್ ಮೂಲಕ ಕೆಳಗಿನ ವಿಳಾಸಕ್ಕೆ ಕಳುಹಿಸಿ ಚಂದಾದಾರರಾಗಿ

For Subscription - Bank Transfer/ RTGS:
Sri Yogi Nareyana Study Centre
SB A/c No. 141201011016824,
IFSC Code: VIJB0001412.
After Transfer Please Contact No. 94480 85975

**ಮಲ್ಲಾರ ಕಳುಹಿಸಬೇಕಾದ ನನ್ನ ವಿಳಾಸ**

ಹೆಸರು:..............................

ವಿಳಾಸ:..............................

..............................

..............................

ಪಿನ್ ಕೋಡ್ ಸಂಖ್ಯೆ: ..............................

ಮೊಬೈಲ್ /ಫೋನ್:..............................

- ☐ **ಆಜೀವ ಚಂದಾ ರೂ.** 1500/-
- ☐ **5 ವರ್ಷಗಳ ಚಂದಾ ರೂ.** 500/-
- ☐ **ವಾರ್ಷಿಕ ಚಂದಾ ರೂ.** 140/-

ನಾನು ಡಿಡಿ /ಚೆಕ್ /ಮನಿಯಾರ್ಡರ್ ಮೂಲಕ

(ಚೆಕ್ /ಡಿಡಿ ಸಂ..............................

ಬ್ಯಾಂಕ್..............................)

ಚಂದಾ ಹಣವನ್ನು ಕಳುಹಿಸಿದ್ದೇನೆ.

**ಸಹಿ** /-

**ನಿರ್ವಾಹಕ ಸಂಪಾದಕರು**
ಮಲ್ಲಾರ ಮಾಸಪತ್ರಿಕೆ, ಎಂ.ಎಸ್.ರಾಮಯ್ಯ ಅನ್ವಯಿಕ ವಿಜ್ಞಾನಗಳ ವಿಶ್ವವಿದ್ಯಾಲಯ ಸಂಕೀರ್ಣ, ಎಂ.ಎಸ್.ಆರ್.ಐ.ಟಿ. ಪೋಸ್ಟ್, ನ್ಯೂ ಬಿಇಎಲ್ ರಸ್ತೆ, ಬೆಂಗಳೂರು–560 054.

**ಜಾಹೀರಾತು ನೀಡಲು ಮತ್ತು ಚಂದಾದಾರರಾಗಲು ಸಂಪರ್ಕಿಸಿ**
**ಮೊ: 9916854885**

33ನೇ ಪುಟದಿಂದ

ಬಾಳಿನಲ್ಲಿ ಪರಿಮಿತತನ. ಜೀವನ ಮಿತಿಯಲ್ಲಿರಬೇಕು. ಗಣಿತ ಶಾಸ್ತ್ರದ ರಹಸ್ಯವನ್ನು ಎಲ್ಲ ಕ್ರಿಯೆಗಳಲ್ಲೂ ತರಬೇಕು. ಮಾತ್ರೆಗಳನ್ನು ಸರಿಯಾಗಿ ಎಣಿಸಿಕೊಡುವ ಹಾಗೆ ಆಹಾರ ನಿದ್ರೆಗಳನ್ನು ಎಣಿಸಿಕೊಳ್ಳಬೇಕು. ಎಲ್ಲೆಲ್ಲೂ ಎಣಿಕೆ, ಅಳತೆ, ಪ್ರತಿಯೊಂದು ಇಂದ್ರಿಯದ ಮೇಲೂ ಕಾವಲು ರಕ್ಷೆ ಇಡಬೇಕು. ಮಿತಿಮೀರಿ ತಿನ್ನುತ್ತಿಲ್ಲವಷ್ಟೇ, ಅತಿ ನಿದ್ರೆ ಮಾಡುತ್ತಿಲ್ಲವಷ್ಟೆ, ವಿಪರೀತ ದೃಷ್ಟಿಸುತ್ತಿಲ್ಲವಷ್ಟೆ ಎಂದು ಯಾವಾಗಲೂ ಸೂಕ್ಷ್ಮವಾಗಿ ಪರೀಕ್ಷಿಸುತ್ತಿರಬೇಕು.

14. ಒಬ್ಬ ಗೃಹಸ್ಥವನ್ನು ಕುರಿತು, "ಆತ ಒಂದು ಕೋಣೆಯಲ್ಲಿ ಪ್ರವೇಶಿಸಿದನೆಂದರೆ ಒಂದು ನಿಮಿಷದಲ್ಲಿ ಅಲ್ಲಿ ಏನೇನಿದೆಯೆಂಬುದನ್ನೆಲ್ಲ ನೋಡಿ ಹೇಳಬಲ್ಲ" ಎಂದೊಬ್ಬರು ನನಗೆ ಹೇಳಿದರು. "ದೇವರೇ, ಇಂಥ ಮಹಿಮೆ ನನಗೆ ಪ್ರಾಪ್ತವಾಗದಿರಲಿ" ಎಂದು ನಾನು ಮನಸ್ಸಿನಲ್ಲೇ ಹೇಳಿಕೊಂಡೆ. ಐವತ್ತು ಅರವತ್ತು ವಸ್ತುಗಳನ್ನೆಲ್ಲ ಮನಸ್ಸಿನಲ್ಲಿ ಬರೆದಿಟ್ಟುಕೊಳ್ಳಲು ನಾನೇನು ಪರಮಾತ್ಮನ ಕಾರ್ಯದರ್ಶಿಯೆ? ನಾನೇನು ಕಳವು ಮಾಡಬೇಕೆ? ಅಲ್ಲಿ ಸಾಬೂನು, ಇಲ್ಲಿ ಗಡಿಯಾರ– ಸರಿಯೆ. ಅದರಿಂದ ನನಗೇನು ಉಪಯೋಗ? ನನಗೇಕೆ ಆ ಜ್ಞಾನ? ಕಣ್ಣಿನ ಪಟಿಂಗತನವನ್ನು ನಾವು ತ್ಯಜಿಸಬೇಕು. ಕಿವಿಯದೂ ಹಾಗೇ ಅದರ ಮೇಲೆ ಕಾವಲಿಡಿ. ನಾಯಿಗೆ ಇರುವ ಕಿವಿ ನಮಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಅರೆಕ್ಷಣದಲ್ಲಿ ಯಾವ ದಿಕ್ಕಿಗಾದರೂ ಹೊರಳಿಸಬಹುದಾಗಿತ್ತು. ಮಾನವನ ಕಿವಿಯಲ್ಲಿ ದೇವರು ಉಳಿಸಿದ ಕೊರತೆ ಇದು ಕೆಲವರಿಗಾದರೂ ಅನ್ನಿಸುತ್ತಿರಬೇಕು. ಕಿವಿಯ ಅಧಿಕ ಪ್ರಸಂಗ ಸಲ್ಲದು. ಹಾಗೇ ಈ ಮನಸ್ಸು ಬಹಳ ಜಂಬದ್ದು. ಕೊಂಚ ಕಿರುಕುಳವಾದರೂ ಅತ್ತ ಲಕ್ಷ್ಯ ಹೋಯಿತು!

15. ಬಾಳಿನಲ್ಲಿ ಪರಿಮಿತತನವನ್ನು ಪಾಲಿಸಿ ಕೆಟ್ಟ ವಸ್ತು ನೋಡಬೇಡಿ. ಕೆಟ್ಟ ಪುಸ್ತಕ ಓದಲೇಬೇಡಿ. ನಿಂದೆ ಸ್ತುತಿಗಳಿಗೆ ಕಿವಿಗೊಡಲೇಬೇಡಿ. ದೋಷಪೂರ್ಣ ವಸ್ತು ಬೇಡವೇ ಬೇಡ. ದೋಷರಹಿತ ವಸ್ತುಗಳನ್ನು ಸಹ ಅತಿಯಾಗಿ ಸೇವಿಸಬೇಡಿ. ಉಚ್ಛೃಂಖಲವೃತ್ತಿ ಬೇಡ. ಸಾರಾಯಿ, ಭಜಿ ಬೇಡವೆ ಬೇಡ. ಬಾಳೆಯಹಣ್ಣು ಮೋಸಂಬಿಗಳೂ ಅತಿಯಾಗಿ ಬೇಡ. ಫಲಾಹಾರವೆಂದರೆ ಶುದ್ಧ ಆಹಾರ. ಅದೂ ಅಳತೆಗೆಡಬಾರದು. ನಾಲಗೆಯ ಸ್ವಚ್ಛಂದ ವೃತ್ತಿಯನ್ನು ಒಳಗಿನ ಒಡೆಯ ಸಹಿಸಕೂಡದು. ತಪ್ಪು ದಾರಿ ತುಳಿದರೆ ಒಳಗಿನ ಸ್ವಾಮಿ ಶಿಕ್ಷಿಸುವನೆಂದು ಇಂದ್ರಿಯಗಳಿಗೆ ಭಯವಿರಬೇಕು. ಬಾಳಿನಲ್ಲಿ ಪರಿಮಿತತನವೆಂದರೆ ನಿಯಮಿತ ಆಚರಣೆ.

## ೨೯. ಮಂಗಳ ದೃಷ್ಟಿ

16. ಇನ್ನು ಸಮದೃಷ್ಟಿ ಎಂದರೆ ಶುಭದೃಷ್ಟಿ. ಶುಭದೃಷ್ಟಿಬಾರದೆ ಏಕಾಗ್ರತೆ ಅಸಾಧ್ಯವೇ ಸರಿ. ಎಂಥ ಭಾರಿ ವನರಾಜ ಸಿಂಹ! ನಾಲ್ಕು ಹೆಜ್ಜೆ ನಡೆಯುತ್ತಾನೆ, ಹಿಂದೆ ನೋಡುತ್ತಾನೆ. ಹಿಂಸಕ ಸಿಂಹಕ್ಕೆ ಏಕಾಗ್ರತೆ ಬಂದೀತೇ? ಹುಲಿ, ಕಾಗೆ, ಬೆಕ್ಕುಗಳ ಕಣ್ಣು ಸದಾ ತಿರುಗುತ್ತಿರುತ್ತವೆ. ಅವುಗಳದು ಅಂಜಿಕೆಯ ಅಡ್ಡತಿಡ್ಡ ದೃಷ್ಟಿ; ಹಿಂಸಾ ಪ್ರಾಣಿಗಳ ಸ್ಥಿತಿ ಹೀಗೇ. ಸಾಮ್ಯ ದೃಷ್ಟಿ ಬರಬೇಕು. ಸೃಷ್ಟಿಯೆಲ್ಲವೂ ಮಂಗಳವಾಗಿ ತೋರಬೇಕು. ನನ್ನ ಬಗ್ಗೆ ನನಗೆ ನಂಬಿಕೆಯಿದ್ದಂತೆಯೇ ಸೃಷ್ಟಿಯ ಬಗೆಗೆಲ್ಲ ಇರಬೇಕು.

17. ಇಲ್ಲಿ ಭೀತಿಗೆ ಸ್ಥಳವೆಲ್ಲಿ? ಎಲ್ಲವೂ ಪವಿತ್ರ, ಎಲ್ಲವೂ ಶುಭ.

"ವಿಶ್ವಂ ತದ್ ಭದ್ರಂ ಯದವಂತಿ ದೇವಾಃ"

ಮಂಗಳ ವಿಶ್ವ ಇದು. ಪರಮಾತ್ಮ ಅದನ್ನು ಕಾಯುತ್ತಿದ್ದಾನೆ. ಆಂಗ್ಲಕವಿ ಬ್ರೌನಿಂಗ್ ಕೂಡ ಇದೇ ಮಾತನ್ನೇ ಹೇಳಿದ್ದಾನೆ: 'ದೇವರು ಮೇಲೆ ಮುಗಿಲಿನಲ್ಲಿ ವಿರಾಜಿಸುತ್ತಿದ್ದಾನೆ. ಲೋಕವೆಲ್ಲವೂ ಕ್ಷೇಮವಾಗಿದೆ'* ಲೋಕದಲ್ಲಿ ನನ್ನ ದೃಷ್ಟಿಯಿರುವಂತೆ ಸೃಷ್ಟಿ! ಕೆಂಪುಬಣ್ಣದ ಗಾಜಿನ ಕನ್ನಡಕವನ್ನು ನಾ ಹಾಕಿಕೊಂಡರೆ ಸೃಷ್ಟಿ ಕೆಂಪಗೆ ಕಾಣಿಸೀತು. ಉರಿಯುತ್ತಿರುವಂತೆ ಕಾಣಿಸೀತು.

18. ರಾಮದಾಸರು ರಾಮಾಯಣ ಬರೆದು ಶಿಷ್ಯರಿಗೆ ಓದಿ ಹೇಳುತ್ತಿದ್ದರು. ಅದನ್ನು ಕೇಳಲು ಮಾರುತಿಯೂ ಗುಪ್ತರೂಪದಲ್ಲಿ ಬರುತ್ತಿದ್ದ. 'ಮಾರುತಿ ಅಶೋಕ ವನಕ್ಕೆ ಹೋದ. ಅಲ್ಲಿ ಬಿಳೀ ಹೂಗಳನ್ನಾತ ಕಂಡ' ಎಂದು ಸಮರ್ಥರು ಬರೆದರು. ಅದನ್ನು ಕೇಳಿದೊಡನೆ ಮಾರುತಿ ಪ್ರಕಟವಾದ. 'ಬಿಳಿಯ ಹೂ ನಾ ನೋಡಲೇ ಇಲ್ಲ. ನಾನು ನೋಡಿದ ಹೂ ಕೆಂಪಗಿದ್ದವು. ನೀವು ಬರೆದುದು ತಪ್ಪು. ಅದನ್ನು ತಿದ್ದಿಕೊಳ್ಳಿ' ಎಂದ. ನಾನು ಬರೆದುದು ಸರಿಯಾಗಿದೆ. ನೀನು ಬಿಳಿಯ ಹೂವನ್ನೇ ನೋಡಿದ್ದು' ಎಂದರು ಸಮರ್ಥರು. ಮಾರುತಿ ನಾನೇ ಅಲ್ಲಿಗೆ ಹೋದುದು. ನಾನು ಸುಳ್ಳು ಹೇಳುತ್ತೇನೆಯೇ?' ಎಂದ. ಕಡೆಗೆ ದೂರು ಶ್ರೀರಾಮನ ಹತ್ತಿರ ಹೋಯಿತು. ರಾಮಚಂದ್ರ 'ಹೂಗಳೇನೋ ಬಿಳಿಯವೇ. ಮಾರುತಿಯ ಕಣ್ಣು ಮಾತ್ರ ಆಗ ಕೋಪದಿಂದ ಕೆಂಪಾಗಿದ್ದವು. ಅದರಿಂದಾಗಿ ಆ ಬಿಳೀ ಹೂ ಆತನಿಗೆ ಕೆಂಪಗೆ ಕಂಡವು' ಎಂದರು. ಆ ಸುಂದರ ಕಥೆಯ ಅರ್ಥವಿಷ್ಟೆ: ನಾವು ಯಾವ ದೃಷ್ಟಿಯಿಂದ ನೋಡುತ್ತೇವೊ ಹಾಗೆ ಲೋಕ ನಮಗೆ ಕಾಣಿಸುತ್ತದೆ.



ಜ್ಞಾನ–ಪ್ರೀತಿಯ ಪ್ರಶಾಂತ ಸ್ಥಳ ಸಾಗರ

19. ಈ ಸೃಷ್ಟಿ ಕೆಟ್ಟಿದೆಯೆಂದು ನನಗನಿಸುವುವವರೆಗೂ ನಾನು ನಾಲ್ಕೂ ಕಡೆಗೂ ಸಂಶಯದಿಂದಲೇ ನೋಡುತ್ತೇನೆ. ಹಕ್ಕಿಗಳ ಸ್ವಾತಂತ್ರ್ಯದ ಹಾಡು ಕಟ್ಟಿದ್ದಾರೆ ಕವಿಗಳು. ಹಕ್ಕಿಯಾಗಿ ನೋಡಿ ಎಂದರೆ ಸ್ವಾತಂತ್ರ್ಯದ ಬೆಲೆ ತಿಳಿದೀತು. ಹಕ್ಕಿಯ ಕತ್ತು ಯಾವಾಗಲೂ ಹಿಂದೆ ಮುಂದೆ ಹೊರಳುತ್ತಿರುತ್ತದೆ. ಯಾವಾಗಲೂ ಇತರರ ಭೀತಿ. ಗುಬ್ಬಿಗೆ ಆಸನ ಹಾಕಲು ಹೇಳಿ. ಅದಕ್ಕೆ ಏಕಾಗ್ರತೆ ಬಂದೀತೇ? ನಾವು ಸ್ವಲ್ಪ ಹತ್ತಿರ ಹೋದರೆ ಸಾಕು, ಅದು ಹಾರಿ ಹೋದೀತು. ತನ್ನ ತಲೆಯ ಮೇಲೆ ಇವರು ಕಲ್ಲು ಹಾಕುತ್ತಾರೇನೋ ಎಂದು ಅದಕ್ಕೆ ದಿಗಿಲು. ಜಗತ್ತೆಲ್ಲವೂ ಭಕ್ಷಕ, ಸಂಹಾರಕ ಎಂಬ ಭೀಕರ ಕಲ್ಪನೆಯುಳ್ಳವರಿಗೆಲ್ಲಿಯ ಶಾಂತಿ? ನನಗೆ ರಕ್ಷಕ ನಾನೊಬ್ಬನೇ. ಇನ್ನುಳಿದವರೆಲ್ಲ ನನ್ನ ಭಕ್ಷಕರು ಎಂಬ ಕಲ್ಪನೆ ಅಳಿಯದೆ ಏಕಾಗ್ರತೆ ದೊರೆಯದು. ಸಮದೃಷ್ಟಿಯ ಭಾವನೆಯೇ ಇದಕ್ಕೆ ಉತ್ತಮವಾದ ದಾರಿ. ಎಲ್ಲೆಲ್ಲೂ ಮಂಗಲವನ್ನೇ ನೋಡಿ. ಆಗ ಚಿತ್ತ ತಾನಾಗಿಯೇ ಶಾಂತವಾದೀತು.

20. ದುಃಖಿತ ವ್ಯಕ್ತಿಯೊಬ್ಬನಿದ್ದಾನೆ. ಜುಳುಜುಳು ಹರಿಯುವ ನದೀ ತೀರಕ್ಕೆ ಆತನನ್ನು ಕರೆದುಕೊಂಡು ಹೋಗಿ. ಆ ಸ್ವಚ್ಛ, ಶಾಂತ ನೀರಿನಿಂದ ಅವನ ತಳಮಳ ಕಡಮೆಯಾದೀತು. ದುಃಖ ಮರೆಯಾದೀತು. ಇಂಥ ಶಕ್ತಿ ಎಲ್ಲಿಂದ ಬಂತು ಆ ಝರಿಯಲ್ಲಿ? ಅದು ಪರಮಾತ್ಮನ ಶುಭ ಶಕ್ತಿ. ಅಲ್ಲಿ ಪ್ರಕಟವಾಗಿದೆ. ವೇದಗಳಲ್ಲಿ ಝರಿಯ ಬಗ್ಗೆ ಸುಂದರ ವರ್ಣನೆಯಿದೆ.

"ಅತಿಷ್ಠಂತೀನಾಂ ಅನಿವೇಶನಾನಾಂ"



ಅಂಥ ಝರಿ ಅವು. ಅಖಂಡವಾಗಿ ಹರಿಯುವಂಥವು. ಅವುಗಳಿಗೆ ತಮ್ಮದೆನ್ನುವ ಮನೆಯಿಲ್ಲ–ಮಾರಿಲ್ಲ. ಸಂನ್ಯಾಸಿ ಅವು. ಇಂಥ ಪವಿತ್ರ ಝರಿ ಅರೆಕ್ಷಣದಲ್ಲಿ ನಮ್ಮ ಮನಸ್ಸನ್ನು ಶಾಂತಗೊಳಿಸುತ್ತದೆ. ಆ ಸುಂದರ ಝರಿಯನ್ನು ಕಂಡು ನಮ್ಮ ಮನಸ್ಸಿನಲ್ಲಿ ಪ್ರೀತಿಯ. ಜ್ಞಾನ ಝರಿಯನ್ನು ನಾವೇಕೆ ಹುಟ್ಟಿಸಬಾರದು?

21. ಹೊರಗಿನ ಈ ಜಡ ನೀರು ನನ್ನ ಮನಸ್ಸನ್ನು ಶಾಂತಗೊಳಿಸಬಲ್ಲದಾದರೆ, ನನ್ನ ಮಾನಸದರಿಯಲ್ಲಿ ಭಕ್ತಿ–ಜ್ಞಾನದ ಚಿನ್ಮಯ ಝರಿ ಹರಿಯತೊಡಗಿದಾಗ ನನಗೆ ಎಷ್ಟು ಶಾಂತಿ ಸಿಕ್ಕೀತು! ಹಿಂದೆ ನನ್ನ ಗೆಳೆಯನೊಬ್ಬ ಹಿಮಾಲಯದಲ್ಲಿ, ಕಾಶ್ಮೀರದಲ್ಲಿ ಸುತ್ತುತ್ತಿದ್ದ. ಅಲ್ಲಿನ ಪವಿತ್ರ ಪರ್ವತ, ಸುಂದರ ಪ್ರವಾಹಗಳನ್ನು ವರ್ಣಿಸಿ, ನನಗೆ ಕಾಗದ ಬರೆಯುತ್ತಿದ್ದ. ನಾನು ಅವನಿಗೆ ಉತ್ತರ ಬರೆದೆ. "ಅಲ್ಲಿ ನಿನಗೆ ಅನುಪಮ ಆನಂದವನ್ನುಂಟುಮಾಡುವ ಆ ಝರಿ, ಆ ಪರ್ವತ, ಆ ತಾರೆ, ಆ ಶುಭ ಗಾಳಿಗಳನ್ನು ನಾನು ನನ್ನ ಹೃದಯದಲ್ಲೇ ಅನುಭವಿಸಬಲ್ಲೆ. ಈ ರಮಣೀಯ ದೃಶ್ಯವನ್ನೆಲ್ಲ ನಿತ್ಯವೂ ನಾನು ಅಂತರಂಗದ ಸೃಷ್ಟಿಯಲ್ಲಿ ನೋಡುತ್ತಿದ್ದೇನೆ. ನನ್ನ ಹೃದಯದಲ್ಲಿನ ಈ ಭವ್ಯ ದಿವ್ಯ ಹಿಮಾಲಯವನ್ನು ಬಿಟ್ಟು ನೀನು ಕರೆದರೂ ನಾನು ಅಲ್ಲಿಗೆ ಬರಲಾರೆ".

"ಸ್ಥಾವರಾಣಾಂ ಹಿಮಾಲಯಃ"

ಸ್ಥಿರತೆ ಪಡೆಯಲು ಉಪಾಸನೆ ಮಾಡಬೇಕಾದ ಸ್ಥಿರತೆಯ ಮೂರ್ತಿ ಹಿಮಾಲಯದ ವರ್ಣನೆ ಕೇಳಿ ನನ್ನ ಕರ್ತವ್ಯ ತ್ಯಜಿಸಿದರೆ ಏನು ಬಂತು?

22. ಸಾರಾಂಶಃ: ಮನಸ್ಸನ್ನು ಸ್ವಲ್ಪ ಶಾಂತಗೊಳಿಸಿ. ಮಂಗಲತೆಯಿಂದ ಸೃಷ್ಟಿಯ ಕಡೆ ನೋಡಿ. ಆಗ ಹೃದಯದಲ್ಲಿ ಅನಂತ ಝರಿಗಳು ಹರಿಯತೊಡಗುತ್ತವೆ. ಕಲ್ಪನೆಯ ದಿವ್ಯತಾರೆ ಹೃದಯಾಕಾಶದಲ್ಲಿ ಬೆಳಗತೊಡಗುತ್ತವೆ. ಕಲ್ಲು ಮಣ್ಣಿನ ಶುಭವಸ್ತುಗಳನ್ನು ಕಂಡು ಶಾಂತವಾಗುವ ಚಿತ್ತ, ಅಂತಃಸೃಷ್ಟಿಯಲ್ಲಿನ ದೃಶ್ಯವನ್ನು ಕಂಡು ಶಾಂತವಾಗಲಾರದೇ? ಹಿಂದೆ ಒಂದು ಸಲ ನಾನು ತಿರುವಾಂಕೂರಿಗೆ ಹೋಗಿದ್ದೆ. ಒಂದು ದಿನ ಸಂಜೆ ಸಮುದ್ರ ತೀರದಲ್ಲಿ ಕುಳಿತಿದ್ದೆ. ಆ ಅಪಾರ ಸಾಗರ ಧೋ ಧೋ ಎನ್ನುವ ಗರ್ಜನೆ, ಸಂಜೆಯ ಪ್ರಶಾಂತ ಸಮಯ! ನಾನು ಸ್ತಬ್ಧನಾಗಿ ಕುಳಿತಿದ್ದೆ. ಸಮುದ್ರ ತೀರದ ಉಪಾಹಾರಕ್ಕೆಂದು ನನ್ನ ಗೆಳೆಯ ಹಣ್ಣು ತೆಗೆದುಕೊಂಡು ಅಲ್ಲಿಗೆ ಬಂದ. ಆ ಸಾತ್ತ್ವಿಕ ಆಹಾರವೂ ಆಗ ನನಗೆ ವಿಷದಂತೆ ತೋರಿತು. ಸಮುದ್ರ ಆ ಓಂ ಓಂ ಗರ್ಜನೆ 'ಮಾಮನುಸ್ಮರ ಯುದ್ಧ್ಯಚ' ಎಂಬ ಗೀತಾವಚನದ ನೆನಪು ತರುತ್ತಿತ್ತು. ಸಮುದ್ರ ಎಡೆಬಿಡದೆ ನೆನಪು ಮಾಡಿಕೊಳ್ಳುತ್ತಿತ್ತು; ಕರ್ಮ ಮಾಡುತ್ತಿತ್ತು. ಒಂದು ತೆರೆ ಬಂತು. ಹೋಯಿತು. ಇನ್ನೊಂದು ಬಂತು. ಕ್ಷಣವೂ ವಿರಾಮವಿಲ್ಲ. ಆ ದೃಶ್ಯವನ್ನು ಕಂಡು ನನ್ನ ಹಸಿವು ನೀರಡಿಕೆಗಳೆಲ್ಲ ಅಡಗಿ ಹೋಗಿದ್ದವು. ಆ ಸಮುದ್ರದಲ್ಲಿ ಇದ್ದುದಾದರೂ ಏನು? ಆ ಉಪ್ಪು ನೀರಿನ ತೆರೆ ಏಳುವುದು ಬೀಳುವುದನ್ನು ಕಂಡು ನನ್ನ ಹೃದಯ ತುಂಬಿಬಂದರೆ ಜ್ಞಾನ–ಪ್ರೀತಿಯ ಅಪಾರ ಸಾಗರ ಹೃದಯದಲ್ಲಿ ಉಕ್ಕಿದರೆ ನಾನೆಷ್ಟು ನರ್ತಿಸಬಹುದು. ವೇದಗಳಲ್ಲಿನ ಋಷಿಗಳ ಹೃದಯದಲ್ಲಿ ಇಂಥ ಸಮುದ್ರ ತುಳುಕುತ್ತಿತ್ತು.

"ಅಂತಃಸ್ಸಮುದ್ರೇ ಹೃದಿ ಅಂತರಾಯುಷಿ
ಘೃತಸ್ಯ ಧಾರಾ ಅಭಿಚಾಕಶೀಮಿ
ಸಮುದ್ರಾದೂರ್ಮಿರ್ಮಧುಮಾನುದಾರಾತ್"

ಈ ದಿವ್ಯಭಾಷೆಯನ್ನು ಕುರಿತು ಭಾಷ್ಯ ಬರೆಯುವಾಗ ಭಾಷ್ಯಕಾರರೆಲ್ಲ ತೊಳಲಾಡಿದರು. ಯಾವುದೀ ಘೃತದ ಧಾರೆ? ಯಾವುದೀ ಮಧುಧಾರೆ? ಉಪ್ಪು ನೀರಿನ ಅಲೆ ಎದ್ದವೇನು ನನ್ನ ಅಂತಃಸ್ಸಮುದ್ರದಲ್ಲಿ? ಇಲ್ಲ. ನನ್ನ ಹೃದಯದಲ್ಲಿ ಹಾಲು ತುಪ್ಪದ ಮಧುವಿನ ಅಲೆಗಳೆದ್ದಿವೆ.

**(ಮುಂದುವರಿಯುವುದು)**

**41ನೇ ಪುಟದಿಂದ**

ಇರುವ ಯಾವನೊಬ್ಬನು ಸಿಂಹಾಸನವನ್ನೇರಿದರೂ ಅವರ ಸಾಂಪ್ರದಾಯಿಕ ಶಿಕ್ಷಣ ಹೇಗಿರುತ್ತದೆಂದರೆ ಯಾರೂ ಉನ್ಮತ್ತರಾಗಲು ಸಾಧ್ಯವೇ ಇರುವುದಿಲ್ಲ. ಪುರಾಣಗಳಲ್ಲಿಯೂ ಅಪರೂಪಕ್ಕೆ **ವೇನನ್ ಅಥವಾ ಅಸಮಂಜಸ**ರಂಥ ರಾಜರೋ ರಾಜಕುಮಾರರೋ ಸಿಗುತ್ತಾರೆ. ಅರಸರು ದಾರಿತಪ್ಪಿ ಹೋದಾಗ ಪ್ರಜೆಗಳು ಅವರನ್ನು ತೊಲಗಿಸಿದ್ದನ್ನು ಅಲ್ಲಿ ಕಾಣುತ್ತೇವೆ. ಯಥಾ ರಾಜಾ ತಥಾ ಪ್ರಜಾ ಎಂಬಂತೆ ರಾಜರು, ಪ್ರಜೆಗಳು ಇಬ್ಬರೂ ಧರ್ಮವನ್ನು ಗೌರವಿಸುತ್ತಿದ್ದರು. ಸರ್ಕಾರಗಳು ಶಾಸನ ಮಾಡಿದಾಗ, 'ಕಾನೂನು ಮಾಡಿದವರು ಸ್ವತಃ ಶಾಸನಕ್ಕೆ ಬದ್ಧರೇ?' ಎಂಬ ಪ್ರಶ್ನೆ ಏಳುತ್ತದೆ. ಆಳುವವರು, ಆಳಿಸಿಕೊಳ್ಳುವವರು ಇಬ್ಬರೂ ಧರ್ಮಮಾರ್ಗದಲ್ಲಿ ನಡೆಯಬೇಕು. ಏಕೆಂದರೆ ಮೂರುಲೋಕದ ಒಡೆಯನಾದ ಪರಮೇಶ್ವರನ ಶಾಸನ ಅದು. ಉಳಿದ ಎಲ್ಲ ಕಾನೂನುಗಳಿಗಿಂತ ಹೆಚ್ಚಿನದು. ಆಗ ಜಗತ್ತು ಚೆನ್ನಾಗಿರುತ್ತದೆ. ಪೂರ್ವಕಾಲದ ರಾಜರು ಧರ್ಮಪರಿಪಾಲನೆ ಮಾಡಿ ನಮಗೆ ದಾರಿ ತೋರಿಸಿದ್ದಾರೆ. ಆದ್ದರಿಂದಲೇ ಪ್ರಜೆಗಳಿಗೆ ರಾಜನಲ್ಲಿ ನಿಜವಾದ ಮೈತ್ರಿ ಮತ್ತು ನಿಷ್ಠೆ ಇರುತ್ತಿತ್ತು. ರಾಜನಿಗೆ 'ಇವರು ನನ್ನ ಪ್ರಜೆಗಳು' ಎಂಬ ಅಭಿಮಾನವಿರುತ್ತಿತ್ತು. ಪ್ರತಿಯಾಗಿ ಪ್ರಜೆಗಳಿಗೆ 'ಇವನು ನಮ್ಮ ರಾಜ' ಎಂಬ ಅಭಿಮಾನವಿರುತ್ತಿತ್ತು.

ಆದ್ದರಿಂದಲೇ, ಮಂತ್ರಿಯ ಸಹಾಯದಿಂದ ಆ ನಮ್ಮ ರಾಜಕುಮಾರನು, ಸೈನ್ಯವನ್ನು ಜತೆಗೂಡಿಸಲು ಪ್ರಾರಂಭಿಸಿದಾಗ, ಪ್ರಜೆಗಳು ಅವನ ಜತೆ ಕೈಜೋಡಿಸಿದರು ಮತ್ತು ಶತ್ರುವಿನ ಮೇಲೆ ಎರಗಿದರು.

ಯುದ್ಧದಲ್ಲಿ ಅವರು ಸುಲಭವಾಗಿ ಜಯವನ್ನೂ ಗಳಿಸಿದರು, ರಾಜಕುಮಾರನಿಗೆ ಪಟ್ಟಾಭಿಷೇಕವನ್ನೂ ನೆರವೇರಿಸಿದರು. ಕಾಡಿನಲ್ಲಿ ಬೇಡರೊಡನೆ ಕಳೆದಿದ್ದ ಬಾಲ್ಯದ ದಿನಗಳಿಗಿಂತ ಭಿನ್ನವಾಗಿ ಈಗ ಆತನು ನುರಿತ ಅರಸನಾದ.

ಇದು, ನಾನು ಕಟ್ಟಿದ ಕತೆಯಲ್ಲ. ಪೂರ್ವಕಾಲದಲ್ಲಿ ಅದ್ವೈತ ತತ್ತ್ವವನ್ನು ಮಂಡಿಸಿದ ಒಬ್ಬ ಆಚಾರ್ಯರು ಹೇಳಿದ್ದು. 'ಗುರು' ಶಬ್ದದ ಕಲ್ಪನೆಯನ್ನು ವಿವರಿಸಲೆಂದು ಅವರು ಈ ಕತೆಯನ್ನು ಹೇಳಿದ್ದರು. ಅದನ್ನು ಸ್ವಾರಸ್ಯಕರವಾಗಿ ಮಾಡಲು ನಾನು ಕೊಂಚ ವಿವರಗಳನ್ನು ಸೇರಿಸಿದ್ದೇನೆ! ●

**ಶ್ರೀಕೃಷ್ಣ ಕರ್ಣಾಮೃತ**



**ಭಕ್ತಕವಿ ವಿದ್ವಾನ್ ಕೆ.ವಿ. ವರದರಾಜಯ್ಯಂಗಾರ್**



# ಬಾಲಕೃಷ್ಣನ ಬಾಯಲ್ಲಿ ಬ್ರಹ್ಮಾಂಡ

## ಶ್ಲೋಕ–15

ಕೈಲಾಸೇ ನವನೀತತಿ ಕ್ಷಿತಿತಲೇ ಪ್ರಾಗ್ಜಗ್ಧಮುಲ್ಲೋಷ್ಠತಿ
ಕ್ಷೀರೋದೇಪಿ ನಿಷೀತದುಗ್ಧತಿ ಲಸತ್‌ಸ್ಮೇರ ಪ್ರಫುಲ್ಲೇ ಮುಖೇ
ಮಾತ್ರಾ ಜೀರ್ಣಧಿಯಾ ದೃಢಂ ಚಕಿತಯಾ ನಷ್ಟಾಸ್ಮಿ ದೃಷ್ಟಃ ಕಯಾ
ಧೂ ಧೂ ವತ್ಸಕ ಜೀವ ಜೀವ ಚಿರಮಿತ್ಯುಕ್ತೋವತಾದ್ವೋ ಹರಿಃ
(II–62)

**ಕೈಲಾಸವನ್ನಿನಿತು ನವನೀತವೆಂದು**
**ಭೂಮಿಯನು ತಿಂದಿದ್ದ ಮಣ್ಣಮಣಕೆಂದು**
**ಕ್ಷೀರಸಾಗರ ಕಂಡು ಕುಡಿದ ಹಾಲೇ ಎಂದು**
**ತೆರೆದ ಬಾಯೊಳು ಕಂಡು ತಾಯಿ ಯಶೋದೆಯು**
**ಕಳವಳಿಸಿ ಜೀರ್ಣಿಸದ ಸಂಶಯದಿ ತಾನು**
**ಕೆಟ್ಟೆನೋ ಕಣ್ತಾಗಿತಾವಳಿಂದಲೋ ಏನೋ**
**ಥೂ ಥೂ ಕಂದನೇ ಚಿರಾಯು ಚಿರಾಯು**
**ಹರಸಿರಲು ತಾ ಹರಿಯು ಪೊರೆಯಲೆಮ್ಮನ್ನು**

ಕೃಷ್ಣನು ಮಣ್ಣನ್ನು ತಿನ್ನುತ್ತಾನೆ ಎಂಬ ಆರೋಪವು ಯಶೋದೆಗೆ ಆಗಾಗ ಕೇಳಿಬರುತ್ತಿತ್ತು. ಆಗಾಗ ಅವಳು ಕೃಷ್ಣನನ್ನು ಬಾಯಿತೆಗೆಯಿಸಿ ನೋಡುತ್ತಿದ್ದಳು. ಮಣ್ಣು ತಿಂದಿದ್ದರೆ ಅದರ ಕುರುಹುಗಳಾಗಲಿ, ಮಣ್ಣಿನವಾಸನೆಯಾಗಲಿ ಬಾಯಲ್ಲಿರಬೇಕಲ್ಲ ಎಂಬುದು ಆ ತಾಯಿಯ ಊಹೆ.

ಒಮ್ಮೆ ಈ ರೀತಿ ಬಾಯಿತೆಗೆಸಿ ತಾಯಿ ಯಶೋದೆ ನೋಡಿದಳು. ಶ್ರೀಕೃಷ್ಣನ ಬಾಯಿಯಲ್ಲಿ ತ್ರಿಭುವನಗಳನ್ನೂ ಕಂಡಳು. ತಾಯಿ ದಂಗಾದಳು. ತನ್ನ ಕಣ್ಣನ್ನು ತಾನೇ ನಂಬಲಿಲ್ಲ. ತನ್ನ ಮುದ್ದಿನ ಬಾಲ ಕಿಶೋರನ ಬಾಯಲ್ಲಿ ಮೂರು ಲೋಕಗಳು ಕಾಣಲು ಹೇಗೆ ಸಾಧ್ಯ? ತಾಯಿಯ ಮಮತೆಯ ಮಿಂಚು ತಾನು ಕಂಡದ್ದನ್ನು ಕ್ಷಣಕಾಲ ಮರೆಯಿಸಿತು. ಅವಳಿಗೆ ಆಗ ಹಿಮ ತುಂಬಿದ ಕೈಲಾಸ ಪರ್ವತವು ಕೃಷ್ಣನ ಬಾಯಲ್ಲಿ ಕಂಡಿತು. ಆದರೆ ತಾಯ ಭಾವ ಅವಳನ್ನು ಬೇರೆಯೇ ನೋಡುವಂತೆ ಮಾಡಿತು. ಹಿಮ ತುಂಬಿದ ಕೈಲಾಸ ಅವಳಿಗೆ ಬೆಣ್ಣೆಯ ಮುದ್ದೆಯಂತೆ ಕಾಣಿಸಿತು. ಅವಳಂದುಕೊಂಡಳು, “ಅಯ್ಯೋ, ಇದೇನಿದು. ಸ್ವಲ್ಪ ಹೊತ್ತಿನ ಮುಂಚೆ ಕೃಷ್ಣನಿಗೆ ಚೆನ್ನಾಗಿ ಬೆಣ್ಣೆ ತಿನ್ನಿಸಿದ್ದೆ. ಅವನು ತಿಂದು ನುಂಗಿದ್ದನ್ನು ನೋಡಿದೆ. ಆದರೆ ಅವನೆಲ್ಲೋ ಸ್ವಲ್ಪ ಬೆಣ್ಣೆಯನ್ನು ನುಂಗದೆ ಹಾಗೇ ಬಾಯಲ್ಲಿ ಇಟ್ಟುಕೊಂಡಿರಬೇಕು. ಅದೂ ಅವನಿಗೆ ಸರಿಯಾಗಿ ಸೇರಿಲ್ಲ” ಎಂದು ನಿರ್ಧರಿಸಿದಳು.

ಮತ್ತೆ ಶ್ರೀಕೃಷ್ಣನ ಬಾಯಲ್ಲಿ ಆ ತಾಯಿ ಕ್ಷೀರಸಾಗರವನ್ನು ಕಂಡಳು. ಆದರೆ ಆ ಬಿಳಿ ಹಾಲಸಾಗರವು ಅವಳಿಗೆ ಕೃಷ್ಣನು ಆಗ ತಾನೇ ಕುಡಿದಿದ್ದ ಹಾಲನ್ನು ನೆನಪಿಸಿತು. ತಾಯಿ ಭಯ ದುಃಖಗಳಿಂದ ನುಲಿದಳು. “ಹಾಲು ಕುಡಿಸಿದ್ದೆ, ಅದೆಲ್ಲೋ ಅವನಿಗೆ ಪೂರ್ತಿ ದಕ್ಕಿಲ್ಲ. ಜೀರ್ಣವಾಗದೆ ಇನ್ನೂ ಸ್ವಲ್ಪ ಹಾಲನ್ನು ಬಾಯಲ್ಲೇ ಉಳಿಸಿಕೊಂಡು ಬಿಟ್ಟಿದ್ದಾನೆ” ಎಂದು ಬಹುವಾಗಿ



ಕಳವಳಿಸಿದಳು.

ಈ ರೀತಿ ತಾನು ತಿನ್ನಿಸಿದ ಬೆಣ್ಣೆಯೂ ಅರಗದೆ ಬಾಯಲ್ಲಿ ಉಳಿಯಿತು. ತಾನು ಕುಡಿಸಿದ ಹಾಲೂ ಬಾಯಲ್ಲಿ ಉಳಿದಿದೆ. “ಪ್ರತಿದಿನವೂ ಹೀಗಾಗುತ್ತಿರಲಿಲ್ಲ. ಕುಡಿದ ಹಾಲು ತಿಂದ ಬೆಣ್ಣೆಗಳೆಲ್ಲ ಹೊಟ್ಟೆ ಸೇರಿ ಜೀರ್ಣವಾಗಿ ಮಗು ಸಂತೋಷದಿಂದ ನಳನಳಿಸುತ್ತಿತ್ತು. ಇಂದು ಯಾರೋ ದುಷ್ಟ ಹೆಂಗಸಿನ ದೃಷ್ಟಿ ತಾಗಿರಬೇಕು. ಈ ನಂದಗೋಕುಲದ ಹೆಂಗಸರಿಗೆಲ್ಲ ನನ್ನ ಕಂದ ಕೃಷ್ಣನ ಮೇಲೆಯೇ ಕಣ್ಣು. ಯಾರದೋ ಕೆಟ್ಟ ಕಣ್ಣು ಆವರಿಸಿ ದೃಷ್ಟಿ ತಾಗಿರಬೇಕು” ಎಂದೆನಿಸಿತು ಮಮತೆಯ ತಾಯಿಗೆ. ಕೂಡಲೇ ಸ್ವಲ್ಪ ಉಪ್ಪು ಕೈಯಲ್ಲಿ ಹಿಡಿದು ಮಗನಿಗೆ ಅಪ್ರದಕ್ಷಿಣವಾಗಿ ನಿವಾಳಿಸಿ, ಆ ಕೈಗೆ ಅವನ ಬಾಯಿಂದ ಥೂ ಥೂ ಎಂದು ಉಗಿಸಿದಳು. ಹಾಗೆಯೇ ತಾನೂ “ಥೂ ಥೂ, ಕೆಟ್ಟ ಕಣ್ಣು, ಮಾರಿಕಣ್ಣು ಹಾಳಾಗಲಿ, ಓಡಿ ಹೋಗಲಿ” ಎಂದು ಉಗಿದು ಅದನ್ನು ಯಾರಿಗೂ ಕಾಣದೆಡೆ, ಅದೂ ನಾಲ್ಕು ದಾರಿ ಸೇರುವೆಡೆ ಹಾಕಿ ಬಂದಳು. ತನ್ನ ಮಗನು ಚಿರಾಯುವಾಗಬೇಕೆಂದು ಅವಳ ಹಾರೈಕೆ, ಹಂಬಲಗಳು. ಹೀಗೆಂದು ತಾಯಿ ಹರಸುವುದನ್ನು ಕಂಡು ನಿಬ್ಬೆರಗಾದವನಂತೆ ನಟಿಸುತ್ತಿದ್ದ ಸರ್ವಶಕ್ತ ಶ್ರೀಕೃಷ್ಣನು ನಮ್ಮನ್ನು ಕಾಪಾಡಲಿ. “ಭಯಕೃತ್ ಭಯನಾಶನಃ” ಎಂಬಂತೆ ಅವನೇ ಎಲ್ಲರ ಭಯಹಾರಿ; ದುಷ್ಟ ಶಿಕ್ಷಣಕ್ಕಾಗಿ ಅನೇಕ ಬಾರಿ ಅವತರಿಸಿ ಬಂದಿರುವವ. “ಯಮನನ್ನೂ ತನ್ನ ಉಪ್ಪಿನ ಕಾಯಿಯಂತೆ” ಚೀಪಿ ನುಂಗುವ ಪರಬ್ರಹ್ಮನವ. ಅವನಿಗೇನು ತಾನೇ ಕೇಡಾಗಲು ಸಾಧ್ಯ?

ಇಂತಹ ಸರ್ವಶಕ್ತನಾದರೂ ಮುಗ್ಧ ಕಿಶೋರನಂತಿದ್ದ ಶ್ರೀಕೃಷ್ಣನು ನಮ್ಮನ್ನು ಆಧಿವ್ಯಾಧಿಗಳಿಂದ, ಮುಬ್ಬಗೆಯ ತಾಪಗಳಿಂದ ಸದಾ ಕಾಪಾಡುತ್ತಿರಲಿ.

**(ಮುಂದುವರಿಯುವುದು)**



# ಧರ್ಮಾಧಿಕಾರಿಗಳಿಂದ ಧಾರ್ಮಿಕ ಪ್ರವಾಸ

**ದಿವ್ಯಕ್ಷೇತ್ರ ಶ್ರೀರಂಗಂನಲ್ಲಿ ಕೈವಾರ ತಾತಯ್ಯನವರ ಕೀರ್ತನೆಗಳ ಸಮರ್ಪಣೆ**

ಶ್ರೀರಂಗಂ ತಮಿಳುನಾಡಿನ ಪವಿತ್ರ ಧಾರ್ಮಿಕ ಪುಣ್ಯಕ್ಷೇತ್ರ. ನೂರೆಂಟು ದಿವ್ಯಕ್ಷೇತ್ರಗಳಲ್ಲಿ ಶ್ರೀರಂಗಂ ಕ್ಷೇತ್ರಕ್ಕೆ ಪ್ರಥಮ ಸ್ಥಾನ. ಪ್ರಪಂಚದಲ್ಲಿಯೇ ಅತಿ ದೊಡ್ಡದಾದ ಗೋಪುರ (240 ಅಡಿ)ವನ್ನು ಹೊಂದಿರುವ ಶ್ರೀರಂಗನಾಥನ ಸನ್ನಿಧಿ ಶ್ರೀರಂಗಂ. ಶ್ರೀರಂಗಂನ ಮತ್ತೊಂದು ವಿಶೇಷವೆಂದರೆ ವಿಶಿಷ್ಟಾದ್ವೈತ ಸಿದ್ಧಾಂತದ ಪ್ರತಿಪಾದಕ ಶ್ರೀ ರಾಮಾನುಜಾಚಾರ್ಯರ ಅಧ್ಯಾತ್ಮದ ಕಾರ್ಯಕ್ಷೇತ್ರ. ಶ್ರೀರಂಗದ ಗೋಪುರದಿಂದ ಅಷ್ಟಾಕ್ಷರೀ ಮಂತ್ರವನ್ನು ಸರ್ವರ ಒಳಿತಿಗಾಗಿ ಬೋಧಿಸಿದ ಶ್ರೀ ರಾಮಾನುಜಾಚಾರ್ಯರ ದೇಹವಿರುವ ಪುಣ್ಯಕ್ಷೇತ್ರ.

ಶ್ರೀ ಯೋಗಿನಾರೇಯಣ ಮಠದ ವತಿಯಿಂದ ಶ್ರೀ ರಾಮಾನುಜಾಚಾರ್ಯರ ಜನ್ಮ ಸಹಸ್ರಮಾನೋತ್ಸವವನ್ನು ಒಂದು ವರ್ಷಗಳ ಕಾಲ ನಿರಂತರವಾಗಿ ಹಲವಾರು ಧಾರ್ಮಿಕ ಕಾರ್ಯಕ್ರಮಗಳನ್ನು ಶ್ರದ್ಧಾಭಕ್ತಿಗಳಿಂದ ಆಯೋಜಿಸಿ, ಶ್ರೀಗಳನ್ನು ಸ್ಮರಿಸಿದ ಕಾರಣ, ಶ್ರೀರಂಗಂನಲ್ಲಿ ತಾತಯ್ಯನವರ ಕೀರ್ತನೆಗಳನ್ನು ಸಮರ್ಪಿಸಬೇಕೆಂಬುದು ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರ ಕನಸಾಗಿತ್ತು.

ಸದ್ಗುರು ತಾತಯ್ಯನವರ ಪ್ರೇರಣೆಯಂತೆ ಧರ್ಮಾಧಿಕಾರಿಗಳ ಮಾರ್ಗದರ್ಶನದಲ್ಲಿ ಭಕ್ತರ ತಂಡ ಅಕ್ಟೋಬರ್ 29ರಂದು ಬೆಳಗ್ಗೆ ಸದ್ಗುರು ತಾತಯ್ಯನವರಿಗೆ ವಿಶೇಷ ಪೂಜೆಗಳನ್ನು ಸಲ್ಲಿಸಿ ಕೈವಾರದಿಂದ ಶ್ರೀರಂಗಂಗೆ ತೆರಳಲು ಸಿದ್ಧರಾದೆವು.

ಕೈವಾರದಿಂದ ಶ್ರೀರಂಗಂ ಸುಮಾರು 360 ಕಿ.ಮೀ. ಗಳ ದೂರ. ಬೆಳಗ್ಗೆ 7 ಗಂಟೆಗೆ ಬಿಟ್ಟು ದಾರಿ ಮಧ್ಯದಲ್ಲಿ ತಿಂಡಿಯನ್ನು ತಿಂದು ಪ್ರಯಾಣವನ್ನು ಮುಂದುವರಿಸಿದೆವು. ಸೇಲಂ, ನಮಾಕ್ಕಲ್ ಮಾರ್ಗವಾಗಿ ಪ್ರಯಣಿಸುವಾಗಲೇ ಮಳೆರಾಯನ ಆಗಮನವಾಗಿತ್ತು. ಗುಡುಗು, ಸಿಡಿಲಿನಿಂದ ಕೂಡಿದ ಮಳೆಯಲ್ಲಿ ಪ್ರಕೃತಿಯ ರಮಣೀಯ ದೃಶ್ಯಗಳನ್ನು ನೋಡುವುದೇ ಚೆಂದ. ಪ್ರಕೃತಿಯನ್ನು ಸವಿಯುತ್ತಾ ಮುಂದೆ ಹೋದಂತೆ ಕಾವೇರಿ ನದಿ ಕಂಡಿತು. ಕಾವೇರಿತಾಯಿಗೆ ನಮಸ್ಕರಿಸಿ ನಮ್ಮ ಪಯಣ ಮುಂದುವರಿಯಿತು. ಶ್ರೀರಂಗಂ ಒಂದು ದ್ವೀಪವಿದ್ದಂತೆ. ಕಾವೇರಿ ನದಿ ಶ್ರೀರಂಗನನ್ನು ಸುತ್ತುವರಿದಿದೆ. ಶ್ರೀರಂಗನಾಥನ ಚೆಲುವನ್ನು ಕಂಡ ಪುರಂದರದಾಸರು "ಕಂಗಳಿದ್ಯಾತಕೋ ಕಾವೇರಿರಂಗನ ನೋಡದ" ಎಂದು ಸ್ತುತಿಸಿದ್ದಾರೆ.

ನಾವು ಶ್ರೀರಂಗವನ್ನು ತಲಪಿದ್ದು ಸಂಜೆ ಸುಮಾರು 3 ಗಂಟೆಗೆ. ಆದಾಗಲೇ ವಸತಿಗೃಹಗಳನ್ನು ಮುಂಗಡವಾಗಿರಿಸಲಾಗಿತ್ತು. ಅಲ್ಲಿಯೇ ಊಟ ಮಾಡಿದೆವು. ಎಲ್ಲರೂ ಸಂಜೆ 4 ಗಂಟೆಗೆ ಸಿದ್ಧರಿರಬೇಕೆಂದು ಧರ್ಮಾಧಿಕಾರಿಗಳ ಅಪ್ಪಣೆ. ಮಾತೃಶ್ರೀ ಜಯಕುಮಾರಮ್ಮನವರು ದೇವಾಲಯದ ಎಲ್ಲ ದೇವರುಗಳಿಗೆ ನೂತನ ವಸ್ತ್ರಗಳನ್ನು ತರಿಸಿದ್ದರು.

ಎಲ್ಲರೂ ಸಂಜೆ ದೇವಾಲಯಕ್ಕೆ ಹೋದೆವು. ಎತ್ತರದ ಗೋಪುರ, ವಿಶಾಲವಾದ ಪ್ರದೇಶ. ಹಲವಾರು ದೇವಾಲಯಗಳು. ಬೃಹತ್ ಗಾತ್ರದ ಶಿಲ್ಪಕಲೆಗಳಿಂದ ಕೂಡಿರುವ ಕಂಬಗಳು. ಸಾವಿರಾರು ವರ್ಷಗಳ ಹಿಂದೆ ಯಂತ್ರಗಳ ಸಹಾಯವಿಲ್ಲದೆ ಮಾನವ ನಿರ್ಮಿತ ಕಟ್ಟಡ ಶೈಲಿಗಳನ್ನು ಕಲಾಕೃತಿಗಳನ್ನು ನೋಡಲು ಕಣ್ಣುಗಳು ಸಾಲದು. ದೇವಾಲಯದ ಟ್ರಸ್ಟೀಗಳಾಗಿ ಕಾರ್ಯನಿರ್ವಹಿಸುತ್ತಿರುವ ಅರ್ಚಕವೃಂದದ ಬಾಬು ಸ್ವಾಮಿಗಳು ಮತ್ತು ಅವರ ತಂಡ ಧರ್ಮಾಧಿಕಾರಿಗಳಿಗೆ ಶಾಲು ಹೊದಿಸಿ ಆಹ್ವಾನಿಸಿದರು.

ನಾವು ಮೊಟ್ಟಮೊದಲು ನೋಡಿದ್ದು ಗರುಡಾಳ್ವಾರ್



ಧರ್ಮಾಧಿಕಾರಿಗಳ ನೇತೃತ್ವದಲ್ಲಿ ಶ್ರೀ ಕೈವಾರ ತಾತಯ್ಯನವರ ಕೀರ್ತನೆ ಸಮರ್ಪಣೆ

ದೇವಾಲಯ. ಪ್ರಪಂಚದಲ್ಲಿಯೇ ಇಷ್ಟು ಎತ್ತರದ ಗರುಡಸ್ವಾಮಿಯ ಮೂರ್ತಿ ಬೇರೆಲ್ಲೂ ಇಲ್ಲ. ವಿಶಾಲವಾದ ಮೂರ್ತಿಯನ್ನು ಎಷ್ಟು ನೋಡಿದರೂ ಸಾಲದು. ಗುರುಡಾಳ್ವಾರ್‌ಗೆ ವಿಶೇಷವಾಗಿ ತರಿಸಿದ್ದ ನೂತನ ವಸ್ತ್ರಗಳನ್ನು ನೀಡಿ ಭಕ್ತಿಯ ಸಮರ್ಪಣೆಯನ್ನು ಸಲ್ಲಿಸಿ ಮಂಗಳಾರತಿಯನ್ನು ಸ್ವೀಕರಿಸಿ ಮುನ್ನಡೆದೆವು.

ಶ್ರೀರಂಗನಾಥಸ್ವಾಮಿಯ ಮುಖ್ಯದ್ವಾರದ ಬಳಿಗೆ ಬಂದೆವು. ಭಕ್ತರ ಸಾಲಿನಲ್ಲಿ ಸೇರಿಕೊಂಡು ತಾತಯ್ಯನವರನ್ನು ಸ್ಮರಿಸುತ್ತಾ ಶ್ರೀರಂಗನಾಥಸ್ವಾಮಿಯ ದಿವ್ಯ ದರ್ಶನವನ್ನು ಮಾಡಿದೆವು. ಶ್ರೀರಂಗನಾಥಸ್ವಾಮಿಯ ದರ್ಶನ ಅವಿಸ್ಮರಣೀಯ. ಬೃಹತ್ ಗಾತ್ರದ ದೀಪದ ಬೆಳಕಿನಲ್ಲಿ ಸ್ವಾಮಿಯ ದರ್ಶನ ವರ್ಣಿಸಲಸಾಧ್ಯ. ಪವಡಿಸುತ್ತಿರುವ ಶ್ರೀರಂಗನಾಥಸ್ವಾಮಿಯನ್ನು ದರ್ಶಿಸಿ ಹೊರಬಂದು ಸ್ವಾಮಿಯ ಪಾದಗಳನ್ನು ದರ್ಶಿಸಿದೆವು. ಅನಂತರ ಹೊರಭಾಗದಲ್ಲಿರುವ ಅಮ್ಮನವರ ದೇವಾಲಯವನ್ನು ದರ್ಶಿಸಿ, ಶ್ರೀರಂಗನಾಯಕಿ ಮಂಟಪವನ್ನು ದರ್ಶಿಸಿದೆವು. ಈ ಮಂಟಪದ ವಿಶೇಷವೆಂದರೆ ವರ್ಷಕ್ಕೊಮ್ಮೆ ಮಾತ್ರ ಶ್ರೀರಂಗನಾಯಕಿ ಅಮ್ಮನವರ ಉತ್ಸವ ವಿಗ್ರಹವನ್ನು ದೇವಾಲಯದಿಂದ ಹೊರತಂದು ಈ ಮಂಟಪದಲ್ಲಿ ಪೂಜಿಸುತ್ತಾರೆ. ಅಮ್ಮನವರ ದರ್ಶನ ವರ್ಷಕ್ಕೊಮ್ಮೆ ಮಾತ್ರ. ಈ ಕಾರಣದಿಂದ ಈ ಮಂಟಪವನ್ನು ಪೂಜ್ಯಭಾವದಿಂದ ಭಕ್ತರು ನೋಡುತ್ತಾರೆ. ಸ್ವಲ್ಪ ಮೆಟ್ಟಿಲುಗಳನ್ನು ಹತ್ತಿ ಮೇಲ್ಭಾಗಕ್ಕೆ ಬಂದೆವು. ಅಮ್ಮನವರು ಕುಳಿತುಕೊಳ್ಳುವ ಪೀಠವನ್ನು ನೋಡಿ ಧರ್ಮಾಧಿಕಾರಿಗಳು ಭಾವಪರವಶರಾದರು. "ಎಲ್ಲಿ ನೋಡಿದರಲ್ಲೇ ಪುಷ್ಪವ ಪೂಜೆಯ ಮಾಡೋ ಉಪಾಯವ ಕಲಿಸಿದ" ಎಂಬ ತಾತಯ್ಯನವರ ವಾಣಿಯಂತೆ ಧರ್ಮಾಧಿಕಾರಿ ಅಮ್ಮನವರ ಚಿತ್ರವನ್ನು ನೆಲದ ಮೇಲೆ, ಗೋಡೆಯ ಮೇಲೆ ತೋರಿಸಿ ನೆರೆದಿದ್ದ ನಮಗೆಲ್ಲ ಭಕ್ತಿಯ ದರ್ಶನ ಮಾಡಿಸಿದರು.

ದೇವಾಲಯದ ಆವರಣದಲ್ಲಿಯೇ ಶ್ರೀ ರಾಮಾನುಜಾಚಾರ್ಯರ ದೇಹವಿರುವ ದೇಗುಲವಿದೆ. ಅಲ್ಲಿಗೆ ಬಂದೆವು. ಶ್ರೀ ರಾಮಾನುಜಾಚಾರ್ಯರು ಪರಮಾತ್ಮನಲ್ಲಿ ಐಕ್ಯವಾದ ಅನಂತರ ಅವರ ಶರೀರವನ್ನು ಇಲ್ಲಿಯೇ ಇರಿಸಿದ್ದಾರೆ. ಈಗಲೂ ಅವರ ಕೂದಲು ಮತ್ತು ಉಗುರು ಬೆಳೆಯುತ್ತಿದೆ ಎಂದು ಅರ್ಚಕರು ವಿವರಣೆಯನ್ನು ನೀಡಿದರು. ಶ್ರೀ ರಾಮಾನುಜಾಚಾರ್ಯರ ದೇಹದ ಮುಂದೆ ನಿಂತೆವು. ಯಾರಲ್ಲಿಯೂ ಬೇಧಭಾವ ಮಾಡದೆ ಸರ್ವರಲ್ಲಿಯೂ ಇರುವ ಪರಮಾತ್ಮನೊಬ್ಬನೇ ಎಂದು ಸಾರಿದ ದಿವ್ಯಚೇತನ ಶ್ರೀ ರಾಮಾನುಜಾಚಾರ್ಯರ ಮೂಲ ದೇಹವನ್ನು ಕಂಡು ಪುಲಕಿತರಾದೆವು. ಭಕ್ತಿಯಿಂದ ಸ್ಮರಣೆಯನ್ನು ಮಾಡಿ, ಪೂಜೆಗಳನ್ನು ಸಲ್ಲಿಸಿ ಧನ್ಯತೆಯಿಂದ ಹೊರಬಂದೆವು. ಅಲ್ಲಿಯೇ ಆವರಣದಲ್ಲಿ ವಿದ್ವಾನ್ ಮಂಕಾಲ ಶ್ರೀಹರಿಶರ್ಮರವರು ಪೋತನ ಭಾಗವತದ ಪ್ರಹ್ಲಾದಚರಿತ್ರೆ ಭಾಗದ ಪ್ರವಚನವನ್ನು ನೀಡಿದರು. ಶ್ರೀರಂಗಂ ದೇವಾಲಯದ ವಿಶೇಷ ಕಾರ್ಯನಿರ್ವಹಣಾಧಿಕಾರಿ ಶ್ರೀಯುತ ಜಯರಾಮನ್ ಅವರಿಗೆ ಧರ್ಮಾಧಿಕಾರಿ ಶಾಲು ಹೊದಿಸಿ ಸನ್ಮಾನಿಸಿ ತಾತಯ್ಯನವರ ಭಾವಚಿತ್ರವನ್ನು ನೀಡಿ ಗೌರವಿಸಲಾಯಿತು.

ಮಾರನೆಯ ದಿನ ಬೆಳಗ್ಗೆ 5 ಗಂಟೆಗೆ ಶ್ರೀರಂಗನಾಥಸ್ವಾಮಿಯ ವಿಶ್ವರೂಪ ದರ್ಶನಕ್ಕೆ ಅಣಿಯಾದೆವು. ಅಲ್ಲಿಯ ವಿಶೇಷವೆಂದರೆ ಗಜರಾಜ ಪ್ರತಿನಿತ್ಯ ಸಮೀಪದಲ್ಲಿರುವ ಕಾವೇರಿ ನದಿಯ ತೀರಕ್ಕೆ ಹೋಗಿ ಅಲ್ಲಿಂದ ಅಭಿಷೇಕಕ್ಕೆ ಜಲವನ್ನು ತರುವ ಸಂಪ್ರದಾಯ. ಗಜರಾಜನು ಕಾವೇರಿ ನೀರನ್ನು ತರಲು ದೇವಾಲಯದಿಂದ ಹೊರಬಂದ ಅನಂತರವಷ್ಟೇ ಭಕ್ತರನ್ನು ದೇವಾಲಯದ ಒಳಕ್ಕೆ ಬಿಡುತ್ತಾರೆ. ನಾವೆಲ್ಲರೂ ಶ್ರೀರಂಗನಾಥನ ಸ್ಮರಣೆಯನ್ನು ಮಾಡುತ್ತಾ ದೇವಾಲಯವನ್ನು ಪ್ರವೇಶಿಸಿದೆವು. ದೇವಾಲಯದಲ್ಲಿ ಧರ್ಮಾಧಿಕಾರಿ ದಂಪತಿಯನ್ನು ವಿಶೇಷವಾಗಿ ಆಹ್ವಾನಿಸಿ ಗರ್ಭಗುಡಿಯ ಮುಂಭಾಗದಲ್ಲಿ ನಿಲ್ಲಿಸಿದರು.

ಗರ್ಭಗುಡಿಯ ತೆರೆ ಎಳೆದಿದೆ. ಒಳಗೆ ಅರ್ಚಕವೃಂದದವರು

ಸ್ವಾಮಿಯ ಪೂಜೆಗೆ ಸಿದ್ದಗೊಳಿಸಿಕೊಳ್ಳುತ್ತಿದ್ದಾರೆ. ಸುಪ್ರಭಾತವಾಯಿತು. ಅಲ್ಲಿಯ ಮತ್ತೊಂದು ವಿಶೇಷ ಸ್ವಾಮಿಯ ಮುಂದೆ ಪ್ರತಿನಿತ್ಯ ವೀಣೆಯೊಂದಿಗೆ ಸ್ತೋತ್ರಪಠಣೆ. ವೀಣೆಯನ್ನು ನುಡಿಸುತ್ತಾ ವೈಣಿಕಪಂಡಿತರು ಸ್ವಾಮಿಯನ್ನು ಸ್ತೋತ್ರಮಾಡುತ್ತಾ ಕೊಂಡಾಡುತ್ತಿರುವ ದೃಶ್ಯ. ನಿಜಕ್ಕೂ ಬೆಳಗಿನ ಪ್ರಶಾಂತ ವಾತಾವರಣದಲ್ಲಿ ವೀಣಾವಾದನವು ಭಕ್ತಿಯನ್ನು ಇನ್ನಷ್ಟು ಇಮ್ಮಡಿಗೊಳಿಸಿತು. ಅರ್ಧಗಂಟೆ ಕಳೆದ ನಂತರ ಕಾವೇರಿಜಲವನ್ನು ಹಾಗೂ ಹೂಮಾಲೆಯನ್ನು ಹೊತ್ತು ತಂದ ಗಜರಾಜನು ದೇವಾಲಯವನ್ನು ಪ್ರವೇಶಿಸಿದನು. ಅಷ್ಟು ತೂಕವನ್ನು ಹೊಂದಿದ್ದರೂ ನಿಧಾನವಾಗಿ ಮೆಟ್ಟಿಲುಗಳನ್ನು ಹತ್ತಿ ಬಂದು ಸ್ವಾಮಿಯ ಗರ್ಭಗುಡಿಯ ಮುಂಭಾಗದಲ್ಲಿ ಬಂದು ನಿಂತಿತು. ಗೋಮಾತೆ ಹಾಗೂ ಶ್ವೇತವರ್ಣದ ಅಶ್ವವೂ ಬಂದು ನಿಂತಿತು. ಸ್ವಾಮಿಗೆ ಪ್ರಥಮ ಪೂಜೆಯನ್ನು ಸಲ್ಲಿಸಲಾಯಿತು. ಗೋಪೂಜೆಯನ್ನು ನೆರವೇರಿಸಲಾಯಿತು. ನಂತರ ಗಜರಾಜನು ಮೂರು ಬಾರಿ ಹೂಂಕರಿಸಿದನು. ಈ ಸಂದರ್ಭವು ಭಾಗವತದ ಗಜೇಂದ್ರಮೋಕ್ಷ ಘಟ್ಟವನ್ನು ನೆನಪಿಸುತ್ತಾ ಗೋವಿಂದ, ಗೋವಿಂದ, ಗೋವಿಂದ ಎಂದು ಕೂಗಿದಂತಿತ್ತು. ಸ್ವಾಮಿಯ ಪ್ರಥಮ ಪೂಜೆಯ ಅನಂತರ ವಿಶ್ವರೂಪದರ್ಶನವನ್ನು ಮಾಡಿದೆವು. ಅನಂತರ ಶ್ರೀ ರಾಮಾನುಜಾಚಾರ್ಯರ ದೇವಾಲಯದ ಮುಂಭಾಗದಲ್ಲಿ ಸಂಕೀರ್ತನೆಯನ್ನು ಸಮರ್ಪಿಸಲಾಯಿತು.

ಶ್ರೀಗಣನಾಥುನಿ, ಅಂಬನು ಚೂಡರಮ್ಮ ,ತಿರುಮಂತ್ರಮು ಜೀವನಮೂ, ಕಂಡೆನು ಶ್ರೀರಂಗನಾಥನಾ ,ರಾಮ ರಾಮ ಮುಕುಂದ ಮಾಧವ , ಶ್ರೀಕೃಷ್ಣಾಯನು ನಾಮಮಂತ್ರರುಚಿ, ಯೇಮಮ್ಮಾಲಕ್ಷ್ಮೀದೇವಮ್ಮಾ, ಪಾಹಿ ನಾರೇಯಣ



ಕೀರ್ತನೆಗಳನ್ನು ಶ್ರೀಗಳ ಪಾದತಳದಲ್ಲಿ ಸಮರ್ಪಿಸಿ ವಿಶೇಷ ಪೂಜೆಗಳನ್ನು ಸಲ್ಲಿಸಲಾಯಿತು.

ಸಂಜೆ ವಿಶೇಷವಾಗಿ ನದಿಯ ತೀರಕ್ಕೆ ಹೋಗಿ ದೀಪವನ್ನು ಬೆಳಗಿ ನದಿಯಲ್ಲಿ ತೇಲಿಬಿಡಲಾಯಿತು. ದೇವಾಲಯದಲ್ಲಿ ಸುದರ್ಶನ ಚಕ್ರಾಳ್ವಾರ್ ಸ್ವಾಮಿಯನ್ನು ದರ್ಶಿಸಿದೆವು. ರಾತ್ರಿಯನ್ನು ಶ್ರೀರಂಗಂನಲ್ಲಿಯೇ ಕಳೆದು ಮರುದಿನ ಬೆಳಗ್ಗೆ ಶ್ರೀರಂಗನಾಥನ ಸನ್ನಿಧಿಯಿಂದ ಹೊರಟು ಕೈವಾರವನ್ನು ಸೇರಿದೆವು. ಶ್ರೀರಂಗಂನ ಧಾರ್ಮಿಕ ಪ್ರವಾಸವು ಭಕ್ತಿಯ ಚೇತೋಹಾರಿಯಾಗಿ ಮನಸ್ಸಿನಲ್ಲಿ ಉಳಿಯಿತು. ●



ಶ್ರೀರಂಗಂ ದೇವಾಲಯದ ವಿಶೇಷ ಕಾರ್ಯನಿರ್ವಹಣಾಧಿಕಾರಿ
ಶ್ರೀಯುತ ಜಯರಾಮನ್ ಅವರಿಗೆ ಧರ್ಮಾಧಿಕಾರಿಗಳಿಂದ ತಾತಯ್ಯನವರ ಭಾವಚಿತ್ರ ಸಮರ್ಪಣೆ



# ವೇದಾರ್ಥ ಅರಿತರೆ ಸರ್ವವೂ ಒಂದೇ

"ವೇದಾರ್ಥವನ್ನು ಸಾಧಿಸಿ ಅರಿತುಕೊಂಡರೆ ಸರ್ವವೂ ಒಂದಾಗಿ ಕಾಣುತ್ತದೆ. ಸರ್ವಸೃಷ್ಟಿಯಲ್ಲೂ ಒಂದೇ ತತ್ತ್ವದ ದರ್ಶನವಾಗುತ್ತದೆ ಎಂದು ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ಅವರು ಅಭಿಪ್ರಾಯಪಟ್ಟರು.

ಕೈವಾರದ ಶ್ರೀಯೋಗಿನಾರೇಯಣ ಮಠದ ವತಿಯಿಂದ ಬೆಂಗಳೂರಿನ ಜಯನಗರದ ರಾಗಿಗುಡ್ಡ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ದೇವಾಲಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಧರ್ಮ ಚಿಂತನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

**ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್‌ರವರ ಅಭಿಪ್ರಾಯ**

ವೇದಾರ್ಥ ಎಂದರೆ ಎಲ್ಲರಲ್ಲೂ ನಿಗೂಢವಾಗಿ ಅಡಗಿರುವ ಪರಬ್ರಹ್ಮತತ್ತ್ವ. ವೇದಾರ್ಥವನ್ನು ಅರಿತ ಜ್ಞಾನಿಯು ಎಲ್ಲರಲ್ಲೂ ಅಡಗಿರುವ ಆತ್ಮನನ್ನು ಸರ್ವಸಮನಾಗಿ ಕಾಣುತ್ತಾನೆ. ವೇದಾರ್ಥವನ್ನು ಅರಿತುಕೊಂಡಿದ್ದಾದರೆ ರಾಗ-ದ್ವೇಷಗಳಿಂದ ಕೂಡಿರುವ ಭೇದ ಮಾಡುವುದಿಲ್ಲ. ಯೋಗಿಗೆ ಎಲ್ಲ ಚರಾಚರ ಜೀವಗಳಲ್ಲೂ ಪರಮಾತ್ಮನ ಅಂಶವೇ ಗೋಚರಿಸುವುದರಿಂದ ಎಲ್ಲರಲ್ಲೂ ಭೇದವೆಣಿಸದೆ ಸಮದರ್ಶಿಯಾಗಿರುವನು. ಪಂಚಭೂತಗಳಿಂದ ನಿರ್ಮಾಣವಾಗಿರುವ ಶರೀರವು ನಶ್ವರ. ಜೀವಾತ್ಮನು ಅಂತ್ಯಕಾಲದಲ್ಲಿ ದೇಹವನ್ನು ತ್ಯಜಿಸಿ ಹೋಗುತ್ತಾನೆ, ಜಡದೇಹವು ಮಣ್ಣುಗೂಡುತ್ತದೆ ಎಂಬ ಸತ್ಯವನ್ನು ಅರಿತುಕೊಂಡ ಜ್ಞಾನಿಯು ಯಾರಲ್ಲಿಯೂ ಭೇದ ಮಾಡದೆ ಎಲ್ಲರಲ್ಲಿಯೂ ಸಮಭಾವವನ್ನು ಕಾಣಬೇಕು. ಇತರರಲ್ಲಿ ಭೇದಭಾವವನ್ನು ಕಲ್ಪಿಸಿಕೊಂಡು, ತಾರತಮ್ಯ, ಮೇಲು-ಕೀಳು, ರಾಗದ್ವೇಷಗಳಿಂದ ವರ್ತಿಸಬಾರದು. ಹುಟ್ಟು ಸಾವುಗಳ ಚಕ್ರದಲ್ಲಿ ಸಿಲುಕದಂತೆ ಪಾರಾಗುವ ಸಾಧನೆಯನ್ನು ಮಾಡಬೇಕು. ಪರಮಾತ್ಮನು ಸರ್ವವ್ಯಾಪಕನಾಗಿರುವುದರಿಂದ ಯಾರಲ್ಲೂ ಭೇದವೆಣಿಸದೆ ಎಲ್ಲರೂ ಒಂದೇ ಎಂಬ ಜ್ಞಾನವನ್ನು ಪಡೆಯುವುದೇ ಅಧ್ಯಾತ್ಮತತ್ತ್ವದ ಸಾರಾಂಶವಾಗಿದೆ" ಎಂದರು.

ದೇವಬ್ರಾಹ್ಮಣನೆಂದರೆ ಯಾರು?

ತಾತಯ್ಯನವರು ಕಲಿಯುಗಕ್ಕೆ ಬಹಳ ಮಹತ್ತ್ವವಾದ ತತ್ತ್ವ ಸಂದೇಶಗಳನ್ನು ನೀಡಿದ್ದಾರೆ. ಅವರ ಚಿಂತನೆಗಳು ಸರ್ವಕಾಲಿಕವಾದವುಗಳು. ಎಂದೆಂದಿಗೂ ತಾತಯ್ಯನವರ ತತ್ತ್ವಬೋಧನೆ ಚಿರನೂತನವಾಗಿ ತೋರುತ್ತದೆ. ತಾತಯ್ಯನವರು ದೇವಬ್ರಾಹ್ಮಣ ಎಂದಿದ್ದಾರೆ. ಹಾಗಾದರೆ ದೇವಬ್ರಾಹ್ಮಣ ಎಂದರೆ ಯಾರು? ಎಂಬ ಪ್ರಶ್ನೆ ನಮಗೆ ಬರುತ್ತದೆ. ದೇವಬ್ರಾಹ್ಮಣರು ಯಾವುದೇ ಒಂದು ಜಾತಿಗೆ, ಪಂಥಕ್ಕೆ ಸೀಮಿತರಾದವರಲ್ಲ. ಯಾವ ಜಾತಿಯವರೇ ಆಗಲಿ, ಪಂಥದವರೇ ಆಗಲೀ ನಿರಂತರವಾಗಿ ಮಾನಸಪೂಜೆಯನ್ನು ಮಾಡುತ್ತಾ ಹುಟ್ಟು ಸಾವನ್ನು ಗೆದ್ದಿರುವ ಸಾಧಕನೇ ದೇವಬ್ರಾಹ್ಮಣ. ದೇವಬ್ರಾಹ್ಮಣನಾಗಬೇಕಾದರೆ ಇರುವ ಮೊದಲ ಅರ್ಹತೆಯೆಂದರೆ ಜ್ಞಾನಿಯಾದ ಗುರುವಿನ ಬಳಿ ಸಂಪೂರ್ಣವಾಗಿ ಅರ್ಪಿಸಿಕೊಂಡು ಶಿಷ್ಯತ್ವವನ್ನು ಸ್ವೀಕರಿಸಿ ಅವರ ಬೋಧನೆಗಳನ್ನು ಅನುಷ್ಠಾನಕ್ಕೆ

ತರುತ್ತಾ ತನ್ನ ಅಂತರಂಗದ ಬೆಳಕನ್ನು ಕಾಣುವವನಾಗಬೇಕು. ತಾತಯ್ಯನವರು ಆತ್ಮಬೋಧಾಮೃತ ಎಂಬ ವಚನಗಳನ್ನು ರಚಿಸಿದ್ದಾರೆ. ಇದರಲ್ಲಿ "ಅಮೃತ" ಎಂದಿದ್ದಾರೆ. ಗುರುವಿನ ಬೋಧನೆ ಅಮೃತವಿದ್ದಂತೆ. ಆತ್ಮಬೋಧಾಮೃತವೆಂದರೆ ಗುರುಗಳು ನಮ್ಮ ನಮ್ಮ ಜೀವಾತ್ಮನಿಗೆ ಮಾಡಿರುವ ಉಪದೇಶ. ಯಾವ ಶಿಷ್ಯನಾದರೆ ಈ ಅಮೃತವನ್ನು ಸವಿಯುತ್ತಾರೋ ಅವರು ದೇವಬ್ರಾಹ್ಮಣನಾಗುತ್ತಾರೆ. ಅವರು ಹುಟ್ಟುಸಾವಿನ ಚಕ್ರದಿಂದ ಮುಕ್ತನಾಗಿ ಉನ್ನತವಾದ ಪದವಿಯನ್ನು ಪಡೆಯುತ್ತಾರೆ.

### ತತ್ತ್ವತ್ರಯಗಳು ಯಾವುವು?

ತಾತಯ್ಯನವರು ತಮ್ಮ ಆತ್ಮಬೋಧಾಮೃತದಲ್ಲಿ ತತ್ತ್ವತ್ರಯವನ್ನು ಬೋಧಿಸಿದ್ದಾರೆ. ಶಿಷ್ಯನನ್ನು ಮುಕ್ತನನ್ನಾಗಿ ಮಾಡಬೇಕೆಂಬುದೇ ಗುರುಗಳ ಬಹುದೊಡ್ಡ ಆಶಯವಾಗಿರುತ್ತದೆ. ಈ ಕಾರಣದಿಂದ ಮುಕ್ತಿಯ ಮಾರ್ಗವನ್ನು ತೋರಿಸುತ್ತಾ ತಾತಯ್ಯನವರು ತತ್ತ್ವತ್ರಯವನ್ನು ಉಪದೇಶಿಸಿದ್ದಾರೆ. ಮೂರು ತತ್ತ್ವಗಳು ಯಾವುವೆಂದರೆ 1. ಸತ್ಯ 2. ಜ್ಞಾನ 3. ಚಿತ್ತಶುದ್ಧಿ.

ಸಂಸಾರಸಾಗರದಲ್ಲಿ ಮುಳುಗಿ, ಆಸೆಗಳ ಬಂಧನದಲ್ಲಿ ಸಿಲುಕಿ, ಪರಮಾತ್ಮನನ್ನು ಮರೆತವನು ಅಜ್ಞಾನಿ. ಅಜ್ಞಾನಿಯಾದವನು ಜ್ಞಾನವಂತನಾಗಬೇಕಾದರೆ ಇರುವುದು ಒಂದೇ ಒಂದು ಮಾರ್ಗ. ಅದು ಗುರುಧ್ಯಾನ. ಎಲ್ಲಿವರೆಗೂ ಅಜ್ಞಾನಿ ಗುರುಧ್ಯಾನವನ್ನು ಮಾಡುವುದಿಲ್ಲವೋ, ಅಲ್ಲಿಯವರೆಗೂ ಅಜ್ಞಾನಿ ಜ್ಞಾನವಂತನಾಗುವುದಿಲ್ಲ. ಇದು ಶತಃಸಿದ್ಧ. ಎಷ್ಟೇ ಆಚಾರವಂತನಾಗಿದ್ದರೂ ಎಷ್ಟೇ ಶಾಸ್ತ್ರವನ್ನು ಓದಿಕೊಂಡಿದ್ದರೂ ಎಷ್ಟೇ ಯಾಗಯಜ್ಞಗಳನ್ನೂ ಮಾಡಿದರೂ ಎಷ್ಟೇ ದಾನಧರ್ಮಗಳನ್ನು ಮಾಡಿದರೂ ಎಷ್ಟೇ ಪುಣ್ಯಕ್ಷೇತ್ರಗಳನ್ನೂ ಪ್ರವಾಸ ಮಾಡಿ ಪೂಜೆಗಳನ್ನು ಮಾಡಿದರೂ ಎಷ್ಟೇ ಪುಣ್ಯಸ್ನಾನಗಳನ್ನೂ ಮಾಡಿದರೂ ವೈರಾಗ್ಯವನ್ನು ಸ್ವೀಕರಿಸಿ ಅರಣ್ಯಗಳಲ್ಲಿ ಓಡಾಡಿದರೂ ನಿಶ್ಚಲವಾದ ಮನಸ್ಸನ್ನು ಪಡೆದು ಜ್ಞಾನವನ್ನು ಪಡೆಯಲು ಸಾಧ್ಯವಿಲ್ಲ. ಜ್ಞಾನವನ್ನು ಪಡೆಯಬೇಕಾದರೆ ಕರ್ಮಗಳು ನಾಶವಾಗಬೇಕು. ಕರ್ಮಗಳು ನಾಶವಾಗದ ಹೊರತು ಜ್ಞಾನಪ್ರಾಪ್ತಿಯಾಗುವುದಿಲ್ಲ. ಎಷ್ಟೋ ವರ್ಷಗಳಾದರೂ ಕೂಡ ಇನ್ನು ಹುಟ್ಟು ಸಾವಿನ ಚಕ್ರದಲ್ಲಿಯೇ ಇರುತ್ತಾನೆ. ಈ ಚಕ್ರದಿಂದ ಮುಕ್ತನಾಗಬೇಕಾದರೆ ಕರ್ಮಗಳು ನಾಶವಾಗಬೇಕು. ಈ ಚಕ್ರವನ್ನು ದಾಟಬೇಕಾದರೆ ಜ್ಞಾನವಂತನಾಗಬೇಕು. ಎಷ್ಟೋ ಪ್ರಾಣಿಗಳಾಗಿ ಹುಟ್ಟು ಬಂದಿದ್ದೇವೋ ಗೊತ್ತಿಲ್ಲ. ಆದರೆ ಜ್ಞಾನವಂತನಾಗಿ ಪರಿಹಾರವನ್ನು ಕಂಡುಕೊಳ್ಳಬೇಕು. ಪರಿಹಾರವನ್ನು ಕಂಡುಕೊಳ್ಳಲು ಚಿಂತನೆ ಅಗತ್ಯ. ಈ ಚಿಂತನೆಯೇ ಸತ್ಯ.

ಗುರುಗಳು ಮಾತ್ರ ಜ್ಞಾನದ ಹಾದಿಯನ್ನು ತೋರಿಸಬಲ್ಲರು. ಗುರುಗಳು ಅನುಭವದಿಂದ ಸತ್ಯವನ್ನು ಕಂಡುಕೊಂಡು ಜ್ಞಾನವನ್ನು ಪಡೆದಿರುತ್ತಾರೆ. ಅವರ ಜ್ಞಾನ ಅಪಾರವಾದುದು. ಅಜ್ಞಾನವನ್ನು ತೆಗೆಯುವಂತಹವರು ಮಾತ್ರ ನಿಜವಾದ ಗುರುಗಳು. ಗುರುಗಳ ಪಾದದಲ್ಲಿ ಶರಣಾಗತರಾದರೆ ಮಾತ್ರ ಜ್ಞಾನವನ್ನು ಪಡೆಯಲು ಸಾಧ್ಯ. ಶ್ರೀರಾಮಚಂದ್ರ ಹಾಗೂ ಶ್ರೀಕೃಷ್ಣ ಪರಮಾತ್ಮ ಇಬ್ಬರೂ ಗುರುಗಳ ಬಳಿ ಶ್ರದ್ಧೆಯಿಂದ ಶರಣಾಗಿದ್ದರು. ಗುರುಗಳ ಸೇವೆಯಿಂದ ಮಾತ್ರ ಅವರ ಅನುಗ್ರಹಕ್ಕೆ ಪಾತ್ರರಾಗಬಹುದು. ಗುರುಗಳ ಅನುಗ್ರಹದಿಂದ ಕರ್ಮಗಳು ನಾಶವಾಗುತ್ತದೆ. ನಿಶ್ಚಲವಾದ ಮನಸ್ಸನ್ನು ನಿರ್ಮಾಣ ಮಾಡುತ್ತಾರೆ. ಕರ್ಮದಲ್ಲಿ ಪಾಪವೂ ಇದೆ, ಪುಣ್ಯವೂ ಇದೆ. ಇವೆರಡೂ ಹೋಗಬೇಕು. ಈ ಕೆಲಸವನ್ನು ಗುರು ಮಾಡುತ್ತಾರೆ. ಕರ್ಮದಲ್ಲಿ ಎರಡು ವಿಧ. ಒಂದು ಕರ್ಮ, ಇನ್ನೊಂದು ಅಕರ್ಮ. ಒಂದು ಬೀಜವನ್ನು ಭೂಮಿಯಲ್ಲಿ ಇಟ್ಟು ನೀರು ಗೊಬ್ಬರ ಹಾಕಿದರೆ ಅದು ಚೆನ್ನಾಗಿ ಬೆಳೆದು ಫಲಕೊಡುತ್ತದೆ. ಮತ್ತೆ ಫಲದಿಂದ ಬೀಜ ಬರುತ್ತದೆ, ಅದು ಮತ್ತೆ ಭೂಮಿಗೆ ಹೋಗುತ್ತದೆ. ಇದು ಕರ್ಮ. ಅಕರ್ಮವೆಂದರೆ ಇದೇ ಬೀಜವನ್ನು ಬೆಂಕಿಯಲ್ಲಿ ಸುಟ್ಟು ಮತ್ತೆ ಭೂಮಿಯಲ್ಲಿ ಹಾಕಿ ಎಷ್ಟೇ ನೀರು, ಗೊಬ್ಬರ ಹಾಕಿದರೂ ಅದು ಮೊಳೆಯುವುದಿಲ್ಲ. ಕಾರಣವೆಂದರೆ ಆ ಬೀಜಕ್ಕೆ ಜೀವವಿಲ್ಲ. ಇದೇ ಮುಕ್ತನಾಗುವ ವಿಧಾನ. ಜ್ಞಾನದ ಬೆಂಕಿಯಲ್ಲಿ ಹಾಕಿ ನಮ್ಮ ಕರ್ಮಗಳನ್ನು ಸುಡುವವರು ಗುರು. ಈ ಕಾರಣದಿಂದ ಜ್ಞಾನವನ್ನು ಪಡೆಯುವಲ್ಲಿ ಗುರುವಿನ ಪಾತ್ರ ಬಹಳ ಮಹತ್ವದ್ದು. ನಮ್ಮೊಳಗೆ 24 ಅವಿದ್ಯೆಗಳಿವೆ. ಅದು ಒಂದೊಂದು ಅವಿದ್ಯೆಗಳು ಸಹ ಒಂದೊಂದು ಆನೆಯಿದ್ದಂತೆ ಇದೆ. ಅವಿದ್ಯೆಗಳು ನಮ್ಮೊಳಗಿದ್ದರೆ ನಾವು ಅಜ್ಞಾನಿಗಳೇ ಆಗಿರುತ್ತೇವೆ.

ಸ್ಥೂಲ ಮತ್ತು ಸೂಕ್ಷ್ಮ ದೇಹ: ಸ್ಥೂಲ ಮತ್ತು ಸೂಕ್ಷ್ಮ ಎಂಬ ಎರಡು ದೇಹಗಳಿವೆ. ನಾವು ಈಗ ಕಾಣುತ್ತಿರುವ ಭೌತಿಕವಾದ ಕಾಯ ಸ್ಥೂಲ ದೇಹ. ಪ್ರಾಣವು ಹೋದ ನಂತರ ಕಾಣುವುದು ಸೂಕ್ಷ್ಮ ದೇಹ. ಕರ್ಮವನ್ನು ಅನುಭವಿಸುವುದು ಸೂಕ್ಷ್ಮ ದೇಹವೇ ಆಗಿದೆ. ಈ ಸ್ಥೂಲ ಮತ್ತು ಸೂಕ್ಷ್ಮವಾದ ದೇಹದಿಂದ ಹೊರಗೆ ಬಂದಾಗ ಮಾತ್ರ ಜ್ಞಾನವಂತನಾಗಲು ಸಾಧ್ಯವಿದೆ. ಜ್ಞಾನವನ್ನು ಪಡೆದು ಕರ್ಮಗಳನ್ನು ನಾಶ ಮಾಡಿಕೊಂಡಾಗ ಮಾತ್ರ ನಿನ್ನ ಜೀವಾತ್ಮನನ್ನು ನೀನು ನೋಡಬಹುದು. ಜೀವಾತ್ಮನು ಎಲ್ಲಿದ್ದಾನೆ. ಜೀವಾತ್ಮನೆಲ್ಲಿದ್ದಾನೆ ಎಂಬ ವಿವರಣೆಯನ್ನು ಯಾರೂ ನೀಡಿಲ್ಲ. ತಾತಯ್ಯನವರು ತಿಳಿಸುತ್ತಿದ್ದಾರೆ, ಜೀವಾತ್ಮನು ಹರಿಶಿನ ಬಣ್ಣದಲ್ಲಿದ್ದಾನೆ, ಅಷ್ಟದಳಗಳಿಂದ ಕೂಡಿದ್ದಾನೆ. ಅಷ್ಟದಳವು ನೀಲಿವರ್ಣದಿಂದ ಕೂಡಿದೆ. ಸ್ವಯಂಪ್ರಕಾಶವಾದ ಬೆಳಕಿದೆ. ಜೀವಾತ್ಮನನ್ನು ಗುರುಗಳು ತೋರಿಸುತ್ತಾ, ಪರಮಾತ್ಮನಿರುವ ಸ್ಥಳವನ್ನು ತೋರಿಸಿ ಅಲ್ಲಿ ಗುರಿಯನ್ನಿಡು ಎಂದು ಅಭಯವನ್ನು ಕೊಟ್ಟು ಪರಮಾತ್ಮನಲ್ಲಿ ಜೀವಾತ್ಮನನ್ನು ಷಡ್ಚಕ್ರಗಳನ್ನು ದಾಟಿಸಿ ಸೇರಿಸುವ ಜವಾಬ್ದಾರಿಯನ್ನು ಗುರುಗಳು ಹೊತ್ತುಕೊಂಡು ಶಿಷ್ಯನು ಮೋಕ್ಷವನ್ನು ಹೊಂದುವಂತೆ ಗುರುಗಳು ನೋಡಿಕೊಳ್ಳುತ್ತಾರೆ. ಇದಕ್ಕೆ ಪ್ರತಿಯಾಗಿ ಗುರು ಗುರುದಕ್ಷಿಣೆಯಾಗಿ ಕೇವಲ ಎಲೆ–ಅಡಿಕೆಯನ್ನು ಮಾತ್ರ ಪಡೆಯುತ್ತಾನೆ.

ಚಿತ್, ಅಚಿತ್, ಈಶ್ವರ: ವಿಶಿಷ್ಟಾದ್ವೈತದ ಪ್ರತಿಪಾದಕರಾದ ಆಚಾರ್ಯ ಶ್ರೀರಾಮಾನುಜಾಚಾರ್ಯರು, ತಾತಯ್ಯನವರು ನೀಡಿದಂತೆ ತತ್ತ್ವತ್ರಯವನ್ನು ನೀಡಿದ್ದಾರೆ. ಅದೇ ಚಿತ್, ಅಚಿತ್, ಈಶ್ವರ (ಪರಮಾತ್ಮ). ಚಿತ್ ಅಂದರೆ ಆತ್ಮ. ಆತ್ಮಕ್ಕೆ ಹುಟ್ಟು ಸಾವಿಲ್ಲ. ಶರೀರಕ್ಕೆ ಸಾವಿದೆಯೇ ಹೊರತು ಆತ್ಮಕ್ಕೆ ಹುಟ್ಟು ಸಾವಿಲ್ಲ. ಆತ್ಮ ಶಾಶ್ವತವಾಗಿರುತ್ತದೆ. ಆತ್ಮವು ಬೆಂಕಿಯಲ್ಲಿ ಸುಡುವುದಿಲ್ಲ, ನೀರಿನಲ್ಲಿ ಮುಳುಗುವುದಿಲ್ಲ, ಗಾಳಿಗೆ ಸಿಕ್ಕಿ ಹೋಗುವುದಿಲ್ಲ. ಈ ಕಾರಣದಿಂದ ಆತ್ಮವು ಶಾಶ್ವತ. ಆತ್ಮದಲ್ಲಿರುವ ಶಕ್ತಿಯ ಬೆಳಕು ಅದರಲ್ಲಿಯೇ ಇರುತ್ತದೆ. ಇದನ್ನು ತೆಗೆದುಹಾಕಲು ಆಗುವುದಿಲ್ಲ. ನಿನ್ನ ವಾಸನೆಗಳ ಫಲವಾಗಿ ಕರ್ಮಗಳು ಬರುತ್ತದೆ. ಈ ಕರ್ಮಗಳು ಆತ್ಮದ ಸುತ್ತಲೂ ಸುತ್ತುತ್ತಿರುತ್ತದೆ. ಕರ್ಮಗಳ ವಾಸನೆಯಿಂದ ನಮ್ಮ ಮುಂದಿನ ಜನ್ಮವು ಕಾರಣೀಭೂತವಾಗುತ್ತದೆ. ಪುಣ್ಯದ ವಾಸನೆ ಬಂದರೆ ಸ್ವರ್ಗಾದಿಭೋಗಗಳನ್ನು ಅನುಭವಿಸಿ ಮತ್ತೆ ಭೂಮಿಗೆ ಬರಬೇಕಾಗುತ್ತದೆ. ಪುಣ್ಯವಿದ್ದರೂ ಮೋಕ್ಷವನ್ನು ಪಡೆಯಲು ಸಾಧ್ಯವಿಲ್ಲ. ಹುಟ್ಟು ಸಾವಿನ ಚಕ್ರದಿಂದ ತಪ್ಪಿಸಿಕೊಳ್ಳಲು ಆಗುವುದಿಲ್ಲ. ಚಿತ್ ಅಂದರೆ ಆತ್ಮದ ಚಿಂತನೆ. ನಮ್ಮ ನಮ್ಮ ಆತ್ಮದ ಚಿಂತನೆಯನ್ನು ನಾವು ಮಾಡಬೇಕು. ಈ ಚಿಂತನೆಯನ್ನು ಬೇರೆಯವರು ಮಾಡಲು ಸಾಧ್ಯವಿಲ್ಲ.



ಸಮಯವನ್ನು ವ್ಯರ್ಥಮಾಡಿ ಕೊನೆಗೆ ಪಶ್ಚಾತ್ತಾಪವನ್ನುಪಟ್ಟರೆ ಪ್ರಯೋಜನವಿಲ್ಲ. ಇದನ್ನೇ ತಾತಯ್ಯನವರು "ಊರಿಕೆ ಯೀ ರೀತಿ ಉಲ್ಲಾಸ ಪಡನೇಲ ಊರಕುಂಡವೇ ನೀವು ಮನಸಾ" ಎಂದಿದ್ದಾರೆ. ಸುಮ್ಮನೆ ಪ್ರಾಪಂಚಿಕತೆಯನ್ನು ಹೊದ್ದುಕೊಂಡು ಆಸೆಯಲ್ಲಿ ಮುಳುಗಿದ್ದರೆ ಪ್ರಯೋಜನವಿಲ್ಲ, ನಿನ್ನನ್ನು ನೀನು ಅರಿತುಕೋ ಎಂದು ಎಚ್ಚರಿಸಿದ್ದಾರೆ. ಸತ್ತ್ವಗುಣ, ರಜೋಗುಣ, ತಮೋಗುಣ ಈ ಮೂರು ಗುಣಗಳಲ್ಲಿಯೇ ಕರ್ಮಗಳು ಓಡಾಡುತ್ತದೆ. ಈ ಎಲ್ಲ ಗುಣಗಳೂ ನಾಶವಾಗಬೇಕು. ಇವೆಲ್ಲವನ್ನು ಜಯಿಸಿರುವವರು ಆಚಾರ್ಯರು, ಗುರುಗಳು. ಜ್ಞಾನವನ್ನು ಅನುಭವದಿಂದ ಪಡೆದಿರುವವರು ಆಚಾರ್ಯರು. ಗುರು ಮತ್ತು ಪರಮಾತ್ಮ ಬೇರೆ ಅಲ್ಲ. ಇಬ್ಬರೂ ಒಂದೇ. ಇದರಲ್ಲಿ ಬೇಧವಿಲ್ಲ. ಗುರುವನ್ನು ಪರಮಾತ್ಮನಾಗಿ ಸ್ವೀಕಾರ ಮಾಡಬೇಕು. ಗುರುವಿನ ಹೃದಯ ಬಹಳ ವಿಶಾಲವಾದುದು. ಯಾರಲ್ಲಿಯೂ ಬೇಧ ಮಾಡುವುದಿಲ್ಲ. ನೀನು ಗುರುವನ್ನು ನಂಬಿದರೆ, ನಿನ್ನನ್ನು ಪರಮಾತ್ಮನನ್ನು ಸೇರಿಸುವ ಹೊಣೆಯನ್ನು ಗುರುವು ಹೊತ್ತುಕೊಳ್ಳುತ್ತಾನೆ. ಬ್ರಹ್ಮನು ಬರೆದಿರುವ ಹಣೆಬರಹವನ್ನು ಬದಲಾಯಿಸುವ ಶಕ್ತಿ ಇರುವುದು ಕೇವಲ ಗುರುವಿಗೆ ಮಾತ್ರ.

ಗುರುಗಳಿಗೆ ಆತ್ಮಪೂಜೆ ಬಹಳ ಶ್ರೇಷ್ಠವಾದುದು. ದೃಷ್ಟಿ ಮತ್ತು ಮನಸ್ಸನ್ನು ನಿಶ್ಚಲವಾಗಿ ಗುರುವಿನ ಪಾದದಲ್ಲಿ ನಿಲ್ಲಿಸಿದಾಗ, ಗುರುವಿನ ಸ್ವರೂಪ ಕಣ್ಣಮುಂದೆ ಬರುತ್ತದೆ. ಇದು ಸತ್ಯವಾದುದು. ಗುರುವಿನ ರೂಪ ಸಿಕ್ಕರೆ ಅನುಗ್ರಹವಾದಂತೆಯೇ ಸರಿ. ಮಸ್ತಕದಿಂದ ಪಾದಗಳವರೆಗೂ ಸಪ್ತ ನದಿಗಳ ನೀರನ್ನು ಮಾನಸಿಕವಾಗಿ ಅರ್ಪಿಸಿ, ಸುಗಂಧ ಪರಿಮಳ ದ್ರವ್ಯಗಳಿಂದ ಮಾನಸಿಕವಾಗಿ ಪೂಜಿಸಬೇಕು. ಇದು ಪ್ರತಿನಿತ್ಯ ಸದಾಕಾಲ ಈ ಮಾನಸಪೂಜೆಯನ್ನು ಮಾಡುವ ಶಿಷ್ಯನಿಗೆ ಗುರುವು ಸಿಗುತ್ತಾನೆ.

ಈ ಎಲ್ಲ ಹಂತಗಳನ್ನು ದಾಟಿಸುವವನು ಗುರು ಮಾತ್ರ. ಇದೇ ಆತ್ಮಚಿಂತನೆ. ತಾತಯ್ಯನವರೇ ನಮ್ಮನ್ನು ಈ ಭವಬಂಧನದಿಂದ ಪಾರುಮಾಡಬೇಕು ಎಂದು ಹೇಳುತ್ತಾ ತಾತಯ್ಯನವರ ಹಲವಾರು ಕೀರ್ತನೆಗಳ ಸಹಿತ ವಿವರಣೆಯನ್ನು ನೀಡುತ್ತಾ, ಆತ್ಮಪೂಜೆಯನ್ನು ಹೇಳುತ್ತಾ ಧರ್ಮಾಧಿಕಾರಿಗಳು ಧರ್ಮ ಚಿಂತನೆಯ ಸಂದೇಶವನ್ನು ಸಭೆಯಲ್ಲಿದ್ದ ಭಕ್ತರಿಗೆ ಮನವರಿಕೆ ಮಾಡಿಕೊಟ್ಟರು.

# ತಾತಯ್ಯನವರು ರಚಿಸಿರುವ ಅಯೋಧ್ಯಾ ದ್ವಿಪದವನ್ನು ವಿವರಿಸಿದ ಧರ್ಮಾಧಿಕಾರಿಗಳು

"ತಾತಯ್ಯನವರು ಯೋಗಿಗಳು. ಅವರು ಯೋಗನಿದ್ರೆಯಲ್ಲಿ ಕಂಡಿರುವ ಕನಸಿನಲ್ಲಿ ರಾಮರಾಜ್ಯವನ್ನು ಅಯೋಧ್ಯ ದ್ವಿಪದವಾಗಿ ರಚಿಸಿದ್ದಾರೆ. ಅಯೋಧ್ಯ ದ್ವಿಪದದ ವರ್ಣನೆಯನ್ನು ತಾತಯ್ಯನವರು ಈ ರೀತಿಯಾಗಿ ಮಾಡಿದ್ದಾರೆ" ಎಂದು ಧರ್ಮಾಧಿಕಾರಿ ಸಭೆಗೆ ವಿವರಿಸಿದರು.

ಲೋಕ ಪ್ರಸಿದ್ಧವಾದ ಮಹಾಮೇರು ಪರ್ವತದಿಂದ ಮುಂದಕ್ಕೆ ಒಂದು ನೂರು ಯೋಜನಗಳು ಸಾಗಿದರೆ ಸಿಗುವ ಸರ್ವಶ್ರೇಷ್ಠವಾದ ಪಟ್ಟಣವೇ ಅಯೋಧ್ಯಾಪುರ. ಈ ಪಟ್ಟಣ ಬಹಳ ವಿಶಾಲವಾಗಿದೆ. ಅಲ್ಲಿ ಬಂಗಾರದ ಉಪ್ಪರಿಗೆಗಳಿವೆ, ಶೃಂಗಾರದಿಂದ ಕೂಡಿದ ದೇವಾಲಯಗಳು ಇದೆ. ಅಲ್ಲಿರುವ ಪುರುಷರೆಲ್ಲರೂ ಸರ್ವಗುಣಸಂಪನ್ನರಾಗಿ ದೇವಮಾನವರಾಗಿದ್ದಾರೆ. ಸ್ತ್ರೀಯರೆಲ್ಲರೂ ತೇಜಸ್ಸಿನ ಸೌಂದರ್ಯದಿಂದ ಕೂಡಿರುವ ಸ್ತ್ರೀರತ್ನಗಳು. ಎಲ್ಲೆಲ್ಲೂ ಕಲಾಕೇಂದ್ರಗಳು. ಜನರು ಹರ್ಷದ, ಸಂತೋಷದ ಬದುಕನ್ನು ನಡೆಸುತ್ತಿರುತ್ತಾರೆ. ಜಲಾತಟಾಕಗಳಲ್ಲಿ ನೀರು ಎಂದಿಗೂ ಇಂಗದೆ ಸಮೃದ್ಧವಾಗಿದೆ. ಅಯೋಧ್ಯ ಪಟ್ಟಣದಲ್ಲಿ ತಿಂಗಳಿಗೆ ಮೂರು ಮಳೆಗಳಾಗುವುದರಿಂದ ಬೆಳೆಗಳು ತಾನೇ ತಾನಾಗಿ ಬೆಳೆದು ಫಸಲನ್ನು ಕೊಡುತ್ತದೆ. ಅಲ್ಲಿ ದುಡಿದು ವ್ಯವಸಾಯ ಮಾಡುವವರೇ ಇಲ್ಲ. ಅಲ್ಲಿನ ಜನರಿಗೆ ಲಾಭದ ದುರಾಸೆ ಇಲ್ಲವಾದುದರಿಂದ ವ್ಯಾಪಾರಕ್ಕಾಗಿ ದುಡಿಯುವ ವರ್ತಕರು ಯಾರೂ ಇಲ್ಲ. ಅರಣ್ಯಗಳಲ್ಲಿ ಎತ್ತರವಾಗಿ ಬೆಳೆದ ಮರಗಳ ತುದಿಯ ಕೊಂಬೆಗಳಲ್ಲಿ ದಿವ್ಯವಾದ ಪಕ್ಷಿಗಳು ಯಾವಾಗಲೂ ಸಂತೋಷವಾಗಿ ಸಂಚರಿಸುತ್ತಿರುವುವು. ಪ್ರಜೆಗಳಲ್ಲಿ ವ್ಯಾಧಿಗಳ ಬಾಧೆಯಿಲ್ಲ. ತಾಂತ್ರಿಕವಾಗಿ ಮಾಡುವ ಪೂಜೆಗಳು ಇಲ್ಲ. ಅಯೋಧ್ಯ ಪಟ್ಟಣದಲ್ಲಿ ಮುಖ್ಯವಾಗಿ ಜಾತಿಭೇದವೇ ಇಲ್ಲ. ಅಲ್ಲಿ ಇರುವುದು ಒಂದೇ ಜಾತಿ ಮಾನವಜಾತಿ. ಅಯೋಧ್ಯವನ್ನು ಸೂರ್ಯವಂಶದ ಅರಸರು ಆಳುತ್ತಾರೆ. ಅವರು ಸುಜ್ಞಾನಪರರು. ಅಯೋಧ್ಯ ಪಟ್ಟದ ಮನೆ ಮನೆಗಳಲ್ಲಿ ಕೇಳಿ ಬರುವ ಒಂದೇ ಒಂದೇ ಮಾತು ಎಂದರೆ ಅದು ಶ್ರೀರಾಮಚಂದ್ರನನ್ನು ಹಾಡಿ ಹೊಗಳುವ ಮಾತು. ಅಲ್ಲಿರುವ ಯಾವ ಮನೆಯಲ್ಲಿಯೂ ವಸ್ತು ಸಾಮಗ್ರಿಗಳಿಗೆ ಕೊರತೆಯಿಲ್ಲ. ಎಲ್ಲ ಮನೆಗಳೂ ಅಕ್ಷಯಪಾತ್ರೆಯಾಗಿವೆ. ಹಸಿವಾದರೆ ತಿನ್ನಲು ಪಕ್ವಾನ್ನಗಳಿವೆ. ದಿವ್ಯವಾದ ಆಭರಣಗಳಿವೆ. ಆ ಪಟ್ಟಣದಲ್ಲಿ ನಿತ್ಯೋತ್ಸವಗಳು ನಡೆಯುತ್ತಿರುತ್ತದೆ. ಯಾವಾಗಲೂ ಹಬ್ಬಗಳು ನಡೆಯುತ್ತಿರುತ್ತದೆ. ಪ್ರಜೆಗಳು ಸಂಭ್ರಮದಿಂದ ಇರುತ್ತಾರೆ. ಆಶ್ರಿತದಯಾಪರನಾದ, ಕರುಣೆಯ ಕಟಾಕ್ಷವುಳ್ಳವನಾದ, ಕೌಸಲ್ಯಪುತ್ರನಾದ ಶ್ರೀರಾಮಚಂದ್ರನು ಅಯೋಧ್ಯಾಪುರದಲ್ಲಿ ಪಟ್ಟಾಭಿಷಿಕ್ತನಾದ ರಾಜನಾಗಿ ಆಳುತ್ತಿರುವನು. ಪರಮ ದಯಾಕರನಾದ ಗುರುಕುಲಪಟ್ಟಭದ್ರನೇ, ನಾನು ಈ ರೀತಿಯಾಗಿ ಕನಸು ಕಂಡೆನು ಎಂದು ತಾತಯ್ಯನವರು ಅಯೋಧ್ಯ ದ್ವಿಪದಲ್ಲಿ ತಿಳಿಸಿದ್ದಾರೆ" ಎಂದು ಧರ್ಮಾಧಿಕಾರಿ ಅಯೋಧ್ಯ ದ್ವಿಪದವನ್ನು ಸಭೆಗೆ ಸವಿಸ್ತಾರವಾಗಿ ತಿಳಿಸಿದರು.



# ಧರ್ಮಕ್ಕಾಗಿ ಅಳಿಲುಸೇವೆ

## ಡಾ.ಬಾಬುಕೃಷ್ಣಮೂರ್ತಿ

ಧರ್ಮ ಚಿಂತನೆ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಆಧ್ಯಾತ್ಮಿಕ ಚಿಂತಕ ಹಾಗೂ ಮಲ್ಲಾರ ಮಾಸಪತ್ರಿಕೆಯ ನಿರ್ವಾಹಕ ಸಂಪಾದಕರಾದ ಡಾ. ಬಾಬುಕೃಷ್ಣಮೂರ್ತಿ ಅವರು ಮಾತನಾಡಿ, "ಧರ್ಮಕ್ಕಾಗಿ ಸಲ್ಲಿಸುವ ಅಳಿಲು ಸೇವೆಯೇ ಈ ಧರ್ಮ ಚಿಂತನೆ ಕಾರ್ಯಕ್ರಮ. ಶ್ರೀರಾಮಚಂದ್ರ ಸಮುದ್ರದಲ್ಲಿ ಲಂಕೆಗೆ ಹೋಗಲು ದೊಡ್ಡ ಸೇತುವೆಯನ್ನು ನಿರ್ಮಿಸಿದ. ಅದು ರಾಮಸೇತುವಾಯಿತು. ಆ ಸೇತುವೆಯನ್ನು ನಿರ್ಮಿಸಲು ಹನುಮಂತ, ಅಂಗದ, ನಳ ಮುಂತಾದವರು ದೊಡ್ಡ ದೊಡ್ಡ ಬಂಡೆಗಳನ್ನು ತಂದು ಹಾಕುತ್ತಿದ್ದಾರೆ. ಆದರೆ ಅಳಿಲು ಮರಳಿನಲ್ಲಿ ಹೊರಳಾಡಿ ಮೈಗೆ ಮರಳನ್ನು ಮೆತ್ತಿಕೊಂಡು ಹೋಗಿ ಬಂಡೆಗಳ ಮಧ್ಯಭಾಗದಲ್ಲಿ ಒದರುತ್ತಿತ್ತಂತೆ. ಇದೇ ಅಳಿಲು ಸೇವೆ. ಧರ್ಮಾಧಿಕಾರಿಗಳಿಗೆ ಸಮಾಜದ ಬಗ್ಗೆ ಇರುವ ಕಳಕಳಿಯನ್ನು ಧರ್ಮ ಚಿಂತನೆ ತೋರುತ್ತದೆ. ಸಮಾಜ ಹಾಳಾಗಬಾರದು, ಸಮಾಜ ಯಾವ ದಿಕ್ಕಿನಲ್ಲಿ ಸಾಗುತ್ತಿದೆ. ಸಮಾಜಕ್ಕೆ ಒಂದು ರೂಪುರೇಷೆಯನ್ನು ಹಾಕಿಕೊಡಬೇಕು ಎನ್ನುವ ಏಕೈಕ ಉದ್ದೇಶದಿಂದ ಸರ್ವರಿಗೂ ಅನುಕೂಲವಾಗುವಂತಹ ಈ ಧರ್ಮ ಚಿಂತನೆ ಕಾರ್ಯಕ್ರಮವನ್ನು ಶ್ರೀ ಯೋಗಿನಾರೇಯಣ ಮಠದ ವತಿಯಿಂದ ಧರ್ಮಾಧಿಕಾರಿಗಳ ನೇತೃತ್ವದಲ್ಲಿ ಮಾಡಲಾಗುತ್ತಿದೆ" ಎಂದರು.

"ಆತ್ಮಜ್ಞಾನ, ಆತ್ಮಚಿಂತನೆ ಪಡೆಯಲು ಬಹಳ ಮುಖ್ಯವಾದುದು ಗುರುವಿನ ಪಾದತಳದಲ್ಲಿ ಸರ್ವಸಮರ್ಪಣೆಯನ್ನು ಮಾಡಿಕೊಳ್ಳಬೇಕು. ತಾವರೆ ಎಲೆಯ ಮೇಲಿರುವ ನೀರಿನ ಹನಿಯಂತೆ ಪ್ರಪಂಚದಲ್ಲಿ ಮಾನವರು ಅಂಟು ಅಂಟದಂತೆ ವ್ಯವಹರಿಸಬೇಕು. ನಿರಂತರವಾಗಿ ಭಗವಂತನ ಚಿಂತನೆ ನಡೆಸಬೇಕು. ಯಾವ ಧರ್ಮದಲ್ಲಿಯೂ ಮೋಕ್ಷದ ಪರಿಕಲ್ಪನೆ ಇಲ್ಲ. ಆದರೆ ಹಿಂದೂ ಸಂಸ್ಕೃತಿಯಲ್ಲಿ ಚತುರ್ವಿಧ ಪುರುಷಾರ್ಥಗಳಲ್ಲಿ ಧರ್ಮ, ಅರ್ಥ, ಕಾಮದ ಜೊತೆಗೆ ಮೋಕ್ಷವನ್ನು ನೀಡಿದ್ದಾರೆ. ಮಾನವ ಜನ್ಮದ ಗುರಿ ಮೋಕ್ಷ ಸಂಪಾದನೆ. ಗುರು ಪರಂಪರೆಯಿಂದ ಮೋಕ್ಷದ ದಾರಿಯನ್ನು ತೋರಲಾಯಿತು.

ತಾತಯ್ಯನವರು ಆತ್ಮಬೋಧಾಮೃತವನ್ನು ಅತ್ಯಂತ ಸರಳವಾಗಿ ಜಗತ್ತಿಗೆ ನೀಡಿದ್ದಾರೆ. ಗುರು ಕೈ ಹಿಡಿಯದಿದ್ದರೆ ಮೋಕ್ಷ ಸಿಗುವುದಿಲ್ಲ. ತಾತಯ್ಯನವರು ಋಷಿಯಾಗಿದ್ದಾರೆ. ಋಷಿಯಲ್ಲದವರು ಕಾವ್ಯಗಳನ್ನು ರಚಿಸಲಾರರು. ತಾತಯ್ಯನವರು ಹಲವಾರು ಕೀರ್ತನೆ, ಶತಕಗಳನ್ನು ರಚಿಸಿದ್ದಾರೆ. ತಾತಯ್ಯನವರು ಇಷ್ಟೆಲ್ಲ ರಚಿಸಬೇಕಾದರೆ ಗುರುಗಳ ಕೃಪೆಯಲ್ಲದೆ ಮತ್ತೇನೂ ಅಲ್ಲ. ದೈವಭಕ್ತಿಯ ಪರಾಕಾಷ್ಠೆಯನ್ನು ತಾತಯ್ಯನವರು ಜೀವನದ ಹಲವಾರು ಘಟ್ಟಗಳಲ್ಲಿ ನೋಡಬಹುದಾಗಿದೆ. ಸಂಸಾರದಲ್ಲಿದ್ದುಕೊಂಡು ಮೋಕ್ಷವನ್ನು ಸಾಧಿಸಿದ ಹಲವಾರು ಸಂತರಿದ್ದಾರೆ. ಕೈವಾರ ಶ್ರೀ ಯೋಗಿನಾರೇಯಣ ಮಠವು ಹಲವಾರು ಧಾರ್ಮಿಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಧರ್ಮ ಜಾಗೃತಿಯನ್ನು ಮೂಡಿಸುತ್ತಿದೆ" ಎಂದರು.

ಕಾರ್ಯಕ್ರಮಕ್ಕೂ ಮೊದಲು ಶ್ರೀ ಆಂಜನೇಯಸ್ವಾಮಿಗೆ ವಿಶೇಷ ಪೂಜೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಶ್ರೀಯೋಗಿನಾರೇಯಣ ಸಂಕೀರ್ತನಾ ಯೋಜನೆ ಸಂಚಾಲಕರಾದ ಶ್ರೀ ವಾನರಾಶಿ ಬಾಲಕೃಷ್ಣ ಭಾಗವತರ್ ಪ್ರಾರ್ಥಿಸಿದರು. ರಾಗಿಗುಡ್ಡ ದೇವಾಲಯದ ಪದಾಧಿಕಾರಿಗಳು ಹಾಗೂ ಭಕ್ತರು ಉಪಸ್ಥಿತರಿದ್ದರು.


**ಶ್ರೀಯೋಗಿನಾರೇಯಣ ಮಠ,**
**ಶ್ರೀಕ್ಷೇತ್ರ ಕೈವಾರ**

**ಈ ತಿಂಗಳ ಧರ್ಮ ಚಿಂತನೆ ಕಾರ್ಯಕ್ರಮ**

ಶೇಷಾದ್ರಿಪುರಂ ಪ್ರಥಮ ದರ್ಜೆ ಪದವಿ ಕಾಲೇಜು,
ಆಡಿಟೋರಿಯಂ, ಯಲಹಂಕ,
ಬೆಂಗಳೂರು - 560 064.

ದಿನಾಂಕ 14 ಡಿಸೆಂಬರ್ 2019
ಶನಿವಾರ ಸಂಜೆ 5.30 ಗಂಟೆಗೆ

ಸರ್ವರಿಗೂ ಆದರದ ಸುಸ್ವಾಗತ

# ಭೀಮಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ

# ಲಕ್ಷ ದೀಪೋತ್ಸವ



**ಕೈ**ವಾರದ ಶ್ರೀ ಭೀಮಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ಕಾರ್ತಿಕಮಾಸದ ಹುಣ್ಣಿಮೆಯಂದು ಲಕ್ಷದೀಪೋತ್ಸವ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳನ್ನು ಹಮ್ಮಿಕೊಳ್ಳಲಾಗಿತ್ತು. ಭಕ್ತರು ದೀಪಗಳನ್ನು ಬೆಳಗಿ ಸಂಭ್ರಮಿಸಿದರು.

ಬೆಳಗಿನಿಂದಲೇ ಭಕ್ತಾದಿಗಳು ದೂರದ ಊರುಗಳಿಂದ ಆಗಮಿಸಿ ಪೂಜಾಯಲ್ಲಿ ಭಾಗವಹಿಸಿ ಹಣ್ಣು ಕಾಯಿ ಮಾಡಿಸುವ ದೃಶ್ಯ ಸಾಮಾನ್ಯವಾಗಿತ್ತು. ಕಾರ್ತೀಕ ಹುಣ್ಣಿಮೆಯಂದು ಭೀಮಲಿಂಗಶ್ವರ ಲಿಂಗಕ್ಕೆ ಮಹನ್ಯಾಸಪೂರ್ವಕ ರುದ್ರಾಭಿಷೇಕವನ್ನು ಅರ್ಪಿಸಲಾಯಿತು. ಪಾರ್ವತೀ ಅಮ್ಮನವರಿಗೆ ವಿಶೇಷ ಅಭಿಷೇಕ, ಸಹಸ್ರನಾಮಾರ್ಚನೆಯನ್ನು ಮಾಡಲಾಯಿತು. ರುದ್ರಹೋಮವನ್ನು ಏರ್ಪಡಿಸಲಾಗಿತ್ತು. ದೀಪೋತ್ಸವದಲ್ಲಿ ಕೈವಾರ ಕ್ಷೇತ್ರದ ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ದಂಪತಿ ಭಾಗವಹಿಸಿದ್ದರು.

● ವರದಿ: ಟಿ.ಎಲ್. ಆನಂದ್, ತಳಗವಾರ

ಶ್ರೀ ಭೀಮಲಿಂಗೇಶ್ವರಸ್ವಾಮಿ ದೇವಾಲಯದಲ್ಲಿ ಕಾರ್ತಿಕಮಾಸದ ಹುಣ್ಣಿಮೆಯಂದು ಲಕ್ಷದೀಪೋತ್ಸವ ಪ್ರಯುಕ್ತ ವಿಶೇಷ ಪೂಜಾ ಕೈಂಕರ್ಯಗಳಲ್ಲಿ ಪಾಲ್ಗೊಂಡಿರುವ ಭಕ್ತಸಮೂಹ.





## ಆಲಂಬಗಿರಿಯಲ್ಲಿ ಹುಣ್ಣಿಮೆ ಗಿರಿಪ್ರದಕ್ಷಿಣೆ

ತಾಲ್ಲೂಕಿನ ಪುರಾಣ ಪ್ರಸಿದ್ಧ ಆಲಂಬಗಿರಿ ಲಕ್ಷ್ಮೀವೆಂಕಟರಮಣಸ್ವಾಮಿ ದೇವಾಲಯದಿಂದ ಸುಮಾರು 1 ಕಿ.ಮೀ ದೂರದಲ್ಲಿರುವ ಆಲಂಬಗಿರಿ ಬೆಟ್ಟದ ಪ್ರಕೃತಿಯ ತೊಪ್ಪಲಿನಲ್ಲಿ ಕಾರ್ತಿಕಮಾಸದ ಹುಣ್ಣಿಮೆ ಪ್ರಯುಕ್ತ ಸಂಕೀರ್ತನಾ ಗಿರಿಪ್ರದಕ್ಷಿಣಾ ಪಾದಯಾತ್ರೆ ಕಾರ್ಯಕ್ರಮ ನಡೆಯಿತು. ಧರ್ಮಾಧಿಕಾರಿ ಡಾ. ಎಂ.ಆರ್. ಜಯರಾಮ್ ದಂಪತಿ ಭಾಗವಹಿಸಿದ್ದರು.


- ಬಂದಿದೆ ಬಂದಿದೆ 2020ರ ಮಲ್ಲಾರ ಕ್ಯಾಲೆಂಡರ್!
- ಸಹಸ್ರಾರು ಜನರ ಮೆಚ್ಚುಗೆ ಗಳಿಸಿರುವ ಮಲ್ಲಾರ ಕ್ಯಾಲೆಂಡರ್!!
- ಎಲ್ಲ ಭಾರತೀಯ ಹಬ್ಬಗಳು ಹಾಗೂ ವಿಶೇಷವಾಗಿ ಕೈವಾರ ಶ್ರೀಕ್ಷೇತ್ರದ ಕಾರ್ಯಕ್ರಮಗಳ ಮಾಹಿತಿ ನೀಡುವ ಮಲ್ಲಾರ ಕ್ಯಾಲೆಂಡರ್!!!
- ಮಾರಾಟಕ್ಕೆ ದೊರೆಯುತ್ತಿದೆ!
- ಕನಿಷ್ಠ 100 ಕ್ಯಾಲೆಂಡರ್‌ಗಳನ್ನು ಕೊಳ್ಳುವ ಭಜನೆ ಮಂಡಲಿಗಳು, ಸಂಸ್ಥೆಗಳು, ಸಮಾಜಗಳು ಹಾಗೂ ಸಗಟು ವ್ಯಾಪಾರಿಗಳಿಗೆ ಶೇ. 25 ಕಮೀಷನ್.
- ಬಿಡಿ ಪ್ರತಿ ರೂ. 20/- ಮಾತ್ರ!

ವಿಳಂಬ ಮಾಡಿ ನಿರಾಶೆ ಆಗದಿರಿ..

ಇಂದೇ ನಿಮ್ಮ ಬೇಡಿಕೆಗಳನ್ನು ಕೆಳಕಂಡ ವಿಳಾಸಕ್ಕೆ ತಲಪಿಸಿ.

080-4050 2965/ 72040 95848

ಮೊ: 94480 85975 / 9916854885

ಕೈವಾರ: 08154-239525



ಮಹಾಭಾರತದಲ್ಲಿ ಅನೇಕ ನೀತಿಬೋಧಕ ಕಥೆಗಳು ಇವೆ. ಬೆಂಗಳೂರು ಗಿರಿನಗರದ ಮಹಾಭಾರತ ಸಂಶೋಧನ ಪ್ರತಿಷ್ಠಾನ ಎಂಬ ಸಂಸ್ಥೆ ಪ್ರಕಟಿಸಿರುವ 'ಮಹಾಭಾರತದ ನೂರು ಕಥೆಗಳು' ಪುಸ್ತಕದಿಂದ ಈ ಉಪಾಖ್ಯಾನವನ್ನು ಆಯ್ಕೆ ಮಾಡಿ ಕೃತಜ್ಞತಾಪೂರ್ವಕ ಪ್ರಕಟಿಸಲಾಗುತ್ತಿದೆ. (ಸಂಪಾದಕರು: ಡಾ. ಎಸ್.ಆರ್. ಲೀಲಾ, ಸಂಗ್ರಾಹಕರು: ಡಾ. ಟಿ. ರಮಾಮಣಿ ಮತ್ತು ವಿದ್ವಾನ್ ಸಿ.ಜಿ. ವಿಜಯಸಿಂಹ)



ಭರದ್ವಾಜನೆಂಬ ಋಷಿಗೆ ಬಹಳ ಸುಂದರಿಯಾದ ಮಗಳಿದ್ದಳು. ಅವಳ ಹೆಸರು ಸೃಚಾವತೀ. ಅವಳು ಇಂದ್ರನನ್ನು ಮೋಹಿಸಿ, ಅವನನ್ನೇ ಪತಿಯಾಗಿ ಪಡೆಯಲು ಘೋರವಾದ ತಪಸ್ಸಿನಲ್ಲಿ ತೊಡಗಿದಳು. ಬಹಳ ವರ್ಷಗಳು ಕಳೆದರೂ ತಪಸ್ಸು ಫಲಿಸಲಿಲ್ಲ. ಇನ್ನೂ ಉಗ್ರವಾದ ತಪಸ್ಸಿನಲ್ಲಿ ತನ್ನನ್ನು ತೊಡಗಿಸಿಕೊಂಡಾಗ ಇಂದ್ರನು ಸೃಚಾವತಿಯಲ್ಲಿ ಪ್ರೀತನಾದ. ವೇಷ ಮರೆಸಿ ಬ್ರಾಹ್ಮಣನಾಗಿ ಅವಳ ಆಶ್ರಮಕ್ಕೆ ಬಂದ.

# ಮಹಾಭಕ್ತೆ ಸೃಚಾವತೀ

ಅತಿಥಿವೇಷದಲ್ಲಿ ಬಂದ ಇಂದ್ರನನ್ನು ಸೃಚಾವತಿಯು ನಿಷ್ಕಪಟಭಾವದಿಂದ ಸೇವಿಸಿದಳು. ಪ್ರಾಥಮಿಕೋಪಚಾರಗಳೆಲ್ಲ ಆದ ಮೇಲೆ ವಿನಯದಿಂದ ಕೇಳಿದಳು, "ಮುನಿಶ್ರೇಷ್ಠರೇ, ನಿಮ್ಮ ಯಾವುದೇ ಆದೇಶವನ್ನು ಶಿರಸಾವಹಿಸಿ ಮಾಡಲು ನಾನು ಸಿದ್ಧಳಿದ್ದೇನೆ. ಆದರೆ ನಿಮ್ಮನ್ನು ಮದುವೆಯಾಗುವಂತೆ ಕೇಳುವುದನ್ನು ಬಿಟ್ಟು. ನನ್ನ ಮನಸ್ಸನ್ನು ಇಂದ್ರನಿಗೆ ಒಪ್ಪಿಸಿದ್ದೇನೆ. ಅವನಿಗಾಗಿಯೇ ಈ ಎಲ್ಲ ವ್ರತ-ತಪಸ್ಸುಗಳು. ಹೀಗಾಗಿ ನನ್ನಿಂದೇನಾಗಬೇಕು?"

ವೇಷಧಾರಿ ಇಂದ್ರ ಹೇಳಿದ, "ಕಲ್ಯಾಣಿ! ನಿನ್ನ ವ್ರತಗಳೆಲ್ಲ ಸಫಲವಾಗುವುವು. ನಿನ್ನ ತಪಸ್ಸಿಗೆ ಇಂದ್ರ ಖಂಡಿತ ಮೆಚ್ಚುತ್ತಾನೆ. ಇಕೋ, ಐದು ಬೋರೆ ಹಣ್ಣುಗಳು. ಇವುಗಳನ್ನು ಬೇಯಿಸು. ನಾನಿಲ್ಲೇ ತಪಸ್ಸು ಮಾಡುತ್ತಿರುತ್ತೇನೆ."

ಅವನಿಂದ ಬೋರೆ ಹಣ್ಣುಗಳನ್ನು ಸ್ವೀಕರಿಸಿದ ಸೃಚಾವತಿ ಅವುಗಳನ್ನು ಬೇಯಲಿಟ್ಟಳು. ಇಂದ್ರ ಅವುಗಳನ್ನು ಬೇಯದ ಬೋರೆಗಳನ್ನಾಗಿ ಮಾಡಿದ್ದ. ಸೃಚಾವತಿಯು ಅವುಗಳನ್ನು ಬೇಯಿಸಲು ಎಲ್ಲ ಪ್ರಯತ್ನಗಳನ್ನೂ ಮಾಡಿದಳು. ಒಂದೂ ಸಫಲವಾಗಲಿಲ್ಲ. ಆಶ್ರಮದಲ್ಲಿದ್ದ ಕಟ್ಟಿಗೆಯೆಲ್ಲ ಮುಗಿಯಿತು. ಬೋರೆಗಳು ಬೇಯಲಿಲ್ಲ. ಕಟ್ಟಿಗೆ ಮುಗಿದುದನ್ನು ನೋಡಿ ಆಕೆ ನಿರಾಶಳಾಗಲಿಲ್ಲ. ತನ್ನ ಕಾಲುಗಳನ್ನೇ ಕಟ್ಟಿಗೆಯಾಗಿಸಿದಳು. ಋಷಿಗೆ ಪ್ರಿಯವಾದುದನ್ನು ಮಾಡಬೇಕೆಂದು ತನ್ನ ಬಗೆಗೇ ಆಕೆ ಚಿಂತಿಸಲಿಲ್ಲ. ವೈಮನಸ್ಯ, ಬೇಸರ ಯಾವುದೂ ಇರಲಿಲ್ಲ. ಅವಳ ಕಾಲುಗಳು ಸುಟ್ಟರೂ ಬೋರೆಗಳು ಬೇಯಲಿಲ್ಲ.

ಕಡೆಗೆ ಇಂದ್ರ ಅವಳ ತ್ಯಾಗ, ಸಹನೆ, ಧೈರ್ಯಗಳಿಂದ ಪ್ರೀತನಾಗಿ ಪ್ರತ್ಯಕ್ಷನಾದ. ಸೃಚಾವತಿಗೆ ಹೇಳಿದ, "ಮಂಗಳಾಂಗಿ! ನಿನ್ನ ಗುಣಗಳಿಂದ ನಾನು ಪ್ರೀತನಾಗಿದ್ದೇನೆ. ನಿನ್ನ ಅಭೀಷ್ಟವು ನೆರವೇರಲಿದೆ. ನಿನ್ನ ಮಾನುಷ ಶರೀರವನ್ನು ಬಿಟ್ಟೊಡನೆ ನನ್ನೊಡನೆ ವಾಸಿಸಲು ಅರ್ಹತೆ ಪಡೆಯುವೆ. ಈ ಜಾಗವು ನಿನ್ನ ಮಂಗಳ ಗುಣಗಳನ್ನು ಮುಂದಿನವರಿಗೂ ನೆನಪು ಮಾಡಿಕೊಡುವಂತೆ ಪ್ರಸಿದ್ಧವಾಗಲಿದೆ."

ಸೃಚಾವತಿಗೆ ಸಂತೋಷವಾಯಿತು. ಕೆಲಕಾಲಾನಂತರ ಅವಳು ಇಂದ್ರನನ್ನು ಕೂಡಿಕೊಂಡಳು. ●


# ‘ನನ್ನ ಕೆಲಸ ಕಳೆ ಕಟ್ಟುವುದು ಹೇಗೆ?’

■ ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ

ಬಿ. ರಾಮಕೃಷ್ಣರಾವ್ ಅವರು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಮೊದಲು ದಿವಾನರ ಕಛೇರಿಯಲ್ಲಿ ಕೆಲಸಕ್ಕಿದ್ದು, ಬಳಿಕ ಅಸಿಸ್ಟೆಂಟ್ ಕಮೀಷನರ್ ಆಗಿ, ಪ್ಯಾಲೇಸ್ ಕಂಟ್ರೋಲರ್ ಆಗಿ ಕೆಲಸ ಮಾಡಿ ನಿವೃತ್ತರಾದವರು; ‘ಶ್ರೀಮನ್ಮಹಾರಾಜರವರ ವಂಶಾವಳಿ’ಯೆಂಬ ಪ್ರಸಿದ್ಧವಾದ ಗ್ರಂಥದ (ಭಾಗ 1: 1916; ಭಾಗ 2: 1922) ಕರ್ತೃ. ಅವರ ಇಂಗ್ಲಿಷ್‌ಭಾಷೆಯ ವಾಕ್ಯಸರಣಿ ಲಾರ್ಡ್ ಮೆಕಾಲೆಯವರ ವಾಕ್ಯಸರಣಿಗೆ ಅನುಸಾರವಾದುದು ಎನ್ನುತ್ತಾರೆ.

ಸರ್. ಕೆ. ಶೇಷಾದ್ರಿ ಅಯ್ಯರ್ ಅವರು ದಿವಾನರಾಗಿದ್ದಾಗ ಅವರ ಹಿರಿಯ ಮಗ ದೊರೆಸ್ವಾಮಿ ಅಯ್ಯರ್ ಅವರಿಗೆ ರಾಮಕೃಷ್ಣರಾಯರು ಖಾಸಗಿಯಾಗಿ ಪಾಠ ಹೇಳುತ್ತಿದ್ದರು. ಅದು ಚಾಮರಾಜ ಒಡೆಯರ್ ಅವರ ಕಾಲ. ರಾಮಕೃಷ್ಣರಾಯರಿಗೆ ನಾಲ್ವರು ಗಂಡು ಮಕ್ಕಳು. ಇವರಲ್ಲಿ ಮೊದಲಿಬ್ಬರು ರಾಮಪ್ಪ, ಕೃಷ್ಣಪ್ಪ. ಇವರು ಬೆಂಗಳೂರು ಮುನಿಸಿಪಲ್ ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳಾಗಿದ್ದಾಗ, ಇವರಿಗೆ ಅಧ್ಯಾಪಕರಾಗಿದ್ದವರು ವಿ. ಲಕ್ಷ್ಮೀಪತಯ್ಯನವರು. ಇವರು ಸರ್. ಎಂ. ವಿಶ್ವೇಶ್ವರಯ್ಯನವರ ವಂಶಸ್ಥರು. ಈ ಪ್ರಸಂಗ ಜರುಗಿದ್ದು 1892ರಲ್ಲಿ, ಅಧ್ಯಾಪಕ ಅಯ್ಯನವರು ಭಗವಾನ್ ಪಂಡಿತರೆಂಬವರ ಮನೆಯಲ್ಲಿ ವಾಸವಿದ್ದಾಗ. ಅವರ ಮಾತಿನಲ್ಲಿಯೇ ನಿರೂಪಣೆ:

“ರಾಮಕೃಷ್ಣ ರಾಯರ ಮಕ್ಕಳಲ್ಲಿ ದೊಡ್ಡವನು ಮಂದಬುದ್ಧಿಯವನು; ಚಿಕ್ಕವನು ಮೈಗಳ್ಳ, ತುಂಟಶಿಖಾಮಣಿ. ಒಂದು ದಿನ ಸಾಯಂಕಾಲ ರಾಯರು ಅವರ ಮನೆಯ ಮುಂದೆ ನಿಂತಿರುವುದನ್ನು ನಾನು ನೋಡಿದೆ; ವಿನಯಪೂರ್ವಕವಾಗಿ ನಮಸ್ಕರಿಸಿದೆ. ಮುಂದೆ ನಮ್ಮ ನಡುವೆ ಹೀಗೆ ಸಂಭಾಷಣೆ ಜರುಗಿತು:



ನಾನು: ಸ್ವಾಮಿ, ನಮ್ಮ ಮುನಿಸಿಪಲ್ ಹೈಸ್ಕೂಲ್ ವಿದ್ಯಾರ್ಥಿಗಳಾದ ರಾಮಪ್ಪ, ಕೃಷ್ಣಪ್ಪ ಎಂಬ ಹುಡುಗರ ತಂದೆ ತಾವೇನೋ?

ರಾಯರು: ಹೌದು ಸ್ವಾಮಿ, ನಾನೇ ಅವರ ತಂದೆ. ನನ್ನಿಂದ ತಮಗೇನಾಗಬೇಕು?

ನಾನು: ಸ್ವಾಮಿ, ನಾನು ಸ್ಕೂಲುಮಾಸ್ತರು. ತಾವು ನನ್ನ ಶಿಷ್ಯರಿಗೆ ತಂದೆ ಅನ್ನುತ್ತೀರಿ. ತಮ್ಮ ಸಹಾಯವಿಲ್ಲದಿದ್ದರೆ ನನ್ನ ಕೆಲಸ ಕಳೆ ಕಟ್ಟುವುದು ಹೇಗೆ? ತಮ್ಮ ಮಕ್ಕಳು ಬುದ್ಧಿಶಾಲಿಗಳಲ್ಲ. ಪರಂತು, ಮೈಗಳ್ಳತನ ಬೇಕಾದಷ್ಟಿದೆ. ನಾಳೆ ದಿವಸ ಅವರು ಪ್ಯಾಸಾಗದೆ ಇದ್ದರೆ ಅಪಕೀರ್ತಿ ನನಗೆ ಮಾತ್ರವೇ ಬರುತ್ತದೋ ಅಥವಾ ಅದರಲ್ಲಿ ಒಂದು ಭಾಗ ನಿಮಗೂ ಬರುತ್ತದೋ? ತಾವೇ ಹೇಳಿ ಸ್ವಾಮಿ,”

ಬಳಿಕ ರಾಯರು ಅಯ್ಯನವರನ್ನು ತಮ್ಮ ಕೊಠಡಿಯೊಳಕ್ಕೆ ಕರೆದುಕೊಂಡುಹೋಗಿ ಕುಳ್ಳಿರಿಸಿಕೊಂಡು ತುಂಬ ವ್ಯಸನಾಕ್ರಾಂತರಾಗಿ ಹೀಗೆ ಹೇಳಿದರು:

ರಾಯರು: ಸ್ವಾಮಿ, ತಾವು ಎಲ್ಲರಂತೆ ಸ್ಕೂಲ್ಮಾಸ್ತರಲ್ಲ. ನನ್ನ ಮಕ್ಕಳಿಗೆ ವಿದ್ಯೆ ಬರಲಿಲ್ಲವೆಂಬ ಆದರದಿಂದ ಈ ರೀತಿಯಾಗಿ ನನ್ನನ್ನು ಕೇಳಿದ ಸ್ಕೂಲ್ಮಾಸ್ತರನ್ನು ನನ್ನ ಜನ್ಮದಲ್ಲಿ ನಾನು ಕಾಣೆನು. ತಾವು ನನ್ನ ಪಾಲಿಗೆ ದೇವರಾಗಿ ನನಗೆ ಕಾಣಿಸಿರುತ್ತೀರಿ.

ನೀನೇನು ಪ್ಯಾಸು ಮಾಡಿದ್ದಿ? ನೀನೇನು ಪ್ಯಾಸು ಮಾಡಿದ್ದಿ? ಎಂದು ನಾನು ಸಿಕ್ಕಿದವರನ್ನೆಲ್ಲ, ದುರಾಕ್ಷೇಪಣೆ ಮಾಡುತ್ತಿದ್ದೆನು. ನನ್ನ ಮಾನಭಂಗಕ್ಕಾಗಿ ಈ ಮಕ್ಕಳು ನನ್ನ ಹೊಟ್ಟೆಯಲ್ಲಿ ಹುಟ್ಟಿ ಹೀಗೆ ನನ್ನಲ್ಲಿ ಹಗೆ ಸಾಧಿಸುತ್ತಿದ್ದಾರೆ. ತಾವು ಕೃಪೆಮಾಡಿ ಅವರನ್ನು ಅಕ್ಷರಸ್ಥರನ್ನಾಗಿ ಮಾಡಿದರೆ ತಮ್ಮ ಯಶಸ್ಸು ಶಾಶ್ವತವಾಗಿ ನಿಲ್ಲುತ್ತದೆ. ನಾನು ಹೆಚ್ಚಾಗಿ ಉಪಚಾರ ಹೇಳಲಾರೆ.

ತರುವಾಯ ಲಕ್ಷ್ಮೀಪತಯ್ಯನವರು ಆ ವಿದ್ಯಾರ್ಥಿಗಳ ವಿಷಯದಲ್ಲಿ ಹೆಚ್ಚು ನಿಗಾವಹಿಸಿದರು. ಆ ವರ್ಷವೇ ದೊಡ್ಡಮಗ ರಾಮಪ್ಪ ಎಲ್.ಎಸ್. ಪರೀಕ್ಷೆಯಲ್ಲಿ ಉತ್ತೀರ್ಣನಾದನು; ಚಿಕ್ಕಮಗ ಕೃಷ್ಣಪ್ಪ ಮಾರನೆಯ ವರ್ಷ ಮೇಲಿನ ತರಗತಿಗೆ ಹೋದನು. ರಾಮಕೃಷ್ಣರಾಯರು ಲಕ್ಷ್ಮೀಪತಯ್ಯನವರಲ್ಲಿ ತುಂಬ ಪ್ರೀತಿ ಗೌರವಗಳನ್ನು ತೋರಿ, ಸೂಕ್ತ ಗುರುದಕ್ಷಿಣೆ ಕೊಟ್ಟು ಅವರಿಂದ ತಮ್ಮ ಮಕ್ಕಳಿಗೆ ಪಾಠ ಹೇಳಿಸಿದರು; ಮೊಮ್ಮಕ್ಕಳನ್ನು ಸಹ ಅವರಲ್ಲಿ ಪಾಠಕ್ಕೆ ಕಳುಹಿಸಿದರು.

ಮುಂದೆ ಹಲವು ವರ್ಷಗಳ ಮೇಲೆ ಅಯ್ಯನವರನ್ನು ಒಂದು ಔತಣಕ್ಕೆ ಆಹ್ವಾನಿಸಿ ಮಕ್ಕಳು ಮೊಮ್ಮಕ್ಕಳೊಂದಿಗೆ ಲಕ್ಷ್ಮೀಪತಯ್ಯನವರ ಕ್ರಮವನ್ನು ಹೀಗೆ ವಿವರಿಸಿದರಂತೆ:

“ಆಯನ ಪಾಠಂ ಚೆಪ್ಪಿತೆ ಚೆಟ್ಲುಕು ಗುಟ್ಲುಕು, ರಾಳ್ಲುಕು, ಕೊಂಡ್ಲುಕು ಗುಂಡ್ಲುಕು ಅನ್ನಿಟಿಕಿ ಲೆಸ್ಸ ಚದುವು ವಸ್ಸುಂದರಾ.”

●

‘ಬ್ರಾಹ್ಮಿ,’ ೬೮ಬಿ, ಆಶ್ರಮ್ ರಸ್ತೆ, ೩ನೇ ಬ್ಲಾಕ್,
ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨


ಇದು ದುರ್ಯೋಧನ ನಿಯುಕ್ತಿಗೊಳಿಸಿದ್ದ ಪುರೋಚನನ ಷಡ್ಯಂತ್ರವೇ ಆಗಿರುವಂತಿದೆ.
ಅವನೂ ಸಹ ಈ ಬೆಂಕಿಗೆ ಆಹುತಿಯಾಗಿರುವನಲ್ಲ.
2010 © MALAY FEATURES PB 608, KOTTAYAM -1
ಪಾಂಡವರೊಂದಿಗೆ ಪುರೋಚನನೂ ಸುಟ್ಟು ಸತ್ತು ಹೋದ...
ಕೂಡಲೇ ಇಲ್ಲಿಂದ ತೆರಳಿ ಧೃತರಾಷ್ಟ್ರರಿಗೆ ವರದಿ ಮಾಡಬೇಕು.
ಪಾಂಡವರನ್ನು ಮುಗಿಸಿ ಹಾಕುವುದರಲ್ಲಿ ಅವರದೂ ಕೈವಾಡವಿರಬಹುದು.
ಧೃತರಾಷ್ಟ್ರನಿಗೆ ಇದರ ಮಾಹಿತಿ ಸಿಕ್ಕಾಗ–
ಓ ದೇವರೇ! ಮೊದಲು ಸೋದರ ಪಾಂಡು ಈಗ ಕುಂತಿ ಮತ್ತು ಆಕೆಯ ಮಕ್ಕಳು ನನ್ನನ್ನು ತೊರೆದು ಹೊರಟು ಹೋದರಲ್ಲ.


ತತ್‌ಕ್ಷಣವೇ ಎಲ್ಲ ಬಂಧು ವರ್ಗದವರೂ ವಾರಣಾವತಕ್ಕೆ ತೆರಳೋಣ.
2010 © MALAY FEATURES PB 608, KOTTAYAM -1
ಕುಂತಿದೇವಿ ಮತ್ತು ಪಾಂಡುಕುಮಾರರ ವಿಧ್ಯುಕ್ತ ಅಂತಿಮ ಸಂಸ್ಕಾರ ಮಾಡಬೇಕಾಗಿದೆ.
ಅವರ ಆತ್ಮಗಳ ಶಾಂತಿಗಾಗಿ ಎಲ್ಲ ಕ್ರಿಯೆಗಳನ್ನು ನೆರವೇರಿಸಬೇಕಿದೆ.
ಧೃತರಾಷ್ಟ್ರ ವಾರಣಾವತದ ಕಡೆಗೆ ಹೊರಟರು...

(ಮುಂದುವರಿಯುವುದು)

ಮಕ್ಕಳ ಮಲ್ಲಾರ

# ಮಹಾಭಾರತ–6

ಕಥೆ: ಕುಮಾರ ಮೋಹನ್ ಚಲಮ್
ಕಲೆ: ಅಜಯನ್ ಸಂತೂ



Licensed to post without prepayment-WPP-102 MALLARA Monthly, DECEMBER-2019,
64 pages and cost Rs. 12/- RNI. No. KARBIL/2009/30225 Reg. KA/BGW-492/2018-2020
Published and Posted at Bengaluru PSO, Bengaluru-560026 on 30th of every month.

